
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ನವೆಂಬರ್ 27, 2013 ಪುಟ 20 ರೂ. 14/-

ತೀರ್ಥಹಳ್ಳಿ ಗಂಗಾಧರ್‌ಗೆ
ನಮನ






ಮೋದಿ ಮಂಕು ಬೂದಿ

ಸೈಲೆಂಟ್ ಸುನೀಲನ ನಾಪತ್ತೆ ಕತೆ



ಒಕ್ಕಲಿಗರ ಸಂಘ ಚುನಾವಣೆ

ಕೆಂಚಪ್ಪಗೌಡನ ಡಕಾಯತಿ ಕೂಟ



ಥಣಿ ಪ್ರಿನ್ಸಿಪಾಲ್ ದೇಗೌಡನ ವಿಕೃತ ಚೇಷ್ಟೆ




ಪೂಜಾರಿ ಎಂಬ ಕಮಲ ಕಾಂಗ್ರೆಸ್

ಕರ್ನಾಟಕದ ಹುಡುಗಿಯರು ದೆಹಲಿಯಲ್ಲಿ ಮಾರಾಟ

ಒಂದು ಸತ್ಯಕಥೆ



ಭಿನ್ನಮತೀಯರನ್ನು ಮೋದಿ ಹತ್ತಿಕ್ಕಿದ ಪರಿ



ಸರ್ವಾಧಿಕಾರಕ್ಕಾಗಿ ಹಂಬಲಿಸುವ ವ್ಯಕ್ತಿತ್ವವೊಂದು ತನ್ನ ಹಾದಿಗೆ ಅಡ್ಡವೆಂದು ಅನಿಸುವ ಎದುರಾಳಿಗಳನ್ನು ನಿಷ್ಕರುಣವಾಗಿ ಹೊಸಕಿ ಹಾಕುತ್ತದೆ. ಅವರನ್ನು ಒಂದೊ ದೈಹಿಕವಾಗಿ ಇಲ್ಲ ರಾಜಕೀಯವಾಗಿ ಮುಗಿಸಲಾಗುತ್ತದೆ. ಇದಕ್ಕೆ ಇತಿಹಾಸದುದ್ದಕ್ಕೂ ಬೇಕಾದಷ್ಟು ಉದಾಹರಣೆಗಳು ಸಿಗುತ್ತವೆ. ಮೋದಿಯೂ ಇದೇ ಮನೋವೃತ್ತಿಯ ವ್ಯಕ್ತಿ ಎಂಬುದಕ್ಕೆ ಹಲವಾರು ದೃಷ್ಟಾಂತಗಳನ್ನು ಕೊಡಬಹುದು. ತನ್ನದೇ ಪಕ್ಷದ ಭಾರತೀಯ ಕಿಸಾನ್ ಸಂಘವನ್ನು ಮಣ್ಣುಮುಕ್ಕಿಸಿದ. ಗುಜರಾತ್ ವಾಣಿಜ್ಯ ಮಂಡಳಿಯಲ್ಲಿ ಹಸ್ತಕ್ಷೇಪ ಮಾಡಿ ಅದನ್ನು ತನ್ನ ಅಡಿಯಾಳಾಗಿ ಪರಿವರ್ತಿಸಿದ. ಭಾರತದ ಉದ್ದಿಮೆಗಳ ರಾಷ್ಟ್ರೀಯ ಮಟ್ಟದ ಅತ್ಯಂತ ದೊಡ್ಡ ಹಾಗೂ ಪ್ರಮುಖ ಒಕ್ಕೂಟವಾದ ಸಿಐಐನ (CII) ಪ್ರತಿರೋಧವನ್ನು ಹತ್ತಿಕ್ಕಿ ಅದನ್ನು ತನ್ನ ತಾಳಕ್ಕೆ ತಕ್ಕಂತೆ ಕುಣಿಯುವಂತೆ ಮಾಡಿದ. ರಾಜಕೀಯ ವಿರೋಧಿಗಳಾದ ಸಂಜಯ್ ಜೋಶಿ, ಗೋವರ್ಧನ್ ಜಡಾಫಿಯ ಮತ್ತು ಹರೇನ್ ಪಾಂಡ್ಯರನ್ನು ಹೇಳಹೆಸರಿಲ್ಲದಂತೆ ಮಾಡಿಬಿಟ್ಟ.

ಸಿಐಐಯನ್ನು ಮಣಿಸಿದ ಕಥೆ

ಇವತ್ತಿನ ದಿನ ಸಿಐಐನ ಕಾರ್ಪೊರೇಟ್ ಧಣಿಗಳು ಮತ್ತು ಅವರ ನಿಯಂತ್ರಣದಲ್ಲಿರುವ ಮಾಧ್ಯಮಗಳು ಮೋದಿಯನ್ನು "ಭಾರತದ ಭಾವಿ ನಾಯಕ", "ದಾರ್ಶನಿಕ", "ದೇಶವನ್ನು ಮುನ್ನಡೆಸಬಲ್ಲ ಸಿಇಒ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ)" ಎಂದು ಮುಂತಾಗಿ ಹೊಗಳುತ್ತಿದ್ದಾರೆ. 2002ರ ಹತ್ಯಾಕಾಂಡದ ನಂತರ ಮೋದಿಯನ್ನು ಟೀಕಿಸಿದ ಇದೇ ಉದ್ಯಮಪತಿಗಳು ಹೀಗೆ ಏಕಾಏಕಿ ಬಣ್ಣ ಬದಲಾಯಿಸಿ ಹೊಗಳುಭಟರಂತೆ ವರ್ತಿಸುತ್ತಿರುವುದರ ಹಿಂದೆ ಚಾಣಾಕ್ಷ ರಾಜಕಾರಣಿ ಮೋದಿಯ ಒಡೆದಾಳುವ ನೀತಿ ಇದೆ.

2002ರ ದಂಗೆಗಳ ಪರಿಣಾಮವಾಗಿ ಗುಜರಾತಿನ ಉದ್ಯಮಗಳು ಬಿಲಿಯಾಂತರ ರೂಪಾಯಿ ನಷ್ಟ ಅನುಭವಿಸಿದವು. ದಂಗೆಗಳ ವೇಳೆ ಸುಟ್ಟುಹಾಕಲಾದ 1000ಕ್ಕೂ ಜಾಸ್ತಿ ಲಾರಿಗಳಲ್ಲಿ ವಿದೇಶೀ ಕಾರುಗಳಿದ್ದ ಲಾರಿಯೂ ಇತ್ತು, ಇದು ಅಂತಾರಾಷ್ಟ್ರೀಯ ಸುದ್ದಿಯಾದ ಮೇಲೆ ವಿದೇಶೀ ಬಂಡವಾಳ ಹೂಡಿಕೆಯೂ ನಿಂತು ಹೋಯಿತು. ರಾಜ್ಯದ ಆರ್ಥಿಕ ಪರಿಸ್ಥಿತಿ ತೀರಾ ಚಿಂತಾಜನಕವಾಯಿತು. ಅನೇಕ ಉದ್ಯಮಪತಿಗಳು ತಮ್ಮ ಸಿಟ್ಟನ್ನೂ, ಆತಂಕವನ್ನೂ ಬಹಿರಂಗವಾಗಿ ತೋಡಿಕೊಳ್ಳಲಾರಂಭಿಸಿದರು. ಗುಜರಾತ್ ಘಟನೆಗಳು ಜಾತ್ಯತೀತ ಭಾರತದ ಹೆಸರನ್ನು ಕೆಡಿಸಿವೆ; ಘಟನೆಗಳಿಂದ ತನಗೆ ನಾಚಿಕೆಯಾಗಿದೆ ಎಂದು ಎಚ್‌ಡಿಎಫ್‌ಸಿ ಬ್ಯಾಂಕ್‌ನ ದೀಪಕ್ ಪಾರೇಖ್ ಹೇಳಿದರು. ಎಎಫ್‌ಎಲ್ ಶಿಪ್ಪಿಂಗ್‌ನ ಸೈರಸ್ ಗಝ್ದರ್ ಗುಜರಾತ್ ಘಟನೆಗಳನ್ನು "ಜನಾಂಗ ಹತ್ಯೆ"ಗೆ ಹೋಲಿಸಿದರು. ಇನ್ಫೋಸಿಸ್ ನಾರಾಯಣ ಮೂರ್ತಿ, ವಿಪ್ರೊದ ಅಜೀಂ ಪ್ರೇಮ್‌ಜಿ ಗುಜರಾತ್ ಘಟನೆಗಳನ್ನು ಸಾರ್ವಜನಿಕವಾಗಿ ಖಂಡಿಸಿದರು. ಏಪ್ರಿಲ್ 2002ರಲ್ಲಿ ಸಿಐಐನ ರಾಷ್ಟ್ರೀಯ ಸಭೆ ನಡೆಯಿತು. ಅಂದು ಥರ್ಮ್ಯಾಕ್ಸ್ ಸಂಸ್ಥೆಯ ಅಧ್ಯಕ್ಷೆ ಅನು ಆಗಾ, ಗುಜರಾತ್‌ನ ಮುಸ್ಲಿಮರು ಅನುಭವಿಸಿದ ಘೋರ ಸಂಕಷ್ಟಗಳನ್ನು ಕುರಿತು ಭಾವಪರವಶತೆಯಿಂದ ಮಾತನಾಡಿದಾಗ ಸಭಿಕರೆಲ್ಲರೂ ಎದ್ದು ಸುದೀರ್ಘ ಕರತಾಡನ ಮಾಡಿದರು.

ನಂತರ ಅದೇ ವರ್ಷ ನಡೆದ ರಾಜ್ಯ ಚುನಾವಣೆಗಳಲ್ಲಿ ಮೋದಿ ಮತ್ತೊಮ್ಮೆ ಜಯಭೇರಿ ಬಾರಿಸಿದ. ಆದರೆ ಉದ್ಯಮಿಗಳ ಸಹಕಾರವಿಲ್ಲದೆ ತಾನೇನನ್ನೂ ಸಾಧಿಸಲಾರೆ ಎಂಬುದರ ಅರಿವು ಆತನಿಗಿತ್ತು, ಅದೇ ವೇಳೆ, ದಂಗೆಗಳು ನಡೆದರೂ ನಡೆಯದಿದ್ದರೂ ಉದ್ಯಮಿಗಳಿಗೆ ಗುಜರಾತ್ ರಾಜ್ಯವನ್ನು ಬಿಟ್ಟಿರಲಾಗುವುದಿಲ್ಲ ಎಂಬ ಸತ್ಯವೂ ಆತನಿಗೆ ಗೊತ್ತಿತ್ತು. ಇದರ ಹಿನ್ನೆಲೆಯಲ್ಲಿ ಟೀಕಾಕಾರರನ್ನು ಬೆಂಬಲಿಗರನ್ನಾಗಿ ಪರಿವರ್ತಿಸುವ ಪ್ಲಾನ್ ರೂಪುಗೊಂಡಿತು. ಮೋದಿ ಕೋರಿಕೆ ಮೇರೆಗೆ 2003ರ ಫೆಬ್ರವರಿ ತಿಂಗಳಲ್ಲಿ ಸಿಐಐನ ವಿಶೇಷ ಅಧಿವೇಶನವೊಂದನ್ನು ಕರೆಯಲಾಯಿತು. ಸಭೆಯ ಅಜೆಂಡಾ: "ಗುಜರಾತಿನ ನೂತನ ಮುಖ್ಯಮಂತ್ರಿ ನರೇಂದ್ರ ಮೋದಿ ಜೊತೆ ಭೇಟಿ".

ವೇದಿಕೆಯ ಮೇಲೆ ಮೋದಿ, ಸಿಐಐ ಅಧ್ಯಕ್ಷ ತರುಣ್ ದಾಸ್, ರಾಹುಲ್ ಬಜಾಜ್ ಮತ್ತು ಜಮ್ಷದ್ ಗೋದ್ರೆಜ್ ಉಪಸ್ಥಿತರಿದ್ದರು. ಜಮ್ಷದ್ ಗೋದ್ರೆಜ್ ತಮ್ಮ ಭಾಷಣದಲ್ಲಿ ಮೋದಿ ಎಲ್ಲಾ ಗುಜರಾತಿಗಳ ಸುರಕ್ಷತೆ ಹಾಗೂ ಭದ್ರತೆಯನ್ನು ಖಾತ್ರಿಪಡಿಸಬೇಕೆಂದು ಹೇಳಿದರು. ಬಳಿಕ ಮಾತನಾಡಿದ ರಾಹುಲ್ ಬಜಾಜ್ "ಈಗ ಉತ್ತರ ಪ್ರದೇಶ, ಬಿಹಾರ, ಕಾಶ್ಮೀರ, ಈಶಾನ್ಯ ಪ್ರದೇಶದಂತಹ ರಾಜ್ಯಗಳಲ್ಲಿ ಯಾಕೆ ಯಾರೂ ಹೂಡಿಕೆ ಮಾಡಲು ಒಪ್ಪುತ್ತಿಲ್ಲ? ಯಾಕೆಂದರೆ ಅಲ್ಲಿ ಬರೀ ಮೂಲಭೂತ ಸೌಕರ್ಯಗಳ ಕೊರತೆಯೊಂದೇ ಅಲ್ಲ ಅಭದ್ರತೆಯ ವಾತಾವರಣವೂ ಇದೆ. ಗುಜರಾತ್‌ನಲ್ಲಿ ಹೀಗಾಗದೆಂದು ನನ್ನ ನಂಬಿಕೆ - ಕಳೆದ ವರ್ಷದ ದುರ್ಘಟನೆಗಳಿಂದಾಗಿ ಇದೆಲ್ಲ ನೆನಪಾಗುತ್ತಿದೆ. .... ನಾಯಕತ್ವಕ್ಕೆ ಮಹತ್ವವಿರುವುದರಿಂದ ನಿಮ್ಮ ನಂಬಿಕೆ, ನಿಲುವುಗಳೇನೆಂದು ನಾವು ತಿಳಿಯಬಯಸುತ್ತೇವೆ. ... ನಾವು ಎಲ್ಲಾ ತೆರನಾದ ಸರ್ಕಾರಗಳೊಂದಿಗೆ ಕೆಲಸ ಮಾಡಲು ಸಿದ್ಧ. ಆದರೆ ಯಾವುದು ನಮ್ಮ ಸಮಾಜಕ್ಕೆ ಒಳ್ಳೆಯದು ಮತ್ತು ಯಾವುದರಿಂದ ಅದನ್ನು ಸಾಧಿಸಬಹುದು ಎಂಬ ಬಗ್ಗೆ ನಮಗೆ ನಮ್ಮದೇ ಆದ ನಿಲುವುಗಳಿವೆ" ಎಂದರು. ಇವರೆಲ್ಲರ ಟೀಕಾಪ್ರಹಾರಗಳಿಂದ ಉರಿದುಬಿದ್ದ ಮೋದಿ "ನಿಮಗೂ ನಿಮ್ಮ ಕಪಟ ಜಾತ್ಯತೀತರಿಗೂ ಉತ್ತರ ಬೇಕಿದ್ದರೆ ರಾಜ್ಯಕ್ಕೆ ಬನ್ನಿ, ಜನರೊಂದಿಗೆ ಮಾತನಾಡಿ. ಗುಜರಾತ್ ಅತ್ಯಂತ ಶಾಂತಿಯುತ ರಾಜ್ಯ.... ಇತರರಿಗಾದರೆ ಗುಜರಾತ್‌ಗೆ ಕಳಂಕ ಹಚ್ಚುವ ಸ್ಥಾಪಿತ ಹಿತಾಸಕ್ತಿಗಳಿವೆ. ನಿಮ್ಮ ಹಿತಾಸಕ್ತಿಗಳೇನು?" ಎಂದು ಪ್ರಶ್ನಿಸಿದ.

ಗುಜರಾತ್‌ಗೆ ಮರಳಿದ ಮೋದಿ ಸುಮ್ಮನೆ ಕೂರಲಿಲ್ಲ, ಪಾರ್ಸಿಗಳು ತನ್ನ ವಿರುದ್ಧ ಮಾತಾಡುವುದನ್ನು ಗಮನಿಸಿದ ಆತ 'ವೈಬ್ರೆಂಟ್ ಗುಜರಾತ್' ಶೃಂಗಸಭೆಯೊಂದರಲ್ಲಿ ವಾಜಪೇಯಿ ಮೂಲಕ ರತನ್ ಟಾಟಾಗೆ ಪ್ರಶಸ್ತಿ ಕೊಡಿಸಿದ. ಬಳಿಕ ತನ್ನ ನಿಕಟವರ್ತಿ ಉದ್ಯಮಿಗಳಾದ ಗೌತಮ್ ಅದಾನಿ (ಅದಾನಿ ಗ್ರೂಪ್), ಇಂದ್ರವದನ್ ಮೋದಿ (ಕಾಡಿಲಾ ಫಾರ್ಮಾ) ಕರ್ಸನ್ ಪಟೇಲ್ (ನಿರ್ಮಾ), ಅನಿಲ್ ಬಕೇರಿ (ಬಕೇರಿ ಎಂಜಿನಿಯರ್ಸ್) ಯನ್ನು ಸಂಪರ್ಕಿಸಿದ. ಇವರೆಲ್ಲ ಸೇರಿಕೊಂಡು ಸಿಐಐಗೆ ಪ್ರತಿಯಾಗಿ ಆರ್‌ಜಿಜಿ (ಪುನರುಜ್ಜೀವಿತ ಗುಜರಾತ್‌ನ ಗುಂಪು) ಎಂಬ ಬೇರೊಂದು ಸಂಸ್ಥೆಯನ್ನು ಹುಟ್ಟುಹಾಕಿದರು. ಸಿಐಐ ಮೋದಿಯನ್ನಷ್ಟೇ ಅಲ್ಲ, ಎಲ್ಲ ಗುಜರಾತಿಗಳನ್ನೂ ಅವಮಾನಿಸಿದೆ, ಅವರ ತೇಜೋವಧೆ ಮಾಡಿದೆ ಎಂದು ಆರೋಪಿಸಿದ ಆರ್‌ಜಿಜಿ ಸದಸ್ಯರು ಸಿಐಐಯಿಂದ ಹೊರಬರುವ ಬೆದರಿಕೆ ಒಡ್ಡಿದರು. ಸಿಐಐಗೆ ಸುಮಾರು 100ಕ್ಕೂ ಅಧಿಕ ಕಂಪೆನಿಗಳ ಸದಸ್ಯತ್ವ ಕಳೆದುಕೊಳ್ಳುವ ಅಪಾಯ ಎದುರಾಯಿತು. ಅತ್ತ ದಿಲ್ಲಿಯಲ್ಲಿ ಎನ್‌ಡಿಎ ಸರ್ಕಾರದ ಮಂತ್ರಿಗಳೆಲ್ಲ ಸಿಐಐಯನ್ನು ಬಹಿಷ್ಕರಿಸಲಾರಂಭಿಸಿದರು. ಸಿಐಐ ವಿಧಿಯಿಲ್ಲದೆ ಸಂಧಾನಕ್ಕೆ ಮುಂದಾಯಿತು. ಅಧ್ಯಕ್ಷ ತರುಣ್ ದಾಸ್ ಮೋದಿಯ ಖಾಸ್ ದೋಸ್ತ್ ಅರುಣ್ ಜೇಟ್ಲಿಯನ್ನು ಸಂಪರ್ಕಿಸಿದರು. ಜೇಟ್ಲಿ ನಂತರ ಮೋದಿ ಜೊತೆ ಮಾತಾಡಿ ಆತನ ಡಿಮಾಂಡ್ ಏನೆಂದು ತಿಳಿದುಕೊಂಡು ಅದನ್ನು ಧಾಸ್‌ಗೆ ಹೇಳಿದರು. ಸಿಐಐ ತನ್ನಲ್ಲಿ ಕ್ಷಮೆ ಕೋರಬೇಕೆಂಬುದು ಮೋದಿಯ ಡಿಮಾಂಡ್ ಆಗಿತ್ತು, ಅದಕ್ಕೆ ಸಮ್ಮತಿಸಿದ ದಾಸ್ ನಂತರ ಅಹಮದಾಬಾದ್‌ಗೆ ತೆರಳಿ ಕ್ಷಮಾಯಾಚನೆಯ ಪತ್ರವನ್ನು ತಾನೇ ಸ್ವತಃ ಮೋದಿ ಕೈಗಿತ್ತರು. ಅಲ್ಲಿಗೆ ಮೋದಿಯ ಒಡೆದಾಳುವ ಪ್ಲಾನ್ ಫಲಿಸಿತು; ಕಾರ್ಪೊರೇಟ್‌ಗಳ ರಾಗ ಬದಲಾಯಿತು. ಮೂರು ತಿಂಗಳ ಬಳಿಕ ಜೂರಿಕ್‌ನಲ್ಲಿ ವಿಶ್ವ ಆರ್ಥಿಕ ವೇದಿಕೆಯ ಅಡಿಯಲ್ಲಿ ನಡೆದ ಪ್ರಥಮ ಅಂತಾರಾಷ್ಟ್ರೀಯ ಹೂಡಿಕೆದಾರರ ಸಮಾವೇಶವನ್ನು ಆಯೋಜಿಸುವಲ್ಲಿ ಮೋದಿಗೆ ಸಹಾಯ ಮಾಡಿದ್ದೆ ಸಿಐಐ.

ಸಂಜಯ್ ಜೋಶಿಯ ಸೆಕ್ಸ್ ವಿಡಿಯೊ ಪ್ರಕರಣ

ಮೋದಿ ವಿರೋಧಿ ಬಣದಲ್ಲಿ ಗುರುತಿಸಿಕೊಂಡಿದ್ದ ಸಂಜಯ್ ಜೋಶಿ ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಜೋಶಿ ಬೆತ್ತಲೆ ಸ್ತ್ರೀಯರೊಂದಿಗಿದ್ದ ನಕಲಿ ವಿಡಿಯೊ ಅದು ಹೇಗೊ ಬಿಜೆಪಿ ವರಿಷ್ಠರ ಕೈಸೇರಿದಾಗ ಆತ ರಾಜೀನಾಮೆ ನೀಡದೆ ವಿಧಿ ಇರಲಿಲ್ಲ.

ಗೋವರ್ಧನ್ ಜಡಾಫಿಯ ಪ್ರಕರಣ

ಮೋದಿಯ ವರ್ತನೆ ವಿರುದ್ಧ ಸಿಟಿದೆದ್ದ ಗೋವರ್ಧನ್ ಜಡಾಫಿಯ 15 ವರ್ಷಗಳ ಕಾಲ ವಿಹಿಂಪದ ಸದಸ್ಯನಾಗಿದ್ದವರು. 90ರ ದಶಕದ ಆದಿಯಲ್ಲಿ ಆರೆಸ್ಸೆಸ್‌ನ ನಿರ್ದೇಶನದಂತೆ ಬಿಜೆಪಿಯ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದರು. ನಂತರ ಮೋದಿ ಸಂಪುಟದಲ್ಲಿ ಗೃಹಖಾತೆಯ ಉಪಸಚಿವರಾದರು. ಸಚಿವ ಸ್ಥಾನವನ್ನು ಎಂದಿನಂತೆ ಮೋದಿಯೆ ಇಟ್ಟುಕೊಂಡಿದ್ದ. 2002ರ ಅಂತ್ಯದಲ್ಲಿ ಜಡಾಫಿಯರನ್ನು ಸಚಿವ ಸಂಪುಟದಿಂದ ಕಿತ್ತು ಹಾಕಲಾಯಿತು. ನಂತರ ಗುಪ್ತದಳದ ಬೇಹುಗಾರರು ತನ್ನನ್ನು ಹಿಂಬಾಲಿಸತೊಡಗಿದಾಗ ಮುಖ್ಯಮಂತ್ರಿ ಮತ್ತು ಬಿಜೆಪಿ ಶಾಸಕರ ಸಭೆಯೊಂದರಲ್ಲಿ ಜಡಾಫಿಯ ಈ ವಿಷಯವನ್ನು ಎತ್ತಿದರು. ಆಗ ಸುಮ್ಮನಿದ್ದ ಮೋದಿ ಆತನಿಗೆ ಚೀಟಿ ಕಳುಹಿಸಿ ಸಭೆಯ ನಂತರ ತನ್ನನ್ನು ಕಾಣುವಂತೆ ತಿಳಿಸಿದ. ಜಡಾಫಿಯ ಮೋದಿ ಕಚೇರಿಗೆ ಹೋದಾಗ ಅಲ್ಲಿ ಉಪ ಗೃಹಸಚಿವ ಅಮಿತ್ ಶಾ ಕೂಡ ಕುಳಿತಿದ್ದ. ಜಡಾಫಿಯ ಪ್ರಕಾರ ಅಂದಿನ ಸಂಭಾಷಣೆ ಹೀಗಿತ್ತು:

ಮೋದಿ: ಇಂಥಾ ಪ್ರಶ್ನೆಗಳನ್ನು ಎಲ್ಲರೆದುರು ಎತ್ತಿದ್ದೇಕೆ?

ಜಡಾಫಿಯ: ನಾನೇನು ಮಾಡಲಿ? ಇದು ಖಾಸಗಿ ವಿಚಾರ ಅಲ್ಲವಲ್ಲ.

ಮೋದಿ: ನಿನ್ನ ಕತೆ ಮುಗಿಯಲಿದೆ ಗೋವರ್ಧನ್ ಭಾಯಿ.

ಜಡಾಫಿಯ: ದೈಹಿಕವಾಗಿಯಾ, ಇಲ್ಲಾ ರಾಜಕೀಯವಾಗಿಯಾ?


ಮೋದಿ: ನೀನು ನನ್ನ ವಿರುದ್ಧ ಅಡ್ವಾನಿ ಮತ್ತು ಓ... ಮಾಥುರ್‌ಗೆ ದೂರು ಕೊಟ್ಟಿದ್ದೀಯ.


ಜಡಾಫಿಯ: ಖಂಡಿತ. ದಿಲ್ಲಿಯ ನಾಯಕರಿಗೆ ದೂರು ಕೊಡುವುದನ್ನುಳಿದು ನನಗೆ ಇನ್ಯಾವ ಆಯ್ಕೆಗಳೂ ಇರಲಿಲ್ಲ. ಆದರೆ ನೀನೀಗ ನನ್ನನ್ನು ಮುಗಿಸಿಬಿಡುವೆನೆಂದು ಹೇಳುತ್ತಿದ್ದೀ... ಇಲ್ಲಿ ಕೇಳು. ನನ್ನ ಕಾಲ ಬಂದಾಗ ಸಾಯುತ್ತೇನೆ ನಾನು... ಮತ್ತೊಮ್ಮೆ ನನಗೆ ಬೆದರಿಕೆ ಹಾಕಲು ಯತ್ನಿಸಬೇಡ.

ಅಂತಿಮವಾಗಿ ಜಡಾಫಿಯರನ್ನು ಪಕ್ಷದಿಂದಲೂ ಹೊರದಬ್ಬಲಾಯಿತು.

ಹರೇನ್ ಪಾಂಡ್ಯ ನಿಗೂಢ ಹತ್ಯೆ

ಜಡಾಫಿಯನ ರಕ್ಷಣೆಗಾಗಿ ಒಂದು ಡಜನ್ ಸಶಸ್ತ್ರ ಭದ್ರತಾ ಸಿಬ್ಬಂದಿಗಳಿದ್ದರು. ಆದರೆ ತನಗೇನೂ ಆಗದು ಎಂದು ಭಾವಿಸಿದ್ದ ಹರೇನ್ ಪಾಂಡ್ಯ ತನ್ನ ರಕ್ಷಣೆಗಾಗಿ ಯಾರನ್ನೂ ಇಟ್ಟುಕೊಂಡಿರಲಿಲ್ಲ. ಮೋದಿ ಸಂಪುಟದಲ್ಲಿ ಕಂದಾಯ ಸಚಿವನಾಗಿದ್ದ ಹರೇನ್ ಪಾಂಡ್ಯಗೆ ಆರೆಸ್ಸೆಸ್ ಸದಸ್ಯತ್ವ ಒಂದು ವಂಶಪಾರಂಪರ್ಯವಾಗಿ ಬಂದಿತ್ತು, ರಾಜ... ಬಿಜೆಪಿ ಘಟಕದಲ್ಲಿ ಮೋದಿಗೆ ಸರಿಸಮಾನನಾಗಿ ನಿಲ್ಲಬಲ್ಲ... ಪಾಂಡ್ಯ ಸ್ವಾಭಾವಿಕವಾಗಿ ಮೋದಿಯ ಪ್ರತಿಸ್ಪರ್ಧಿಯಾಗಿದ್ದರು... ಅವರಿಬ್ಬರ ಆಂತರಿಕ ತಿಕ್ಕಾಟ ಬೀದಿಗೆ ಬಂದದ್ದು 2001ರಲ್ಲಿ, ಆಗಷ್ಟೇ ದಿಲ್ಲಿ ನಾಯಕರ ಕೃಪೆಯಿಂದಾಗಿ ಮುಖ್ಯಮಂತ್ರಿಯಾಗಿದ್ದ ಮೋದಿಗೆ ಮುಂದಿನ ಚುನಾವಣೆಯಲ್ಲಿ ಗೆಲ್ಲದೆ ನಿರ್ವಾಹವಿರಲಿಲ್ಲ, ಅದಕ್ಕೋಸ್ಕರ ಸುರಕ್ಷಿತ ಮತಕ್ಷೇತ್ರದ ಹುಡುಕಾಟದಲ್ಲಿದ್ದ ಆತನಿಗೆ ಪಾಂಡ್ಯರ ಎಲ್ಲಿಸ್‌ಬ್ರಿಜ್ (ಅಹಮದಾಬಾದ್) ಕ್ಷೇತ್ರದ ಮೇಲೆ ಕಣ್ಣುಬಿದ್ದಿತು. ಆದರೆ ಸತತ 15 ವರ್ಷಗಳ ಕಾಲ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಪಾಂಡ್ಯ ಅದನ್ನು ಬಿಟ್ಟುಕೊಡಲು ಸುತರಾಂ ಒಪ್ಪಲಿಲ್ಲ, ಆತ "ಬೇರೆ ಯಾವನೇ ಯುವ ಬಿಜೆಪಿಗನಿಗೆ ಬಿಟ್ಟುಕೊಟ್ಟೇನು, ಆದರೆ ಆ ವ್ಯಕ್ತಿಗಲ್ಲ" ಎಂದು ಹೇಳಿದ್ದರೆನ್ನಲಾಗಿದೆ.


ವಂಜಾರ


ಹರೇನ್ ಪಾಂಡ್ಯ ಅವರ ಪತ್ನಿ


ಸಂಜಯ್ ಜೋಶಿ

ನ್ಯಾ|| ವಿ.ಆರ್. ಕೃಷ್ಣ ಐಯರ್ ನೇತೃತ್ವದ ಆಯೋ... 2002ರ ದಂಗೆಗಳ ಕುರಿತು ಸ್ವತಂತ್ರ ತನಿಖೆ ಮಾಡ... ಬಂದಿದ್ದ ಸಂದರ್ಭದಲ್ಲಿ ಪಾಂಡ್ಯ ಆಯೋಗದ ಮುಂ... ಹಾಜರಾಗಿ ಹೇಳಿಕೆ ನೀಡಿದರು. ಆ ಹೇಳಿಕೆಯಲ್ಲಿ ಏನಿತ್ತೆಂ... ಮೋದಿಗೆ ಗೊತ್ತಾಗುವ ಸಾಧ್ಯತೆ ಇರಲಿಲ್ಲ, ಆದರೆ ಪಾಂ... ಚಲನವಲನಗಳ ಮೇಲೆ ನಿಗಾ ಇರಿಸಬೇಕೆಂದು ರಾ... ಗುಪ್ತಚರ ಇಲಾಖೆಗೆ ತಿಳಿಸಲಾಗಿತ್ತು, ಇಲಾಖೆ... ಮಹಾನಿರ್ದೇಶಕರಿಗೆ ಕರೆಮಾಡಿ ತಿಳಿಸಿದಾತ ಇನ್ಯಾ... ಅಲ್ಲ, ಅಂದು ಮೋದಿಯ ಪ್ರಧಾನ ಕಾರ್ಯದರ್ಶಿಯಾ... ಪಿ.ಕೆ.ಮಿಶ್ರಾ. ಮಿಶ್ರಾ ನೀಡಿದ್ದ ಸೂಚನೆಗಳು ಇಲಾಖೆ... ದಾಖಲೆ ಪುಸ್ತಕದಲ್ಲಿ ನಮೂದಿಸಲ್ಪಟ್ಟಿವೆ: "ಡಾ|| ಪಿ.ಕೆ.ಮಿ... ಮುಂದುವರಿದು, ಈ ಪ್ರಕರಣದಲ್ಲಿ ಮಂತ್ರಿ ಹರೇ... ಪಾಂಡ್ಯ ಒಳಗೊಂಡಿರುವ ಬಗ್ಗೆ ಸಂಶಯವಿದೆ ಎಂ... ಹೇಳಿದರು. ನಂತರ ಮೊಬೈಲ್ ಸಂಖ್ಯೆಯೊಂದ... (9824030629) ಕೊಟ್ಟು ಎಲ್ಲಾ ಕರೆಗಳ ವಿವರಗ... ಒದಗಿಸುವಂತೆ ತಿಳಿಸಿದರು." (7.6.2002) "ಸ್ವತ... ಸತ್ಯಶೋಧನಾ ಸಮಿತಿಯನ್ನು (ನ್ಯಾ|| ಐಯರ್ ಆಯೋ... ಭೇಟಿಯಾದರೆಂದು ಅನುಮಾನಿಸಲಾಗಿರುವ ಮಂತ್ರಿ... ಹೆಸರು ಹರೇನ್ ಪಾಂಡ್ಯ ಎಂಬುದನ್ನು ಡಾ|| ಪಿ.ಕೆ.ಮಿ... ತಿಳಿಸಿದೆ. ವಿಷ್ಯ ತುಂಬಾ ಸೂಕ್ಷ್ಮವಾದುದು; ಅಲ್ಲದೆ ಬಾ... ಪೊಲೀಸ್ ಕೈಪಿಡಿಯನುಸಾರ ರಾಜ್ಯದ ಗುಪ್ತಚರ ಇಲಾ... ವಹಿಸಲಾಗಿರುವ ಕರ್ತವ್ಯಗಳ ಜೊತೆ ಇ... ಸಂಬಂಧವಿರುವುದಿಲ್ಲ, ಆದುದರಿಂದ ಸದರಿ ಮಾಹಿತಿಯ... ಲಿಖಿತವಾಗಿ ನೀಡಲು ಸಾಧ್ಯವಿಲ್ಲ, 9824030... ಹರೇನ್‌ಭಾಯಿ ಪಾಂಡ್ಯರ ಮೊಬೈಲ್ ಸಂ... (12.6.2002)

ಮೋದಿ ಸಚಿವ ಸಂಪುಟದ ಮಂತ್ರಿಯೊಬ್ಬರು ಐ... ಆಯೋಗವನ್ನು ಭೇಟಿ ಮಾಡಿದ ಸಂಗತಿ ಪತ್ರಿಕೆ... ಪ್ರಕಟವಾಗಲು ಹೆಚ್ಚು ಸಮಯ ಬೇಕಾಗಲಿಲ್ಲ, ... ಸ್ಯಾಂಪಲ್: 'ಆಯೋಗದ ಮುಂದೆ ಹೇಳಿಕೆ ನೀಡಿದ ಮಂತ್ರಿ, ಗೋಧ್ರಾ ▶▶0...

ಮೂಢನಂಬಿಕೆ ವಿಧೇಯಕವನ್ನು ವಿರೋಧಿಸುವ ವಂಚಕರು



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com


ಮೂಢನಂಬಿಕೆ ತಡೆಯುವ ನಿಟ್ಟಿನಲ್ಲಿ ರಾಜ್ಯದ ಪ್ರಮುಖ ಪ್ರಗತಿಪರರು ರೂಪಿಸಿದ ವಿಧೇಯಕವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸಲ್ಲಿಸಿದ ಬೆನ್ನಲ್ಲೇ ಪಟ್ಟಭದ್ರ ಹಿತಾಸಕ್ತಿಗಳು ತಾವು ಇನ್ನು ಮುಂದೆ ಅಪ್ರಸ್ತುತರಾಗುತ್ತೇವೆ, ಧರ್ಮದ ಹೆಸರಿನಲ್ಲಿ ತಮ್ಮ ಶೋಷಣೆ ಅಂತ್ಯಗೊಳ್ಳುತ್ತದೆ ಎಂದು ಆತಂಕಗೊಂಡು ರಾಜ್ಯಾದ್ಯಂತ ವಿಚಿತ್ರ ರೂಮರ್‌ಗಳನ್ನು ಹಬ್ಬಿಸಿದರು. ಅದೂ ಎಂತಹ ರೂಮರ್‌ಗಳು... ಇನ್ನು ಮುಂದೆ ದೇವಸ್ಥಾನಗಳಿಗೆ ಹೋಗುವಂತಿಲ್ಲ, ಮದುವೆ ಕಾರ್ಯಕ್ರಮಗಳಲ್ಲಿ ತಾಳಿ ಕಟ್ಟುವಂತಿಲ್ಲ, ಮಹಿಳೆಯರು ಕುಂಕುಮ ಇಟ್ಟುವಂತಿಲ್ಲ... ಎಂದೆಲ್ಲಾ ಅಮಾಯಕರ ಕಿವಿಗಳಿಗೆ ಊದಿದರು. ಜೊತೆಗೆ 'ಹಿಂದೂ ಧರ್ಮ'ಕ್ಕೇ ಕೊಡಲಿಪೆಟ್ಟು ಬೀಳಲಿದೆ ಎಂದು ಜನರನ್ನು ಪ್ರಚೋದಿಸಿದರು. ಇದಕ್ಕೆ ಸರಿಯಾಗಿ ಜನಾರ್ದನ ಪೂಜಾರಿಯಂತವರು ಬಾಯಿಗೆ ಬಂದದ್ದನ್ನು ಮಾಧ್ಯಮಗಳ ಮುಂದೆ ವದರಿದರು. ಅದನ್ನೆಲ್ಲ ಕೇಳಿ ಜನಸಾಮಾನ್ಯರಲ್ಲಿ ಅದೇಂತಹದ್ದೋ ನಡೆಯಬಾರದ್ದು ನೆಡೆಯಲಿದೆ ಎಂಬ ಭೀತಿ ಉಂಟಾಯಿತು.

ವಾಸ್ತವವಾಗಿ 'ಕರ್ನಾಟಕ ಮೂಢನಂಬಿಕೆ ಪ್ರತಿಬಂಧಕ ವಿಧೇಯಕ- 2013' ರಲ್ಲಿ ಯಾವುದನ್ನು ಮೂಢನಂಬಿಕೆ ಎಂದು ಪರಿಗಣಿಸಲಾಗಿದೆ, ಇದರಲ್ಲಿ ಯಾವುದು ಧಾರ್ಮಿಕ ನಂಬಿಕೆಗಳಿಗೆ ವಿರೋಧಿಯಾಗಿದೆ ಎಂದು ನೋಡಲು ಯಾರೂ ಹೋಗಲಿಲ್ಲ. ಇನ್ನು ನಮ್ಮ ಹೆಚ್ಚಿನ ಮುಖ್ಯ ವಾಹಿನಿಗಳಲ್ಲಿ ಮೂಲಭೂತವಾದಿ ಮನಸ್ಸಿನವರೇ ತುಂಬಿರುವುದರಿಂದ ಅವರ್‍ಯಾರೂ ವಿಧೇಯಕದಲ್ಲಿ ನಿಜವಾಗಲೂ ಏನೇನಿದೆ, ಏನಿಲ್ಲ ಎಂದು ವಿವರಿಸಲು ಪ್ರಯತ್ನಿಸಲೇ ಇಲ್ಲ.

ಈಶ್ವರಪ್ಪನಾದಿಯಾಗಿ ಬಹುತೇಕ ಹಿಂದೂತ್ವವಾದಿಗಳು ಈ ವಿಧೇಯಕ ಹಿಂದೂ ಧರ್ಮವನ್ನೇ ಗುರಿಯಾಗಿಸಿದೆ ಎಂದು ಬೊಬ್ಬೆ ಹೊಡೆದರು. ಅದು ಸಂಪೂರ್ಣವಾಗಿ ಸುಳ್ಳು. ವಿಧೇಯಕದ 'ಪರಿಕಲ್ಪನಾತ್ಮಕ ಟಿಪ್ಪಣಿ'ಯಲ್ಲಿ ಹೀಗೆ ದಾಖಲಿಸಲಾಗಿದೆ:

"ನಮ್ಮ ದೇಶದ ಸಂವಿಧಾನ ತನ್ನೆಲ್ಲಾ ಪ್ರಜೆಗಳಿಗೆ ತಮ್ಮ ನಂಬಿಕೆಯ ಧಾರ್ಮಿಕ ಶ್ರದ್ಧೆಯನ್ನು ಆಚರಿಸುವ ಸ್ವಾತಂತ್ರ್ಯವನ್ನು ಖಾತರಿಪಡಿಸಿದೆ. ಇದನ್ನು ನಾವು ಗೌರವಿಸುತ್ತಲೇ ಮುಂದುವರೆಯಬೇಕಿದೆ. ಸೂಕ್ಷ್ಮ ಸಂಗತಿಯೆಂದರೆ ಧಾರ್ಮಿಕ ಶ್ರದ್ಧೆ ಬೇರೆ, ಅಂಧಶ್ರದ್ಧೆಯ ಮೂಢನಂಬಿಕೆಗಳೇ ಬೇರೆ. ಸ್ವಾತಂತ್ರ್ಯ ಪೂರ್ವದ ಭಾರತೀಯ ಸಮಾಜದಲ್ಲಿ ದಲಿತರನ್ನು, ಹಿಂದುಳಿದ ಜಾತಿಯವರನ್ನು, ಮಹಿಳೆಯರನ್ನು, ಧಾರ್ಮಿಕ ಅಲ್ಪಸಂಖ್ಯಾತರನ್ನು ಕೀಳಾಗಿ ಕಾಣುವ ತಾರತಮ್ಯ ನೆಲೆಯ ಶೋಷಕ ಪದ್ಧತಿಗಳು ಎಲ್ಲಾ ಧರ್ಮಗಳ ಪಟ್ಟಭದ್ರ ಹಿತಾಸಕ್ತಿಗಳು ಸಂಪ್ರದಾಯ, ಧಾರ್ಮಿಕ ನಂಬಿಕೆ, ರೂಢಿಗತ ಪರಂಪರೆ ಮುಂತಾದ ಹೆಸರಿನಲ್ಲಿ ಚಾಲ್ತಿಯಲ್ಲಿಟ್ಟಿದ್ದವು. ಸಮಾನತೆ ಮತ್ತು ವೈಜ್ಞಾನಿಕ ಮನೋಭಾವಗಳ ಆಶಯವನ್ನಿರಿಸಿಕೊಂಡ ಸಂವಿಧಾನವು ಜಾರಿಗೆ ಬಂದು ಆರೂವರೆ ದಶಕಗಳ ನಂತರವೂ ಮೌಢ್ಯಪಾಲಕ ಸ್ಥಾಪಿತ ಹಿತಾಸಕ್ತಿಗಳನ್ನು ಹತ್ತಿಕ್ಕಲಾಗಿಲ್ಲ. ಇದು ಸಮಾನತೆ-ಸೋದರತೆ-ಸಹಬಾಳ್ವೆ ಎಂಬ ಸಂವಿಧಾನಾತ್ಮಕ ಆಶಯಗಳನ್ನು ಕೇವಲ ನೆಪಮಾತ್ರವಾಗಿಸಲು ಮತ್ತೊಂದು ಪ್ರಮುಖ ಕಾರಣವಾಗಿದೆ. ಮೂಢನಂಬಿಕೆಗಳನ್ನು ವಿರೋಧಿಸುವುದೆಂದರೆ, ಜನರ ಧಾರ್ಮಿಕ ನಂಬಿಕೆಗಳನ್ನು ಅಲ್ಲಗಳೆಯುವುದಲ್ಲ, ಹೀನಾಯಿಸುವುದಲ್ಲ... ಪ್ರಜಾಪೀಡಕ ಕದಾಚಾರಗಳು ಮತ್ತು ಶೋಷಣೆಗಳು ಯಾವುದೇ ಒಂದು ಧರ್ಮಕ್ಕೆ ಸೀಮಿತವಾಗಿಲ್ಲ. ವೈಚಾರಿಕತೆಯನ್ನು ರೂಢಿಸಿಕೊಳ್ಳದ, ಸ್ಥಾಪಿತ ಹಿತಾಸಕ್ತಿಗಳನ್ನು ಪ್ರಶ್ನಿಸದ ಎಲ್ಲಾ ಧರ್ಮೀಯರೂ ಈ ವ್ಯವಸ್ಥೆಯಲ್ಲಿ ಬಲಿಪಶುಗಳಾಗುತ್ತಿದ್ದಾರೆ. ಧಾರ್ಮಿಕ ಮೂಲಭೂತವಾದಿ ಶಕ್ತಿಗಳ ಸಾಂಪ್ರದಾಯಿಕ ಅಧಿಕಾರವನ್ನು ಸದ್ಯದ ಕಾನೂನುಗಳು ಪ್ರತಿಬಂಧಿಸಲಾಗದಿರುವುದರಿಂದ ಶೋಷಣೆಯ ಮುಂದುವರಿಕೆಗೆ ಅಡೆತಡೆ ಇಲ್ಲದಂತಾಗಿದೆ."

ಇದರಲ್ಲಿ ಹಿಂದೂ ಧರ್ಮಕ್ಕೆ ಹಾನಿಯುಂಟು ಮಾಡುವಂತಹದ್ದು ಏನಿದೆಯೋ ಆ ಈಶ್ವರಪ್ಪನೇ ಬಲ್ಲ.



ಹಾಗೆಯೇ ಈ ವಿಧೇಯಕದ 'ಉದ್ದೇಶ ಮತ್ತು ಕಾರಣಗಳ ಹೇಳಿಕೆ'ಯಲ್ಲಿ ಹೀಗೆ ದಾಖಲಿಸಲಾಗಿದೆ:

"ಸಾಮಾನ್ಯ ಜನತೆಗೆ ವಿಶೇಷವಾಗಿ ಸಮಾಜದ ದುರ್ಬಲ ವರ್ಗಗಳಲ್ಲಿ ತೀವ್ರ ಹಾನಿಯುಂಟುಮಾಡುವ ಮತ್ತು ಅವರ ಶೋಷಣೆಗೆ ಕಾರಣವಾಗುವ ಮೂಢನಂಬಿಕೆಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯದಾದ್ಯಂತ ಹರಡಿದೆ. ಮಾನವ ಘನತೆಗೆ ಧಕ್ಕೆಯುಂಟುಮಾಡುವ ಅಘೋರಿ, ಮಡೆಸ್ನಾನ, ಬೆತ್ತಲೆ ಸೇವೆ ಅಂಥ ಇತರ ಆಚರಣೆಗಳು ವ್ಯಾಪಕವಾಗಿ ಜಾರಿಯಲ್ಲಿದೆ. ಅದರ ಜೊತೆಗೇ ಬಲಿಯಾದವರ ಆರ್ಥಿಕ ಶೋಷಣೆಗೆ ಮತ್ತು ಮಾನಸಿಕ ಕ್ಷೋಭೆಗೆ ಕಾರಣವಾಗುವ ಅನೇಕ ರೀತಿಯ ಮೂಢನಂಬಿಕೆ ಆಚರಣೆಗಳು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ರೂಢಿಯಲ್ಲಿವೆ. ಕಾನೂನಿನ ನಿಯಮವು ಅನ್ವಯಿಸುವ ನಾಗರಿಕ ಸಮಾಜದಲ್ಲಿ ಅಂಥ ಆಚರಣೆಗಳಿಗೆ ಸ್ಥಾನವಿಲ್ಲ; ಘನತೆಯಿಂದ ಜೀವಿಸುವ ಹಕ್ಕು ಭಾರತದ ಸಂವಿಧಾನದ 21ನೇ ಅನುಚ್ಛೇದದಿಂದ ಕೊಡಲಾಗಿರುವ ಮತ್ತು ಭಾರತದ ಸರ್ವೋಚ್ಚ ನ್ಯಾಯಾಲಯದ ಅನೇಕ ತೀರ್ಪುಗಳಲ್ಲಿ ಪುಷ್ಟಿಗೊಂಡಿರುವ ಮೂಲಭೂತ ಹಕ್ಕು. ಅಂಥ ಆಚರಣೆಗಳು ವ್ಯಾಪಕವಾಗಿ ಜಾರಿಯಲ್ಲಿರುವುದರಿಂದ ಅಂಥ ಹಕ್ಕು ಸಂಪೂರ್ಣವಾಗಿ ಉಲ್ಲಂಘನೆಯಾಗುತ್ತಿದೆ. ಅಲ್ಲದೆ, ಎಲ್ಲ ವ್ಯಕ್ತಿಗಳು ಮನಃಸಾಕ್ಷಿ ಮತ್ತು ನಂಬಿಕೆಗಳನ್ನು ಹೊಂದಿರುವ ಸ್ವಾತಂತ್ರ್ಯವನ್ನು ಹೊಂದಿರಲು ಹಕ್ಕುಳ್ಳವರಾಗಿದ್ದರೂ ಕೆಲವು ಮೂಢನಂಬಿಕೆ ಆಚರಣೆಗಳು ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಹಾಗೂ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿವೆ. ಈ ರೀತಿಯ ಮೂಢನಂಬಿಕೆ ಆಚರಣೆಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ಅಂಥ ಆಚರಣೆಗಳನ್ನು ನಿರ್ದಿಷ್ಟವಾಗಿ ಅಪರಾಧಗಳೆಂದು ಗುರುತಿಸುವುದು ಅನಿವಾರ್ಯವಾಗಿದೆ. ಕರ್ನಾಟಕ ಮೂಢನಂಬಿಕೆ ಆಚರಣೆಗಳ ತಡೆ ವಿಧೇಯಕ, 2013 ಈ ಉದ್ದೇಶಗಳನ್ನು ಸಾಧಿಸ ಬಯಸುತ್ತದೆ."

ಇಲ್ಲೂ ಯಾವ ಧರ್ಮಕ್ಕಾಗಲಿ, ನಂಬಿಕೆಗಾಗಲಿ ಅವಮಾನಮಾಡುವಂತಹದ್ದು ಏನಿದೆ?

ನಮ್ಮ ದೇಶದಲ್ಲಿ ಪುರೋಹಿತಶಾಹಿಗಳು ದೌರ್ಜನ್ಯ ಅಸಮಾನತೆ, ಜಾತಿ ಪದ್ಧತಿಯಂತಹ ಅನೀತಿಗಳನ್ನು ಪಾಲಿಸುತ್ತಾ ಬಹುಸಂಖ್ಯಾತ ಜನರನ್ನು ಬೌದ್ಧಿಕ ದಾಸ್ಯದಲ್ಲಿಟ್ಟಿರುವುದು ಎಲ್ಲಾ ಪ್ರಜ್ಞಾವಂತರಿಗೆ ಗೊತ್ತಿದೆ. ಯಾವುದು ಧಾರ್ಮಿಕ ನಂಬಿಕೆ, ಯಾವುದು ಅಂಧಶ್ರದ್ಧೆ ಎಂಬ ವ್ಯತ್ಯಾಸವೂ ಜನರ ಅರಿವಿಗೆ ಬಾರದಂತೆ ಪುರೋಹಿತಶಾಹಿವರ್ಗ ಮಾಡಿಟ್ಟಿದೆ. ಜಾತಿ ವ್ಯವಸ್ಥೆಯನ್ನು ಬೆಂಬಲಿಸುವ ಮೂಲಕ ಅಸ್ಪೃಶ್ಯತೆಯಂತಹ ಅಮಾನವೀಯ ಪದ್ಧತಿಯನ್ನು, ಸಂಪ್ರದಾಯದ ಹೆಸರಲ್ಲಿ ಮಹಿಳೆಯರನ್ನು ದೇವದಾಸಿಯರನ್ನಾಗಿಸುವುದನ್ನು, ಪರಂಪರೆ ಹೆಸರಿನಲ್ಲಿ ಮಡೆ ಸ್ನಾನವನ್ನು ಬೆಂಬಲಿಸುತ್ತಾ ಬಂದಿವೆ. ಇದೆಲ್ಲ ಯಾವ ಹಂತವನ್ನು ತಲುಪಿದೆ ಎಂದರೆ ನ್ಯಾಯಾಲಯಗಳಲ್ಲಿ, ಸರ್ಕಾರಿ ಕಟ್ಟಡಗಳಲ್ಲಿ ಹಿಂದೂ ದೇವರ ಪೂಜೆ, ಪುರಸ್ಕಾರಗಳು ಎಗ್ಗಿಲ್ಲದಂತೆ ಮಾತ್ರವಲ್ಲ ಯಾರೂ ಪ್ರಶ್ನಿಸದಂತೆ 'ನಂಬಿಕೆ'ಯ ಹೆಸರಲ್ಲಿ ನಡೆಯುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಜಾತ್ಯತೀತ ಸರ್ಕಾರ ಒಂದು ಇದನ್ನೆಲ್ಲ ಸರಿಪಡಿಸುವ ಮಾರ್ಗ ಯಾವುದು? ಈ ನಿಟ್ಟಿನಲ್ಲಿ ವಿಧೇಯಕವು ಹಲವು ಸಲಹೆಗಳನ್ನು ಕೊಟ್ಟಿದೆ. ಅವುಗಳಲ್ಲಿ ಒಂದು ಹೀಗಿದೆ:

"ಇಂದಿನ ಸುಶಿಕ್ಷಿತರೆನ್ನಿಸಿಕೊಂಡವರಲ್ಲಿಯೂ ಕಂದಾಚಾರ ಕಡಿಮೆಯಾಗಿ ವೈಜ್ಞಾನಿಕ ಮನೋಭಾವ ಹೆಚ್ಚಾಗುವ ಬದಲು ಮೌಢ್ಯವೇ ಮನೆ ಮಾಡಿದೆ. ಸರ್ಕಾರಿ ಕಚೇರಿಗಳಲ್ಲಿ ಪೂಜೆಪುನಸ್ಕಾರ ನಡೆಸುವ, ಸರ್ಕಾರಿ ಕಟ್ಟಡಗಳನ್ನು ಕಟ್ಟಲು ಗುದ್ದಲಿ ಪೂಜೆ ಮಾಡಿಸುವ, ವಿಧಾನಸೌಧ-ವಿಕಾಸಸೌಧಗಳಂತಹ ಸಾರ್ವಜನಿಕ ಕಟ್ಟಡಗಳಲ್ಲಿರುವ ಕೊಠಡಿಗಳನ್ನು ವಾಸ್ತುದೋಷ ನಿವಾರಣೆಯ ಹೆಸರಿನಲ್ಲಿ ಮನಬಂದಂತೆ ಬದಲಿಸಿ ಕಟ್ಟುವ ಮೂಢಮತಿಗಳಿದ್ದಾರೆ. ಹೀಗಾಗಿ ವೈಚಾರಿಕತೆಯೆಂಬುದು ಶಿಕ್ಷಿತರಿಗೆ ಮತ್ತು ಶೈಕ್ಷಣಿಕ ಕ್ಷೇತ್ರಕ್ಕೆ ಮಾತ್ರ ಸಂಬಂಧಿಸಿರಬೇಕಾದ ವಿಷಯವಲ್ಲ. ಹೀಗಾಗಿ, ನೂರಿಪ್ಪತ್ತು ಕೋಟಿಗೂ ಹೆಚ್ಚಿನ ಜನಸಂಖ್ಯೆಯಿರುವ ಭಾರತ ದೇಶದಲ್ಲಿ ವೈಚಾರಿಕತೆ ಬೆಳೆಸುವ ಮತ್ತು ವೈಜ್ಞಾನಿಕ ಮನೋಧರ್ಮವನ್ನು ರೂಪಿಸುವ ಹೊಣೆಯನ್ನು ಸೀಮಿತ ಸಂಖ್ಯೆಯಲ್ಲಿರುವ ಪ್ರಗತಿಪರ ಚಿಂತಕರು, ಪ್ರಗತಿಪರ ಹೋರಾಟಗಾರರು ಮಾತ್ರ ಹೊತ್ತುಕೊಂಡರಷ್ಟೇ ಸಾಲದು. ಸರ್ಕಾರದ ಸಕಲ ಆಡಳಿತ ಯಂತ್ರಾಂಗಗಳೂ, ಸಾರ್ವಜನಿಕ ಸಂಸ್ಥೆಗಳೂ, ಸಂವಿಧಾನಾತ್ಮಕವಾದ ಈ ಕರ್ತವ್ಯವನ್ನು ನಿರ್ವಹಿಸಬೇಕಾಗಿರುತ್ತದೆ. ಅಲ್ಲದೆ ಮೌಢ್ಯಾಚರಣೆ ಗಳನ್ನು ತಡೆಗಟ್ಟುವ ಕೆಲಸವನ್ನು ಸರ್ಕಾರಿ ಕಚೇರಿಗಳಿಂದಲೇ ಮೊದಲು ಪ್ರಾರಂಭವಾಗುವುದು."

ಇದು ಮಾಟಮಂತ್ರಗಳಲ್ಲಿ ತೊಡಗುವ ಯಡಿಯೂರಪ್ಪನಿಗಾಗಲಿ, ಹೋಮ-ಹವನಗಳಲ್ಲಿ ಅಪಾರ ನಂಬಿಕೆ ಹೊಂದಿರುವ ಕುಮಾರಸ್ವಾಮಿ ಗಾಗಲಿ ಪಥ್ಯವಾಗುವುದಾದರೂ ಹೇಗೆ?

ಇನ್ನು ಯಾವುದನ್ನು ಈ ವಿಧೇಯಕದಲ್ಲಿ ಶಿಕ್ಷೆಗೆ ಸೂಕ್ತವಾದ ಮುಢನಂಬಿಕೆಗಳು ಎಂದು ಪಟ್ಟಿ ಮಾಡಲಾಗಿದೆ ಎಂಬುದನ್ನು ನೋಡೋಣ:


- ಲಾಭಕ್ಕಾಗಿ ಅಥವಾ ದೈವವನ್ನು ಸಂಪ್ರೀತಗೊಳಿಸುವುದಕ್ಕಾಗಿ ಮನುಷ್ಯನನ್ನು ಬಲಿಕೊಡುವುದು
- ಮಾನುಷ್ಯ ಬಲಿಯಲ್ಲಿನ ನಂಬಿಕೆಯನ್ನು ಹರಡುವುದು ಅಥವಾ ಮಾನುಷ್ಯ ಬಲಿಕೊಡುವಂತೆ ಇತರರನ್ನು ಪ್ರೇರೇಪಿಸುವುದು.
- ಕಾಯಿಲೆಯನ್ನು ಗುಣಪಡಿಸುವ ನೆಪದಲ್ಲಿ ಹಿಂಸಾತ್ಮಕ ರೀತಿಯಿಂದ ಭೂತೋಚ್ಚಾಟನೆಯನ್ನು ನಡೆಸುವುದು.
- ಅಘೋರಿ, ಸಿದ್ದುಭುಕ್ತಿ ಅಥವಾ ಸದೃಶ ಆಚರಣೆಯನ್ನು ನೆರವೇರಿಸುವುದು,
- ಅಂಥ ಆಚರಣೆಗಳಲ್ಲಿ ತೊಡಗುವಂತೆ ಇತರರನ್ನು ಒತ್ತಾಯಿಸುವುದು
- ಅಂಥ ಆಚರಣೆಗಳಿಂದ ಪಡೆಯಲಾಗಿದೆಯೆನ್ನಲಾದ ಶಕ್ತಿಯ ಭಯವನ್ನು ಉಪಯೋಗಿಸಿಕೊಂಡು ಆರ್ಥಿಕವಾಗಿ ಮತ್ತು ಲೈಂಗಿಕವಾಗಿ ವ್ಯಕ್ತಿಗಳ ಶೋಷಣೆ ಮಾಡುವುದು.
- ದೈವಿಕ ಅಥವಾ ಆಧ್ಯಾತ್ಮಿಕ ಶಕ್ತಿ ಸ್ವಾಧೀನವಾಗಿದೆಯೆಂದು ಘೋಷಿಸುವುದು ಮತ್ತು ಅಂಥ ಘೋಷಣೆಯನ್ನು ಬಳಸಿಕೊಂಡು, ಹಣವನ್ನು ಪಡೆದು ಪರಿಹಾರಗಳ ಅಥವಾ ಲಾಭಗಳ ಭರವಸೆಯನ್ನು ಕೊಡುವುದು; ಅಥವಾ ವೈಯಕ್ತಿಕ ಲಾಭಕ್ಕಾಗಿ ದೈವದ ಕೋಪದ ಅಥವಾ ಆತ್ಮದ ಖಂಡನೆಯ ಭಯವನ್ನು ಹುಟ್ಟಿಸುವುದು.
- ಹಣಕ್ಕಾಗಿ ಅಥವಾ ಇಲ್ಲವೇ ಉಚಿತವಾಗಿ ವಾಮಾಚಾರವನ್ನು (ಬ್ಲ್ಯಾಕ್ ಮ್ಯಾಜಿಕ್) ಅಥವಾ ಮಾಟವನ್ನು ಇತರ ವ್ಯಕ್ತಿಗಳಿಗೆ ತೊಂದರೆಯುಂಟು ಮಾಡುವ ಉದ್ದೇಶದಿಂದ ಮತ್ತು ಅವರಿಗೆ ತೀವ್ರವಾಗಿ ಭಯವುಂಟು ಮಾಡುವಂತೆ ಬಳಸುವುದು ಅಥವಾ ಮಾಡುವುದು.
- ದೇಹದೊಳಗೆ ಚುಚ್ಚಿಕೊಳ್ಳುವ ಕೊಕ್ಕೆಯಿಂದ ನೇತಾಡುವಂತಹ (ಸಿಡಿ) ಅಥವಾ ದೇಹದೊಳಗೆ ತೂರಿಸಿಕೊಂಡಿರುವ ಕೊಕ್ಕೆಯಿಂದ ರಥವನ್ನು ಎಳೆಯುವಂತಹ ಸ್ವದಂಡನೆಯಿಂದ ಗಾಯಗೊಳ್ಳುವ ಮತಾಚರಣೆಗಳನ್ನು ಆಚರಿಸುವಂತೆ ಒತ್ತಾಯಿಸುವುದು, ಹರಡುವುದು ಅಥವಾ ಅದಕ್ಕೆ ಅನುಕೂಲ ಕಲ್ಪಿಸುವುದು.
- ಮಕ್ಕಳ ಕಾಯಿಲೆಯನ್ನು ವಾಸಿ ಮಾಡುವ ಹೆಸರಿನಲ್ಲಿ ಅವರನ್ನು ಮುಳ್ಳುಗಳ ಮೇಲೆ ಅಥವಾ ಎತ್ತರದಿಂದ ಎಸೆಯುವ ಮೂಲಕ ಹಾನಿಗೊಳಪಡಿಸುವಂತಹ ಆಚರಣೆಗಳನ್ನು ಒತ್ತಾಯಿಸುವುದು, ಹರಡು ವುದು ಮತ್ತು ಅಂತಹ ವಾತಾವರಣವನ್ನು ಕಲ್ಪಿಸುವುದು.
- ಋತುಮತಿಯಾದ ಅಥವಾ ಗರ್ಭಿಣಿ ಮಹಿಳೆಯರನ್ನು ಒತ್ತಾಯಪೂರ್ವಕವಾಗಿ ಒಂಟಿಯಾಗಿರಿಸುವುದು, ಗ್ರಾಮದೊಳಗೆ ಬಾರದಂತೆ ನಿಷೇಧಿಸುವುದು.
- ಸಮಾಜದ ದುರ್ಬಲ ವರ್ಗಗಳ ಮಹಿಳೆಯರ ಮೇಲೆ ಬಣ್ಣದ ನೀರನ್ನು ಎರಚುವ, ಓಕುಳಿ ಮೂಲಕ ಅವರನ್ನು ಅವಮಾನಗೊಳಿ ಸುವುದು ಅಥವಾ ಅವರ ಘನತೆಗೆ ಧಕ್ಕೆಯುಂಟು ಮಾಡುವುದು.
- ಪೂಜೆ ಅಥವಾ ಇತರ ಯಾವುದೇ ಹೆಸರಿನಲ್ಲಿ ಅವರನ್ನು ಬೆತ್ತಲೆಯಾಗಿ ಪ್ರದರ್ಶಿಸುವುದು, ಉದಾಹರಣೆಗೆ ಬೆತ್ತಲೆ ಸೇವೆ ಅಂಥ ಅಮಾನವೀಯ ಮತ್ತು ಅವಮಾನ ಗೊಳಿಸುವ ಆಚರಣೆಗಳಿಗೆ ಮಹಿಳೆಯರನ್ನು ಒಳಪಡಿಸುವುದು.
- ಗರ್ಭಿಣಿಯರನ್ನಾಗಿಸುವುದೂ ಸೇರಿದಂತೆ ಸಾಮಾಜಿಕ ಅಥವಾ ವೈಯಕ್ತಿಕ ಲಾಭವನ್ನು ಉಂಟುಮಾಡುವ ಭರವಸೆಯೊಂದಿಗೆ ಅತಿಮಾನುಷ ಶಕ್ತಿಯನ್ನು ಆಹ್ವಾನಿಸುವ ಮೂಲಕ ಮಹಿಳೆಯರನ್ನು ಲೈಂಗಿಕವಾಗಿ ಶೋಷಣೆಗೆ ಒಳಪಡಿಸುವುದು.
- ಸಾರ್ವಜನಿಕ ಆರೋಗ್ಯಕ್ಕೆ ಹಾನಿಯುಂಟು ಮಾಡುವಂಥ, ಕತ್ತನ್ನು ಕಚ್ಚುವ ಮೂಲಕ ಪ್ರಾಣಿಗಳನ್ನು ಕೊಲ್ಲುವ ಆಚರಣೆಗಳನ್ನು (ಗೋವು) ನೆರವೇರಿಸುವಂತೆ ಯಾರೇ ವ್ಯಕ್ತಿಯನ್ನು ಒತ್ತಾಯಿಸುವುದು.
- ಮಾನವ ಘನತೆಯನ್ನು ಉಲ್ಲಂಘಿಸುವಂತಹ ಮಡೆಸ್ನಾನ ಅಥವ ಸದೃಶ ಆಚರಣೆಗಳಿಗೆ ಅನುಕೂಲ ಕಲ್ಪಿಸುವುದು.
- ಮೂಢನಂಬಿಕೆಯ ಹೆಸರಿನಲ್ಲಿ ಜಾತಿ ಅಥವಾ ಲಿಂಗದ ಆಧಾರದ ಮೇಲೆ ತಾರತಮ್ಯ ಕಲ್ಪಿಸುವುದು.
- ಪಾದರಕ್ಷೆಗಳನ್ನು ಅವನ/ ಅವಳ ತಲೆಯ ಮೇಲೆ ಒಯ್ಯುವ ಅವಮಾನಕರ ಆಚರಣೆಗಳನ್ನು ನೆರವೇರಿಸುವಂತೆ ಸಮಾಜದ ದುರ್ಬಲ ವರ್ಗಗಳಿಗೆ ಸೇರಿದ ಯಾರೇ ವ್ಯಕ್ತಿಯನ್ನು ಒತ್ತಾಯಿಸುವುದು.
- ಆಹಾರ ವಿತರಣೆ ಮಾಡುವಾಗ ಜಾತಿಯ ಆಧಾರದ ಮೇಲೆ ಪಂಕ್ತಿ ಭೇದ ಮಾಡುವಂತಹ ಆಚರಣೆಗಳನ್ನು ಮಾಡುವುದು.
- ಯಾರೇ ವ್ಯಕ್ತಿಯು ಜನನದ ಸಮಯ, ಸ್ಥಳದ ಆಧಾರದ ಮೇಲೆ ಅವನಿಗೆ ಕಳಂಕ ಹಚ್ಚುವುದಕ್ಕೆ ಅಥವಾ ಅವನನ್ನು ತೆಗಳುವುದಕ್ಕೆ ಭವಿಷ್ಯವಾಣಿ ನಿಜವಾಗುತ್ತದೆಂದು ನಂಬಿಸಿ ಅವಮಾನಕರ

▶▶| 08

ಸೈಲೆಂಟ್ ಸುನೀಲನ ನಾಪತ್ತೆ ಕತೆ!

ಸಂಜಯ್‌ನಗರ ಪೊಲೀಸರಿಗೆ ಸಿಕ್ಕಿಬಿದ್ದ ಆ ನಾಲ್ವರು ಕಿರಾತಕರು ಸೈಲೆಂಟ್ ಸುನೀಲನ ಶಿಷ್ಯರೆಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ ನಿಜ. ಆದರೆ ಅವರು ಹೊರಟದ್ದು ಯಾರ ಶಿಕಾರಿಗೆ?

ಸಿಸಿಬಿಯ ಎಸಿಪಿ ರವಿಕುಮಾರ್ ನಾಯಕತ್ವದ ಪೊಲೀಸ್ ಪಡೆಯಲ್ಲಿರುವವರೆಲ್ಲರೂ ಬೆಂಗಳೂರಿನ ಪಾಪ ಕೂಪದ ಮಟ್ಟಿಗೆ ಹೊಸಬರೆ. ಪಳಗಿದವರಲ್ಲ. ಇನ್ಸ್‌ಪೆಕ್ಟರ್‌ಗಳಾದ ಶ್ರೀನಿವಾಸ್, ಕೊರಟ್ ಪ್ರಕಾಶ್ ದೂರದ ಊರುಗಳಿಂದ ಬಂದವರಾದರೆ ಮತ್ತೊಬ್ಬ ಇನ್ಸ್‌ಪೆಕ್ಟರ್ ಬಾಲರಾಜು ತಮ್ಮ ಮಾನವೀಯ ಕಳಕಳಿಯಿಂದ ಹೆಸರಾದವರು. ಎಸ್‌ಐ ಅಶೋಕ್, ಎಎಸ್‌ಐ ಗೋವಿಂದ ಶೆಟ್ಟಿಯಂತಹ ಕಠಿಣ ಪರಿಶ್ರಮದ ಅಧಿಕಾರಿಗಳೆಲ್ಲ ಸೇರಿ ಬಿಜೆಪಿ ಕಾಲದಿಂದ ಕೊಬ್ಬಿ ಹಾವಳಿ ಯಿಡುತ್ತಿದ್ದ ರೌಡಿ ಗಳನ್ನೆಲ್ಲ ಒಬ್ಬೊಬ್ಬರಾಗಿ ಎಳೆದೊಯ್ದು ರುಬ್ಬು ತ್ತಿದ್ದಾರೆ. ಇಂಥ ನಿಷ್ಣಾತ ಪೊಲೀಸ್ ಪಡೆಯ ಬಲೆಗೆ ಬಿದ್ದದ್ದೇ ಕೊಡಿಗೆಹಳ್ಳಿಯ ಪಾತಕಿ ಬೈಸನ್ ಸೀನನ ಖತರ್‌ನಾಕ್ ಪಡೆ.


ಶಾಸಕ ವಿಶ್ವನಾಥ್

ಗೆದ್ದಲಹಳ್ಳಿಯ ಕಾರ್ತೀಕ್ ಅಲಿಯಾಸ್ ಆವಿ, ಸಂಜಯ್‌ನಗರದ ರಾಮಮೂರ್ತಿ ಮತ್ತು ರಾಜೇಶ್ ಉರ್ಫ್ ರಾಜ ಎಂಬ ಮೂವರು ಸಹಚರರೊಂದಿಗೆ ತನ್ನ ಹುಂಡಾಯ್ ಕಾರು, ಖಾರದ ಪುಡಿ, ಮಚ್ಚು ಲಾಂಗಿನ ಸಮೇತ ಸಿಕ್ಕಿಬಿದ್ದ ಕೊಡಿಗೇಹಳ್ಳಿಯ ಶ್ರೀನಿವಾಸ್ ಅಲಿಯಾಸ್ ಬೈಸನ್ ಸಂಜಯ್‌ನಗರದ ರೌಡಿ ಶೀಟರ್. 2009ರಲ್ಲಿ ಮೇಕೆ ಹರೀಶನ ಜೊತೆ ಸೇರಿಕೊಂಡು ಯಲಹಂಕದ ಜಿಮ್ಮಿಗೆ ನುಗ್ಗಿದ್ದೇ ಬುಲೆಟ್ ರವಿಯನ್ನು ಕೊಂದು ಹಾಕಿದ್ದ. ಸುನೀಲನ ಜೊತೆ ಜೈಲಿಗೂ ಹೋಗಿಬಂದ. ಈಗ ನೋಡಿದರೆ ತನ್ನದೇ ಗ್ಯಾಂಗ್‌ಲೀಡರ್ ಸುನೀಲನ ಮತ್ತೊಬ್ಬ ಬಂಟ ಮೇಕೆ ಹರೀಶನ ವಿರುದ್ಧ ತಿರುಗಿಬಿದ್ದಿದ್ದಾನೆಂದರೆ, ಇಲ್ಲಿಗೆ ಒಂದೂವರೆ ತಿಂಗಳ ಹಿಂದೆ ಜೈಲಿಂದ ಹೊರಬಿದ್ದ ಸೈಲೆಂಟ್ ಸುನೀಲ ಕೂಡ ಅಷ್ಟೇ ನಿಗೂಢವಾಗಿ ನಾಪತ್ತೆಯಾಗುತ್ತಾನೆಂದರೆ ಯಾರ ಬುರುಡೆಗೆ ಬಿಸಿನೀರು ಕಾಯುತ್ತಿರಬಹುದು?


ಮಾರ್ಕೆಟ್ ವೇದಿ

ಸಿಸಿಬಿ ಪೊಲೀಸ್ ಪಡೆಯ ಬಲೆಗೆ ಬಿದ್ದ ಬೈಸನ್ ಸೀನನ ಗ್ಯಾಂಗ್ ರೌಂಡಿಂಗ್ ಶುರುವಿಟ್ಟದ್ದು ಗೆದ್ದಲಹಳ್ಳಿಯ ಮತ್ತೊಬ್ಬ ಪಟರ್ ಕಾಂತ ಉರ್ಫ್ ಕಾಂತರಾಜು ಎಂಬಾತನ ಹತ್ಯೆಗಾಗಿ ಎಂಬ ಪೊಲೀಸ್ ಹೇಳಿಕೆಯೇ ವಿಲಕ್ಷಣ ವೃತ್ತಾಂತವೊಂದನ್ನು ಬಗೆದಿಡುತ್ತದೆ. ಹಾಗೆ ಕಾಂತರಾಜುವನ್ನು ಕೊಲ್ಲಲು ಬೈಸನ್‌ಗೆ ಸುಪಾರಿ ಕೊಟ್ಟವನು ಇದೇ ಗೆದ್ದಲಹಳ್ಳಿಯ ರಾಮಮೂರ್ತಿ. ವಿಪರ್ಯಾಸವೆಂದರೆ ರಾಮಮೂರ್ತಿ ಕೊಲ್ಲಿಸಹೊರಟಿದ್ದ ಕಾಂತರಾಜುವಿಗೆ ವರಸೆಯಲ್ಲಿ ಆತ ಅಣ್ಣನಾಗಬೇಕು. ಅದೇ ರೀತಿ ಕಾಂತರಾಜು ಕೂಡ ತನ್ನ ತಮ್ಮ ರಾಮಮೂರ್ತಿಯನ್ನು ಕೊಂದು ಹಾಕುವಂತೆ ಸುಪಾರಿ ಕೊಟ್ಟದ್ದು ಬೈಸನ್ ಜೊತೆ ಸೇರಿ ಬುಲೆಟ್ ರವಿಯನ್ನು ಕೊಂದಿದ್ದ ಮೇಕೆ ಹರೀಶನಿಗೆ!

ಪರಸ್ಪರ ಒಂದೇ ತಂಡದ ರೌಡಿಗಳಿಗೆ ಸುಪಾರಿಕೊಟ್ಟು ಕೊಲ್ಲಿಸ ಹೊರಟ ಗೆದ್ದಲಹಳ್ಳಿಯ ಕಿರಾತಕ ಸಹೋದರರಾದ ರಾಮಮೂರ್ತಿ ಮತ್ತು ಕಾಂತರಾಜು ಬೆನ್ನಿಗಿದ್ದ ಸೈಲೆಂಟ್ ಸುನೀಲನ ಪಡೆಯ ರಣತಂತ್ರವಾದರೂ ಏನಿತ್ತು?

ಸಿಸಿಬಿಯ ಎಸಿಪಿ ರವಿಕುಮಾರ್ ತಲೆಕೆಡಿಸಿ ಕೊಂಡಿದ್ದೇ ಈ ವಿಷಯಕ್ಕೆ. ಮೇಲುನೋಟಕ್ಕೆ ಸಿಸಿಬಿಯ ರೌಡಿ ಪ್ರತಿಬಂಧಕ ದಳ ಬೇರೆಲ್ಲಾ ರೌಡಿಗಳನ್ನು ಹಿಡಿದು ಡೌಟ್ ದಕಾಯಿತಿ ಅಂದರೆ ದರೋಡೆಗೆ ಹೊಂಚು ಹಾಕುತ್ತಿದ್ದರೆಂಬ ಕಾಟಾಚಾರದ ಕೇಸು ಹಾಕಿ ಜೈಲಿಗೆ ದಬ್ಬಿದ ಹಾಗೆಯೇ ಈ ಪ್ರಕರಣವೂ ಗೋಚರಿಸುತ್ತದೆ. ಏಕೆಂದರೆ ಕಾಮನ್‌ಸೆನ್ಸ್ ಇರುವ ಯಾವುದೇ ಪಾತಕಿಯೂ ಒಂದೇ ಗ್ಯಾಂಗಿನ ರೌಡಿಗಳಿಗೆ ಪರಸ್ಪರ ಸುಪಾರಿ ಕೊಟ್ಟು ಕೊಳ್ಳುವ ಮೂರ್ಖತನಕ್ಕೆ ಕೈಹಾಕುವುದಿಲ್ಲ.

ಹಾಗೊಮ್ಮೆ ಕಾಂತರಾಜು ಮೇಕೆ ಹರೀಶನ ಒಡನಾಟದಲ್ಲಿದ್ದಾನೆಂಬ ಸಂಗತಿ ರಾಮಮೂರ್ತಿಗೆ ಗೊತ್ತಿದ್ದರೆ ಆತ ಮೇಕೆ ಹರೀಶನ ಒಡನಾಡಿ ಬೈಸನ್ ಸೀನನಿಗೆ ಕಾಂತನನ್ನು ಮುಗಿಸುವಂತೆ ಸುಪಾರಿ ಕೊಡುತ್ತಿರಲಿಲ್ಲ. ಅದೇ ರೀತಿ ಕಾಂತರಾಜು ಕೂಡ ತನ್ನ ದಾಯಾದಿ ರಾಮಮೂರ್ತಿಯನ್ನು ನಿಖಾಲಿ ಮಾಡಲು ಬೈಸನ್‌ನ ದೋಸ್ತ್ ಮೇಕೆ ಹರೀಶನಿಗೆ ಒಪ್ಪಿಸುವಷ್ಟು ದಡ್ಡನೇನಲ್ಲ.



ಸೈಲೆಂಟ್ ಸುನೀಲ

ಹಕೀಕತ್ತೇನೆಂದರೆ ಗೆದ್ದಲಹಳ್ಳಿಯ ರಾಮಮೂರ್ತಿ ಮತ್ತು ಕಾಂತರಾಜು ವರಸೆಯಲ್ಲಿ ಅಣ್ಣತಮ್ಮಂದಿರಾದರೂ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಇಬ್ಬರಿಗೂ ದುಷ್ಮನಿಯಿತ್ತು. ಗೆದ್ದಲಹಳ್ಳಿಯಲ್ಲಿದ್ದ ಸರ್ಕಾರಿ ಗುಂಡು ತೋಪಿನ ಅರ್ಧ ಎಕರೆಯಷ್ಟು ಭಾರೀ ನಿವೇಶನವೊಂದಕ್ಕೆ ಕೈಹಾಕಿದ್ದ ರಾಮಮೂರ್ತಿ ಅದನ್ನು ಐದೂವರೆ ಕೋಟಿಗೆ ಮಾರಲು ಆಂಧ್ರದ ಬಿಲ್ಡರ್ ಒಬ್ಬನನ್ನು ಒಪ್ಪಿಸಿದ್ದ. ಇದಕ್ಕೆ ಶುರುವಿನಿಂದಲೂ ಅಡ್ಡಗಾಲಿಡುತ್ತಿದ್ದ ಕಾಂತ ತನಗೆ ಅರ್ಧಪಾಲು ಕೊಟ್ಟರಷ್ಟೇ ವ್ಯವಹಾರ ಎಂದು ಧಮಕಿಯಿಟ್ಟ.

ಯಾವತ್ತು ಕಾಂತನನ್ನು ಮುಗಿಸುವಂತೆ ರಾಮಮೂರ್ತಿ ಕೊಡಿಗೇಹಳ್ಳಿಯ ಬೈಸನ್ ಸೀನನಿಗೆ ಸುಪಾರಿ ಕೊಟ್ಟದ್ದು ಗೊತ್ತಾಯಿತೋ ಅದೇ ಹೊತ್ತಿಗೆ ಜೈಲಿನಲ್ಲಿದ್ದ ಸೈಲೆಂಟ್ ಸುನೀಲ ಜಾಮೀನು ಪಡೆದು ಬಿಡುಗಡೆಗೊಂಡಿದ್ದ. ಬಿಜೆಪಿ ಸರ್ಕಾರದ ಕಾಲದಿಂದ ಸಿಸಿಬಿಯಲ್ಲಿದ್ದ ಹಳಬರೆಲ್ಲರನ್ನೂ ಕಾಂಗ್ರೆಸ್ ಸರ್ಕಾರ ಎತ್ತಂಗಡಿ ಮಾಡಿ ಅಲ್ಲಿಗೆ ಹೊಸಬರನ್ನು ತಂದು ಇಡೀ ಸಿಸಿಬಿಯನ್ನೇ ಫಿನಾಯಲ್ ಹಾಕಿ ತೊಳೆ ದಂತಾಗಿತ್ತು. ಇದನ್ನೆಲ್ಲ ಸೂಕ್ಷ್ಮವಾಗೇ ಗಮನಿಸುತ್ತಿದ್ದ ಸುನೀಲ ಇಲ್ಲಿಗೆ ಒಂದೂವರೆ ತಿಂಗಳ ಹಿಂದೆ ಜೈಲಿಂದ ಬಿಡುಗಡೆ ಗೊಂಡವನು ನೇರವಾಗಿ ಬಂದಿಳಿದದ್ದು ತನ್ನ ಕೊಡಿಗೇಹಳ್ಳಿಯ ಅಪಾರ್ಟ್‌ಮೆಂಟಿಗೆ.

ಏಕೆಂದರೆ ರಾಮಮೂರ್ತಿ ಮತ್ತು ಕಾಂತರಾಜು ಕೈಹಾಕಿದ್ದ ಸೈಟಿಗೇ ಸುನೀಲನ ಗ್ಯಾಂಗ್ ಕೂಡ ಕಣ್ಣು ಹಾಕಿತ್ತು. ಹಾಗಂತ ನೇರವಾಗಿ ದಾಯಾದಿಗಳಿಬ್ಬರಿಗೂ ಈ ವಿಷಯ ತಿಳಿಸುವಂತಿಲ್ಲವಲ್ಲ. ಅದಕ್ಕೆಂದು ಸುನೀಲ ಈ ಗ್ಯಾಂಗ್ ತಂತ್ರವೊಂದನ್ನು ರೂಪಿಸಿತು. ಬುಲೆಟ್ ರವಿ ಹತ್ಯೆ ಪ್ರಕರಣದಲ್ಲಿದ್ದ ಬೈಸನ್ ಸೀನ ಮತ್ತು ಮೇಕೆ ಹರೀಶ ಪರಸ್ಪರ ಕಚ್ಚಾಡಿಕೊಂಡಂತೆ ಡ್ರಾಮಾ ಮಾಡುವುದು ಮತ್ತು ಇಬ್ಬರಲ್ಲೊಬ್ಬರನ್ನು ಮುಗಿಸಿ ಮರ್ಡರ್ ಕೇಸಿನಲ್ಲಿ ಮತ್ತೊಬ್ಬ ಜೈಲು ಪಾಲಾಗುವಂತೆ ಮಾಡಿ ಕ್ರಮೇಣ ಇಡೀ ಸೊತ್ತನ್ನು ಕಬಳಿಸುವುದು ಸುನೀಲನ ತಂತ್ರವಾಗಿತ್ತು. ಅದಕ್ಕೆಂದು ತನ್ನದೇ ಗ್ಯಾಂಗಿನ ಬೈಸನ್ ಮತ್ತು ಮೇಕೆ ಹರೀಶ ಪರಸ್ಪರ ಜಿದ್ದಿಗೆ ಬಿದ್ದಂತೆ ನಾಟಕವೂ ನಡೆಯಿತು. ಹೇಗೆ ಬೈಸನ್ ರಾಮಮೂರ್ತಿಗೆ ಆಪ್ತನಾದನೋ ಅದೇ ರೀತಿ ಮೇಕೆ ಹರೀಶ ಕಾಂತರಾಜುವಿಗೆ ಆಪ್ತನಾಗತೊಡಗಿದ್ದ.

ಇದೇ ಹೊತ್ತಿಗೆ ಜೈಲಿಂದ ಹೊರಬಿದ್ದ ಸೈಲೆಂಟ್ ಸುನೀಲ ಸರ್ಕಾರ ಬೇರೆ ಬದಲಾಗಿದ್ದು ಮತ್ತು ಸಿಸಿಬಿಯ ಹಳಬರೆಲ್ಲ ಎತ್ತಂಗಡಿಯಾಗಿದ್ದು ತನ್ನನ್ನು ಯಾರೂ ಗಮನಿಸುತ್ತಿಲ್ಲ ಎಂದೇ ಲೆಕ್ಕ ಹಾಕಿದ್ದ. ಆದರೆ ಹೊಸದಾಗಿ ರೌಡಿ ನಿರೋಧಕ ದಳಕ್ಕೆ ಎಸಿಪಿಯಾಗಿ ಬಂದಿದ್ದ ರವಿಕುಮಾರ್ ನಿಷ್ಠುರಿ ಮತ್ತು ನಿದ್ದೆಗೆಟ್ಟು ಕ್ರಿಮಿನಲ್‌ಗಳ ಬೆನ್ನು ಹತ್ತುವ ಜಾಯಮಾನದವರು. ಇದಕ್ಕೂ ಮೊದಲೇ ನಿವೃತ್ತ ಪೊಲೀಸ್ ಅಧಿಕಾರಿ ಮತ್ತು ಮಲ್ಲೇಶ್ವರಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಬಿ.ಕೆ. ಶಿವರಾಮ್ ಸುನೀಲನನ್ನು ಕರೆದು ಯಾವುದೇ ದುಸ್ಸಾಹಸಕ್ಕೆ ಕೈಹಾಕದಂತೆ ಎಚ್ಚರಿಸಿದ್ದೂ ಆಗಿತ್ತು. ವಿಧಾನಸೌಧದಲ್ಲಿದ್ದ ಹಿರಿಯ ಅಧಿಕಾರಿಯೊಬ್ಬರ ಮಗಳನ್ನು ಪ್ರೀತಿಸಿ ಮದುವೆಯಾಗಿದ್ದ ಸುನೀಲ ಯಲಹಂಕ ನ್ಯೂಟೌನ್ ಸಮೀಪದ ಕೊಡಿಗೇಹಳ್ಳಿ ಗೇಟ್‌ನ ಅಪಾರ್ಟ್‌ಮೆಂಟೊಂದರಲ್ಲಿ ಫ್ಲಾಟನ್ನೂ ಖರೀದಿಸಿದ್ದ. ಅಲ್ಲೇ ಆತನ ಸಂಸಾರವೂ ಶುರುವಾಗಿತ್ತು.


ಸಿಕ್ಕಿಬಿದ್ದ ಬೈಸನ್ ಶೀನನ ಪಡೆ

ಜೈಲಿಂದ ಸುನೀಲ ಬಿಡುಗಡೆಗೊಂಡ ಸಂಗತಿ ಗೊತ್ತಾಗಿದ್ದೇ ಹುಷಾರಾದ ಸಿಸಿಬಿ ಪೊಲೀಸರು ಆತನನ್ನು ಕರೆಸಿ ಎಚ್ಚರಿಕೆ ನೀಡುವ ಬಗ್ಗೆ ತಲೆಕೆಡಿಸಿಕೊಂಡಿದ್ದಾರೆ. ಆದರೆ ಸುನೀಲ ಸಿಗಬೇಕಲ್ಲ!

ಜೈಲಿಂದ ಹೊರಬಿದ್ದವನೇ ನೇರವಾಗಿ ಸಿಸಿಬಿ ಪೊಲೀಸರನ್ನು ಕಂಡು ತನ್ನ ಪರಿಸ್ಥಿತಿ ಹೇಳಿಕೊಂಡಿದ್ದರೆ ಪೊಲೀಸರು ಕೂಡ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಪೊಲೀಸರಿಗೂ ಸಿಗದೆ, ಯಾರ ಕಣ್ಣಿಗೂ ಬೀಳದೆ, ಕೊಡಿಗೆ ಹಳ್ಳಿ ಗೇಟ್‌ನ ತನ್ನ ಅಪಾರ್ಟ್‌ಮೆಂಟ್‌ನಲ್ಲೂ ಕಾಣಿಸದೆ ಇದ್ದಕ್ಕಿದ್ದಂತೆ ನಾಪತ್ತೆಯಾದ ಸುನೀಲನಿಗೆ ಮಹತ್ತರ ಕಾರಣ ವಿಲ್ಲದೆ ಭೂಗತನಾಗಲು ಅಂಥಾ ಅನಿವಾರ್ಯತೆಯಾದರೂ ಏನಿತ್ತು?

ಈ ಬಗ್ಗೆ ಕುತೂಹಲಗೊಂಡ ಸಿಸಿಬಿ ಸುನೀಲನ ಪತ್ತೆಗಾಗಿ ವ್ಯಾಪಕ ಕಾರ್ಯಾಚರಣೆಯನ್ನೇ ಶುರುವಿಟ್ಟಿದೆ. ಸುನೀಲನ ಬಲಗೈ ಬಂಟನಂತಿದ್ದ ರೋಹಿತ್ ಅಲಿಯಾಸ್ ಒಂಟೆ ಕೂಡ ಜೈಲಿಂದ ಹೊರಬಿದ್ದಿದ್ದ. ಆದರೆ ಪೊಲೀಸರು ಕರೆದಾಕ್ಷಣ ವಿನಮ್ರನಾಗೇ ಬಂದು ಮಾಹಿತಿ ನೀಡುತ್ತಿದ್ದ. ಮಾರ್ಕೆಟ್ ವೇದಿ ಜೈಲಿನಲ್ಲಿದ್ದ. ಮಿಕ್ಕಂತೆ ಪೀಟಿ, ಪೀಸಿ, ಆನಾಲಿ ಇತ್ಯಾದಿಗಳೆಲ್ಲ ಜೈಲಲ್ಲಿ ಕಂಬಿ ಎಣಿಸುತ್ತಿದ್ದರೆ ಸುನೀಲ ಮಾತ್ರ ಏಕಾಏಕಿ ಜೈಲಿಂದ ಹೊರಬಂದಿದ್ದು ಪೊಲೀಸರ ಪಾಲಿಗೆ ಕುತೂಹಲವಾಗೇ ಉಳಿದಿತ್ತು.

ಈ ನಿಟ್ಟಿನಲ್ಲಿ ಸಿಸಿಬಿ ಪೊಲೀಸರು ರಹಸ್ಯ ಭೇದಿಸಲು ಸುನೀಲನ ಜೊತೆ ಸಂಪರ್ಕದಲ್ಲಿದ್ದ ಹುಡಿಪುಡಿ ರೌಡಿಗಳೆಲ್ಲರ


ಮೊಬೈಲ್ ಝಾಮರ್ ಮತ್ತು ಗಗನ್‌ದೀಪ್ ಕಪಿಮುಷ್ಠಿ!

ಸೈಕೋ ಜೈಶಂಕರ್ ಪರಪ್ಪನ ಅಗ್ರಹಾರ ಜೈಲಿನಿಂದ ಪರಾರಿಯಾಗಿದ್ದೇ ಬಂದೀಖಾನೆ ಇಲಾಖೆಯ ಹುಳುಕುಗಳೆಲ್ಲ ಒಂದೊಂದಾಗಿ ಹೊರಬಿದ್ದವಲ್ಲ; ಹುಷಾರಾದ ಜೈಲಧಿಕಾರಿಗಳು ಮಾಡಿದ ಮೊದಲ ಕೆಲಸವೆಂದರೆ ಕೆಟ್ಟುಹೋಗಿದ್ದ ಜಾಮರ್ ಅನ್ನು ಮತ್ತೆ ಅಳವಡಿಸಿದ್ದು.


ಗಗನ್‌ದೀಪ್

ಇದರಿಂದ ಜೈಲು ಇಲಾಖೆಗೇನು ಬಂತೋ ಗೊತ್ತಿಲ್ಲ, ಆದರೆ ಕಲ್ಲೋಲವಾಗಿದ್ದು ಬೆಂಗಳೂರು ಅಂಡರ್‌ವರ್ಲ್ಡ್‌ನಲ್ಲಿ!

ಜೈಲೊಳಗೇ ಸೇಫಾಗಿ ಕುಳಿತು ಅಲ್ಲಿಂದಲೇ ಮೊಬೈಲ್ ಮೂಲಕ ತಮ್ಮ ಗ್ಯಾಂಗ್ ಕಾರ್ಯಾಚರಣೆಯನ್ನು ನಿಯಂತ್ರಿಸುತ್ತಿದ್ದ ಬೆಂಗಳೂರಿನ 15 ಕ್ಕೂ ಅಧಿಕ ಖತರ್‌ನಾಕ್ ರೌಡಿ ಗ್ಯಾಂಗುಗಳ ಡೀಲುಗಳಿಗೆಲ್ಲ ಒಮ್ಮೆಗೇ ಕತ್ತರಿ ಬಿದ್ದಂತಾಗಿತ್ತು. ನಟೋರಿಯಸ್ ರೌಡಿ ಕವಳ, ಪಳನಿ ಗ್ಯಾಂಗ್, ಕುಟ್ಟಿ-ರಾಜಾ ಸಹೋದರರ ತಂಡ, ಸೈಕಲ್ ರವಿ, ರಾಬರಿ


ಕವಳ ಮುಲಾಮ ಸೈಕಲ್ ರವಿ

ಗಿರಿ, ಬಳ್ಳ, ತನ್ವೀರ್, ಮುಲಾಮ, ಕೊರಂಗು, ರವಿ ಪೂಜಾರಿ- ಹೀಗೆ ಜೈಲನ್ನೇ ತಮ್ಮ ಅಡಗುತಾಣ ಮಾಡಿಕೊಂಡು ರಿಯಲ್ ಎಸ್ಟೇಟ್ ಹಾವಳಿಗಿಳಿದಿದ್ದ 'ಡಾನ್' ಗಳಿಗೆಲ್ಲ ಮೊಬೈಲ್ ಝಾಮರ್ ಬಂದಿದ್ದೇ ಕೈಕಟ್ಟಿ ಹಾಕಿದಂತಾಯ್ತು.

ಹೊರಪ್ರಪಂಚದ ಲಿಂಕೇ ತಪ್ಪಿ ಉಸಿರುಕಟ್ಟಿದಂತಾದ ರೌಡಿಗಳಿಗೆ ಜೈಲಲ್ಲಿ ಮೊಬೈಲ್ ಬಳಕೆ ನಿಂತಿದ್ದೇ ತಡ, ಆರ್ಥಿಕ ಮೂಲಕ್ಕೂ ಏಟು ಬಿದ್ದಿದೆ. ಈ ಹಂತದಲ್ಲಿ ಹುಟ್ಟಿಕೊಂಡಿದ್ದು ಝಾಮರ್ ವಿರುದ್ಧದ ಹ್ಯೂಮನ್ ರೈಟ್ಸ್ ಕ್ಯಾಂಪೇನ್. ಅಂದರೆ ಜೈಲಿನ ಗೋಡೆಗಳ ಸುತ್ತಲ್ಲ ಝಾಮರ್ ಅಳವಡಿಸಿದ್ದರಿಂದಾಗಿ ಅದರ ರೇಡಿಯೇಷನ್ ಕೈದಿಗಳ ಆರೋಗ್ಯವನ್ನು ಹಾಳುಗೆಡುವುತ್ತಿದೆ ಎಂಬ ವಾದವೊಂದು ತಲೆ ಎತ್ತಿದೆ. ಝಾಮರ್ ಹೊರಸೂಸುವ ರೇಡಿಯೇಷನ್‌ನಿಂದಾಗಿ ಅದು Carsino Genesis and Cerebro Vasculor Syndrome (CVS) ಎಂಬ ವಿಲಕ್ಷಣ ರೋಗವೊಂದನ್ನು ಕೈದಿಗಳಲ್ಲಿ ಹುಟ್ಟುಹಾಕುತ್ತಿದೆಯೆಂದೂ ಇಂಥ ವಿಚಿತ್ರ ವ್ಯಾಧಿಗೆ ಸಿಲುಕಿಯೇ ಮೈಸೂರು ಜೈಲಿನಲ್ಲಿದ್ದ ನಂಜನಗೂಡಿನ ಪುಟ್ಟಸೆಟ್ಟಿ 2012 ಡಿಸೆಂಬರ್‌ನಲ್ಲಿ ಮತ್ತು ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದ ಅಕ್ರಮ್ ಪಾಷಾ 2013 ರ ಜನವರಿಯಲ್ಲಿ ಮೃತಪಟ್ಟರೆಂದು ರಾಷ್ಟ್ರೀಯ ಮಾನವಹಕ್ಕು ಆಯೋಗಕ್ಕೆ ದೂರು ನೀಡಲಾಯ್ತು.


ಇದರ ಸತ್ಯಾಸತ್ಯತೆಯನ್ನು ಪರಿಶೀಲಿಸಲೆಂದೇ ಮಾನವಹಕ್ಕು ಆಯೋಗ ಹಿರಿಯ ಪೊಲೀಸ್ ಅಧಿಕಾರಿಗಳ ತಂಡವೊಂದನ್ನು ನಿಯೋಜಿಸಿತು. ತನಿಖೆಗೆ ಬಂದ ಪೊಲೀಸ್ ಅಧಿಕಾರಿಗಳು ಅದೇನೆಂದು ತಾನೇ ಪರಿಶೀಲಿಸಲು ಸಾಧ್ಯ? ಏಕೆಂದರೆ ರೆಡಿಯೇಷನ್ ಸಂಬಂಧಿ ದುಷ್ಪರಿಣಾಮಗಳ ಪತ್ತೆಹಚ್ಚುವುದು ವಿಜ್ಞಾನಿಗಳಿಗೆ, ಡಾಕ್ಟರ್‌ಗಳಿಗಷ್ಟೇ ಸಾಧ್ಯವಾದದ್ದು. ಹೀಗಾಗಿ ಇಡೀ ಪ್ರಕರಣವನ್ನು ವೈದ್ಯಕೀಯ ಪರಿಣತರಿಗೆ ವಹಿಸಬೇಕೆಂದು ಸಿಕ್ರಮ್ ಸಂಸ್ಥೆಯ ಮುಖ್ಯಸ್ಥ ಫಿಲಿಫ್ ಮ್ಯಾಥ್ಯೂ ಮತ್ತೆ ಮಾನವಹಕ್ಕು ಆಯೋಗಕ್ಕೆ ದೂರಿತ್ತರಾದರೂ ಝಾಮರ್ ಮಾತ್ರ ಹಾಗೇ ಮುಂದುವರಿದಿತ್ತು.

ಸುಪ್ರೀಂಕೋರ್ಟ್ ನಿರ್ದೇಶನದಂತೆ ಯಾವುದೇ ಜೈಲಿನ ಝಾಮರ್‌ನ ರೇಡಿಯೇಷನ್ 300 ವ್ಯಾಟ್ಸ್‌ಗಿಂತಲೂ ಮೀರುವಂತಿಲ್ಲ. ಬಲ್ಗೇರಿಯಾದ ಕಂಪೆನಿಯೊಂದರಿಂದ ಝಾಮರ್ ಖರೀದಿಸಿದ್ದ ಬಂದೀಖಾನೆ ಇಲಾಖೆ ತಾನಷ್ಟೇ ಅಲ್ಲ ಅಫಘಾನಿಸ್ತಾನದಲ್ಲೂ ಇದೇ ಝಾಮರ್ ಬಳಸುತ್ತಿದ್ದಾರೆಂದು ವಾದಿಸಿತ್ತು. ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದ 15ಕ್ಕೂ ಅಧಿಕ ಮೈನಿಂಗ್ ಮಾಫಿಯಾದ ಕೈದಿಗಳು, 40 ಮಂದಿ ಅಂತರರಾಷ್ಟ್ರೀಯ ಡ್ರಗ್ ಮಾಫಿಯಾ ಖದೀಮರು, 20ಕ್ಕೂ ಅಧಿಕ ಭಯೋತ್ಪಾದಕರು ಮತ್ತು 15 ಬೆಂಗಳೂರಿನ ಕ್ರಿಮಿನಲ್ ಗ್ಯಾಂಗ್‌ಗಳನ್ನು ಜೈಲಿನಲ್ಲಿ ನಿಯಂತ್ರಿಸಬೇಕೆಂದರೆ ಝಾಮರ್ ಅನಿವಾರ್ಯ ಎಂಬ ವಾದವನ್ನು ಜೈಲು ಎಡಿಜಿಪಿ ಗಗನ್‌ದೀಪ್ ಬಲವಾಗೇ ಮಂಡಿಸಿಬಿಟ್ಟರು.

ಇಷ್ಟಾಗ್ಯೂ ಝಾಮರ್ ಅನಿವಾರ್ಯತೆಯನ್ನು ಸಮರ್ಥಿಸಿಕೊಳ್ಳಬೇಕಲ್ಲ; ಈ ಬಗ್ಗೆ ಪ್ರಶ್ನಿಸಿದ ಮಾನವ ಹಕ್ಕು ಕಾರ್ಯಕರ್ತರು ಮತ್ತು ಪತ್ರಕರ್ತರಿಗೆ ಬಂದೀಖಾನೆ ಎಡಿಜಿಪಿ ಗಗನ್‌ದೀಪ್, ಇದೆಲ್ಲ ಜೈಲಲ್ಲಿರುವ ರೌಡಿ ಸೈಲೆಂಟ್ ಸುನೀಲನದ್ದೇ ಪಿತೂರಿ. ಜೈಲಲ್ಲಿ ಕೂತು ಮೊಬೈಲ್ ಮೂಲಕ ಡೀಲು ಪಾಲು ಮಾಡಿಕೊಂಡಿದ್ದ ಆತನಿಗೆ ಝಾಮರ್ ಬಂದಿದ್ದೇ ಕೈಕಟ್ಟಿದಂತಾಗಿದೆ. ಆ ಕಾರಣಕ್ಕೆ ಕೈದಿಗಳನ್ನು ಎತ್ತಿಕಟ್ಟಿ ಮಾನವ ಹಕ್ಕು ಆಯೋಗಕ್ಕೆ ದೂರು ಕೊಡಿಸಿದ್ದಾನೆ. ಜೊತೆಗೆ ಜೈಲಲ್ಲಿರುವ ಬೇರೆ ಬೇರೆ ರೌಡಿ ಗ್ಯಾಂಗ್‌ಗಳೂ ಇದಕ್ಕೆ ಫೈನಾನ್ಸ್ ಮಾಡುತ್ತಿದ್ದಾರೆ...!" ಎಂದುಬಿಟ್ಟರು.

ಬಹುಶಃ ಜೈಲಿಗೆ ಝಾಮರ್ ಬಂದಿದ್ದೇ ಮೊಬೈಲ್ ಬಳಸಲಾಗದೆ ಕೈಕಟ್ಟಿದಂತಾಗಿ ಸುನೀಲ ಜಾಮೀನಿನ ಮೇಲೆ ಹೊರಬಿದ್ದನೆ? ಝಾಮರ್ ಬರದಿದ್ದರೆ ಜೈಲಲ್ಲಿದ್ದುಕೊಂಡೇ ಸೇಫಾಗಿ ಡೀಲು ಮುಗಿಸುತ್ತಿದ್ದನೆ? ಹಾಗೆ ಜೈಲಿಂದ ಹೊರಬಿದ್ದಿದ್ದೇ ಆತನಿಗೆ ಮುಳುವಾಯಿತೆ?

ಮಂಗಳೂರು: ಪೂಜಾರಿ ಗಂಟಲಲ್ಲಿ ಸಂಘ ಪರಿವಾರಿ ಸೈತಾನ!!



ಕರಾವಳಿಯ ಹಿರಿಯ ರಾಜಕೀಯ ಹಿರೇಮಣಿ ...ನಾರ್ದನ ಪೂಜಾರಿಯ ತಲೆಗೇನಾಗಿದೆ?

ಶೂರ ಜಾತ್ಯತೀತ ಶೂದ್ರಾಗ್ರೇಸನಂತೆ, ಧಾರ್ಮಿಕ ...ಧಾರಕನಂತೆ ಪೋಸಿನ ಮೇಲೆ ಪೋಸು ಕೊಡುತ್ತ ...ಂದಿದ್ದ ಪೂಜಾರಿ ತದ್ವಿರುದ್ಧ ತರಲೆ ಮಾಡುತ್ತಿದ್ದಾರೇಕೆ? ...ದ್ದೇಗೆ ಭಜರಂಗಿ ರಾಕ್ಷಸ ಪೂಜಾರಿ ಗಂಟಲು ಪ್ರವೇಶಿಸಿ ...ಟ್ಟಹಾಸ ಮಾಡುತ್ತಿದ್ದಾನೆ? ಪೂರ್ವಾಶ್ರಮ (ಆರೆಸೆಸ್)ದ ...ಚಿತವೇನಾದರೂ ಪೂಜಾರಿಗೆ ಶುರುವಾಗಿದೆಯಾ? ಇಂಥ ...ಜ್ಞಾಸೆ ಕರಾವಳಿಯ ಹಿಂದೂತ್ವ ವಿರೋಧಿವಲಯದಲ್ಲಷ್ಟೇ ...ಲ್ಲ, ಮನುವಾದಿಗಳ ಅಡ್ಡೆಯಲ್ಲೂ ಜೋರಾಗಿ ...ಡೆಯುತ್ತಿದೆ....

ಹೇಳಿ-ಕೇಳಿ ಕರಾವಳಿ ಸಂಘ ಪರಿವಾರದ ಸೈತಾನರ ...ಡಂಬೋಲ; ಹಿಂದೂತ್ವದ ಪ್ರಯೋಗ ಶಾಲೆ. ಚೆಡ್ಡಿ- ...ವಿ ಪುಂಡರ ಅನಾಹುತ-ಅನಾಚಾರ ಕಂಡೂಕಾಣದಂತಿ ...ಬೇಕಾದ ಭಯಾನಕ ದುರಂತ ಇಲ್ಲಿಯದು. ಇದು ಲೋಕ ...ದಿಚಿತ ವಾಸ್ತವ! ಹೀಗಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ...ಲ್ಲೆಯಲ್ಲಿ ಒಂದಿಷ್ಟು ಶುದ್ಧ ಸೆಕ್ಯುಲರ್‌ಗಳನ್ನು ಬಿಟ್ಟರೆ ...ತ್ಯಾರೂ ಕೇಸರಿ ಖಳರ ಪಾತಕ ಪ್ರಶ್ನಿಸುವ-ಪ್ರತಿಭಟಿಸುವ ...ಸ್ಕ್ ತೆಗೆದುಕೊಳ್ಳುತ್ತಿಲ್ಲ. ಮಹಾ ಧರ್ಮಾತೀತರ ...ಕ್ಷದವರೆಂದು ಹೇಳಿಕೊಳ್ಳುವ ಕಾಂಗ್ರೆಸಿಗರೂ ಇಲ್ಲಿ 'ಮೃದು ...ಂದೂತ್ವ'ದ ಪರಿಪಾಲಕರೇ!

ಆದರೆ ಕಾಂಗ್ರೆಸ್‌ನ ಹಳೆಯ ತಲೆಯಾಳು ಜನಾರ್ದನ ...ಜಾರಿ ಮಾತ್ರ ಇದಕ್ಕೆ ಅಪವಾದದಂತಿದ್ದರು. ಬಿಜೆಪಿ- ...ಜರಂಗಿ ಬಳಗದ ಮತಾಂಧ ಮಸಲತ್ತು ಕಂಡಾಗ ತಿರುಗಿ ...ಳುತ್ತಿದ್ದರು. ಮಾತಿನ ಅಸ್ತ್ರ ಝಳಪಿಸುತ್ತ ಸಂಘ ಪರಿವಾರಕ್ಕೆ ...ದರಿಸುತ್ತಿದ್ದರು. ಧರ್ಮ ಕಾರಣಕ್ಕೆ ಪ್ರತಿರೋಧ ಒಡ್ಡುವ ...ಜಾರಿಯ ಕಠೋರ ಗುಣ-ಧರ್ಮವೇ ಆತನನ್ನು ನಾಲ್ಕು- ...ಲ್ಕು ಬಾರಿ ಮಂಗಳೂರು ಪಾರ್ಲಿಮೆಂಟ್ ಕ್ಷೇತ್ರದಲ್ಲಿ ...ೋಲಿಸಿತೆಂದು ವ್ಯಾಖ್ಯಾನಿಸಲಾಗುತ್ತಿತ್ತು. ಇಂಥ ಪೂಜಾರಿ ...ದ್ದಕ್ಕಿದ್ದಂತೆ ಭೂವಷ್ ರಾಂಗ್ ಆಗಿಬಿಟ್ಟಿದ್ದಾರೆ! ...ೋದಿವಾದಿಗಳೇ ನಾಚುವಂತೆ ಮತಾಂಧತೆಯಿಂದ ...ಲಬುತ್ತಿದ್ದಾರೆ. ಇದು ಹಿಂದೂ ರಾಕ್ಷಸರಿಗೆ ಕರ್ಣಾನಂದ ...ಡುತ್ತಿದ್ದರೆ, ಕರಾವಳಿಯ ಸಭ್ಯ ಮನುಷ್ಯರನ್ನು ಕಂಗೆಡಿಸುತ್ತಿದೆ.

ಸಾಮಾಜಿಕ ನ್ಯಾಯ ರಥದ ಸಾರಥಿ ಎಂದೇ ...ಬಿಸಲಾಗಿರುವ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ...ರ್ಕಾರ ಅಸ್ತಿತ್ವಕ್ಕೆ ಬರುತ್ತಿದ್ದಂತೆಯೇ ಪೂಜಾರಿ ಒಂಥರಾ ...ಗುದಿ-ಒಳಗುದಿಯಲ್ಲಿ ಎಗರಾಡ ಹತ್ತಿದ್ದಾರೆ. ಉಡುಪಿ ...ಕೃಷ್ಣ ಮತ್ತು ಗೋಕರ್ಣ ಮಹಾಬಲೇಶ್ವರ ದೇವಸ್ಥಾನ ...ರ್ಕಾರೀಕರಣ ಮಾಡುವ ವಿಚಾರದಲ್ಲಿ ಪೂಜಾರಿ ಪಕ್ಕಾ ...ಜೆಪಿ ಭೂಪನಂತೆ ಮಾತಾಡಿ ಕಾಂಗ್ರೆಸ್ ಸರ್ಕಾರವನ್ನು ...ಜುಗರಕ್ಕೆ ಸಿಲುಕಿಸಿದ್ದರು. ಪೂಜಾರಿಯ 'ಧರ್ಮ ರಕ್ಷಣೆ' ...ವ ಪರಿಯಿತ್ತೆಂದರೆ, ಬಿಜೆಪಿಯ ರಾಜಪುರೋಹಿತರಾದ ಪೇಜಾವರ ಮತ್ತು ರಾಮಚಂದ್ರಾಪುರ ಮಠಾಧೀಶರನ್ನೇ ಬೆಕ್ಕಸ ಬೆರಗಾಗಿಸಿ ಬಿಟ್ಟಿತ್ತು! ಯಾವಾಗ ಪೂಜಾರಿ ಪರೋಕ್ಷವಾಗಿ ಪೇಜಾವರ-ರಾಘವೇಶ್ವರರ ಪರ ವಕಾಲತ್ತಿಗಿಳಿದರೋ, ಆಗಲೇ ಕರಾವಳಿಯ ಮಂದಿಗೆ ಆತನ ಗಂಟಲು ಕೇಸರೀಕರಣ ಆಗುತ್ತಿರುವ ಅನುಮಾನ ಬಂದಿತ್ತು.



ಮಂಗಳೂರು ಲೋಕಸಭಾ ಕ್ಷೇತ್ರದಿಂದ ಮತ್ತೆ ಕಾಂಗ್ರೆಸ್‌ನಿಂದ ಸ್ಪರ್ಧಿಸುವ ಹಠದಲ್ಲಿರುವ ಪೂಜಾರಿ ಬಹುಸಂಖ್ಯಾತ ಹಿಂದೂಗಳ ಓಲೈಕೆಗೆ ಆರೆಸ್ಸೆಸ್ ಮಾದರಿಯಲ್ಲಿ ಮಾತುಗಾರಿಕೆ ಮಾಡುತ್ತಿದ್ದಾರೆಂಬುದು ಖಾತ್ರಿಯಾಗಿದ್ದು ಆತನ ಕುದ್ರೋಳಿ ದೇವಸ್ಥಾನದ 'ಕ್ರಾಂತಿ' ಕಾರ್ಯಕ್ರಮಕ್ಕೆ ಚೆಡ್ಡಿ ಡಾನ್ ಕಲ್ಲಡ್ಕ ಪ್ರಭಾಕರ ಭಟ್ಟ ಹಠಾತ್ ಒಕ್ಕರಿಸಿದಾಗ! ಇಡೀ ಕರಾವಳಿಯನ್ನು ಮತಾಂಧ ರಾಜಕಾರಣದಿಂದ ರೌರವ ನರಕ ಮಾಡಿದ ಬಿಜೆಪಿ ಭಟ್ಟ ಕಾಂಗ್ರೆಸ್‌ನ ಸೋಕಾಲ್ಡ್ ಸೆಕ್ಯುಲರ್ ಲೀಡರ್ ಪೂಜಾರಿ 'ಸುಧಾಕರ' ಕೈಂಕರ್ಯದಲ್ಲಿ ಖುದ್ದು ಹಾಜರಾಗಿದ್ದು ಕೆಪಿಸಿಸಿ ಮಟ್ಟದಲ್ಲೇ ಅಲ್ಲೋಲಕಲ್ಲೋಲ ಎಬ್ಬಿಸಿಬಿಟ್ಟಿತು. ಆಗ ಪೂಜಾರಿ ಕೊಟ್ಟ ವಿವರಣೆ ಏನು ಗೊತ್ತಾ? "ನಾನಾತನ ಕರೆದೇ ಇಲ್ಲ... ಬಂದವರನ್ನು ಹೋಗೆಂದು ಹೇಳಲಾದೀತಾ?... ಆತ ತಂತ್ರಗಾರಿಕೆ ಮಾಡಿದರು... ನನಗದು ತಡವಾಗಿ ಅರ್ಥವಾಯ್ತು... ನಾನು ನಿರಪರಾಧಿ..." ಎಂದು ಪೂಜಾರಿ ಪರಿಪರಿಯಾಗಿ ಅಲವತ್ತುಕೊಂಡರು.

ಆದರೆ ಸಿದ್ದು ಸರ್ಕಾರದ 'ಶಾದಿ ಭಾಗ್ಯ' ಮತ್ತು 'ಮೂಢನಂಬಿಕೆ ಪ್ರತಿಬಂಧಕ ಶಾಸನ'ದ ವಿರುದ್ಧವೇ ಪೂಜಾರಿ ಹಾಕುತ್ತಿರುವ ಗುಟುರು ಕಮ್ಯುನಲ್ ಕಲ್ಲಡ್ಕನೊಂದಿಗೆ ಆತನ ಸಲುಗೆ ಆಕಸ್ಮಿಕವಲ್ಲ ಎಂಬುದು ಎಂಥ ಗಾಂಪನಿಗೂ ಮನವರಿಕೆ ಮಾಡಿಕೊಡುವಂತಿದೆ! 'ಶಾದಿ ಭಾಗ್ಯ ಯೋಜನೆ ಬಹುಸಂಖ್ಯಾತರಿಗೆ ಅವಮಾನ ಮಾಡುವಂತಿದೆ. ಹಿಂದೂಗಳಲ್ಲೂ ಬಡ ಹೆಣ್ಣು ಮಕ್ಕಳಿದ್ದಾರೆ. ಅವರಿಗೂ ಶಾದಿ ಭಾಗ್ಯ ಸಿಗಲಿ' ಎಂದು ಉದಾತ್ತ ಧೋರಣೆ ಪ್ರದರ್ಶಿಸುತ್ತಿರುವ ಪೂಜಾರಿಗೆ ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಮೀಸಲಿಟ್ಟ ಹಣದಲ್ಲೆ ಸದ್ರಿ ಯೋಜನೆ ತರಲಾಗಿದೆಯೋ ಹೊರತು ಹೊಸದಲ್ಲ ಎಂಬುದು ಅರ್ಥವೇ ಆದಂತಿಲ್ಲ ಅಥವಾ ಅರ್ಥವಾದರೂ ಹಿಂದೂಗಳ ಒಲಿಕೆಗೆ ಅರ್ಥಾತ್ ಕಲ್ಲಡ್ಕ ಭಟ್ಟರ ಚೆಡ್ಡಿ ಬ್ರಿಗೇಡ್‌ನ ಕೃಪಾಶೀರ್ವಾದಕ್ಕಾಗಿ ಆತ ಗಿಮಿಕ್ ಮಾಡಿದ್ದಾರಷ್ಟೇ. ತನ್ಮೂಲಕ 'ಪೂಜಾರಿ ಕುಧ್ರೋಳಿ ದೇವಸ್ಥಾನದಲ್ಲಿರುವುದಕ್ಕಿಂತ ಹೆಚ್ಚು ಕುದ್ರೋಳಿ ಮಸೀದಿಯಲ್ಲಿರ್ತಾರೆ' ಎಂಬ 'ಕಳಂಕ'ದಿಂದ ಪಾರಾಗಿ ಹಿಂದೂಗಳ ಓಟು ಸಾರಾಸಗಟಾಗಿ ಬಾಚಿ ಎಂಪಿಯಾಗುವ ಹಿಡನ್ ಹಿಕಮತ್ತು ಮಾಡಿದ್ದಾರೆ ಪೂಜಾರಿ ಸಾಹೇಬ್ರು!

ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಸರ್ಕಾರವೇ ಮೂಢನಂಬಿಕೆ ವಿರೋಧಿ ಶಾಸನ ಜಾರಿಗೊಳಿಸಿದೆ. ಇದು ಮುದಿ ಕಾಂಗ್ರೆಸಿಗ ಪೂಜಾರಿಗೆ ಗೊತ್ತಿಲ್ಲವಾ? ಪೂಜಾರಿಯ ಒಳ ಉದ್ದೇಶವೇ ಬೇರೆ. ಸಿದ್ದು ಸರ್ಕಾರಕ್ಕೆ ಬ್ರೇಕ್ ಹಾಕುವ ಗೆಟಪ್‌ನಲ್ಲಿ ದಕ್ಷಿಣ ಕನ್ನಡದಲ್ಲಿ ಪ್ರಬಲವಾಗಿರುವ ಸಂಘ ಪರಿವಾರದ ನೆಟ್‌ವರ್ಕ್‌ಗೆ "... ನಾನು ನಿಮ್ಮವ... ಈ ಬಾರಿ ನನ್ನ ವಿರುದ್ಧ ಕೆಲಸ ಮಾಡಬೇಡಿ.." ಎಂಬ ಮೆಸೇಜು ಕಳಿಸಿ ಸಂಸದನಾಗುವ ದೂ(ದು)ರಾಲೋಚನೆ ಪೂಜಾರಿ ಹಾಕಿದ್ದಾರೆ. ಹಾಗೆಂದು ಕಾಂಗ್ರೆಸಿಗರಷ್ಟೇ ಅಲ್ಲ, ಬಿಜೆಪಿಗರೂ ವಿಶ್ಲೇಷಿಸುತ್ತಿದ್ದಾರೆ ಪೂಜಾರಿ ನಡೆ-ನುಡಿ.

ಲಾಗಾಯ್ತಿನಿಂದಲೂ ಕರಾವಳಿಯ ಕೋಮು ರಾಜಕಾರಣದಲ್ಲೊಂದು ಗಂಭೀರ ಜೋಕ್ ಇದೆ. ಅದೆಂದರೆ, ಬಿ. ಜನಾರ್ದನ ಪೂಜಾರಿ ಅಂದರೆ ಅರ್ಧ-ಕಾಂಗ್ರೆಸ್‌ನಲ್ಲೊಬ್ಬ ಬಿಜೆಪಿ ಎಂದು. ಇದು ಎಂಪಿಯಾಗಿದ್ದಾಗ, ಆ ನಂತರ ಎರಡು ಬಾರಿ ಸೋತ ಅವಧಿಯಲ್ಲೂ ಪೂಜಾರಿ ಚೆಡ್ಡಿ ಚಮತ್ಕಾರಿಯಂತೆ ಕಾಣಿಸಿಕೊಂಡಿದ್ದರು. ಹಿಂದೆ ಖಾಕಿ ಚೆಡ್ಡಿ ಹಾಕಿ ಗಣವೇಷಧಾರಿಯಾಗಿ ಸಕ್ರಿಯ ಆರೆಸ್ಸೆಸ್ ಕಾರ್ಯಕರ್ತನಾಗಿದ್ದ ಪೂಜಾರಿಗೆ ಆ ಕರುಳು ಬಳ್ಳಿ ಸಂಬಂಧ ಸಡನ್ ಕಡಿದುಕೊಳ್ಳಲಾಗಿರಲಿಲ್ಲ. ಆದರೆ ಯಾವಾಗ ಕರಾವಳಿಯಲ್ಲಿ ಸಂಘ ಪರಿವಾರದ ಆರ್ಭಟ ಜೋರಾಯ್ತೋ ಆಗ ಪೂಜಾರಿ ಬದಲಾದಂತೆ ಕಾಣಿಸುತ್ತಿದ್ದರು. ಈಗ ಮತ್ತದೇ ಹಿಂದಿನ ಸಾಫ್ಟ್ ಹಿಂದೂತ್ವ ಪೂಜಾರಿ ಪಾಲಿಸಲಾರಂಭಿಸಿದ್ದಾರಷ್ಟೇ.


ಮೃದು ಹಿಂದೂತ್ವದ ಪ್ರಭಾವಳಿ ಬೆಳೆಸಿಕೊಳ್ಳುವ ಭರದಲ್ಲಿ ಪೂಜಾರಿ ಪಕ್ಕಾ ಚೆಡ್ಡಿ-ಭಜರಂಗಿ ಆಗುವ ಅಪಾಯಕ್ಕೆ ಸಿಲುಕಿಕೊಂಡಿದ್ದಾರೆ ಪಾಪ. ಹೆಚ್ಚುಕಮ್ಮಿ ಕಾಲು ಶತಮಾನದಿಂದ 'ಮಾಜಿ' ಆಗಿರುವ ಪೂಜಾರಿ 'ಹಾಲಿ' ಆಗುವ ಆಸೆಯಿಂದ ವೈರಿಗಳಿಗೆಲ್ಲ ಅಡ್ಡ ಬೀಳಲಾರಂಭಿಸಿದ್ದಾರೆ. ಪೂಜಾರಿ ಸೋಲಿಸಲು ಧರ್ಮಸ್ಥಳದ ದೊರೆಗಳು ಆತ ಹಣಕಾಸು ಮಂತ್ರಿಯಾಗಿದ್ದಾಗ ಕಿತಾಪತಿ ಮಾಡಿದ್ದರು. ಧರ್ಮಸ್ಥಳ ದೇವಸ್ಥಾನಕ್ಕೆ ಪ್ರತಿಯಾಗಿ ತನ್ನ ಕುದ್ರೋಳಿ ದೇವಸ್ಥಾನ ಬೆಳೆಸಲು ಪೂಜಾರಿ ಪ್ರಯತ್ನಿಸಿದ್ದೇ ಆತನ ರಾಜಕೀಯ ಜೀವನಕ್ಕೆ ಮುಳುವಾಗಿತ್ತು. ಇದು ದೇವಧೂತರ ಕೆರಳಿಸಿತ್ತು. ಒಂದು ಸಭೆಯಲ್ಲಿ ಪೂಜಾರಿ ಮೇಲೆ ಕಲ್ಲು ತೂರಾಟವಾಗಿತ್ತಂತೆ. ಆ ದೇವರ ಕಲ್ಲೇಟಿಗೆ 'ಬುರುಡೆ' ಪೂಜಾರಿಯ ಹಣೆ ಮೇಲೆ ಬರುವಂತಾಗಿತ್ತಂತೆ.

ಇದೆಲ್ಲ ಈಗ ಪೂಜಾರಿಗೆ ಮರೆತಿದೆ. ಆತ ಧರ್ಮಸ್ಥಳದ ದೊರೆಯನ್ನು ಅಪ್ಪಿ ಮುದ್ದಾಡಲಾರಂಭಿಸಿದ್ದಾರೆ. ಮೊನ್ನೆ ಆತ ಕುದ್ರೋಳಿ ದೇವಸ್ಥಾನದಲ್ಲಿ ಗಂಡನಿಲ್ಲದ ಹೆಂಗಸರಿಗೆ 'ಪೂಜಾರ್ತಿ' ದೀಕ್ಷೆ ನೀಡಿದಾಗ ದೇವಧೂತರನ್ನು ವಿಶೇಷವಾಗಿ ಆಮಂತ್ರಿಸಲಾಗಿತ್ತು. ಸೌಜನ್ಯ ಕೊಲೆ ಮತ್ತು ಅತ್ಯಾಚಾರ ಕೇಸ್‌ನಿಂದಾಗಿ ದೇವರ ಕಡೆಯವರ 'ದೈವ ಪ್ರತಿಷ್ಠೆ'ಗೆ ಭಂಗ ಬರದಂತೆ ಪೂಜಾರಿ ಕಾವಲು ಕಾಯುತ್ತಿದ್ದಾರೆ. ಸೌಜನ್ಯ ಪರ ಹೋರಾಟ ಧರ್ಮ ಸಂಸ್ಥಾನದ ಅನಾಚಾರದ ವಿರುದ್ಧದ ಹೋರಾಟವಾಗಿ ಬದಲಾಗಿರುವುದು ಪೂಜಾರಿ ಸಾಹೇಬರ ಕೆರಳಿಸಿದೆ. ದೇವರ ನಾಡಿನ ಬಗ್ಗೆ ಅಪಪ್ರಚಾರ ಮಾಡೋರನ್ನು ಅರೆಸ್ಟ್ ಮಾಡಲಾಗುತ್ತದೆಂದು ಪೂಜಾರಿ ಘೋಷಿಸಿದ್ದಾರೆ. ಈ 'ಮಾಜಿ' ಸರ್ಕಾರ ತಾನೇ ನಡೆಸುವವನಂತೆ ಮಾತಾಡುತ್ತಿರುವುದು ವಿಚಿತ್ರವಾದರೂ ಸತ್ಯ! ಪೂಜಾರಿಯ ಸೊಕ್ಕು ಪರಾಕ್ರಮಕ್ಕೆ ಇಡೀ ಕರಾವಳಿ ಬಿದ್ದು-ಬಿದ್ದು ನಗುತ್ತಿದೆ.

ಒಟ್ಟಿನಲ್ಲಿ ಎಂಪಿಯಾಗುವ ತೆವಲು ಪೂಜಾರಿಯನ್ನು ಎಡಬಿಡಂಗಿಯಂತಾಗಿಸಿ ಬಿಟ್ಟಿದೆ. ಆತ ಮತಬ್ಯಾಂಕ್‌ಗಾಗಿ ಧರ್ಮಸ್ಥಳದ ದಾವಾಸುರರಿಂದ ಕಲ್ಲಡ್ಕದ ಖತರ್‌ನಾಕ್-ಚೆಡ್ಡಿ ಭಟ್ಟನ ತನಕದ ಮೂಲಭೂತವಾದಿಗಳ ಪಾದಕ್ಕೆ ಡೈವ್ ಹೊಡೆಯುತ್ತಿದ್ದಾರೆ. ಬಹುಶಃ ಸ್ವಾನುಭವದಿಂದಲೇ ಇರಬೇಕು- 'ಪಾದಪೂಜೆ' ಮೂಢನಂಬಿಕೆ ಪಟ್ಟಿಗೆ ಸೇರಿಸದಂತೆ ಪೂಜಾರಿ ದೊಡ್ಡ ಗಂಟಲಲ್ಲಿ ಆಗ್ರಹಿಸುತ್ತಿರುವುದು!! ದಕ್ಷಿಣ ಕನ್ನಡದ ಹಿಂದೂತ್ವದ ಪ್ರಯೋಗ ಶಾಲೆಯಲ್ಲಿ ಪೂಜಾರಿ ಪ್ರಯೋಗ ಪಶು ಆಗಬಹುದಾ?!

■ ಶುದ್ಧೋಧನ

ಮೊಯ್ಲಿ ಮಗನ ಎಂಟ್ರಿ!



ದಕ್ಷಿಣ ಕನ್ನಡ ಕಾಂಗ್ರೆಸ್‌ನ ಪರಂಪರಾಗತ ಕಾಲೆಳೆಯುವ ಕಸರತ್ತಿಗೆ ಹೊಸ ಖದರು ಬರುತ್ತಿದೆ. ಕೇಂದ್ರ ಮಂತ್ರಿ ಮೊಯ್ಲಿ ಮತ್ತು ಮಾಜಿ ಕೆಪಿಸಿಸಿ ಪ್ರೆಸಿಡೆಂಟ್ ಜನಾರ್ದನ ಪೂಜಾರಿಗಳ ಪುರಾತನ ದ್ವೇಷಾಸೂಯೆ ಮತ್ತೆ ಭುಗಿಲೆದ್ದಿದೆ. ಎರಡೂ ಗ್ಯಾಂಗ್‌ಗಳು ಬೀದಿ ಬಡಿದಾಟಕ್ಕೆ ಈಗ ಶಸ್ತ್ರಸಜ್ಜಿತರಾಗುತ್ತಿದ್ದಾರೆ.

ಪೂಜಾರಿ ಲೋಕಸಭೆ ಎಲೆಕ್ಷನ್‌ನಲ್ಲಿ ತಾನೇ ಕಾಂಗ್ರೆಸ್‌ನ ಪ್ರಶ್ನಾತೀತ ಟಿಕೆಟ್ ದಾವೆದಾರನೆಂದು ಬೀಗುತ್ತಿದ್ದಾರೆ. ಆತ ಸೆಕ್ಯುಲರ್-ಕಮ್ಯುನಲ್ ಮಿಶ್ರಿತ ರಂಗ ತಾಲೀಮು ಆರಂಭಿಸಿಬಿಟ್ಟಿದ್ದಾರೆ. ಇದಕ್ಕೆ ಪ್ರತಿಯಾಗಿ ಪೂಜಾರಿಗೆ ಕಾಂಗ್ರೆಸ್ ಟಿಕೆಟ್ಟೇ ಕೊಡಬಾರದೆಂಬ ಕೂಗೇಳುತ್ತಿದೆ. ನಾಲ್ಕು ಬಾರಿ ಸೋತಿರುವ ಪೂಜಾರಿಗೆ ಗೆಲ್ಲುವ ತಾಕತ್ತಿಲ್ಲ ಎಂದು ಮೊಯ್ಲಿ ಬಣ ಬಲವಾದ ವಾದ ಹೂಡುತ್ತಿದೆ. ಮೊಯ್ಲಿಗೋ ತನ್ನ ಕುಲೋದ್ಧಾರಕ ಹರ್ಷ ಮೊಯ್ಲಿಯನ್ನೇ ಕಾಂಗ್ರೆಸ್ ಹುರಿಯಾಳಾಗಿಸುವ ಆಸೆ. ರಿಲಾಯನ್ಸ್ ಮತ್ತು ಕಾರ್ಕಳದ ಕಿಸಾನ್ ಸಭಾ ಹಗರಣಗಳ ಮೂಲಕವೇ ಪರಿಚಿತನಾಗಿರುವ ಹರ್ಷ ಕೋಲಾರದಲ್ಲಿ ಹಾಲಿನ ಹೊಳೆ ಹರಿಸುತ್ತಿದ್ದಾನೆಂದು ತಾರೀಪು ಮಾಡಲಾಗುತ್ತಿದೆ.

ಇಂಥ ಮಗನನ್ನು ನಿಧಾನಕ್ಕೆ ಮಂಗಳೂರಿನ ಅಖಾಡಕ್ಕೆ ಬಿಡುತ್ತಿರುವ ಮೊಯ್ಲಿ ಹೇಗಾದರೂ ಮಾಡಿ ತನ್ನ ಆಜನ್ಮ ಶತ್ರು ಪೂಜಾರಿಗೆ ಟಾಂಗ್ ಕೊಡಬೇಕೆಂದು ಹಠ ತೊಟ್ಟಿದ್ದಾರೆ. ಮಗನಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸಲು ದಿಲ್ಲಿ ದರ್ಬಾರಿನಲ್ಲಿ ತನಗಿರುವ ಪ್ರಭಾವ-ಪರಾಕ್ರಮ ಪ್ರಯೋಗಿಸುತ್ತಿದ್ದಾರೆ. ಇತ್ತ ಹರ್ಷ ಮೊಯ್ಲಿ ಮಂಗಳೂರಲ್ಲಿ ರಹಸ್ಯ ಸಭೆಗಳನ್ನು ನಡೆಸಿ ಕಾಂಗ್ರೆಸ್‌ನಲ್ಲಿ ಅಸ್ತಿತ್ವ ತೋರಿಸುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಪೂಜಾರಿ ಭರ್ಜರಿ ಮೀಟಿಂಗ್‌ಗಳನ್ನು ಮಾಡುತ್ತಿದ್ದಾರೆ.

ಸದ್ಯಕ್ಕಂತೂ ಕರಾವಳಿ ಕಾಂಗ್ರೆಸ್ ಅಖಾಡದಲ್ಲಿ ನಡೆಯುತ್ತಿರುವ ಮುದಿ ಪೂಜಾರಿ v/s ಹದಿ ಹರ್ಷ ಮೊಯ್ಲಿ ಕಿತ್ತಾಟವೇ ಸೆನ್‌ಸೇಷನಲ್ ಸುದ್ದಿ!

...ಬ್ಬಿಗೆ ಬದ್ದಿದ್ದಾರೆ. ಹೀಗೆ ಸುನೀಲನ ಸಹಚರರ ...ೊಬೈಲುಗಳನ್ನೆಲ್ಲ ಟ್ಯಾಪಿಂಗ್ ಶುರುವಿಟ್ಟ ಸಿಸಿಬಿ ...ೊಲೀಸರಿಗೆ ಕೊಡಿಗೇಹಳ್ಳಿಯ ಬೈಸನ್ ಸೀನ ...ತ್ತು ಯಲಹಂಕದ ಮೇಕೆ ಹರೀಶನ ...ೊಬೈಲ್‌ಗಳ ನಂಬರ್ ಸಿಗುವುದು ಕಷ್ಟವೇನಲ್ಲ ...ುಲೆಟ್ ರವಿ ಕೊಲೆ ಪ್ರಕರಣದಲ್ಲಿ ಸುನೀಲನ ...ೊತೆ ಜೈಲು ಸೇರಿದ್ದ ಇವರಿಬ್ಬರ ಬೆನ್ನಿಗೆ ...ದ್ದರೆ ಸಲೀಸಾಗಿ ಸುನೀಲನನ್ನು ಪತ್ತೆ ...ಚ್ಚಬಹುದೆಂಬ ಪೊಲೀಸರ ನಿರೀಕ್ಷೆ ...ಳ್ಳಾಗಲಿಲ್ಲ, ಒಂದೆಡೆ ಬೈಸನ್ ಮತ್ತೊಂದೆಡೆ ...ೇಕೆ ಹರೀಶ ಗೆದ್ದಲಹಳ್ಳಿ, ಗುಂಡುತೋಪಿನ ...ಸ್ಸಿಗಾಗಿ ಮಾಡುತ್ತಿದ್ದ ಷಡ್ಯಂತ್ರ ಗೊತ್ತಾಗಿದ್ದೇ ...ಾಗ. ಐದು ಕೋಟಿಯ ಆಸ್ತಿಗಾಗಿ ದಾಯಾದಿಗಳಿಬ್ಬರನ್ನೂ ...ಾಷಾರಿಸಿ, ರಕ್ತ ಹರಿಸಲು ನಿಂತಿದ್ದ ಸುನೀಲನ ರಣತಂತ್ರ ...ೊಲೀಸರ ಪಾಲಿಗೆ ನಿಜಕ್ಕೂ ವಿಚಿತ್ರವೆನಿಸಿತ್ತು.



ಬುಲೆಟ್ ರವಿ


ಅಲ್ಲಿಗೆ ಬೈಸನ್ ಸೀನನ ಗ್ರಹಚಾರ ಕೂಡ ಕೆಟ್ಟಿತ್ತೇನೊ. ...ಜಯ ಇನ್ಸ್‌ಪೆಕ್ಟರ್ ಶ್ರೀನಿವಾಸ್ ಮೊದಲು ಬೈಸನ್‌ನನ್ನು ...ತ್ತು ಕುದಿದ್ದಾರೆ. ಬೆನ್ನಲ್ಲೇ ಗೆದ್ದಲಹಳ್ಳಿಯ ರಾಮಮೂರ್ತಿ, ಕಾರ್ತಿಕ್ ಅಲಿಯಾಸ್ ಆವಿ ಮತ್ತು ರಾಜೇಶ್ ಬಲೆಗೆ ಬಿದ್ದಿದ್ದಾರೆ. ಹಿಡಿದ ಪಾತಕಿಗಳನ್ನು ಸಂಜಯ್‌ನಗರದ ಪೊಲೀಸ್ ಇನ್ಸ್‌ಪೆಕ್ಟರ್ ಪರಮೇಶ್ವರ್ ಹೆಗಡೆಯವರಿಗೊಪ್ಪಿಸಿದ ಸಿಸಿಬಿ ಮೇಕೆ ಹರೀಶನ ಬೆನ್ನಿಗೆ ಬಿದ್ದಿದೆ. ಆದರೆ ಮೇಕೆ ಕಿಲಾಡಿ, ಬೈಸನ್ ಸಿಕ್ಕಿಬಿದ್ದಿದ್ದು ಗೊತ್ತಾಗಿದ್ದೇ ತಲೆಮರೆಸಿಕೊಂಡಿದ್ದಾನೆ. ಇನ್ನೆಲ್ಲಿ ತನ್ನನ್ನು ಜೈಲಿಗೆ ಹಾಕುತ್ತಾರೋ ಎಂಬ ಭೀತಿಗೆ ಬಿದ್ದೇ ಕಾಂತರಾಜು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿ ಹೆಬ್ಬಾಳದ ಬ್ಯಾಪ್ಟಿಸ್ಟ್ ಆಸ್ಪತ್ರೆಗೆ ದಾಖಲಾಗಿದ್ದಾನೆ.

ಅಷ್ಟಕ್ಕೂ ಸುನೀಲನನ್ನು ಸೆರೆ ಹಿಡಿಯದೆ ಸದ್ಯಕ್ಕೆ ಸಿಸಿಬಿ ಸುಮ್ಮನಾಗುವುದಿಲ್ಲ, ಹಾಗಂತ ಗೆದ್ದಲಹಳ್ಳಿಯ ಸೊತ್ತನ್ನು ಅಷ್ಟು ಸಲೀಸಾಗಿ ದಕ್ಕಿಸಿ ಕೊಳ್ಳುವುದೂ ಸಾಧ್ಯವಿಲ್ಲ. ಸುನೀಲನಿಗೆ ಇದು ಅರ್ಥವಾಗಬೇಕು. ವಿನಾಕಾರಣ ತಲೆ ಮರೆಸಿಕೊಂಡಿದ್ದು ಸಲ್ಲದ ತಾಪತ್ರಯಗಳನ್ನು ಮೇಲೆಳೆದು ಕೊಳ್ಳುವುದಕ್ಕಿಂತ ವಿವೇಕಿಯಾಗಿ ಪೊಲೀಸರಿಗೆ ಶರಣಾಗುವುದೇ ಲೇಸಲ್ಲವೇ?

■ ರಾ. ಸೋಮನಾಥ್

ಕರ್ನಾಟಕದ 'ಮಿಸ್ಸಿಂಗ್' ಹುಡುಗಿಯರು

ದೆಹಲಿಯ ಜಿ.ಬಿ. ರೋಡ್‌ನಲ್ಲಿ ಮಾರಾಟ!



ಜಿ.ಬಿ. ರಸ್ತೆ ಅಲಿಯಾಸ್ ಗಾರ್ಸ್ಟಿನ್ ಬ್ಯಾಸ್ಟಿಯನ್ ರೋಡ್...

ದೆಹಲಿಯ ಪುರಾತನ ಕಿಷ್ಕಿಂಧೆಗಳಲ್ಲಿ ಒಂದು. ಮುಂಬೈನ ಕಾಮಾಟಿಪುರದ ನಂತರ ಅತಿ ದೊಡ್ಡ ರೆಡ್‌ಲೈಟ್ ಏರಿಯಾ. ಏನಿಲ್ಲವೆಂದರು 4000 ಹೆಂಗಸರ ನಿತ್ಯನರಕ. ವೇಶ್ಯಾವಾಟಿಕೆಯ ಹೆಸರಿನಲ್ಲಿ ಇಲ್ಲಿ ನಡೆಯೋದು ವಿಕೃತ ನರಹಿಂಸೆ.

ಇತ್ತೀಚೆಗೆ ಅಪ್ರಾಪ್ತ ಹುಡುಗಿಯ ಕಣ್ಮರೆ ಪ್ರಕರಣವನ್ನು ಬೆನ್ನುಹತ್ತಿದ ಗೌರಿಬಿದನೂರು ಪೊಲೀಸರು ಹೋಗಿ ನಿಂತದ್ದು ಇದೇ ಜಿ.ಬಿ.ರಸ್ತೆಯ ಕೋಠಿಗಳ ಮುಂದೆ. ಈ ಪೊಲೀಸ್ ತಂಡವನ್ನು ಲೀಡ್ ಮಾಡುತ್ತಿದ್ದ ಗ್ರಾಮಾಂತರ ಠಾಣೆಯ ಎಸ್.ಐ ದಯಾನಂದ್ ಅಲ್ಲಿನ ಕರಾಳ ಬದುಕನ್ನು ಕಂಡು ದಂಗುಬಡಿದುಹೋಗಿದ್ದರು. ಹಂದಿಗೂಡಿನಂತಹ ಕೋಠಿಗಳಲ್ಲಿ 'ಜೀವಂತ ಸುಖದ ಮಷಿನ್'ಗಳಾಗಿ ಬದಲಾಗಿದ್ದ ಒಬ್ಬೊಬ್ಬ ಹೆಂಗಸಿನ ಮುಖದ ಮೇಲೂ ಸಮಾಜ ಮಾಡಿದ ವಂಚನೆಯ ಕಥೆಗಳು ದಟ್ಟವಾಗಿ ಕವಿದಿದ್ದವು. ಉದ್ಯೋಗದ ಆಮಿಷ, ಪ್ರೇಮವಂಚನೆ, ಬಡತನ, ಅಸಹಾಯಕತೆ, ಅತ್ಯಾಚಾರ- ಹೀಗೆ ಬಗೆಬಗೆಯ ನೆಪಗಳು ಅವರನ್ನು ಆ ಕೂಪಕ್ಕೆ ತಳ್ಳಿದ್ದವು. ಕೆಲವರಂತು, ತಮ್ಮ ಮೈಮೇಲೆ ನಡೆಯುವ ಕಾಮುಕ ಕಾಳಗಕ್ಕೆ ಅನಿವಾರ್ಯವಾಗಿ ಒಗ್ಗಿಹೋಗಿದ್ದರೆ ಮತ್ತೆ ಕೆಲವರು ನೋವಿನಿಂದಲೇ ಅದೆಲ್ಲವನ್ನೂ ಸಹಿಸಿಕೊಂಡು ಸುಮ್ಮನಾದಂತಿತ್ತು. ಮೇಲುನೋಟಕ್ಕೇ ಮನುಷ್ಯರು ವಾಸಿಸಲು ನಾಲಾಯಕ್ ಎನ್ನಬಹುದಾದ ಆ ಕೋಠಿಗಳಲ್ಲಿ ಕೋಟ್ಯಂತರ ರೂಪಾಯಿಯ ವಹಿವಾಟು ನಡೆಯುತ್ತಿತ್ತು; ಮಾನವೀಯತೆಯನ್ನು ನೆಲಕ್ಕೆ ತಿಕ್ಕಿ. ಇದೆಲ್ಲಕ್ಕಿಂತ ಹೆಚ್ಚಾಗಿ ಪೊಲೀಸರನ್ನು ದಿಗ್ಭ್ರಮೆಗೊಳಿಸಿದ್ದು ಈ ಜಿ.ಬಿ. ರಸ್ತೆಯ ಕೋಠಿಗಳಿಗೆ ಹೆಣ್ಮಕ್ಕಳನ್ನು ಮಾರಾಟ ಮಾಡುವ ವಂಚಕ 'ಸೆಕ್ಸ್ ರ‍್ಯಾಕೆಟ್' ಕರ್ನಾಟಕದಲ್ಲಿ ವ್ಯವಸ್ಥಿತವಾಗಿ ಬೀಡುಬಿಟ್ಟಿದೆ ಎಂಬ ಸತ್ಯ. ಯಾಕೆಂದರೆ ಒಬ್ಬ ಹುಡುಗಿಯ ನಾಪತ್ತೆ ಬೇಧಿಸಲು ಪೊಲೀಸರು ಅಲ್ಲಿಗೆ ಹೋಗಿದ್ದರೂ ಅವರಿಗೆ ಆ ಕೋಠಿಗಳಲ್ಲಿ ಸಿಕ್ಕಿದ್ದು ರಾಜ್ಯದ ಒಂಬತ್ತು ಅಮಾಯಕ ಹೆಣ್ಮಕ್ಕಳು. ಅಷ್ಟಕ್ಕೂ ಗೌರಿಬಿದನೂರು ಪೊಲೀಸರ ಟೀಮು ರೇಡ್ ಮಾಡಿದ್ದು ಜಿ.ಬಿ. ರಸ್ತೆಯಲ್ಲಿದ್ದ ಎರಡು ಕೋಠಿಗಳನ್ನು (ಹೌಸ್ ನಂಬರ್ 58 ಮತ್ತು 68) ಮಾತ್ರ. ಇನ್ನುಳಿದ 'ಅಂಗಡಿ'ಗಳನ್ನೂ ಬಗೆದಿದ್ದರೆ ಕರ್ನಾಟಕದ ಅದೆಷ್ಟು ಮಿಸ್ಸಿಂಗ್ ಕೇಸುಗಳು ಅಲ್ಲಿ ಅಂತ್ಯ ಕಾಣುತ್ತಿದ್ದವೋ ಗೊತ್ತಿಲ್ಲ, ಆದರೆ ಅಂತಹ ಅಧಿಕಾರ ಆ ಟೀಮಿಗೆ ಇರಲಿಲ್ಲ. ವಿಚಿತ್ರ ಅಂತಂದರೆ ಒಂಬತ್ತು ಜನರಲ್ಲಿ ಮೂರು ಹೆಣ್ಮಕ್ಕಳು ಆ ಕೂಪದಿಂದ ಹೊರಬರಲು ಸುತಾರಾಂ ಒಪ್ಪಲಿಲ್ಲವಂತೆ. ಇಂತಹ ಸ್ಥಳದಿಂದ ಹೊರಬಂದ ತಮ್ಮನ್ನು ಈ ಸಮಾಜ ಬದುಕಲು ಬಿಡುವುದಿಲ್ಲ, ಅದರ ಬದಲು ಇಲ್ಲೇ ಇದ್ದು ಕೊನೆಯಾಗಿಬಿಡುತ್ತೇವೆಂದು ಬೇಡಿಕೊಂಡು ಅಲ್ಲೇ ಉಳಿದಿದ್ದಾರೆ.

'ಮೈ' ಗಿರಾಕಿಯ ಮಾನವೀಯತೆ

ವಿಶೇಷವೆಂದರೆ ಇಡೀ ಪ್ರಕರಣ ಹೊರಬಂದದ್ದು ಅದೇ ಕೋಠಿಯ ಒಬ್ಬ ಗಿರಾಕಿಯಿಂದ. ಕಳೆದ ಜೂನ್ ತಿಂಗಳಿನಲ್ಲಿ ಬಾಗೇಪಲ್ಲಿಯ ರಶ್ಮಿ (ಹೆಸರು ಬದಲಿಸಲಾಗಿದೆ) ಎಂಬ ಹುಡುಗಿಯೊಬ್ಬಳು ಹಠಾತ್ತನೆ ಕಣ್ಮರೆಯಾಗಿದ್ದಳು. ಈ ಕುರಿತು 20.06.2013ರಂದು ಗ್ರಾಮಾಂತರ ಠಾಣೆಯಲ್ಲಿ ಕ್ರೈ.ನಂ.117/2013 ಅಡಿಯಲ್ಲಿ ದೂರೂ ದಾಖಲಾಗಿತ್ತು. ಹುಡುಕುವ ಕಾರ್ಯಾಚರಣೆ ನಡೆದಿತ್ತಾದರು ಹುಡುಗಿಯ ಸುಳಿವು ಸಿಕ್ಕಿರಲಿಲ್ಲ, ಇಂತಹ ಪ್ರಕರಣಗಳಲ್ಲಿ ಸಾಮಾನ್ಯವಾಗಿ ಆರೋಪಿಸಲಾಗುವ ಪ್ರೇಮಪಲಾಯನದ ನಿಟ್ಟಿನಿಂದಲೇ ಅದನ್ನೂ ನೋಡಲಾಗುತ್ತಿತ್ತು, ಆದರೆ ಇತ್ತೀಚೆಗೆ ಆಕೆಯ ಹೆತ್ತವರಿಗೆ ದೆಹಲಿಯಿಂದ ಕರೆಯೊಂದು ಬಂದಿತ್ತು, ಕರೆಮಾಡಿದ ವ್ಯಕ್ತಿ ಹಿಂದಿಯಲ್ಲಿ ಅದೇನೇನೊ ಹೇಳಿದನಾದರು ಅವರಿಗೆ ಅದು ಅರ್ಥವಾಗಿರಲಿಲ್ಲ, ಆದರೆ ಮಗಳ ಹೆಸರು ಪ್ರಸ್ತಾಪವಾದದ್ದು ಅವರಲ್ಲಿ ಗಾಬರಿ ಮೂಡಿಸಿತ್ತು. ಕೂಡಲೇ ಪೊಲೀಸರ ಬಳಿ ಬಂದು ವಿಷಯವನ್ನೆಲ್ಲಾ ಹೇಳಿ ಆ ಫೋನ್ ನಂಬರ್ ಕೊಟ್ಟಿದ್ದರು.

ಪೊಲೀಸರು ಫೋನ್ ಮಾಡಿದಾಗ ತನ್ನನ್ನು ಪಂಜಾಬ್ ಮೂಲದ ಜಗಜಿತ್ ಸಿಂಗ್ ಎಂದು ಪರಿಚಯಿಸಿಕೊಂಡ



ವ್ಯಕ್ತಿ ಘಟನೆಯನ್ನೆಲ್ಲ ಸಂಪೂರ್ಣವಾಗಿ ಬಿಚ್ಚಿಟ್ಟಿದ್ದ. ಆತ ಜಿ.ಬಿ.ರಸ್ತೆಯ ಕೋಠಿ ನಂಬರ್ 58ರ ಗಿರಾಕಿ. ಇತ್ತೀಚೆಗೆ ಅಲ್ಲಿಗೆ ಹೋಗಿದ್ದಾಗ ಇದೇ ಹುಡುಗಿಯನ್ನು 'ಬುಕ್' ಮಾಡಿಕೊಂಡಿದ್ದ. ನೀರಲ್ಲಿ ಮುಳುಗುವವ ಹುಲ್ಲು ಕಡ್ಡಿಯತ್ತಲೂ ಭರವಸೆಯಿಂದ ಕೈಚಾಚುವಂತೆ ರಶ್ಮಿ ಅವನ ಮುಂದೆ ತನ್ನೆಲ್ಲಾ ಗೋಳನ್ನು ತೋಡಿಕೊಂಡು ಅತ್ತಿದ್ದಳು. ಹೆಚ್ಚು ಸಂಬಳದ ಉದ್ಯೋಗ ಕೊಡಿಸುವುದಾಗಿ ನಂಬಿಸಿ ಮೋಸದಿಂದ ತನ್ನನ್ನಿಲ್ಲಿಗೆ ಮಾರಲಾದ ವೃತ್ತಾಂತವನ್ನೆಲ್ಲ ಹೇಳಿ ರೋದಿಸಿದ್ದಳು. ದುರಾದೃಷ್ಟ ಅಂದರೆ ಆಕೆ ಹೇಳಿದ ಯಾವೊಂದು ಮಾತೂ ಜಗಜಿತ್ ಸಿಂಗ್‌ಗೆ ಅರ್ಥವಾಗಿರಲಿಲ್ಲ, ಯಾಕೆಂದರೆ ಆಕೆ ಹೇಳಿಕೊಂಡಿದ್ದೆಲ್ಲಾ ಕನ್ನಡದಲ್ಲಿ, ಜಗಜಿತ್‌ಗೆ ಕನ್ನಡದ ಗಂಧಗಾಳಿಯೂ ಇಲ್ಲ, ಆಕೆಗೆ ಹಿಂದಿ ಬಾರದು, ಇವನಿಗೆ ಕನ್ನಡ ತಿಳಿಯದು. ಆದರೂ ಅವಳ ರೋದನೆಯಿಂದ ಒಂದಂತೂ ಜಗಜಿತ್‌ಗೆ ಸ್ಪಷ್ಟವಾಗಿತ್ತು, ಇಷ್ಟವಿಲ್ಲದೆ ಬಲವಂತದಿಂದ ಈ ಹುಡುಗಿ ಕಸುಬಿನಲ್ಲಿದ್ದಾಳೆ, ಅವಳಿಗೆ ತನ್ನ ಸಹಾಯದ ಅಗತ್ಯವಿದೆ ಎಂದರಿತ ಆತ ರಶ್ಮಿಯ ಹೆತ್ತವರ ಫೋನ್ ನಂಬರ್ ಪಡೆದು ಕೋಠಿಯಿಂದ ಹೊರಬರುತ್ತಲೇ ಇಲ್ಲಿಗೆ ಫೋನ್ ಮಾಡಿದ್ದ, ಆದಷ್ಟು ಬೇಗ ಆ ಹುಡುಗಿಯನ್ನು ಬಚಾವು ಮಾಡಿರೆಂದು ಕರೆಮಾಡಿದ. ಪೊಲೀಸರಲ್ಲೂ ಆತ ವಿನಂತಿಸಿಕೊಂಡಿದ್ದ.

ವಿಷಯ ತಿಳಿಯುತ್ತಿದ್ದಂತೆಯೇ ಚಿಕ್ಕಬಳ್ಳಾಪುರ ಎಸ್.ಪಿ. ಶಿವಪ್ರಸಾದ್‌ರು ಗೌರಿಬಿದನೂರು ಗ್ರಾಮಾಂತರ ಠಾಣೆಯ ಎಸ್.ಐ. ದಯಾನಂದ್ ನೇತೃತ್ವದಲ್ಲಿ ಕಾನ್‌ಸ್ಟೇಬಲ್ ಅರುಣ್, ಮಹಿಳಾ ಪಿ.ಸಿ. ಪದ್ಮ ಮತ್ತು ಮುಮ್ತಾಜ್‌ರ ತಂಡವನ್ನು ರಚಿಸಿ ಯುವತಿಯನ್ನು ಸುರಕ್ಷಿತವಾಗಿ ಕರೆತರುವಂತೆ ದೆಹಲಿಗೆ ಕಳುಹಿಸಿದ್ದರು. ನವೆಂಬರ್ 6ನೇ ತಾರೀಖು ಗಿರಾಕಿಗಳಂತೆ ಜಗಜಿತ್‌ಸಿಂಗ್ ಹೇಳಿದ್ದ 58ನೇ ಕೋಠಿಯನ್ನು ಹೊಕ್ಕ ಪೊಲೀಸರು ತಾವು ಹುಡುಕುತ್ತಿದ್ದ ಹುಡುಗಿ ಇವಳೆ ಎಂಬುದನ್ನು ಖಾತ್ರಿಪಡಿಸಿಕೊಂಡು ಸುಪರ್ದಿಗೆ ಪಡೆದಿದ್ದಲ್ಲದೆ ಆಕೆ ನೀಡಿದ ಮಾಹಿತಿಯನ್ನಾಧರಿಸಿ ಮತ್ತೂ ಎಂಟು ಜನ ಕರ್ನಾಟಕದ ಹುಡುಗಿಯರನ್ನು ರಕ್ಷಿಸಿ ಕರೆತಂದಿದ್ದರು. ಈ ಕೆಲಸ ಅಂದುಕೊಂಡಷ್ಟು ಸುಲಭದ್ದಾಗಿರಲಿಲ್ಲ. ಯಾಕೆಂದರೆ ಜಿ.ಬಿ. ರಸ್ತೆಯ ವೇಶ್ಯಾವಾಟಿಕೆ ವ್ಯವಸ್ಥಿತ ಜಾಲವಾಗಿತ್ತು, ಸ್ಥಳೀಯ ರಾಜಕಾರಣಿಗಳು, ಆಡಳಿತ, ಪೊಲೀಸರು, ರೌಡಿ ಪಡೆಗಳ ಪಾಲುದಾರಿಕೆ ಅದರ ಬೆನ್ನಿಗಿದೆ. ಆ ಕೋಠಿಗಳಿಗೆ ಅಪರಿಚಿತರಿಗೆ ಪ್ರವೇಶವಿರುವುದಿಲ್ಲ, ಅದಕ್ಕೆಂದೇ ಗೂಂಡಾಗಳ ಸರ್ಪಗಾವಲು ಅಲ್ಲಿರುತ್ತೆ. ಪ್ರತಿ ಮಹಡಿಯ ಮೆಟ್ಟಲು ಹತ್ತುತ್ತಿದ್ದಂತೆ ಒಬ್ಬೊಬ್ಬ ದಾಂಡಿಗ ತನ್ನ ಚೆಕ್‌ಪೋಸ್ಟ್ ಸಮೇತ ಹಾಜರಿರುತ್ತಾನೆ. ಅವನಿಗೆ ಸಮಜಾಯಿಷಿ ನೀಡಿ ಒಪ್ಪಿಸಿದರೆ ಮಾತ್ರ ಮುಂದಕ್ಕೆ ಪ್ರವೇಶ. ಇಲ್ಲವೆಂದರೆ ಗೂಸಾ ಗ್ಯಾರಂಟಿ. ಕರ್ನಾಟಕ ಪೊಲೀಸರ ಟೀಮು ಅಲ್ಲಿಗೆ ರೇಡ್ ಹೋಗುವ ಕೆಲ ದಿನಗಳ ಹಿಂದಷ್ಟೇ ಅದೇ ಕೋಠಿಯ ಗೂಂಡಾಗಳು ಸ್ಥಳೀಯ ಪೊಲೀಸ್ ಪೇದೆಯನ್ನು ಕೊಲೆ ಮಾಡಿದ್ದರು. ತಾವು ರೇಡ್ ಮಾಡುವ ವಿಷಯ ಲೀಕ್ ಆಗಿಬಿಟ್ಟರೆ ಕರ್ನಾಟಕದ ಹುಡುಗಿಯರನ್ನೆಲ್ಲ ಬಚ್ಚಿಟ್ಟುಬಿಡಬಹುದೆನ್ನುವ ಶಂಕೆಯಿಂದ ಸ್ಥಳೀಯ ಪೊಲೀಸ್ ಠಾಣೆಗೂ ಸುದ್ದಿ ಮುಟ್ಟಿಸದೆ ದೆಹಲಿಯ ಅಡಿಷನಲ್ ಸಿಟಿ ಕಮಿಷನರ್ ಅಲೋಕ್ ಕುಮಾರ್‌ರಿಗೆ ಸಂಗತಿ ಅರುಹಿದ ರಾಜ್ಯ ಪೊಲೀಸರ ಟೀಮು ಬಲು ನಾಜೂಕಿನಿಂದ ಅವರನ್ನೆಲ್ಲಾ ಪಾರು ಮಾಡಿ ಕರೆತಂದಿದ್ದಾರೆ.

ದೂರದ ದಿಲ್ಲಿ ಸೇಫ್!

ಹೆಂಗಸರ ಮುಗ್ಧತೆ, ಬಡತನ, ಅಸಹಾಯಕತೆಗಳ ಲಾಭ ಪಡೆದು ಅವರನ್ನು ವ್ಯಭಿಚಾರದ ಕಸುಬಿಗೆ ನೂಕುವ ಜಾಲ ಹೊಸದೇನೂ ಅಲ್ಲ, ಆದರೆ ಈ ಜಾಲ ಈಗ ವ್ಯವಸ್ಥಿತವಾಗಿ ರಾಜ್ಯದಲ್ಲಿ ಬೇರೂರಿರುವ ಸಂಶಯ ದಟ್ಟವಾಗುತ್ತಿದೆ. ಅವಿದ್ಯಾವಂತ, ಮುಗ್ಧ ಬಡಕುಟುಂಬದ, ಹೆತ್ತವರಿಲ್ಲ, ಅಪ್ರಾಪ್ತ ಹುಡುಗಿಯರೇ ಇಂತವರ ಮೊದಲ ಟಾರ್ಗೆಟ್. ಆರಂಭದಲ್ಲಿ ತುಂಬಾ ಸಭ್ಯರಂತೆ ಪರಿಚಯ ಮಾಡಿಕೊಂಡು ದುಪ್ಪಟ್ಟು ಸಂಬಳದ ಉದ್ಯೋಗದ ಆಮಿಷವೊಡ್ಡಿ ಅವರನ್ನು ಕರೆತಂದು ವೇಶ್ಯಾವಾಟಿಕೆಗೆ ತಳ್ಳಿಬಿಡುತ್ತಾರೆ. ಹೀಗೆ ನಾಪತ್ತೆಯಾಗುವ ಯುವತಿಯರ, ಹೆಣ್ಣುಮಕ್ಕಳ ಕುರಿತು ಸಕಾಲದಲ್ಲಿ ದೂರು ದಾಖಲಿಸದ ಪೋಷಕರ ಅಸಹಾಯಕತೆಯೂ ಇಂತವರಿಗೆ ಅನುಕೂಲಕರ. ಪೊಲೀಸರು ಈಗ ರಕ್ಷಿಸಿ ಕರೆತಂದಿರುವ ಮಹಿಳೆಯರಲ್ಲಿ ತುಮಕೂರು ಮೂಲದವಳಾಗಿದ್ದು ಬೆಂಗಳೂರಿನ ಮಹದೇವಪುರದ ಗಾರ್ಮೆಂಟ್‌ನಲ್ಲಿ ಕೆಲಸ ಮಾಡಿಕೊಂಡಿದ್ದ ಒಬ್ಬಾಕೆ ಕಾಣೆಯಾಗಿ ಇಲ್ಲಿಗೆ ಎರಡು ವರ್ಷವಾದರು ಇದುವರೆಗೂ ದೂರು ದಾಖಲಾಗಿಲ್ಲ ಎನ್ನುವ ಸಂಗತಿ ಅಚ್ಚರಿ ಮೂಡಿಸುವಂತದ್ದು.

ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು, ತುಮಕೂರು, ಮಂಡ್ಯ ಜಿಲ್ಲೆಗಳಲ್ಲಿ ಈ ಜಾಲ ತನ್ನ ವ್ಯಾಪಕ ಕಾರ್ಯಚಟುವಟಿಕೆ ಹೊಂದಿದೆ. ಚಿಕ್ಕಬಳ್ಳಾಪುರ ಜಿಲ್ಲೆಯಾದ್ಯಂತ ಹರಡಿರುವ ವೇಶ್ಯಾಜಾಲಕ್ಕೆ ಇಂದೂಪುರವೆ ಆಪರೇಟಿಂಗ್ ಪಾಯಿಂಟ್ ಎಂಬ ಮಾಹಿತಿ ಪ್ರಾಥಮಿಕ

ಈ ಕಸುಬನ್ನು ನಾನೀಗ ಇಷ್ಟಪಡಲು ಆರಂಭಿಸಿದ್ದೇನೆ

ನನ್ನ ಹೆಸರು ಮಂಜೂಷ, ಉತ್ತರ ಪ್ರದೇಶದವಳು. ನನಗೆ ಯಾರ ಸಿಂಪಥಿಯೂ ಬೇಕಾಗಿಲ್ಲ, ನನ್ನ ಕಸುಬಿನ ಬಗ್ಗೆ ನನಗೆ ಹೆಮ್ಮೆ ಇಲ್ಲದೆ ಇರಬಹುದು ಆದರೆ ಖೇದ, ವಿಷಾದಗಳಂತೂ ಇಲ್ಲ, ಅನುಮಾನವೇ ಬೇಡ, ಜಿ.ಬಿ.ರಸ್ತೆಯೇ ನನ್ನ ಪ್ರಪಂಚ. ಇದೇ ನನ್ನ ಮನೆ. ಬೇರಾವುದೇ ಜಾಗಕ್ಕಿಂತ ಹೆಚ್ಚು ಸುರಕ್ಷಿತ ಭಾವನೆ ನನಗಿಲ್ಲಿ ಸಿಗುತ್ತಿದೆ.

ಚಿಕ್ಕವಯಸ್ಸಿನಲ್ಲೇ ತಂದೆ-ತಾಯಿ ಕಳೆದುಕೊಂಡ ನಾನು ಚಿಕ್ಕಮ್ಮನ ಮನೆಯಲ್ಲೇ ಬೆಳೆದೆ. 14 ವರ್ಷದವಳಿದ್ದಾಗ ನನ್ನನ್ನು ಇಲ್ಲಿಗೆ ಮಾರಾಟ ಮಾಡಲಾಯಿತು. ಅಲ್ಲಿಯವರೆಗೂ ನನ್ನ ಚಿಕ್ಕಪ್ಪನೇ ನನ್ನ ಮೇಲೆ ನಿರಂತರವಾಗಿ ಅತ್ಯಾಚಾರ ಮಾಡಿ ವ್ಯಭಿಚಾರದ ಪರಿಚಯ ಮಾಡಿಸಿದ್ದ, ನನ್ನನ್ನು ಇಲ್ಲಿ ಎಷ್ಟಕ್ಕೆ ಮಾರಿದರು ಎಂಬುದೂ ನನಗೆ ಗೊತ್ತಿಲ್ಲ, ಆದರೆ ಅಂದಿನಿಂದ ವೇಶ್ಯಾವಾಟಿಕೆಯೇ ನನ್ನ ಬದುಕಾಗಿದೆ. ವೇಶ್ಯೆಯಾಗಿ ಎಂಟು ವರ್ಷವೇ ಕಳೆದುಹೋಗಿದೆ.



ಬಡತನ, ಅಸಹಾಯಕತೆಗಳು ನನ್ನನ್ನು ಈ ದಂಧೆಗೆ ನೂಕಿದವು. ಆರಂಭದಲ್ಲಿ ಅಪಾರ ಹಿಂಸೆಯಾಯಿತು. ಆದರೆ ಈಗ ಇದಕ್ಕೆ ಒಗ್ಗಿಹೋಗಿದ್ದೇನೆ. ವಿಚಿತ್ರವೆಂದರೆ ಈ ಕೆಲಸವನ್ನು ನಾನೀಗ ಇಷ್ಟಪಡಲು ಆರಂಭಿಸಿದ್ದೇನೆ. ಬಹುಶಃ ಪರಿಸ್ಥಿತಿಯನ್ನು ನೆನೆದು ಅಳುವುದಕ್ಕಿಂತ ಅದನ್ನು ಸಂಭಾಳಿಸಿಕೊಂಡು ನಡೆಯಬೇಕೆನ್ನುವ ಅನಿವಾರ್ಯತೆಯೇ ಇದಕ್ಕೆ ಕಾರಣವಿರಬಹುದು. ನಾನು ಓದಿಲ್ಲ, ಹಾಗಾಗಿ ಕೆಲಸವಂತೂ ನನಗೆ ಸಿಗುವುದಿಲ್ಲ. ಆದರೆ ಅವಕಾಶ ಸಿಕ್ಕರೆ ವೇಶ್ಯಾವಾಟಿಕೆಯಿಂದ ಹೊರಬರಲೂ ನಾನು ಸಿದ್ಧ. ನಮ್ಮ ದುಡಿಮೆಯ ಕಾಲುಭಾಗವಷ್ಟೆ ನಮ್ಮ ಪಾಲು, ಉಳಿದಿದ್ದೆಲ್ಲಾ ಯಾರ್‍ಯಾರಿಗೋ ಹಂಚಿ ಹೋಗುತ್ತದೆ.

ನನಗೆ ಏಡ್ಸ್ ಬಗ್ಗೆ ಅರಿವಿದೆ, ಕಾಂಡೋಮ್ ಬಳಕೆಯ ಮಹತ್ವವೂ ತಿಳಿದಿದೆ. ಆದರೆ ಕೆಲವೊಮ್ಮೆ ನನ್ನ ಗಿರಾಕಿಗಳು ಅದನ್ನು ಬಳಸಲು ಇಷ್ಟಪಡುವುದಿಲ್ಲ, ಆಗ ವಿಧಿಯಿಲ್ಲದೆ ಅವರು ಹೇಳಿದಂತೆ ನಾನು ಕೇಳುತ್ತೇನೆ. ಇಲ್ಲವಾದಲ್ಲಿ ಆ ಕಾರಣಕ್ಕಾಗಿ ನಾನು ಗಿರಾಕಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ಕೆಲವರಂತೂ ನನ್ನ ಮೇಲೆ ಮೃಗೀಯವಾಗಿ ವರ್ತಿಸುತ್ತಾರೆ. ಅವರನ್ನೆಲ್ಲಾ ನಾನು ಸಹಿಸಿಕೊಳ್ಳಲೇಬೇಕು. ವಾಸ್ತವ ಏನೆಂದರೆ, ಅವರೇ ಇಲ್ಲದಿದ್ದರೆ ನಮ್ಮ 'ಆಟ' ನಡೆಯುವುದಾದರು ಹೇಗೆ?

ಇತ್ತೀಚೆಗೆ mensxp.com ಎಂಬ ಖಾಸಗಿ ಸುದ್ದಿ ಸಂಸ್ಥೆಯೊಂದು ಜಿ.ಬಿ.ರಸ್ತೆಯ ವೇಶ್ಯೆಯರ ಸಂದರ್ಶನ ನಡೆಸಿದಾಗ ಮಂಜೂಷ ಎಂಬಾಕೆ ಹೇಳಿಕೊಂಡ ಮಾತುಗಳಿವು. ಆಕೆಯ ಮಾತುಗಳು ಸಮಾಜದ 'ನಾಗರಿಕತೆ'ಯನ್ನೂ, ಮನುಷ್ಯರ 'ಮಾನವೀಯತೆ'ಯನ್ನೂ ಚುಚ್ಚಿ ಚುಚ್ಚಿ ಪೀಡಿಸುವಂತಿವೆ.

'ಪರ್ಚಿ' ಸಿಸ್ಟಮ್: ಎಲ್ಲವೂ ವ್ಯವಸ್ಥಿತ?

ಜಿ.ಬಿ. ರಸ್ತೆಯ ವೇಶ್ಯಾವಾಟಿಕೆ ಅದೆಷ್ಟು ಪಕ್ಕಾ ದಂಧೆಯೆಂದರೆ ಅಲ್ಲಿಯವರೆಲ್ಲಾ ನಮ್ಮದು 'ಲೈಸೆನ್ಸ್' ವ್ಯವಹಾರ ಅಂತಲೇ ಹೇಳಿಕೊಳ್ಳುತ್ತಾರೆ. ದೇಶದಲ್ಲಿ ವೇಶ್ಯಾವಾಟಿಕೆಯನ್ನು ಕಾನೂನುಬದ್ಧಗೊಳಿಸಬೇಕೆಂಬ ಹೋರಾಟ ಈಗಷ್ಟೆ ಧ್ವನಿ ಎತ್ತುತ್ತಿದೆಯಾದರೂ ಅಲ್ಲಿನವರ ಪಾಲಿಗೆ 1956ರಿಂದಲೇ ಲೈಸೆನ್ಸ್ ಸಿಕ್ಕಾಗಿದೆಯಂತೆ. ದೆಹಲಿಯ ಇಡೀ ವ್ಯವಸ್ಥೆ ಜಿ.ಬಿ. ರಸ್ತೆಯ ಜಿಂದಗಿಯನ್ನು ಕಿಂಚಿತ್ತೂ ಪ್ರತಿರೋಧಿಸದೆ ಸ್ವೀಕರಿಸಿರುವುದರಿಂದ ಮತ್ತು ಅಡ್ಡಿಯಾಗಬೇಕಾದ ಪೊಲೀಸ್ ಇಲಾಖೆಯೇ ಕಣ್ಮುಚ್ಚಿ ಕೂರುವ ಕಂಕಣ ತೊಟ್ಟಿರುವುದರಿಂದ ತಮ್ಮ ಕಸುಬಿಗೆ ಮಾನ್ಯತೆ ಸಿಕ್ಕಿದೆ ಅಂತಲೆ ಅವರೆಲ್ಲರ ಭ್ರಮೆ. ಕೋಠಿಗಳೊಳಗೂ ಇಂತಹ 'ಲೈಸೆನ್ಸ್' ವ್ಯವಸ್ಥೆಯನ್ನೇ ಕಾಣಬಹುದು. ಹೋಟೇಲ್‌ಗಳಲ್ಲಿರುವಂತೆ ಇಲ್ಲಿಯೂ ಟೋಕನ್ ಸಿಸ್ಟಮ್ ಉಂಟು. ಅದನ್ನು ಅವರ ಭಾಷೆಯಲ್ಲಿ 'ಪರ್ಚಿ ವ್ಯವಸ್ಥಾ' ಅಂತ ಕರೀತಾರೆ. ಗಿರಾಕಿಯೊಬ್ಬ ತನಗೆ ಬೇಕಾದ ಹೆಂಗಸನ್ನು ಆಯ್ದುಕೊಂಡು ಇಂತಿಷ್ಟು ರೇಟ್ ಎಂಬುದು ಫಿಕ್ಸ್ ಆದ ಮೇಲೆ ಅಷ್ಟು ಅಮೌಂಟನ್ನು ಕೊಟ್ಟು ಆತ ರಸೀದಿ ಪಡೆಯಬೇಕು. ಈ ರಸೀದಿಯೇ ಪರ್ಚಿ. ತಮ್ಮ ತೃಷೆ ಇಂಗಿಸಿಕೊಂಡ ನಂತರ ಹಣ ನೀಡದ ಪುಂಡರ ದಬ್ಬಾಳಿಕೆ ತಡೆಯುವ ಘರ್‌ವಾಲಿಗಳ ತಂತ್ರ ಇದು. ಅಲ್ಲದೆ ಈ ಪರ್ಚಿಯಿಂದ ಯಾರು ಎಷ್ಟು ದುಡಿದಿದ್ದಾರೆ ಎಂಬ ಮಾಹಿತಿಯೂ ಸಲೀಸಾಗಿ ಘರ್‌ವಾಲಿಗಳ ಗಮನಕ್ಕೆ ಬರುತ್ತೆ, ಇಲ್ಲಿ ದುಡಿಯುವ ಹಣ ಪೊಲೀಸರಿಗೆ, ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ, ಗೂಂಡಾಗಳಿಗೆ ವಿಲೇವಾರಿ ಆಗಲೇಬೇಕು. ಇಲ್ಲವೆಂದರೆ ಅವರ 'ಲೈಸೆನ್ಸ್'(?) ರದ್ದಾಗಿಬಿಡುತ್ತೆ!


ಪೊಲೀಸ್ ತನಿಖೆಯಿಂದ ತಿಳಿದುಬಂದಿದೆ. ಮೊದಮೊದಲು ಹೀಗೆ ವಂಚಿಸಿದ ಯುವತಿಯರನ್ನು ಮುಂಬೈನ ರೆಡ್‌ಲೈಟ್ ಏರಿಯಾದಲ್ಲಿ ಬಿಕರಿ ಮಾಡಿ ಕಾಸು ಮಾಡಿಕೊಳ್ಳುತ್ತಿದ್ದರು. ಆದರೆ ಮುಂಬೈ ಹತ್ತಿರ ಇರುವುದರಿಂದ ಮತ್ತು ರಾಜ್ಯದವರು ಹೆಚ್ಚಾಗಿ ಗಿರಾಕಿಗಳಾಗಿ ಅಲ್ಲಿಗೆ ಹೋಗಿಬರುವುದರಿಂದ ಪ್ರಕರಣಗಳು ಬೇಗನೆ ಬೆಳಕಿಗೆ ಬಂದುಬಿಡುತ್ತಿದ್ದವು. ಈ ಸಮಸ್ಯೆಯನ್ನು ನೀಗಿಸಿದ್ದು ದೂರದ ದಿಲ್ಲಿಯ ಜಿ.ಬಿ. ರಸ್ತೆಯ ಕೋಠಿಗಳು. ಹೇಗೂ ಅಲ್ಲಿ ಕನ್ನಡಿಗರ ಒಡನಾಟ ಕಡಿಮೆ, ಅಲ್ಲದೆ ವಂಚನೆಗೆ ಒಳಗಾದ ಹುಡುಗಿಯರಿಗೆ ಹಿಂದಿ ಭಾಷೆಯೆ ದೊಡ್ಡ ಸಮಸ್ಯೆಯಾಗಿ ತಪ್ಪಾಗಿಸುತ್ತದೆ ಎನ್ನುವ ಅಂದಾಜು ಅವರದು. ಅದು ನಿಜವೂ ಹೌದು. ಮೊನ್ನೆ ಪೊಲೀಸರು ರಕ್ಷಿಸಿದ ಹುಡುಗಿಯೊಬ್ಬಳು ಸುಮಾರು ಆರು ತಿಂಗಳಿನಿಂದ ಅಲ್ಲಿದ್ದರೂ ತಾನು ಎಲ್ಲಿದ್ದೇನೆ, ಯಾವ ಊರು, ಏನು ವಿಳಾಸ ಎನ್ನುವುದೇ ಆಕೆಗೆ ಗೊತ್ತಿರಲಿಲ್ಲವಂತೆ. ಆಕೆ ಇದ್ದದ್ದು ಕೋಠಿ ನಂಬರ್ 68ರಲ್ಲಿ. 68ನ್ನು ಹಿಂದಿಯಲ್ಲಿ 'ಅಡಸಟ್' ಅಂತ ಕರೀತಾರೆ. ಆ ಪಾಪದ ಹುಡುಗಿಗೆ ಅದು ಕೋಠಿಯ ಮನೆಸಂಖ್ಯೆ ಅಂತಲೂ ಗೊತ್ತಾಗಿರಲಿಲ್ಲ, ಅಡಸಟ್ ಎನ್ನುವುದು ತಾನಿರುವ ಏರಿಯಾದ ಹೆಸರು ಅಂತಲೇ ನಂಬಿದ್ದಳಂತೆ. ಪೊಲೀಸರು ಕೇಳಿದಾಗಲೂ ತಾವು ಇದ್ದದ್ದು ಅಡಸಟ್ ಎಂಬ ನಗರದಲ್ಲಿ ಅಂತ ಉತ್ತರಕೊಟ್ಟಿದ್ದಳಾಕೆ. ಇಂತಹ ಹತ್ತುಹಲವು ಅನುಕೂಲಗಳ ಜೊತೆಗೆ ದೆಹಲಿಯಲ್ಲಿ ದಕ್ಷಿಣ ಭಾರತದ ಹೆಂಗಸರಿಗೆ ಭಾರೀ ಬೇಡಿಕೆ ಇರುವುದೂ ಈ ಜಾಲಕ್ಕೆ ಜಿ.ಬಿ ರಸ್ತೆ ಮೈ ಮಾರಾಟದ ಹೊಸದೊಂದು ವಸಾಹತು ಕೇಂದ್ರವಾಗೇ ಕಾಣಿಸಿಕೊಂಡಿದೆ. ಹೀಗಾಗಿ ಸಲೀಸಾಗಿ ಹುಡುಗಿಯರನ್ನು ದೆಹಲಿ 'ಮಾರ್ಕೆಟ್'ಗೆ ಮಾರಿಬಿಡುತ್ತಿದ್ದಾರೆ.

ನರಕದ ಮತ್ತೊಂದು ರೂಪ

ಜಿ.ಬಿ. ರಸ್ತೆ ದೆಹಲಿಯ ಹಳೆಯ ಏರಿಯಾಗಳಲ್ಲಿ ಒಂದು. ಕಮಲಾನಗರ ಮಾರ್ಕೆಟ್ ವ್ಯಾಪ್ತಿಗೆ ಬರುವಂತದ್ದು. ಇದಕ್ಕೆ ಸ್ವಾಮಿ ಶ್ರದ್ಧಾನಂದ ಮಾರ್ಗ ಎನ್ನುವ ಅಧಿಕೃತ ಹೆಸರು ಇದೆಯಾದರು ಜನರಿಗೆ ಜಿ.ಬಿ.ರಸ್ತೆ ಅಂತಲೇ ಪರಿಚಿತ. ಇಲ್ಲಿ 1956ರಿಂದಲೂ ವೇಶ್ಯಾವಾಟಿಕೆ ಎಗ್ಗಿಲ್ಲದೆ ನಡೆದುಕೊಂಡು ಬಂದಿದೆ. ಕಿಕ್ಕಿರಿದ ರಸ್ತೆಗಳ ಇಕ್ಕೆಲಕ್ಕೂ ಒತ್ತೊತ್ತಾಗಿ ನಿಂತುಕೊಂಡ ಕಟ್ಟಡಗಳೆ ದಂಧೆಯ 'ಕೋಠಿ'ಗಳು. ಕೆಳ ಮಹಡಿಯಲ್ಲಿ ಮಶಿನರಿ, ಆಟೊಮೊಬೈಲ್, ಹಾರ್ಡ್‌ವೇರ್, ಟೂಲ್ಸ್, ಎಲೆಕ್ಟ್ರಾನಿಕ್ ಮಳಿಗೆಗಳು ವ್ಯಾಪಾರ ನಡೆಸಿಕೊಂಡಿದ್ದರೆ ಮೇಲ್ಮಹಡಿಗಳ ಕೋಠಿಗಳಲ್ಲಿ ನಡೆಯುವ ವ್ಯವಹಾರವೇ ಬೇರೆಯದ್ದು. ಒಂದೊಂದು ಮಹಡಿಗೂ ಜೈಲಿನ ಕಂಬಿಯಂತಹ ಕಿಟಕಿಗಳು. ಅವುಗಳ ಮುಂದೆ ಮೇಕಪ್ ಮೆತ್ತಿಕೊಂಡು ನಿಂತು ಗ್ರಾಹಕರನ್ನು ಸೆಳೆಯುವ ಕೆಲಸ ವೇಶ್ಯೆಯರದ್ದು. ಒಂದೊಂದು ಕೋಠಿಗೂ ಒಬ್ಬ 'ಘರ್‌ವಾಲಿ' ಅಧಿನಾಯಕಿ. ವಂಚನೆಗೆ ಒಳಗಾಗಿ ಅಲ್ಲಿಗೆ ಕರೆತರುವ ಹುಡುಗಿಯರ ಅಂದಕ್ಕೆ ತಕ್ಕಂತೆ ಹಣಕೊಟ್ಟು ಖರೀದಿಸಿ ಕಸುಬಿಗಿಳಿಸುವುದೇ ಈ ಘರ್‌ವಾಲಿ ಆಂಟಿಗಳು. ವೇಶ್ಯೆಯಾಗಲು ಒಪ್ಪದ ಹುಡುಗಿಯರಿಗೆ ಹೊಡೆದು, ಚಿತ್ರಹಿಂಸೆ ನೀಡಿ, ತಾವು ಸಾಕಿಕೊಂಡ ಗೂಂಡಾಗಳಿಂದ ಅತ್ಯಾಚಾರ ಮಾಡಿಸಿ ಬಲವಂತವಾಗಿ ವೇಶ್ಯೆಯರನ್ನಾಗಿಸುವ 'ಆಂಟಿ ಮೇಡಮ್'ಗಳೆಂದರೆ ಇಲ್ಲಿನ ಹುಡುಗಿಯರು ಥರಥರ ನಡುಗಿಬಿಡುತ್ತಾರೆ.

ಒಮ್ಮೆ ಈ ಕೂಪಕ್ಕೆ ಬಂದು ಬಿದ್ದರೆ ಹುಡುಗಿಯರು ಮುಂದಿನ ಬದುಕನ್ನು 'ಸುಖದ ಡಾಲ್'ಗಳಾಗಿ ಕಳೆಯಬೇಕು. ಅಲ್ಲಿ ಹಗಲು, ರಾತ್ರಿಯೆನ್ನುವ ಕಲ್ಪನೆಯೇ ಇಲ್ಲ. ಮಧ್ಯಾಹ್ನದಿಂದ ಶುರುವಾಗುವ 'ದಂಧೆ' ರಾತ್ರಿ ಎರಡು, ಮೂರು ಗಂಟೆಯವರೆಗೆ ನಿರಂತರವಾಗಿ ಮುಂದುವರೆಯುತ್ತದೆ. ಆ ನಿಷ್ಪಾಪಿ ದೇಹಗಳಿಗೆ ಹೆಚ್ಚೆಂದರೆ ಎರಡರಿಂದ ಮೂರು ಗಂಟೆಯಷ್ಟೇ ರೆಸ್ಟು! ಒಬ್ಬೊಬ್ಬ ಹೆಂಗಸೂ ಏನಿಲ್ಲವೆಂದರು 25 ರಿಂದ 60 ಗಿರಾಕಿಗಳ ತೃಷೆಗೆ ತನ್ನ ಮೈಯೊಡ್ಡಿ ಮಲಗಬೇಕು. ಇನ್ನು ಅವರು ಹಾಕುವ ಬಟ್ಟೆಯೂ ಘರ್‌ವಾಲಿ ಆಂಟಿಯದ್ದೇ ಆಯ್ಕೆ. ಬಾಲಿವುಡ್ ಸಿನಿಮಾ ಶೂಟಿಂಗ್ ನಂತರ ಬಿಕರಿಯಾಗುವ ಬಟ್ಟೆಗಳನ್ನೆಲ್ಲಾ ಸೆಕೆಂಡ್‌ಸೇಲ್ಸ್‌ನಲ್ಲಿ ದೆಹಲಿಯ ಜಿ.ಬಿ.ರಸ್ತೆಯ ಕೋಠಿಗಳಿಗೆ ಬಿಕರಿ ಮಾಡುವ ಮುಂಬೈ ವರ್ತಕರ ತಂಡವೇ ಇದೆ. ಅವರು ತರುವ ಅರೆಬರೆ ಬಟ್ಟೆಗಳನ್ನು ತೊಟ್ಟು, ತುಟಿಗೆ ಢಾಳ ಲಿಪ್‌ಸ್ಟಿಕ್ ಮೆತ್ತಿಕೊಂಡು ಜೈಲಿನಂತಹ ಕಂಬಿಗಳ ಮುಂದೆ ಪ್ರದರ್ಶನಕ್ಕೆ ನಿಲ್ಲಬೇಕು. ಮೈ-ಕೈ ತುಂಬಿಕೊಂಡು ದಷ್ಟಪುಷ್ಟವಾಗಿ ಗಿರಾಕಿಗಳನ್ನು ಆಕರ್ಷಿಸಲಿ ಅಂತ ಇಷ್ಟವಿಲ್ಲದಿದ್ದರೂ ಎಮ್ಮೆಯ ಮಾಂಸವನ್ನೆಲ್ಲಾ ಅವರಿಗೆ ತಿನ್ನಿಸಲಾಗುತ್ತೆ, ವಿರೋಧಿಸುವಂತೆಯೇ ಇಲ್ಲ; ಯಾಕೆಂದರೆ ಅವರದೆಲ್ಲಾ 'ಇಷ್ಟ'ವನ್ನು ಕಳಕೊಂಡ ಬದುಕು. ಅಲ್ಲಿಗೆ ಬರುವ ಬಹುಪಾಲು ಪುರುಷ ವಿಟಗಳು ವಿಕೃತ ಮನೋಭಾವದವರೇ ಆದ್ದರಿಂದ 'ಕಾಸು ಕೊಟ್ಟಿದ್ದೇನೆ'ಂಬ ಅಧಿಕಾರವನ್ನು ವಿಚಿತ್ರವಾಗಿ ತೀರಿಸಿಕೊಳ್ಳುವುದೂ ಉಂಟು. ಅವುಗಳನ್ನೆಲ್ಲಾ ಸಹಿಸಿಕೊಳ್ಳಲೇಬೇಕು. ಬೇರೆ ವಿಧಿಯೇ ಇಲ್ಲ, ಯಾಕೆಂದರೆ, ಅದೇ ಅವರ ಬದುಕು; ಈ ಸಮಾಜ ಬಲುದಿಕೆಯವಾಗಿತ್ತ ಬದುಕು...

■ ಗಿರೀಶ್ ತಾಳಿಕಟ್ಟೆ



ಒಕ್ಕಲಿಗರ ಸಂಘ: ಎಲೆಕ್ಷನ್ ಕಿತಾಪತಿ ಆರಂಭ

ರಾಜ್ಯ ಒಕ್ಕಲಿಗರ ಪ್ರಾತಿನಿಧಿಕ ಸಂಸ್ಥೆ ಒಕ್ಕಲಿಗರ ಸಂಘ ಮತ್ತೊಂದು ಚುನಾವಣೆಗೆ ಸಜ್ಜಾಗುತ್ತಿದೆ. 2014ರ ಜನವರಿ ಐದಕ್ಕೆ ಚುನಾವಣೆ ನಿಗದಿಯೂ ಆಗಿಬಿಟ್ಟಿದೆ. ಕಳೆದ 10 ವರ್ಷಗಳಿಂದ ಸಂಘವನ್ನೇ ತನ್ನ ಊಟದ ತಟ್ಟೆಯಾಗಿಸಿಕೊಂಡು ಇನ್ನಿಲ್ಲದಂತೆ ಜನಾಂಗದ ಸಂಸ್ಥೆಯನ್ನು ಲೂಟಿಗೈದ ಹಾಲೀ ಅಧ್ಯಕ್ಷ ಕೆಂಚಪ್ಪಗೌಡನ ಕಪಿಮುಷ್ಠಿಯಿಂದ ಸಂಘವನ್ನು ಬಚಾವು ಮಾಡಲು ಒಕ್ಕಲಿಗರಿಗೆ ಇದಕ್ಕಿಂತ ಮತ್ತೊಂದು ಅವಕಾಶವಿಲ್ಲ ಎಂಬುದು ಎಷ್ಟು ಸತ್ಯವೋ ಹೊಣೆಗೇಡಿ ಮುಖಂಡರ ಕಚ್ಚಾಟದಿಂದಾಗಿ ಅಂಥ ಅವಕಾಶ ಕೂಡ ಮಣ್ಣು ಪಾಲಾಗಿರುವುದೂ ವಿಕಟ.

ಹೊಸಕೋಟೆಯ ಕ್ರಿಮಿನಲ್ ಬಚ್ಚೇಗೌಡ, ಬಿಜೆಪಿಯ ಮಾಜಿ ಡಿಸಿಎಂ ಆರ್. ಅಶೋಕ್ ಮುಂತಾದವರ ಕುಮ್ಮಕ್ಕಿನ ಬಲದಿಂದಲೇ ಅಧ್ಯಕ್ಷನಾದವನು ಹೊಸಕೋಟೆಯ ಕೆಂಚಪ್ಪಗೌಡ. ಒಂದಾನೊಂದು ಕಾಲಕ್ಕೆ ಯಕಶ್ಚಿತ್ ಮೆಟಡೋರ್ ಡ್ರೈವರ್ ಆಗಿದ್ದು ಕ್ರಮೇಣ ಸೆಕೆಂಡ್ ಲಿಕ್ಕರ್ ದಂಧೆಗೆ ಬಿದ್ದೇ ಬಾರು-ವೈನ್‌ಸ್ಟೋರುಗಳ ಮಾಲಿಕನಾದ ಕೆಂಚಪ್ಪಗೌಡ ವಿದ್ಯಾವಂತನಲ್ಲ, ವಿವೇಕವಂತೂ ಇಲ್ಲವೇ ಇಲ್ಲ. ಆ ಕಾಲದಿಂದಲೂ ಜನಾಂಗದ ಪುರೋಭಿವೃದ್ಧಿಗಾಗಿ ಹೋರಾಡಿಕೊಂಡೇ ಬಂದಿದ್ದ ಪ್ರೊ. ವೆಂಕಟಗಿರಿಗೌಡ, ಡಾ. ವಿಠ್ಠಲ್, ಪಿಳ್ಳಭೈರಪ್ಪ, ಪ್ರೊ. ನಾಗರಾಜ್, ಅಪ್ಪಾಜಿಗೌಡರಂಥವರಿಗೆ ಪಾಪದ ದುಡ್ಡಿನ ಬಲವಿರಲಿಲ್ಲ.

ತನ್ನ ಹಡಬೆ ದುಡ್ಡಿನಿಂದಲೇ ಸಂಘದ ಮತದಾರರ ಓಟು ಖರೀದಿಸಿ ಡೈರೆಕ್ಟರಾದ ಕೆಂಚಪ್ಪಗೌಡ ಸಂಘವನ್ನು ಉದ್ಧಾರ ಮಾಡುವುದು ಹಾಳಾಗಲಿ, ಸಂಘದ ಪುರೋಭಿವೃದ್ಧಿಗೆಂದು ದಾನವಾಗಿ ಕೊಟ್ಟಿದ್ದ ಸಜ್ಜೆಪಾಳ್ಯದ 43 ಎಕರೆ ಜಮೀನನ್ನೇ ಖದೀಮರಿಗೆ ಮಾರಿಬಿಟ್ಟ. ಕಾಮಾಕ್ಷಿಪಾಳ್ಯದ ರಂಗಮ್ಮ ಎಂಬ ಉದಾತ್ತ ಮಹಿಳೆ ನಿರ್ಗತಿಕ ಒಕ್ಕಲಿಗರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲೆಂದೇ ಸಜ್ಜೆಪಾಳ್ಯದ ತನ್ನ 90 ಎಕರೆ ಸೊತ್ತನ್ನು ಸಂಘಕ್ಕೆ ದಾನವಾಗಿ ಕೊಟ್ಟಿದ್ದನ್ನು ಲೂಟಿ ಹೊಡೆದವನು ಕೆಂಚಪ್ಪಗೌಡ.

ಒಂದೆಡೆ ಸಂಘದ ಸೊತ್ತನ್ನೇ ರಿಯಲ್ ಎಸ್ಟೇಟ್ ಖದೀಮರಿಗೆ ಮಾರಿಕೊಂಡ ಕೆಂಚಪ್ಪಗೌಡ ಮತ್ತೊಂದೆಡೆ ಸಂಘದ ಮೆಡಿಕಲ್ ಸೀಟುಗಳನ್ನೂ ನುಂಗಿ ಹಾಕಿದ. ಡ್ರಾಪ್ ಔಟ್ ಸೀಟ್ ಹಗರಣದಲ್ಲಿ ಇನ್ನೇನು ಜೈಲು ಪಾಲಾಗುವುದು ಗ್ಯಾರಂಟಿ ಅಂತಿರುವಾಗಲೇ ಡಿಸಿಎಂ ಆಗಿದ್ದ ಆರ್. ಅಶೋಕ್ ಮತ್ತು ಕಾರ್ಮಿಕ ಮಂತ್ರಿಯಾಗಿದ್ದ ಬಚ್ಚೇಗೌಡರು ಕೆಂಚಪ್ಪಗೌಡನ ಬೆನ್ನಿಗೆ ನಿಂತರು. ಹೀಗಾಗಿ ಜೈಲಿಗೂ ಹೋಗದೆ ಮಾಡಿದ ಪಾಪಕ್ಕೂ ಶಿಕ್ಷೆಯಿಲ್ಲದೆ ಅಟ್ಟಹಾಸಕ್ಕಿಳಿದ ಕೆಂಚಪ್ಪಗೌಡನ ಜೊತೆ ಸಂಘದ ಇತರೇ ಡೈರೆಕ್ಟರ್‌ಗಳಾದ ಗೋಪಾಲಗೌಡ, ನೀಲಕಂಠನ್, ಕೃಷ್ಣಪ್ಪ ಮಹದೇವ್ ಸೇರಿಕೊಂಡು ಮತ್ತಷ್ಟು ದೋಚತೊಡಗಿದರು.

ಇಂಥಾ ಪರಿಸ್ಥಿತಿಯಲ್ಲೇ ಕೆಂಚಪ್ಪಗೌಡನ ಆಡಳಿತಾವಧಿ ಮುಗಿದು ಚುನಾವಣೆ ಸನ್ನಿಹಿತವಾದಾಗ ಸಹಜವಾಗೇ ಜನಾಂಗದ ಹಿತೈಷಿಗಳಲ್ಲೊಂದು ನಿರೀಕ್ಷೆ ಮೂಡತೊಡಗಿತ್ತು, ಏಕೆಂದರೆ ಈ ಬಾರಿ ಸರಿಸುಮಾರು 1 ಲಕ್ಷಕ್ಕೂ ಅಧಿಕ ಹೊಸ ಮತದಾರರು ಸೇರ್ಪಡೆಯಾಗಿದ್ದರು. ಬೆಂಗಳೂರಿನ ಮಟ್ಟಿಗೆ ಹಿಂದೆ ಇದ್ದ ಒಟ್ಟು ಮತದಾರರು ಕೇವಲ ಒಂಬತ್ತು ಸಾವಿರ. ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳನ್ನೂ ಒಳಗೊಂಡು 15 ಮಂದಿ ಡೈರೆಕ್ಟರ್‌ಗಳನ್ನು ಈತನಕ ಆಯ್ಕೆ ಮಾಡುತ್ತಿದ್ದದ್ದು ಈ 9 ಸಾವಿರ ಮತದಾರರು ಮಾತ್ರ.

ಆದರೆ ಈಗಿನ ಪರಿಸ್ಥಿತಿಯೇ ಬೇರೆ. ಹಿಂದಿದ್ದ 9 ಸಾವಿರ ಮತಧಾರರ ಬದಲಿಗೆ ಈಗ 1.20 ಲಕ್ಷ ಹೊಸ ಮತದಾರರು ಸೇರಿಕೊಂಡಿದ್ದಾರೆ. ಒಂದು ಲಕ್ಷದ ಇಪ್ಪತ್ತು ಸಾವಿರದಷ್ಟು ಮತದಾರರ ಪೈಕಿ ಅರ್ಧಕ್ಕರ್ಧ ಯುವಕರಿದ್ದಾರೆ. ಇವರೆಲ್ಲ ಪ್ರಜ್ಞಾವಂತರು ಮತ್ತು ಜನಾಂಗದ ಬಗ್ಗೆ ಕಾಳಜಿಯುಳ್ಳವರು. ಯಾರೆಷ್ಟೇ ಹಣ, ಹೆಂಡ ಹಂಚಿದರೂ ಕನಿಷ್ಠ ಅರ್ಧದಷ್ಟು ಮತದಾರರು ಮನಸ್ಸು ಮಾಡಿದರೆಂದರೆ ಪ್ರೊ. ನಾಗರಾಜ್, ಅಪ್ಪಾಜಿಗೌಡ, ಪ್ರಸಾದ್, ಪ್ರೊ. ಮಲ್ಲಯ್ಯ, ಎಂ.ಆರ್. ವೆಂಕಟೇಶ್, ದೇವೇಗೌಡರಂಥ ಶುದ್ಧ ಹಸ್ತರು ಗೆಲ್ಲುವುದು ಕಷ್ಟವೇನಲ್ಲ, ಆಗ ಸಹಜವಾಗೇ ಕೆಂಚಪ್ಪಗೌಡನಿಂದ ಸಂಘಕ್ಕೆ ಮುಕ್ತಿಯಾಗುತ್ತದೆ ಎಂಬುದು ಎಲ್ಲರ ನಿರೀಕ್ಷೆಯಾಗಿತ್ತು.

ಅದೇನು ದೌರ್ಭಾಗ್ಯವೋ ಶಾಪವೋ ಗೊತ್ತಿಲ್ಲ, ಇನ್ನೇನು ಚುನಾವಣೆ ಘೋಷಣೆಯಾಯಿತು ಎನ್ನುವಾಗಲೇ ಸಂಘದ ರಾಜಕಾರಣದಲ್ಲೊಂದು ಅನಾಹುತ ಸಂಭವಿಸಿತು. ಅದು ಒಂದಾಗಿದ್ದ ಪ್ರೊ. ನಾಗರಾಜ್ ಮತ್ತು ಅಪ್ಪಾಜಿಗೌಡರ ಸಿಂಡಿಕೇಟಿನ ಒಡಕು!

ನಿನ್ನೆಮೊನ್ನೆಯ ತನಕ ಒಂದಾಗಿದ್ದ ಪ್ರೊ. ನಾಗರಾಜ್ ಮತ್ತು ಅಪ್ಪಾಜಿಗೌಡರ ಸಿಂಡಿಕೇಟಿನಲ್ಲಿ ಅ. ದೇವೇಗೌಡ, ಪ್ರಸಾದ್, ಕಾಳೇಗೌಡ, ಎಂ.ಎ.ಆನಂದ್, ಮಲ್ಲಿಕಾರ್ಜುನ ಗೌಡರಂಥ ಘಟಾನುಘಟಿಗಳಿದ್ದರು. ಸಾಲದ್ದಕ್ಕೆ ಪ್ರೊ. ಮಲ್ಲಯ್ಯನವರದ್ದೇ ಪ್ರತ್ಯೇಕವಾದ ಸಿಂಡಿಕೇಟಿತ್ತು. ಅಪ್ಪಾಜಿಗೌಡ ಮತ್ತು ಪ್ರೊ. ನಾಗರಾಜ್ ಒಗ್ಗಟ್ಟಾದರೆಂದರೆ ಕೆಂಚಪ್ಪಗೌಡ, ಬಚ್ಚೇಗೌಡ, ಆರ್. ಅಶೋಕ್ ಸಿಂಡಿಕೇಟ್ ಮಣ್ಣು ಮುಕ್ಕುವುದು ಶತಸ್ಸಿದ್ಧ ಎಂಬುದೂ ನಿಕ್ಕಿಯಾಗಿತ್ತು.

, ಆದರೆ ದುರಾಶೆ. ಕೊನೇಗಳಿಗೆಯಲ್ಲಿ ತಮ್ಮ ಸಿಂಡಿಕೇಟಿಗೆ ಯಾರ್‍ಯಾರನ್ನೆಲ್ಲ ಸೇರಿಸಿಕೊಳ್ಳಬೇಕೆಂಬ ವಿಷಯದಲ್ಲಿ ಅಪ್ಪಾಜಿಗೌಡ ಮತ್ತು ಪ್ರೊ. ನಾಗರಾಜ್ ಮಧ್ಯೆ ಭಿನ್ನಾಭಿಪ್ರಾಯ ಭುಗಿಲೆದ್ದಿತು. ಸಜ್ಜೆಪಾಳ್ಯದ ಸಂಘದ ಭೂಮಿಯನ್ನು ಉಳಿಸಿಕೊಳ್ಳಲು ಸುಪ್ರೀಂಕೋರ್ಟ್‌ತನಕ ಹೋರಾಡಿದ್ದ ಅಪ್ಪಾಜಿಗೌಡ ಮತ್ತು ಪ್ರೊ. ನಾಗರಾಜ್ ಎಷ್ಟು ಪ್ರಾಮಾಣಿಕರೋ ಅಷ್ಟೇ ಸಂಘಟನಾ ಚತುರರು. ಆದರೆ ಕೆಂಚಪ್ಪಗೌಡನನ್ನು ಮಣಿಸುವ ಆವೇಶದಲ್ಲಿ ಬಡಿಸಿಸಿ ಬ್ಯಾಂಕಿನ ಕೃಷ್ಣಮೂರ್ತಿ ಮತ್ತು ಜಯಮುತ್ತು ಥರದ ಕಳಂಕಿತರನ್ನು ಸಿಂಡಿಕೇಟಿಗೆ ಸೇರಿಸಿಕೊಳ್ಳುವುದು ಸರಿಯಲ್ಲ ಎಂದು ಪ್ರೊ. ನಾಗರಾಜ್ ಹಠಕ್ಕೆ ಬಿದ್ದರು.

ಪ್ರೊ. ನಾಗರಾಜ್ ಉದ್ದೇಶದಲ್ಲಿ ಪ್ರಾಮಾಣಿಕತೆಯಿತ್ತು ಮತ್ತು ಸಂಘದ ಕಾಳಜಿಯೂ ಅಡಗಿತ್ತು. ರಿಯಲ್ ಎಸ್ಟೇಟ್ ಮಾಫಿಯಾಗಳು, ಜೈಲಿಗೆ ಹೋಗಿ ಬಂದವರನ್ನೆಲ್ಲ ಅವರೆಷ್ಟೇ ಬಲಾಢ್ಯರಾಗಿದ್ದರೂ ಕೈಜೋಡಿಸುವುದು ಬೇಡ ಎಂಬ ಪ್ರೊ. ನಾಗರಾಜ್ ಕಾಳಜಿಯನ್ನು ಅಪ್ಪಾಜಿಗೌಡರು ಅರ್ಥ ಮಾಡಿಕೊಳ್ಳಲಿಲ್ಲ. ಹೀಗಾಗಿ ಪ್ರೊ. ನಾಗರಾಜ್ ಸಿಡಿದೆದ್ದು ತಮ್ಮದೇ ಪ್ರತ್ಯೇಕ ಸಿಂಡಿಕೇಟ್ ಘೋಷಿಸಿಬಿಟ್ಟರು. ಹಾಲಿ ಡೈರೆಕ್ಟರ್‌ಗಳಾದ ಎ. ಪ್ರಸಾದ್, ಪ್ರೊ. ನಾಗರಾಜ್ ಬೆನ್ನಿಗೆ ನಿಂತರೆ ಕಾಳೇಗೌಡ, ಅ. ದೇವೇಗೌಡ ಎಂ.ಎ. ಆನಂದ್ ಮತ್ತು ಮಲ್ಲಿಕಾರ್ಜುನಗೌಡ ಅಪ್ಪಾಜಿಗೌಡರ ಜೊತೆಗೇ ಉಳಿದರು. ಇದು ಒಕ್ಕಲಿಗರ ದುರ್ದೆಸೆಯೋ ಸಂಘದ ದೌರ್ಭಾಗ್ಯವೋ ಗೊತ್ತಿಲ್ಲ. ಅಪ್ಪಾಜಿಗೌಡ ಮತ್ತು ಪ್ರೊ. ನಾಗರಾಜ್ ಪ್ರತ್ಯೇಕ ಸಿಂಡಿಕೇಟು ಘೋಷಿಸಿದ ಸುದ್ದಿ ಕೇಳಿದ್ದೇ ಹಾಲಿ ಅಧ್ಯಕ್ಷ ಕೆಂಚಪ್ಪಗೌಡ ಗುಂಡು ಪಾರ್ಟಿ ನಡೆಸಿ ಕೇಕೆಯಿಟ್ಟ. ಏಕೆಂದರೆ ಆತನಿಗಿದ್ದ ಆತಂಕವೆಲ್ಲ ತನ್ನಿಂತಾನಾಗಿಯೇ ಮಾಯವಾಗಿತ್ತು.

ನೀಲಕಂಠೇಗೌಡ, ಬಚ್ಚೇಗೌಡನ ತಮ್ಮ ಗೋಪಾಲಗೌಡ, ಆರ್. ಅಶೋಕ್ ತಮ್ಮ ರವಿ, ಕೃಷ್ಣಪ್ಪ ಮುಂತಾದ ರಿಯಲ್ ಎಸ್ಟೇಟ್ ಖದೀಮರನ್ನೆಲ್ಲ ಜೊತೆ ಹಾಕಿಕೊಂಡರೆ ತಾನು ನಿರಾಯಾಸವಾಗಿ ಗೆದ್ದು ಬಿಡುತ್ತೇನೆಂಬುದು ಕೆಂಚಪ್ಪ ಗೌಡನಿಗೆ ಗ್ಯಾರಂಟಿಯಾಗಿತ್ತು.

ಹಾಗೆ ನೋಡಿದರೆ ಕೆಂಚಪ್ಪಗೌಡನಿಗಿಂತಲೂ ಬಲಾಢ್ಯವಾಗಿದ್ದದ್ದು ಪ್ರೊ. ನಾಗರಾಜ್ ಸಿಂಡಿಕೇಟೆ. ಈಗ ಅಪ್ಪಾಜಿಗೌಡರ ಜೊತೆ ದೇವೇಗೌಡ, ಕಾಳೇಗೌಡ, ಎಂ.ಎ. ಆನಂದ್, ಮಲ್ಲಿಕಾರ್ಜುನಗೌಡ ಸೇರಿದರೆಂದರೆ ಐದು ಮಂದಿ ಡೈರೆಕ್ಟರ್‌ಗಳಾದರೂ ಕಳಂಕಿತರನ್ನು ಜೊತೆ ಹಾಕಿಕೊಂಡಿದ್ದು ನಿಜಕ್ಕೂ ಹಿನ್ನಡೆಯೇ. ಆದರೆ ಪ್ರೊ. ನಾಗರಾಜ್ ಸಿಂಡಿಕೇಟಿನಲ್ಲಿ ದೊಡ್ಡಬಳ್ಳಾಪುರದ ಮುನೇಗೌಡ ಮತ್ತು ಪ್ರಸಾದ್‌ರಂಥ ಹಾಲೀ ನಿರ್ದೇಶಕರಲ್ಲದೆ ಒಕ್ಕಲಿಗರ ಒಕ್ಕೂಟದ ಮೂಲಕ ಸಹಸ್ರಾರು ಬಡ ವಿದ್ಯಾರ್ಥಿಗಳಿಗೆ ನೆರವಾದ ಎಂ.ಆರ್. ವೆಂಕಟೇಶ್, ವಕೀಲರ ಸಂಘದ ಮಾಜಿ ಅಧ್ಯಕ್ಷ ಪುಟ್ಟೇಗೌಡ, ಕೆಎಂಎಫ್ ಮಾಜಿ ಅಧ್ಯಕ್ಷ ದಿಬ್ಬೂರು ಜಯಣ್ಣ ಮುಂತಾದವರಿದ್ದಾರೆ.


ಇದಲ್ಲದೆ ಪ್ರೊ. ಮಲ್ಲಯ್ಯ ಕೂಡ ತಮ್ಮದೇ ಪ್ರತ್ಯೇಕ ಸಿಂಡಿಕೇಟ್ ಮಾಡಿಕೊಂಡಿದ್ದು ರಾಮನಗರದಲ್ಲಿ ಕುಮಾರಸ್ವಾಮಿ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಮರಿದೇವರು, ದೇವನಹಳ್ಳಿಯ ಶಿಕ್ಷಣ ಸ್ಥಾಪಕ ಪಿಳ್ಳಾಂಜಿನಪ್ಪ ಮತ್ತು ಡಾ. ನಾರಾಯಣ ಈ ಪೈಕಿ ಪ್ರಮುಖರು. ಜೊತೆಗೆ ಭುವನೇಶ್ವರಿ ಮಹಿಳಾ ಸಂಘದ ಮಾದೇವಮ್ಮ ಕೂಡ ಪ್ರೊ. ಮಲ್ಲಯ್ಯನವರ ಸಿಂಡಿಕೇಟಿನ ಜೊತೆ ಗುರುತಿಸಿಕೊಳ್ಳಬಹುದು. ಸದ್ಯ ಕೆಂಚಪ್ಪಗೌಡನ ವಿರುದ್ಧ ಅಸ್ತಿತ್ವದಲ್ಲಿರುವ ಈ ಮೂರು ಸಿಂಡಿಕೇಟುಗಳಲ್ಲದೆ ಚಂದ್ರಶೇಖರ್ ಎಂಬಾತನ ಹೊಸ ಸಿಂಡಿಕೇಟು ಕೂಡ ಸಂಘಟನೆಗೊಳ್ಳತೊಡಗಿದೆ. ಇದಲ್ಲದೆ ಅರಕಲಗೂಡಿನ ರೈತನಾಯಕ ಮತ್ತು ಆಲೂಗಡ್ಡೆ ಬೆಳೆಗಾರರ ಸಂಘಟಕ ಯೋಗಾರಮೇಶ್ ನೇತೃತ್ವದ ಮಗದೊಂದು ಸಿಂಡಿಕೇಟೂ ತಲೆಎತ್ತುವ ಸಾಧ್ಯತೆಯಿದೆ.


ವಿಪರ್ಯಾಸವೆಂದರೆ ಈ ರೀತಿ ಸಿಂಡಿಕೇಟುಗಳು ಅತಿಯಾದಷ್ಟೂ ಅದು ಲೂಟಿಕೋರರ ಪಾಲಿಗೆ ವರದಾನದಂತೆಯೆ. ಸಂಘದ ಉದ್ಧಾರಕ್ಕಾಗಿ ಜೀವ ತೇದವರು ಒಬ್ಬಿಬ್ಬರಲ್ಲ, ಅಂಥವರು ಕಟ್ಟಿದ ಹುತ್ತಕ್ಕೆ ಹಾವು ಸೇರಿಕೊಂಡಂತೆ ಕೆಂಚಪ್ಪಗೌಡನ ಮುಷ್ಟಿಕೂಟದಿಂದ ಸಂಘವನ್ನು ಕಾಪಾಡುವ ಬಗ್ಗೆ ಪ್ರೊ. ನಾಗರಾಜ್, ಅಪ್ಪಾಜಿಗೌಡರಂಥವರು ಹೊಣೆಗೇಡಿಗಳಾಗದೆ ಜವಾಬ್ದಾರಿಯಿಂದ ವರ್ತಿಸುವುದೊಂದೇ ಆ ಜನಾಂಗದ ಪಾಲಿನ ಆಶಾಕಿರಣ.

ಇನ್ನೂ ಕಾಲ ಮಿಂಚಿಲ್ಲ.

■ ರಾ.ಸೋಮನಾಥ್

ಬಚ್ಚೇಗೌಡನ ಹಂತಕ ಪಡೆಯೂ ಆರ್. ಅಶೋಕರ ರಿಯಲ್ ಎಸ್ಟೇಟ್ ಕೂಟವೂ






ಒಕ್ಕಲಿಗರ ಸಂಘದ ಸಕಲ ದುರಂತಗಳಿಗೆಲ್ಲ ಅನಾದಿಕಾಲದಿಂದಲೂ ತನ್ನದೇ ಕಾಣಿಕೆ ಸಲ್ಲಿಸುತ್ತಲೇ ಬಂದ ಹೊಸಕೋಟೆಯ ರಕ್ತಪಿಪಾಸು ಬಚ್ಚೇಗೌಡನ ಜೊತೆ ಈಗ ಹೊಸ ಪಿಡುಗೊಂದು ಕೈಜೋಡಿಸುತ್ತಿದೆ!

ಅದು ಬಿಜೆಪಿಯ ಮಾಜಿ ಡಿಸಿಎಂ ಅಶೋಕ್‌ರ ಖಾಸಾ ತಮ್ಮ ರವಿ ಎಂಬ ರಿಯಲ್ ಎಸ್ಟೇಟ್ ಖದೀಮನ ಎಂಟ್ರಿ!


ನಿನ್ನೆ ಮೊನ್ನೆಯತನಕ ಹೊಸಕೋಟೆಯಿಂದ ಸಂಘಕ್ಕೆ ಗೆದ್ದು ಬರುತ್ತಿದ್ದವನು ಬಚ್ಚೇಗೌಡರ ಖಾಸಾ ತಮ್ಮ ಗೋಪಾಲಗೌಡ. ಡ್ರಾಪೌಟ್ ಸೀಟ್ ದಂಧೆ, ಸಜ್ಜೆಪಾಳ್ಯದ ಜಮೀನು ಲೂಟಿಯಲ್ಲಿ ಲಜ್ಜೆಗೆಟ್ಟು ಕೈ ಜೋಡಿಸಿದ ಗೋಪಾಲಗೌಡನೇ ಸಂಘದ ಮಟ್ಟಿಗೆ ಬಚ್ಚೇಗೌಡರ ಪ್ರತಿನಿಧಿಯಾಗಿದ್ದ. ಅದೇನು ಎಡವಟ್ಟಾಯಿತೋ ಹುನ್ನಾರವೋ ಗೊತ್ತಿಲ್ಲ, ಈಗ ಗೋಪಾಲಗೌಡನನ್ನು ಬದಿಗೊತ್ತಿ ರಾಜಶೇಖರ ಗೌಡ ಎಂಬ ಹೊಸದೊಂದು ಆಸಾಮಿಯನ್ನು ಬಚ್ಚೇಗೌಡರ ಸಿಂಡಿಕೇಟ್ ಕಣಕ್ಕಿಳಿಸುತ್ತಿದೆ.

ಈ ರಾಜಶೇಖರಗೌಡ ಬೇರೆ ಯಾರೂ ಅಲ್ಲ, ಬಚ್ಚೇಗೌಡರ ಖಾಸಾ ಅಣ್ಣ ವೆಂಕಟರಮಣಗೌಡರ ಮಗ. ಒಂದಾನೊಂದು ಕಾಲಕ್ಕೆ ಹೊಸಕೋಟೆಯಲ್ಲಿ ರಕ್ತ ಹರಿಸುತ್ತಿದ್ದ ವಾಗಟ ಹತ್ಯಾಕಾಂಡದ ರೂವಾರಿ ಕೋಡಿಹಳ್ಳಿ ಸೊಣ್ಣಪ್ಪನ ಗರಡಿಯಲ್ಲಿ ಪಳಗಿದವನು ರಾಜಶೇಖರ ಗೌಡ. ನರಹಂತಕ ರಾಜಕಾರಣದಿಂದಲೇ ಬೆಳೆದುಬಂದ ರಾಜಶೇಖರಗೌಡನನ್ನು ಗೋಪಾಲಗೌಡನ ಬದಲಿಗೆ ಕೆಂಚಪ್ಪಗೌಡನ ಸಿಂಡಿಕೇಟಿನಿಂದ ಗೆಲ್ಲಿಸಲು ಬಚ್ಚೇಗೌಡರ ಪಡೆ ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದರೆ, ಮತ್ತೊಂದೆಡೆ ಮಾಜಿ ಡಿಸಿಎಂ ಆರ್. ಅಶೋಕ್ ತನ್ನ ತಮ್ಮ ರವಿಯನ್ನು ಕೂಡ ಇದೇ ಸಿಂಡಿಕೇಟಿನ ಮೂಲಕ ಸಂಘಕ್ಕೆ ಎಂಟ್ರಿ ಕೊಡಿಸುತ್ತಿದ್ದಾರೆ.



ಅಶೋಕ್ ತಮ್ಮ ರವಿ ಹುಟ್ಟಾ ನೆಲಗಳ್ಳ ಮತ್ತು ರಿಯಲ್ ಎಸ್ಟೇಟ್‌ನಿಂದಲೇ ಮುಂದಾದವನು. ಕಳೆದ ಬಾರಿ ಬ್ಯಾಟರಾಯನಪುರಕ್ಕೆ ಕೃಷ್ಣ ಭೈರೇಗೌಡರ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಿ ಸೋತ ರವಿಗೆ ಒಕ್ಕಲಿಗರ ಸಂಘದ ಡೈರೆಕ್ಟರಾಗುವ ದುರಾಶೆ. ನೂರಾರು ಒಕ್ಕಲಿಗರ ಭೂಮಿ ಕಿತ್ತವರು, ಒಕ್ಕಲಿಗರನ್ನೇ ಕೊಂದು ಓಟಿನ ಬೇಟೆಗಿಳಿದವರು, ರಿಯಲ್ ಎಸ್ಟೇಟ್ ರೌಡಿಗಳೆಲ್ಲ ಸಂಘದ ಡೈರೆಕ್ಟರ್‌ಗಳಾದರೆಂದರೆ ಇನ್ನು ಸಂಘ ಉದ್ಧಾರವಾಗಬೇಕೆಂದರೆ ಎಲ್ಲಿಂದ? ಇಂಥವರನ್ನು ಸಂಘದ ರಾಜಕಾರಣಕ್ಕೆ ಕರೆತರುವ ಕೆಂಚಪ್ಪಗೌಡ ಇನ್ನೆಂಥವನು? ■

ಮೋದಿ ಸಂಪುಟದಲ್ಲಿ ಭ್ರಷ್ಟರು ಹಾಗೂ ಕ್ರಿಮಿಗಳು



ಪುರುಷೋತ್ತಮ್ ಸೋಲಂಕಿ

ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಹೋರಾಡುವಂತೆ ನಟಿಸುತ್ತಾ, ತಾವು ಶುದ್ಧ ಚಾರಿತ್ರ್ಯದವರು ಎಂಬಂತೆ ಬಿಂಬಿಸಿಕೊಳ್ಳಲು ನರೇಂದ್ರಮೋದಿ ಕೂಟ ಇನ್ನಿಲ್ಲದ ಪಂಚರಂಗಿ ನಾಟಕಗಳನ್ನು ಹೂಡಿದ್ದಾರೆ. ಮೋದಿಯ ಪರ ವಹಾಲತ್ತು ವಹಿಸಿರುವ ಕಾರ್ಪೋರೇಟ್ ದೊರೆಗಳು ತಮ್ಮದೇ ಮಾಲಿಕತ್ವದಲ್ಲಿರುವ ಮಾಧ್ಯಮಗಳ ಮೂಲಕ ಮೋದಿಯನ್ನು ಬಿಂಬಿಸುತ್ತಿದ್ದಾರೆ. ಆದರೆ ಗುಜರಾತ್‌ನ ಸ್ಥಳೀಯ ಪತ್ರಿಕೆಗಳನ್ನೊಮ್ಮೆ ತಿರುವಿ ಹಾಕಿದರೆ ಮೋದಿ ಸಂಪುಟದ ತುಂಬಾ ಭ್ರಷ್ಟಾಚಾರಿಗಳು, ಕೊಲೆ-ಅತ್ಯಾಚಾರಗಳಂಥ ಕ್ರಿಮಿನಲ್ ಹಿನ್ನೆಲೆಯವರೇ ತುಂಬಿದ್ದಾರೆಂಬುದು ನಿಚ್ಚಳವಾಗಿ ಕಂಡು ಬರುತ್ತದೆ.

ಮೋದಿಯ ಆಪ್ತ ಹಾಗೂ ಆತನ ಸಂಪುಟದಲ್ಲಿ ಬಂದರು ಮತ್ತು ಮೀನುಗಾರಿಕೆ ಮಂತ್ರಿಯಾಗಿದ್ದ ಪುರುಷೋತ್ತಮ್ ಸೋಲಂಕಿ ತನ್ನ ಅಧಿಕಾರಾವಧಿಯುದ್ದಕ್ಕೂ ಎಸಗಿದ ಭ್ರಷ್ಟಾಚಾರಗಳಿಗೆ ಕೊನೆಮೊದಲಿಲ್ಲ.

ಈ ಮಂತ್ರಿ ತನ್ನ ಇಲಾಖೆಯ ವ್ಯಾಪ್ತಿಯಲ್ಲಿರುವ ಒಟ್ಟು 58 ಜಲಾಶಯಗಳಲ್ಲಿ ಮೀನುಗಾರಿಕೆ ನಡೆಸುವ ಗುತ್ತಿಗೆಯನ್ನು ಮನಸೋಇಚ್ಛೆ ತನ್ನ ಬಂಧು-ಬಾಂಧವರಿಗೆ ಅಗ್ಗದ ಮೊತ್ತಕ್ಕೆ ಮಂಜೂರು ಮಾಡಿದ. ಈ ರಹಸ್ಯ ಡೀಲಿಂಗ್‌ನಲ್ಲಿ ಕೋಟ್ಯಾಂತರ ಕಿಕ್‌ಬ್ಯಾಕ್ ಪಡೆದು ಸರ್ಕಾರಕ್ಕೆ ಪಂಗನಾಮ ಹಾಕಿದ ಈ ಉದಾಹರಣೆಯನ್ನೇ ನೋಡಿ.

3 ಲಕ್ಷ ಮೊತ್ತಕ್ಕೆ ವತ್ರಕ್ ಜಲಾಶಯದ ಗುತ್ತಿಗೆ ಪಡೆದಿದ್ದ ಜೆ.ಎಂ ಪಗ್ಗಿ ಎಂಬ ಗುತ್ತಿಗೆದಾರನಿಂದ ಈ ಮಂತ್ರಿ ಮಹಾಶಯ 30 ಲಕ್ಷಗಳ ಕಿಕ್‌ಬ್ಯಾಕ್ ಡಿಮ್ಯಾಂಡ್ ಮಾಡಿದ್ದಾನೆ. ಇವರಿಬ್ಬರ ಮುಸುಕಿನ ತಿಕ್ಕಾಟ ತಾರಕ್ಕೇರಿದ ಪರಿಣಾಮ ಸದರಿ ಗುತ್ತಿಗೆದಾರ ಈ ವಿಷಯವನ್ನು ಮಾಧ್ಯಮಗಳ ಮುಂದೆ ಬಹಿರಂಗಪಡಿಸಿದ್ದರಿಂದ ಅದು ಈಗ ಮೋದಿಗೆ ಫಜೀತಿಗಿಟ್ಟುಕೊಂಡಿದೆ.

ಹೆಚ್ಚಿನ ಮೊತ್ತದ ಬಿಡ್ ಪಾವತಿಸಿ ಗುತ್ತಿಗೆ ಪಡೆಯಲು ತಯಾರಿದ್ದ ಇತರ ಕೆಲವು ಗುತ್ತಿಗೆದಾರರು ಈ ಹಗರಣವನ್ನು ಹೈಕೋರ್ಟ್‌ವರೆಗೂ ಒಯ್ದಿದ್ದರು. ಅವ್ಯವಹಾರ ರುಜುವಾತಾದ ಹಿನ್ನೆಲೆಯಲ್ಲಿ ಸೋಲಂಕಿ ಕೊಟ್ಟಿದ್ದ ಎಲ್ಲ ಗುತ್ತಿಗೆಗಳನ್ನು ರದ್ದುಪಡಿಸಿದ ಹೈಕೋರ್ಟ್ ಹೊಸದಾಗಿ ನಿಯಮಬದ್ಧ ಟೆಂಡರ್ ಪ್ರಕ್ರಿಯೆಗೆ ಚಾಲನೆ ನೀಡಿತ್ತು, ಹೊಸ ಟೆಂಡರ್ ಪ್ರಕ್ರಿಯೆಯಲ್ಲಿ ಒಂದೇ ವರ್ಷದಲ್ಲಿ 45 ಕೋಟಿಗಳ ಆದಾಯ ಸರ್ಕಾರದ ಬೊಕ್ಕಸ ಸೇರಿತು. ಇದೇ ಗುತ್ತಿಗೆಗೆ ಸೋಲಂಕಿ ನಿಗದಿ ಮಾಡಿದ್ದ ಮೊತ್ತ ಎಷ್ಟು ಗೊತ್ತೆ? ಕೇವಲ 2.42 ಕೋಟಿ ಮಾತ್ರ!! ಹೀಗೆ ಕೇವಲ 28 ಜಲಾಶಯಗಳ ಗುತ್ತಿಗೆ ಭ್ರಷ್ಟಾಚಾರದಲ್ಲಿ ಸರ್ಕಾರದ ಬೊಕ್ಕಸಕ್ಕೆ 420 ಕೋಟಿಗಳಷ್ಟು ನಷ್ಟವಾಗಿದೆಯೆಂಬ ಅಂಶ ಗುಜರಾತ್ ಹೈಕೋರ್ಟ್‌ನ ವಿಚಾರಣೆಯಲ್ಲೇ ಬಯಲಾಗಿದೆ.

ಈ ಭ್ರಷ್ಟ ಸೋಲಂಕಿಯನ್ನು ಭ್ರಷ್ಟಾಚಾರ ತಡೆ ಕಾಯಿದೆಯಡಿ ವಿಚಾರಣಾ ಪ್ರಕ್ರಿಯೆಗೊಳಪಡಿಸುವಂತೆ 2012ರ ಮಾರ್ಚ್ 30ರಂದು ಹೈಕೋರ್ಟ್ ಸ್ಪಷ್ಟ ಆದೇಶ ಹೊರಡಿಸಿದ್ದರೂ ಢೋಂಗಿ ದೇಶಭಕ್ತ ಮೋದಿ ಭ್ರಷ್ಟ ಸೋಲಂಕಿಯ ರಕ್ಷಣೆಗೆ ಕಟಿಬದ್ಧವಾಗಿ ನಿಂತುಬಿಟ್ಟಿದ್ದಾನೆ. ಅಷ್ಟು ಮಾತ್ರವಲ್ಲ; ಇದೇ ಭ್ರಷ್ಟನಿಗೆ 2012ರಲ್ಲಿ ಮತ್ತೆ ಬಿಜೆಪಿಯಿಂದ ಟಿಕೆಟ್ ಕೊಟ್ಟು ಭಾವನಗರ ಕ್ಷೇತ್ರದಿಂದ ಗೆಲ್ಲಿಸಿದ್ದಾನೆ. ಈತ ಹಾಲಿ ಮೋದಿ ಸಂಪುಟದಲ್ಲಿ ಕಾರ್ಮಿಕ ಮಂತ್ರಿ! ಇದು ಈ ದೇಶಭಕ್ತನ ನಿಜಹೂರಣ!

ಈ ಕೇಸನ್ನು ನಡೆಸುತ್ತಿರುವ ಹಿರಿಯ ವಕೀಲರಾದ ಮುಕುಲ್ ಸಿನ್ಹಾ ಮೋದಿ ಸರ್ಕಾರದ ವಿರುದ್ಧ ನ್ಯಾಯಾಂಗನಿಂದನೆ ಮೊಕದ್ದಮೆ ಹೂಡಿದ್ದಾರೆ. ನಮ್ಮ ದೇಶದ ನ್ಯಾಯ(ನಿ)ದಾನ ವ್ಯವಸ್ಥೆಯ ಬಗ್ಗೆ ವಿಶ್ವಾಸವಿಟ್ಟು ಮೋದಿ ಕೂಟ ನಿರಾಳವಾಗಿದೆ. ಆ ಮಾತು ಬೇರೆ.

ಕೇಸರಿ ಬಾವುಟ ಹಿಡಿದ ರೌಡಿ !!

ಸೋಲಂಕಿಯ ಭ್ರಷ್ಟಾಚಾರ ಮಾತ್ರವಲ್ಲ; ಆತನ ಕ್ರಿಮಿನಲ್ ಹಿನ್ನೆಲೆ ಕೂಡ ಬಹಳ ಕುತೂಹಲದಾಯಕವಾಗಿದೆ. ಈತನ ಕುಟುಂಬ ಅಮ್ರೇಲಿ ಜಿಲ್ಲೆಯ ಕುಗ್ರಾಮವೊಂದರಲ್ಲಿ ಇದ್ದ ಚೂರುಪಾರು ಭೂಮಿಯನ್ನು ನಂಬಿ ಬದುಕುತ್ತಿತ್ತು, ಆದರೆ ಪುರುಷೋತ್ತಮ ಸೋಲಂಕಿಗೆ ಭೂಮಿಯಲ್ಲಿ ಬೆವರಿಳಿಸುವ ಕಾಯಕ ಸುತರಾಂ ಇಷ್ಟವಿರಲಿಲ್ಲ, ಹಾಗಾಗಿ ಆತ 80ರ ದಶಕದಲ್ಲಿ ಪಟ್ಟಣ ಸೇರಿದ. ಹೀರಾಭಾಯಿ ಸೋಲಂಕಿ ಮತ್ತು ಭರತ್ ಸೋಲಂಕಿ ಎಂಬ ತನ್ನ ಸೋದರರ ಜೊತೆ ಗೂಡಿ ಒಂದು ಗ್ಯಾಂಗ್ ಕಟ್ಟಿಕೊಂಡು ಕಂಡೋರ ಆಸ್ತಿಗೆ ಬೇಲಿ ಸುತ್ತಿ, ಬೆದರಿಕೆ ಹಾಕಿ ಹಣ ವಸೂಲಿ ಮಾಡುವ ದಂಧೆಗಿಳಿದ. ಸುಮಾರು ಒಂದು ದಶಕ ಕಾಲ ನಾನಾ ರಾಜಕಾರಣಿಗಳ ಖಾಸಗಿ ಗೂಂಡಾರೀತಿಯಲ್ಲಿ ಬಳಕೆ ಆಗುತ್ತಿದ್ದ ಹಿರಿಯ ಸೋಲಂಕಿಯನ್ನು ಮುಂಬೈ ಭೂಗತ ಲೋಕ ಆಕರ್ಷಿಸಿತು. ಮುಂಬೈ ಗಲಭೆಗಳ ಬಗ್ಗೆ ವರದಿ ನೀಡಿರುವ ಶ್ರೀಕೃಷ್ಣ ಆಯೋಗದಲ್ಲೂ ಈತ ಪ್ರಮುಖ ಆರೋಪಿಯಾಗಿದ್ದಾನೆ.

ಆದರೆ ಮುಂಬೈ ಭೂಗತ ಜಗತ್ತಿನಲ್ಲಿ ತನ್ನ ಆಟ ನಡೆಯುವುದಿಲ್ಲವೆಂಬುದನ್ನು ಅನುಭವದಿಂದ ಕಂಡುಕೊಂಡ ಸೋಲಂಕಿ ಮತ್ತೆ 1995ರಲ್ಲಿ ತಾಯ್ನಾಡಿಗೆ ಮರಳಿದ. ಮೊದಲಿಗೆ ಭಾವನಗರದಲ್ಲಿ ಸುಮಾರು 100 ಮನೆಗಳ ಸಂಪರ್ಕವಿರುವ 'ಸೋ ಲಕ್ಕಿ ಕೇಬಲ್ ನೆಟ್‌ವರ್ಕ್' ಎಂಬ ಹೆಸರಿನಲ್ಲಿ ಹೊಸ ವ್ಯಾಪಾರ ಶುರು ಮಾಡಿಕೊಂಡ. ಭಾವನಗರದಲ್ಲಿ ಕೇಬಲ್ ವ್ಯವಹಾರ ನಡೆಸುತ್ತಿದ್ದವರ ಮೇಲೆ ತಮ್ಮ ಗೂಂಡಾಶಕ್ತಿ ಬಳಸಿ ಓಡಿಸುವಲ್ಲಿ ಯಶಸ್ವಿಯಾದ ಸೋಲಂಕಿ ಗ್ಯಾಂಗ್ ಈಗ ಇಡೀ ಭಾವನಗರದ ಶೇಕಡ 70ರಷ್ಟು ಕೇಬಲ್ ವಹಿವಾಟನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

ಸೋಲಂಕಿ ಸೋದರರು ಅಷ್ಟಕ್ಕೆ ನಿಲ್ಲುವ ಜಾಯಮಾನದವರಲ್ಲ. ಇನ್ನೂ ಉತ್ತಮ ಅವಕಾಶಕ್ಕಾಗಿ ಕಾಯುತ್ತಿದ್ದ ಈ ಸೋದರರನ್ನು ಬಿಜೆಪಿ ಪಕ್ಷ ಬಾಚಿ ತಬ್ಬಿಕೊಂಡಿತು. ಯಾಕೆಂದರೆ ಈ ಸೋದರರ ಹಿಂದೆ ಹಿಂದುಳಿದ ಕೋಲಿ ಜನಾಂಗದ ದೊಡ್ಡ ಮತಬ್ಯಾಂಕ್ ಇತ್ತು. ಪರಿಣಾಮ 1998ರಲ್ಲಿ ಬಿಜೆಪಿ ಟಿಕೆಟ್ ಮೇಲೆ ಗೆದ್ದ ಸೋಲಂಕಿ ಮಂತ್ರಿಯೂ ಆಗಿಬಿಟ್ಟ. ಆ ಸಂದರ್ಭದಲ್ಲಿ ಆತನ ಮೇಲೆ ಮುಂಬೈನ ವಿವಿಧ ಠಾಣೆಗಳಲ್ಲಿ 8 ಕ್ರಿಮಿನಲ್ ಕೇಸುಗಳಿದ್ದವು.

ಸೋಲಂಕಿ ಇಷ್ಟಕ್ಕೆ ತೃಪ್ತರಾಗಲಿಲ್ಲ; ಮೋದಿಯ ಒಡನಾಟವನ್ನು ಬಳಸಿಕೊಂಡು ತನ್ನ ಸೋದರ ಹೀರಾಭಾಯಿ ಸೋಲಂಕಿಗೂ ಬಿಜೆಪಿ ಟಿಕೆಟ್ ಗಿಟ್ಟಿಸಿದ್ದಾನೆ. ಹೀಗೆ 20 ವರ್ಷದಿಂದಲೂ ಆತ ರಾಜುಲಾ ಕ್ಷೇತ್ರದಿಂದ ಬಿಜೆಪಿಯನ್ನು ಪ್ರತಿನಿಧಿಸುತ್ತಾ ತನ್ನ ದೇಶಭಕ್ತ ಕಾರ್ಯವನ್ನು ಎಗ್ಗಿಲ್ಲದೆ ಮುಂದುವರೆಸಿದ್ದಾನೆ. ಒಬ್ಬ ಮಂತ್ರಿ ಮತ್ತೊಬ್ಬ ಶಾಸಕ- ಹೀಗೆ ಇಬ್ಬರು ಸೋದರರನ್ನು ಪಡೆದಿರುವ ಭಾಗ್ಯಶಾಲಿ ಭರತ್ ಸೋಲಂಕಿ ರಿಯಲ್ ಎಸ್ಟೇಟ್, ಕೇಬಲ್ ನೆಟ್ ವರ್ಕ್ ಲೋಕವನ್ನು ಕಬ್ಜಾಗೆ ತೆಗೆದುಕೊಂಡಿದ್ದಾನೆ. ಈತನ ಮೇಲೆ ಹತ್ತಾರು ಕ್ರಿಮಿನಲ್ ಕೇಸುಗಳ ಚರಿತ್ರೆಯೇ ಇದೆ.

ತನ್ನ ಪ್ರತಿಸ್ಪರ್ಧಿ ಕೇಬಲ್ ಆಪರೇಟರ್ ಒಬ್ಬನ ಕೊಲೆಯತ್ನದಲ್ಲಿ ಭರತ್ ಸೋಲಂಕಿ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದು ಅರೆಸ್ಟ್ ಆಗಿದ್ದ. ಆಗಿನ ಬಿಜೆಪಿ ಗೃಹಮಂತ್ರಿ ಹರೆನ್ ಪಾಂಡ್ಯ ತಮ್ಮ ಪಕ್ಷದಲ್ಲಿರುವ ಕ್ರಿಮಿನಲ್ ಹಿನ್ನೆಲೆಯವರನ್ನು ನಿಯಂತ್ರಿಸಬೇಕೆಂದು ವರಿಷ್ಠರ ಮೇಲೆ ಒತ್ತಡ ಹಾಕಿ ಮಂತ್ರಿಸ್ಥಾನಕ್ಕೆ ರಾಜೀನಾಮೆ ಕೊಟ್ಟು ದೊಡ್ಡ ರಾದ್ಧಾಂತವಾಗಿತ್ತು, 2003ರಲ್ಲಿ ಇದೇ ಹರೇನ್ ಪಾಂಡ್ಯ ನರೇಂದ್ರಮೋದಿಯನ್ನು ವಿರೋಧಿಸಿ ಸಾಕಷ್ಟು ಸುದ್ದಿ ಮಾಡಿದ್ದರು. ಈ ವಿವಾದ ಬಿಸಿಯೇರಿದ್ದಾಗಲೇ "ಅಪರಿಚಿತ"ರ ಗುಂಡಿಗೆ ಬಲಿಯಾಗಿಹೋಗಿದ್ದು ಈಗ ಇತಿಹಾಸ.

2000ನೇ ಇಸವಿ ಜೂನ್ 17ರ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಈ ಸೋಲಂಕಿ ಸೋದರರ ಬಗ್ಗೆ ಇನ್ನೂ ಅನೇಕ ವಿವರಗಳನ್ನೊಳಗೊಂಡ ಲೇಖನ ಪ್ರಕಟವಾಗಿದೆ. ನರಹಂತಕ ಮೋದಿಯ ಸುತ್ತಾ ಇಂಥಾ ಕ್ರಿಮಿನಲ್‌ಗಳೇ ತುಂಬಿರುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ.

ಈ ಬಾರಿಯ ಚುನಾವಣೆಯಲ್ಲಿ ಆಯೋಗದ ಮುಂದೆ ಈ ಕ್ರಿಮಿನಲ್ ಮಂತ್ರಿ ಸೋಲಂಕಿ ಘೋಷಿಸಿಕೊಂಡ ಸ್ವಂತ ಆಸ್ತಿ 37 ಕೋಟಿ! ತಮ್ಮನ ಹೆಸರಿನಲ್ಲಿರುವ ಆಸ್ತಿ ಸೇರಿ ಒಟ್ಟು 71 ಕೋಟಿ!!

ಇದು ಬಿಜೆಪಿ ಮತ್ತು ಮೋದಿಯ ಅಭಿವೃದ್ಧಿ ಮಾದರಿಗೆ ಒಂದು ಒಳ್ಳೆಯ ಉದಾಹರಣೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಭಿನ್ನಮತೀಯರನ್ನು ಮೋದಿ ಹತ್ತಿಕ್ಕಿದ ಪರಿ

02⏮

ದುರ್ಘಟನೆ ಸಂಭವಿಸಿದ ರಾತ್ರಿ ಮೋದಿ ಮನೆಯಲ್ಲಿ ನಡೆದ ಸಭೆಯಲ್ಲಿ ಏನೆಲ್ಲ ಮಾತುಕತೆ ನಡೆಯಿತೆಂದು ವಿವರಿಸಿದರು. ಅಂದಿನ ಸಭೆಯಲ್ಲಿ ಹಿರಿಯ ಪೊಲೀಸ್ ಮತ್ತು ಗುಪ್ತದಳದ ಅಧಿಕಾರಿಗಳು ಉಪಸ್ಥಿತರಿದ್ದರು. ಅವರನ್ನುದ್ದೇಶಿಸಿ ಮಾತಾಡಿದ ಮೋದಿ, ಮರುದಿನ ಗೋಧ್ರಾ ವಿಷಯದಲ್ಲಿ ನ್ಯಾಯ ದೊರಕಲಿದೆ; ಆದುದರಿಂದ "ಹಿಂದೂಗಳ ಪ್ರತಿಕ್ರಿಯೆ"ಗೆ ಅಡ್ಡಿಪಡಿಸಬೇಡಿರೆಂದು ಪೊಲೀಸರಿಗೆ ಆದೇಶಿಸಿದ ಎನ್ನಲಾಗಿದೆ.'

ಪಾಂಡ್ಯ ವಿರುದ್ಧ ಪಕ್ಷದ ಶಿಸ್ತು ಉಲ್ಲಂಘನೆಯ ಆರೋಪ ಹೊರಿಸಿದ ಮೋದಿ ಎರಡು ತಿಂಗಳಲ್ಲಿ ಆತ ರಾಜೀನಾಮೆ ಸಲ್ಲಿಸುವಂತೆ ಮಾಡಿದ. ಮೋದಿಯ ದ್ವೇಷ ಅಲ್ಲಿಗೆ ಮುಗಿಯಲಿಲ್ಲ, ಪಾಂಡ್ಯ ಅಂದು ತನಗೆ ನಿರಾಕರಿಸಿದ್ದ ಎಲ್ಲಿಸ್‌ಬ್ರಿಜ್ ಕ್ಷೇತ್ರವನ್ನು ಮುಂಬರುವ ಡಿಸೆಂಬರ್ 2002ರ ಚುನಾವಣೆಗಳ ವೇಳೆ ಆತನಿಂದ ಕಿತ್ತುಕೊಳ್ಳಲು ನಿರ್ಧರಿಸಿದ. ಆರೆಸ್ಸೆಸ್, ಬಿಜೆಪಿ ವರಿಷ್ಠರ ಆಕ್ಷೇಪಗಳಿಗೆ ಸೊಪ್ಪುಹಾಕದೆ ತಾನಂದುಕೊಂಡಂತೆ ಮಾಡಿದ ಕೂಡ.

ನವೆಂಬರ್ ಕೊನೆಯಲ್ಲಿ ಆರೆಸೆಸ್‌ನ ಮದನ್ ದಾಸ್ ದೇವಿ ಎಂಬಾತ ಸರಸಂಘಚಾಲಕ ಕೆ.ಎಸ್.ಸುದರ್ಶನ್, ಮೋಹನ್ ಭಾಗ್ವತ್, ಅಡ್ವಾನಿ, ವಾಜಪೇಯಿ ಮೊದಲಾದವರ ಸಂದೇಶದೊಂದಿಗೆ ಮೋದಿ ಮನೆಗೆ ಬಂದಿಳಿದ. 'ವಾದ ಸಾಕು, ಚುನಾವಣೆಗೆ ಮುನ್ನ ಪಕ್ಷದಲ್ಲಿ ಒಡಕು ಬೇಡ, ಪಾಂಡ್ಯರ ಕ್ಷೇತ್ರವನ್ನು ಆತನಿಗೆ ಮರಳಿಸು' ಎಂಬ ಆ ಸಂದೇಶ ಮೋದಿ ಮೇಲೆ ಪರಿಣಾಮ ಬೀರಿಲ್ಲ, ದೇವಿ ತಡರಾತ್ರಿ ಸುಮಾರು 3 ಗಂಟೆ ತನಕ ಪ್ರಯತ್ನಿಸಿದರೂ ಮೋದಿ ತನ್ನ ನಿರ್ಧಾರ ಬದಲಿಸಲೊಪ್ಪಲಿಲ್ಲ, ಸದ್ಯದಲ್ಲೇ ದಿಲ್ಲಿಯಿಂದ ದೂರವಾಣಿ ಕರೆಗಳ ಜಡಿಮಳೆ ಸುರಿಯಲಿರುವುದನ್ನು ನಿರೀಕ್ಷಿಸಿದ ಮೋದಿ ಕೂಡಲೆ ಗಾಂಧಿನಗರದ ಸಿವಿಲ್ ಆಸ್ಪತ್ರೆಗೆ ಅಡ್ಮಿಟ್ ಆದ. ಪಾಂಡ್ಯ ಸೀದಾ ಆಸ್ಪತ್ರೆಗೆ ಹೋಗಿ 'ಹೇಡಿಯಂತೆ ಬಿದ್ದುಕೊಳ್ಳಬೇಡ, ನನಗೆ "ಇಲ್ಲ" ಎನ್ನುವಷ್ಟು ಧೈರ್ಯ ತೋರಿಸು' ಎಂದರೂ ಮೋದಿ ಜಗ್ಗಲಿಲ್ಲ, ಅಂತಿಮವಾಗಿ ದಿಲ್ಲಿಯ ನಾಯಕರು ಮೋದಿಗೆ ತಲೆಬಾಗಿದರು. ಆಸ್ಪತ್ರೆಯಲ್ಲಿ ಎರಡು ದಿನ ಕಳೆದು ಹೊರಬಂದ ಮೋದಿ ಪಾಂಡ್ಯರ ಎಲ್ಲಿಸ್‌ಬ್ರಿಜ್ ಕ್ಷೇತ್ರವನ್ನು ಹೊಸ ಅಭ್ಯರ್ಥಿಯೊಬ್ಬನಿಗೆ ನೀಡಿ ತಾನು ಬೇರೊಂದು ಕ್ಷೇತ್ರದಿಂದ ಸ್ಪರ್ಧಿಸಿ ವಿಜಯಿಯಾದ.

ಮೋದಿಯ ಗುಣವನ್ನು ಚೆನ್ನಾಗಿ ಅರಿತಿದ್ದ ಪಾಂಡ್ಯ ದಿಲ್ಲಿ, ನಾಗಪುರಗಳ ವರಿಷ್ಠರನ್ನೆಲ್ಲ ಭೇಟಿ ಮಾಡಿದರು. ಹೇಗೆ ಮೋದಿ ತನ್ನ ವೈಯಕ್ತಿಕ ಲಾಭಕ್ಕೋಸ್ಕರ ಆರೆಸ್ಸೆಸ್ ಮತ್ತು ಬಿಜೆಪಿಯನ್ನು ವಿನಾಶದಂಚಿಗೆ ಕೊಂಡೊಯ್ಯಲಿರುವನೆಂದು ವಿವರಿಸಿದರು. ಕೊನೆಗೆ ಪಾಂಡ್ಯರನ್ನು ದಿಲ್ಲಿಗೆ ಕರೆಸಿ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಸಮಿತಿಯ ಸದಸ್ಯ ಅಥವಾ ವಕ್ತಾರನನ್ನಾಗಿ ಮಾಡಲು ನಿರ್ಧರಿಸಲಾಯಿತು. ಸುದ್ದಿ ತಿಳಿದ ಮೋದಿ ತನ್ನ ಶತ್ರು ಪಾಳಯದಲ್ಲಿರುವಾತ ದಿಲ್ಲಿಗೆ ಹೋದರೆ ತನಗಾಗಲಿರುವ ಹಾನಿಯನ್ನು ಊಹಿಸಿ ಇದಕ್ಕೂ ಅಡ್ಡಗಾಲು ಹಾಕಲು ಯತ್ನಿಸದೆ ಇರಲಿಲ್ಲ.

ದಿಲ್ಲಿಗೆ ಸ್ಥಳಾಂತರಗೊಳ್ಳುವಂತೆ ಆದೇಶಿಸುವ ಫ್ಯಾಕ್ಸ್ ಸಂದೇಶವೊಂದು ಕೈಸೇರಿದ ಮರುದಿನ (26 ಮಾರ್ಚ್ 2003) ಪಾಂಡ್ಯ ರಹಸ್ಯಾತ್ಮಕವಾಗಿ ಕೊಲೆಗೀಡಾದರು. ಗುಜರಾತ್ ಪೊಲೀಸರು ತಕ್ಷಣ ಇದು ಪಾಕಿಸ್ತಾನದ ಐಎಸ್‌ಐ, ಲಷ್ಕರಿ-ಎ-ತೊಯ್ಬಾ ಮತ್ತು ಭೂಗತ ಪಾತಕಿ ದಾವೂದ್ ಇಬ್ರಾಹಿಂ ಒಟ್ಟಾಗಿ ನಡೆಸಿದ ಹತ್ಯೆ ಎಂದು ಘೋಷಿಸಿದರು. ಸಿಬಿಐ ಕೂಡ ಅದೇ ಗಿಣಿಪಾಠ ಒಪ್ಪಿಸಿತು. 12 ಮಂದಿ ಮುಸ್ಲಿಮರನ್ನು ಬಂಧಿಸಿ ಅವರ ವಿರುದ್ಧ ಕೊಲೆ ಆರೋಪ ಹೊರಿಸಲಾಯಿತು. ಕೆಳನ್ಯಾಯಾಲಯದಲ್ಲಿ ವಿಚಾರಣೆ ನಡೆದ ಸಂದರ್ಭದಲ್ಲಿ ಪೊಲೀಸರು 'ಹತ್ಯೆಯಾಗುವಾಗ ಪಾಂಡ್ಯ ಕಾರಿನೊಳಗಿದ್ದರು; ಹಂತಕರು ಬಲಭಾಗದ ಕಿಟಕಿಯಿಂದ ಗುಂಡು ಹಾರಿಸಿದ್ದಾರೆ; ಗುಂಡು ಅವರ ಎಡಭಾಗದ ವೃಷಣಕ್ಕೆ ತಗುಲಿದೆ' ಎಂದು ವಾದಿಸಿದ್ದರು. ವಿಜ್ಞಾನ, ತರ್ಕ ಯಾವುದಕ್ಕೂ ನಿಲುಕದಂತಹ ವಾದವಿದು. ಎಂಟು ವರ್ಷಗಳ ಬಳಿಕ ಪ್ರಕರಣ ರಾಜ್ಯ ಹೈಕೋರ್ಟ್ ಮುಂದೆ ಬಂದಾಗ ತನಿಖೆಯ ಗುಣಮಟ್ಟವನ್ನು ಅತ್ಯಂತ ಕಟು ಶಬ್ದಗಳಲ್ಲಿ ಟೀಕಿಸಿದ ನ್ಯಾಯಾಲಯ ಇದೊಂದು ತಿರಸ್ಕಾರಯೋಗ್ಯ ಪ್ರಕರಣ ಎಂದಿದೆ. ಅಲಿ ಅಸ್ಗರ್ ಸೇರಿದಂತೆ ಎಲ್ಲ ಆರೋಪಿಗಳು ನಿರ್ದೋಷಿಗಳೆಂದು ತಿಳಿಸಿದೆ.

ಪಾಂಡ್ಯ ಚಲನವಲನಗಳ ಮೇಲೆ ಸದಾ ನಿಗಾ ಇರಿಸುವಂತೆ ಮುಖ್ಯಮಂತ್ರಿ ಕಚೇರಿಯಿಂದ ಗುಪ್ತದಳಕ್ಕೆ ಆದೇಶ ನೀಡಲಾಗಿತ್ತು, ಪಾಂಡ್ಯ ತಂದೆ ವಿಠಲ್‌ಭಾಯಿಯಂತೂ ಮೋದಿಯೆ ಅಪರಾಧಿ ಎಂದಿದ್ದಾರೆ. ಇತ್ತೀಚೆಗೆ ಪಾಂಡ್ಯ ಪತ್ನಿ ಜಾಗೃತಿ ವಿಶಾಖಪಟ್ಟಣದ ಜೈಲಿಗೆ ತೆರಳಿ ಅಲಿ ಅಸ್ಗರ್‌ನನ್ನು ಭೇಟಿಯಾಗಿದ್ದರು. 'ಆತ ಕೊಲೆಗಾರನಲ್ಲವೆಂದು ನನಗೆ ಖಚಿತವಾಗಿದೆ. ನನ್ನ ಪತಿಯ ಕೊಲೆ ಹಿಂದೆ ರಾಜಕೀಯ ಪಿತೂರಿ ಇದೆ. ಹೆಸರು ಹೇಳಲಿಚ್ಚಿಸದ ಕೆಲವು ವ್ಯಕ್ತಿಗಳ ಪಾತ್ರವನ್ನು ತನಿಖೆಗೊಳಪಡಿಸಬೇಕಾಗಿದೆ' ಎಂದಾಕೆ ಹೇಳುತ್ತಾರೆ.

ಆರಂಭದಲ್ಲಿ ಪಾಂಡ್ಯ ಕೊಲೆ ತನಿಖೆ ಮಾಡಿದ್ದು ಕ್ರೈಮ್ ಬ್ರಾಂಚ್. ತನಿಖಾಧಿಕಾರಿಯಾಗಿದ್ದವನು ನಕಲಿ ಎನ್‌ಕೌಂಟರ್ ಪ್ರಕರಣಗಳ ಪ್ರಮುಖ ಆರೋಪಿ ಡಿ.ಜಿ.ವಂಜಾರ. ಮುಂದೆ ತನಿಖೆ ಸಿಬಿಐಗೆ ಹಸ್ತಾಂತರಿಸಲ್ಪಟ್ಟಾಗ ನೆರವಿಗೋಸ್ಕರ ನಿಯೋಜಿಸಲಾದ ನಾನಾ ಚೂಡಾಸಮಾ ಎಂಬಾತನೂ ವಂಜಾರನ ನಿಕಟವರ್ತಿಗಳಲ್ಲೊಬ್ಬ, ಇವರಿಬ್ಬರೂ ಮೋದಿಯ ಬಲಗೈ ಬಂಟ ಅಮಿತ್ ಶಾ ನಡೆಸುತ್ತಿದ್ದ ಎನ್ನಲಾಗಿರುವ ಸುಲಿಗೆ ಮತ್ತಿತರ ಕಾನೂನುಬಾಹಿರ ದಂಧೆಗಳಲ್ಲಿ ಭಾಗೀದಾರರು. ತನಿಖೆಗಳು ಹಳ್ಳ ಹಿಡಿಯದೆ ಇನ್ನೇನಾಗಬೇಕು.

• ಸುರೇಶ್ ಭಟ್ ಬಾಕ್ರಬೈಲ್

ಕಂಡಹಾಗೆ...

03⏮

ಆಚರಣೆಗಳನ್ನು ವ್ಯಕ್ತಿಗಳಿಂದ ಮಾಡಿಸುವುದಕ್ಕೆ ಅಥವಾ ವ್ಯಕ್ತಿಗಳಿಗೆ ತೀವ್ರ ಹಣಕಾಸು ನಷ್ಟ ಉಂಟಾಗುವುದಕ್ಕೆ ಕಾರಣವಾಗುವ ಹಾನಿಕರ ಭವಿಷ್ಯ ನುಡಿಯುವುದು.

• ಜ್ವಾಲೆಯನ್ನು ಬರೀ ಕೈಗಳಿಂದ ಮುಟ್ಟುವಂತೆ ಒತ್ತಾಯಿಸುವ ರೀತಿಯ ದೈಹಿಕ ಅಥವಾ ಮಾನಸಿಕ ಹಾನಿಗೆ ಒಳಪಡಿಸುವ ಮೂಲಕ ಮಾಡುವ ಯಾರೇ ವ್ಯಕ್ತಿಯ ಅಪರಾಧವನ್ನು ಅಥವಾ ನಿರಪರಾಧಿತ್ವವನ್ನು ಘೋಷಿಸುವುದು.


ಈ ಪಟ್ಟಿಯನ್ನು ಓದುತ್ತಿರುವಾಗಲೇ ಯಾವ ಕಾರಣಕ್ಕೆ ಹಿಂದೂತ್ವವಾದಿಗಳು ಇದನ್ನು ವಿರೋಧಿಸುತ್ತಿದ್ದಾರೆ ಎಂಬ ಅರಿವು ನಿಮಗಾಗಿರಬೇಕಲ್ಲವೇ? ಈ ವಿಧೇಯಕವು ಕಾನೂನಾದರೆ ಮೊದಲು ಜೈಲು ಪಾಲಾಗುವುದು ಮಡೆಸ್ನಾನದಂತಹ ಮೌಢ್ಯವನ್ನು ಬೆಂಬಲಿಸುವ, ಜಾತಿ ಹೆಸರಲ್ಲಿ ಪಂಕ್ತಿ ಭೇದ ಮಾಡುವ ಪೇಜಾವರಶ್ರೀಗಳು ಮತ್ತು ಅವರ ಹಿಂಬಾಲಕರು. ಈ ಕಾರಣಕ್ಕೇ ಅವರೆಲ್ಲ ಸೇರಿ 'ಹಿಂದೂ ಧರ್ಮದ ನಾಶ', 'ಹಿಂದೂ ಸಂಸ್ಕೃತಿಯ ಪತನ', 'ನಂಬಿಕೆಗಳ ಮೇಲೆ ದಾಳಿ' ಎಂದೆಲ್ಲ ಬೊಬ್ಬೆ ಹಾಕುತ್ತಿರುವುದು.

ಈ ವಿಧೇಯಕದಲ್ಲೇ ಹೇಳಿರುವಂತೆ "21ನೇ ಶತಮಾನದ ಈ ಆಧುನಿಕ ಕಾಲದಲ್ಲಿಯೂ ನಮ್ಮ ಸಮಾಜದಲ್ಲಿ ಮೂಢನಂಬಿಕೆಗಳು, ಕಂದಾಚಾರಗಳು ತೀವ್ರಗತಿಯಲ್ಲಿ ಹೆಚ್ಚುತ್ತಿರುವುದು ಆತಂಕಕಾರಿ ವಿದ್ಯಮಾನವಾಗಿದೆ. ಹಳೆಯ ಪದ್ಧತಿಗಳ ಜೊತೆಗೆ, ಹೊಸಹೊಸ ಮೂಢನಂಬಿಕೆಗಳು ಆವಿಷ್ಕಾರಗೊಳ್ಳುತ್ತಿವೆ. ಮಾಧ್ಯಮಗಳು ಸಹ ಮೌಢ್ಯಗಳನ್ನು ಬಿತ್ತಿಬೆಳೆದು ಪೋಷಿಸುತ್ತಿವೆ. ಈ ಮೌಢ್ಯಗಳ ಕಾರಣಗಳಿಂದಾಗಿ ಅಸಹನೀಯ ಸಂಕಟಗಳಿಗೆ ಇಡೀ ಸಮಾಜ ಈಡಾಗಿದೆ. ಭಾರತದ ಸಂವಿಧಾನದ ವಿಧಿ 51-ಎ(ಹೆಚ್)ಗೆ ತಂದ 42ನೇ ತಿದ್ದುಪಡಿಯಲ್ಲಿ ವೈಜ್ಞಾನಿಕ ಚಿಂತನೆ, ಪ್ರಶ್ನಿಸುವ ಮನೋಭಾವ, ಮಾನವತಾವಾದ ಹಾಗೂ ಸಾಮಾಜಿಕ ಸುಧಾರಣೆಗಳ ಅಗತ್ಯವನ್ನು ಒತ್ತಿ ಹೇಳಲಾಗಿದೆ. ಜತೆಗೆ, ಹಿಂದೆ ಅನೂಹ್ಯವಾಗಿದ್ದ ಹಲವು ವಿಸ್ಮಯಗಳನ್ನು, ನಿಗೂಢಗಳನ್ನು ಆಧುನಿಕ ಕಾಲದಲ್ಲಿ ಎಲ್ಲರ ಅನುಭವಕ್ಕೆ ಬರುವ ಹಾಗೆ ವಿಜ್ಞಾನ ಆವಿಷ್ಕಾರಗೊಳಿಸುತ್ತಿದೆ. ಈ ಆವಿಷ್ಕಾರಗಳು ಈವರೆಗಿನ ಹಲವಾರು ರೂಢಿಗತ ಮೂಢನಂಬಿಕೆಗಳು ಮತ್ತು ಆಚರಣೆಗಳನ್ನು ಅವೈಜ್ಞಾನಿಕ-ಅಸಂಗತ ಎಂದು ಸಾಬೀತುಪಡಿಸಿವೆ."

ನಿಜವಾಗಲೂ ಮೂಢನಂಬಿಕೆಯನ್ನು ನಿರ್ಮೂಲನೆ ಮಾಡುವ ಮೂಲಕ ಒಂದು ಆರೋಗ್ಯಪೂರ್ಣ ಸಮಾಜವನ್ನು ಕಟ್ಟಿಕೊಳ್ಳಲು ಇಂತಹದ್ದೊಂದು ಕಾನೂನು ಜಾರಿಗೆ ಬರಬೇಕಿದೆ. ಕೆಲವರು ತಮ್ಮ ಹೊಟ್ಟೆಪಾಡಿಗಾಗಿ "ಇದು ನಮ್ಮ ಸಂಪ್ರದಾಯಕ್ಕೆ ವಿರೋಧಿ" ಎಂದು ಬೊಬ್ಬೆ ಹಾಕಿದರೆ, "ನಿಮ್ಮ ಹೊಟ್ಟೆ ಪಾಡಿಗಾಗಿ ಅಮಾಯಕರನ್ನು ಸುಲಭವಾಗಿ ವಂಚಿಸುವ, ಶೋಷಿಸುವ, ಕಿತ್ತು ತಿನ್ನುವ ನಿಮ್ಮ ಈ ಸಂಪ್ರದಾಯಕ್ಕೆ ಬದಲಾಗಿ ಚೆನ್ನಾಗಿ ದುಡಿದು ತಿನ್ನುವ ಕಾಯಕವನ್ನು ಮೈಗೂಡಿಸಿಕೊಳ್ಳಿ" ಎಂದು ಅವರ ಮುಖಗಳಿಗೆ ಕ್ಯಾಕರಿಸಿ ಉಗಿಯಬೇಕಲ್ಲವೇ?

●

ಅಥಣಿ: ಪ್ರಿನ್ಸಿಪಾಲ್ ದೇಗೌಡನ 'ಗೀವ್ ಅಂಡ್ ಟೇಕ್' ವಿಕೃತ ಚೇಷ್ಟೆ



ಅಥಣಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಿನ್ಸಿಪಾಲ್ ಎಸ್.ಬಿ. ದೇಗೌಡನಿಗೆ ಸಾರ್ವಜನಿಕರು ನೆಲಕ್ಕೆ ಕೆಡವಿಕೊಂಡು ಒದೆಯುವ ದಿನ ಹತ್ತಿರ ಬಂದಂತೆ ಕಾಣುತ್ತಿದೆ.

ಇದಕ್ಕೆ ಕಾರಣ ಈ ಪ್ರಿನ್ಸಿಪಾಲನು ತನ್ನ ಕಾಲೇಜು ವಿದ್ಯಾರ್ಥಿನಿಯರೊಂದಿಗೆ ನಡೆಸುತ್ತಿರುವ ವಿಕೃತ ಲೈಂಗಿಕ ಚೇಷ್ಟೆಗಳು!

ಪ್ರಿನ್ಸಿಪಾಲ್ ಆಗಿ ತನಗಿರುವ ಅಧಿಕಾರ ಬಳಸಿಕೊಂಡು ಈ ದೇಗೌಡ "ಪರೀಕ್ಷಾ ಪ್ರಶ್ನೆ ಪತ್ರಿಕೆ ಕೊಡುತ್ತೀನಿ, ಇಂಟರ್‌ನಲ್ ಎಕ್ಸಾಂನಲ್ಲಿ ಜಾಸ್ತಿ ಮಾರ್ಕ್ಸ್ ಬರುವ ಹಾಗೆ ಮಾಡುತ್ತೇನೆ" ಎಂದು ಆಮಿಷ ತೋರಿಸಿ ಕೆಲವು ವಿದ್ಯಾರ್ಥಿನಿಯರನ್ನು ತನ್ನ ವಿಕೃತ ಲೈಂಗಿಕ ಚೇಷ್ಟೆಗಳಿಗೆ ಬಳಸಿಕೊಳ್ಳಲು ಯತ್ನಿಸುತ್ತಿರುವ ಬಗ್ಗೆ ಸುದ್ದಿಗಳು ಹಬ್ಬಿವೆ.

ಜಮಖಂಡಿ ಮೂಲದವನಾದ ದೇಗೌಡ ಈ ಹಿಂದೆ ಜಮಖಂಡಿ ಕಾಲೇಜಿನಲ್ಲಿದ್ದಾಗಲೂ ಇದೇ ತರ ಆಮಿಷ ತೋರಿಸಿ ಕೆಲ ಹೆಣ್ಣು ಮಕ್ಕಳನ್ನು ದಾರಿ ತಪ್ಪಿಸಲು ಯತ್ನಿಸಿ ಅದೊಂದು ರಾದ್ಧಾಂತವಾಗಿತ್ತು. ರೊಚ್ಚಿಗೆದ್ದ ಜನ ಹೊಡೆದಾರೆಂದು ಹೆದರಿದ ದೇಗೌಡ ಅಥಣಿಗೆ ವರ್ಗಾ ಮಾಡಿಸಿಕೊಂಡು ಬಂದ. ಹಾಗೆ ಅಥಣಿಗೆ ಬಂದವನು ಹಳೆಯ ಘಟನೆಯಿಂದ ಪಾಠ ಕಲಿಯದೆ ಇಲ್ಲೂ ಹಳೇ ಚಾಳಿ ಮುಂದುವರೆಸುತ್ತಿದ್ದಾನೆ.

ಅಥಣಿ ಟೌನಿನ ಶಾಂತಿನಗರ ಬಡಾವಣೆಯಲ್ಲಿ ಒಂದು ಮನೆ ಮಾಡಿರುವ, ತಾನಿನ್ನೂ ಬ್ರಹ್ಮಚಾರಿ ಎಂದು ಡಂಗೂರ ಹೊಡೆದುಕೊಳ್ಳುವ ದೇಗೌಡನ ಮನೆಗೆ ಖವಟಿಕೊಪ್ಪದ ಆಂಟಿಯೊಬ್ಬರು ಪದೇಪದೇ ಬಂದು ಹೋಗುತ್ತಿರುತ್ತಾರೆ. ಆಕೆಗೆ ಅದೇನು ಕತೆ ಹೇಳಿ ನಂಬಿಸಿದ್ದಾನೋ ಗೊತ್ತಿಲ್ಲ. ಆದರೆ ತನ್ನದೇ ಕಾಲೇಜಿನ ವಿದ್ಯಾರ್ಥಿನಿಯರನ್ನು 'ಕ್ವಶ್ಚನ್ ಪೇಪರ್ ಕೊಡ್ತೀನಿ, ಕಂಪ್ಯೂಟರ್ ಕಲಿಸ್ತೀನಿ' ಎಂದು ಹೇಳುತ್ತಾ ತನ್ನ ಮನೆಗೆ ಕರೆದೊಯ್ಯಲು ಪ್ರಯತ್ನಿಸುತ್ತಿರುತ್ತಾನೆ. ಇತ್ತೀಚೆಗೆ ಇದೇ ರೀತಿ ಹೇಳಿ ವಿದ್ಯಾರ್ಥಿನಿಯೊಬ್ಬಳನ್ನು ತನ್ನ ಮನೆಗೆ ಒತ್ತಾಯದಿಂದ ಎಳೆದೊಯ್ಯಲು ನೋಡಿದಾಗ ಅದು ಬೇರೆಯವರಿಗೆಲ್ಲಾ ಗೊತ್ತಾಗಿ, ಹುಡುಗಿಯ ಮನೆಯವರೆಲ್ಲಾ ಬಂದು ಗಲಾಟೆ ಮಾಡಿದ್ದಾರೆ.


ಇಂತಹ ಪ್ರಕರಣ ನಡೆದರೂ ಯಾರೂ ಕಂಪ್ಲೆಂಟ್ ಕೊಡುವುದಿಲ್ಲವಾದ್ದರಿಂದ ಅಥಣಿ ಪೊಲೀಸರು ಕೈಕಟ್ಟಿ ಕುಳಿತಿದ್ದಾರೆ. ಇನ್ನು ಶಾಸಕರಿಗೆ ಹೇಳಿ ಪ್ರಿನ್ಸಿಪಾಲ್ ದೇಗೌಡನಿಗೆ ಬುದ್ಧಿ ಕಲಿಸೋಣವೆಂದರೆ ಆ ಶಾಸಕ ಲಕ್ಷ್ಮಣ ಸವದಿಯೇ ಹೇಳಿಕೇಳಿ ಪೋಲಿ!

ವಿಧಾನಸಭೆಯಲ್ಲಿಯೇ ಕೂತು ಮೊಬೈಲ್‌ನಲ್ಲಿ ಬ್ಲೂಫಿಲಂ ನೋಡುತ್ತಿದ್ದ ಭೂಪ.

ಪರಿಸ್ಥಿತಿ ಹೀಗಿರುವಾಗ ಅಥಣಿಯ ನಾಗರಿಕರು ಶಿಕ್ಷಣ ಇಲಾಖೆಗೇ ಒಂದು ಲಿಖಿತ ದೂರು ಕೊಡಲಿ, ಅಲ್ಲದೆ ಪ್ರಿನ್ಸಿಪಾಲ್ ದೇಗೌಡ ಇನ್ನೊಮ್ಮೆ ತನ್ನ ವಿದ್ಯಾರ್ಥಿನಿಯರೊಂದಿಗೆ 'ಕ್ವಶ್ಚನ್ ಪೇಪರ್ ಕೊಡ್ತೀನಿ, ಮನೆಗೆ ಬಾ' ಅಂತ ಕರೆದ ಸುದ್ದಿ ಕೇಳಿದ ತಕ್ಷಣ ಕಾಲೇಜಿಗೇ ಹೋಗಿ ಅವನ ಕಪಾಳಕ್ಕೆ ಹೊಡೆದು ಬುದ್ಧಿ ಕಲಿಸಬೇಕಿದೆ.

ದೇಗೌಡನ ಈ 'ಗೀವ್ ಅಂಡ್ ಟೇಕ್' ವಿಕೃತಿಗೆ ಅಥಣಿಯ ವಿದ್ಯಾರ್ಥಿನಿಯರು, ಯುವಜನರೇ ಬುದ್ಧಿ ಕಲಿಸಬಾರದೆ?

ಅಮಿತಾಬ್ ಬಚ್ಚನ್ ಹೆಸರಿನ ದುರ್ಬಳಕೆ



ಮೋದಿ ಬೆಂಬಲಿಗರು ಪ್ರಚಾರಕ್ಕಾಗಿ ಯಾವ ಮಟ್ಟಕ್ಕಿಳಿಯಲೂ ಹೇಸುವುದಿಲ್ಲ ಎಂಬುದಕ್ಕೆ ಒಂದು ಉದಾಹರಣೆ ಇಲ್ಲಿದೆ. ಮೋದಿ ಭಾರತದ ಪ್ರಧಾನಿಯಾಗುವುದಕ್ಕೆ ಅಮಿತಾಬ್ ಬಚ್ಚನ್ ಬೆಂಬಲವಿದೆ ಎಂಬರ್ಥದ ಮಾತುಗಳಿರುವ ವಿಡಿಯೊ ಒಂದು ಇದ್ದಕ್ಕಿದ್ದಂತೆ ಯೂಟ್ಯೂಬ್‌ನಲ್ಲಿ ಕಾಣಿಸಿಕೊಂಡಿದೆ. ವಿಡಿಯೊ ನೋಡಿದ ಹಿರಿಯ ನಟನಿಗೆ ಪಿತ್ತ ನೆತ್ತಿಗೇರಿದೆ. ಆತ ತಕ್ಷಣ ಟ್ವೀಟ್ ಮಾಡಿ "ನಕಲಿ! ನಕಲಿ!! ನಕಲಿ!!! ಈ ಘಟನೆಯಿಂದ ಏಕಕಾಲಕ್ಕೆ ಗಾಬರಿ, ಕೋಪ ಎರಡೂ ಆಗುತ್ತಿದೆ. ಇದನ್ನು ಎಲ್ಲರೂ ಖಂಡಿಸಬೇಕಾಗಿದೆ.... ವಿಷಯ ಹೀಗಿದೆ: 2007ರಲ್ಲೊಮ್ಮೆ ನಾನು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ 'ಲೀಡ್ ಇಂಡಿಯಾ' ಚಳವಳಿಯಲ್ಲಿ ಭಾಗವಹಿಸಿದ್ದೆ. ಆಗ ದೇಶದ ಖ್ಯಾತಿಯನ್ನು ಕೊಂಡಾಡಿದ್ದೆ. ಈಗ ಯಾರೋ ಅದೇ ಧ್ವನಿಮುದ್ರಣವನ್ನು ಕೆಲವು ಹೊಸಾ ದೃಶ್ಯಗಳ ಜತೆ ಜೋಡಿಸಿ ನಾನು ಶ್ರೀ ಮೋದಿಯನ್ನು ಹೊಗಳುತ್ತಿರುವಂತೆ ತೋರುವ ನಕಲಿ ವಿಡಿಯೊ ಸೃಷ್ಟಿಸಿ ಯೂಟ್ಯೂಬ್‌ನಲ್ಲಿ ಹರಿಬಿಟ್ಟಿದ್ದಾರೆ. ನನಗೆ ತಿಳಿಯದಂತೆ ನನ್ನ ಹೆಸರನ್ನು ದುರ್ಬಳಕೆ ಮಾಡಿಕೊಂಡ ಈ ಕಾನೂನುಬಾಹಿರ ಕೃತ್ಯದಿಂದ ನನಗೆ ಆಘಾತವಾಗಿರುವುದಷ್ಟೆ ಅಲ್ಲ ಸಿಟ್ಟೂ ಬಂದಿದೆ. ಇದು ಕಾಪಿರೈಟ್ ಕಾಯ್ದೆಯ ಉಲ್ಲಂಘನೆಯಾಗಿದೆ. ಇದನ್ನು ಮಾಡಿದವರ ವಿರುದ್ಧ ಕಾನೂನುಕ್ರಮ ಕೈಗೊಳ್ಳಲಿದ್ದೇನೆ" ಎಂದು ಗುಡುಗಿದರು. ಕೂಡಲೆ ಪ್ರತಿಕ್ರಿಯಿಸಿದ ನೂರಾರು ಬಚ್ಚನ್ ಅಭಿಮಾನಿಗಳು ತಮ್ಮ ನೆಚ್ಚಿನ ಹಿರಿಯ ನಟನ ಹೆಸರನ್ನು ಈ ರೀತಿ ದುರ್ಬಳಕೆ ಮಾಡಿದವರ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜೈಲು ಹಾದಿಯಲ್ಲಿ ಮೋದಿ ಸಂಪುಟ

ಸುದ್ದಿವಾಹಿನಿಗಳು ಮತ್ತು ಪತ್ರಿಕೆಗಳು ಯಾವುದೇ ಮಹತ್ವ ನೀಡದ ಎಷ್ಟೋ ವಾಸ್ತವಾಂಶಗಳು ಹಾಗೇ ಕಣ್ಮರೆಯಾಗಿಬಿಡುತ್ತಿವೆ. ಗುಜರಾತ್ ಹಾಗೂ ಮೋದಿಗೆ ಸಂಬಂಧಪಟ್ಟ ಇಂಥಾ ಕೆಲವು ಸ್ಫೋಟಕ ಸತ್ಯಾಂಶಗಳು ಇಲ್ಲಿವೆ. ಅವೇನೆಂದರೆ ಮೋದಿಯ ಆಪ್ತ ಮಿತ್ರರು ಹಾಗೂ ಆತನ ಸಂಪುಟ ಸಹೋದ್ಯೋಗಿಗಳು ಒಬ್ಬೊಬ್ಬರಾಗಿ ಜೈಲು ಸೇರುತ್ತಿದ್ದಾರೆ! ಹೀಗೆ ಮೋದಿಯ ಮಿತ್ರರು ಜೈಲು ಸೇರಿದ್ದು ಗುಜರಾತ್‌ನ ಸ್ಥಳೀಯ ನ್ಯಾಯಾಲಯಗಳ ಆದೇಶದ ಪ್ರಕಾರ!



ನೀರಾವರಿ ಮಂತ್ರಿ ಬಾಬು ಬೊಖಿರಿಯಾ.

ಇದೇ ವರ್ಷದ ಜೂನ್ 13ರಂದು ಗಾಂಧೀಜಿ ಹುಟ್ಟೂರಾದ ಪೋರಬಂದರ್‌ನ ನ್ಯಾಯಾಲಯ ಮೋದಿ ಸಂಪುಟದ ಹಿರಿಯ ಸಚಿವನೊಬ್ಬನಿಗೆ ಮೂರು ವರ್ಷ ಜೈಲು ಶಿಕ್ಷೆ ವಿಧಿಸಿ ಆದೇಶಿಸಿದೆ. ಆತನೇ ಜಲಸಂಪನ್ಮೂಲ ಖಾತೆಯ ಮಂತ್ರಿ ಬಾಬು ಬೊಖಿರಿಯ.

2006ರಲ್ಲಿ ದಾಖಲಾದ ಈ ಮೊಕದ್ದಮೆಯಲ್ಲಿ ಬಿಜೆಪಿ ಮಂತ್ರಿ ಬೊಖಿರಿಯ ಜೊತೆಗೆ ಆತನ ಮಿತ್ರ ಮಾಜಿ ಕಾಂಗ್ರೆಸ್ ಎಂಪಿ ಭರತ್ ಒಡೆದಾರ್ ಕೂಡ ಜೈಲು ಶಿಕ್ಷೆಗೆ ಗುರಿಯಾಗಿದ್ದಾನೆ. ಬಹಿರಂಗವಾಗಿ ಕಾಂಗ್ರೆಸ್ ಪಕ್ಷವನ್ನು ಖಂಡತುಂಡವಾಗಿ ವಿರೋಧಿಸುವ ಈ ಮಂದಿ ಆಂತರ್ಯದ ಅವ್ಯವಹಾರಗಳಲ್ಲಿ ಸಮಾನ ಪಾಲುದಾರರು ಎಂಬುದನ್ನು ಈ ಪ್ರಕರಣ ಸಾಬೀತುಪಡಿಸಿದೆ. ಈ ಭೂಪರು ಬಳ್ಳಾರಿ ರೆಡ್ಡಿ ಬ್ರದರ್ಸ್‌ನಂತೆ ಸರ್ಕಾರಿ ಭೂಮಿಯಲ್ಲಿ ಅಕ್ರಮ ಗಣಿಗಾರಿಕೆ ನಡೆಸಿದ್ದಲ್ಲದೆ, ಸೌರಾಷ್ಟ್ರ ಕೆಮಿಕಲ್ಸ್ ಲಿಮಿಟೆಡ್ ಕಂಪನಿಗೆ ಸೇರಿದ ಸುಮಾರು 55 ಕೋಟಿ ರೂ. ಮೌಲ್ಯದ ಅದಿರನ್ನು ಕಳ್ಳತನದಿಂದ ಸಾಗಿಸಿಬಿಟ್ಟಿದ್ದರು. ಹಾಗೆ ನೋಡಿದರೆ ನಮ್ಮ ಬೇಲಿಕೇರಿ ಬಂದರಿನಲ್ಲಿ ನಡೆದದ್ದು ಪಕ್ಕಾ ಗುಜರಾತ್ ಮಾದರಿ ಎನ್ನಲು ಯಾವುದೇ ಅಡ್ಡಿಯಿಲ್ಲ.

ಮೋದಿಯ ಆಪ್ತ ಮಂತ್ರಿ ಬೊಖಿರಿಯಾನ ಮೇಲೆ 2006ರಲ್ಲೇ ಕೋರ್ಟ್ ಅರೆಸ್ಟ್ ವಾರೆಂಟ್ ಹೊರಡಿಸಿತ್ತು. ಆದರೆ ಈತ ಪೊಲೀಸರಿಗೆ ಸಿಗದೆ ವಿದೇಶಗಳಲ್ಲಿ ತಲೆಮರೆಸಿಕೊಂಡಿದ್ದ. 2007ರ ಚುನಾವಣೆ ಘೋಷಣೆಯಾದ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ಶರಣಾಗಿ ಜಾಮೀನು ಪಡೆದು, ಎಲೆಕ್ಷನ್‌ನಲ್ಲಿ ಗೆದ್ದು ಬಂದಿದ್ದ. ಈತನ ಮೇಲೆ ಒಟ್ಟು 47 ಕ್ರಿಮಿನಲ್ ಮೊಕದ್ದಮೆಗಳು ಬಾಕಿಯಿವೆ.

ಈತನ ಇಂಥಾ ಎಲ್ಲಾ ಸಾಧನೆಗಳನ್ನು ಮೆಚ್ಚಿದ ನರೇಂದ್ರ ಮೋದಿ ಈತನಿಗೆ ಸಂಪುಟ ದರ್ಜೆಯ ಖಾತೆ ನೀಡಿ ಗೌರವಿಸಿದ್ದ. ಅಂದಹಾಗೆ ಸದರಿ ಅಕ್ರಮ ಗಣಿಗಾರಿಕೆ ಕೇಸಿನಲ್ಲಿ ಬೊಖಿರಿಯಾನ ಅಪರಾಧಗಳು ರುಜುವಾತಾದ ಹಿನ್ನೆಲೆಯಲ್ಲಿ ಪೋರಬಂದರ್‌ನ ನ್ಯಾಯಾಲಯ ಮೂರು ವರ್ಷಗಳ ಜೈಲುಶಿಕ್ಷೆ ವಿಧಿಸಿದೆ.

ಲಂಕೇಶರ ಮಿತ್ರ ಕೆಂಚಪ್ಪ ಇನ್ನಿಲ್ಲ

ಶಿವಮೊಗ್ಗೆಯ ಕಾಲೇಜಿನಲ್ಲಿ ಪಿ.ಲಂಕೇಶರ ಸಹಪಾಠಿಯಾಗಿದ್ದ, ಕೊನೆಯವರೆಗೂ ಇಸ್ಪೀಟ್ ಆಟದಲ್ಲಿ ಅವರಿಗೆ ಪ್ರತಿಸ್ಪರ್ಧಿಯಾಗಿದ್ದ ಕೆಂಚಪ್ಪನವರು ಕಳೆದ ಮಂಗಳವಾರ ತಮ್ಮ 79ನೇ ವಯಸ್ಸಿನಲ್ಲಿ ತೀರಿಕೊಂಡರು. ತಮ್ಮ ಕುಟುಂಬದೊಂದಿಗೆ ಕನ್ಯಾಕುಮಾರಿಗೆ ಪ್ರವಾಸ ಹೋಗಿದ್ದ ಕೆಂಚಪ್ಪನವರು ವಾಪಸ್ ಬರುವಾಗ ರೈಲಿನಲ್ಲೇ ತೀವ್ರ ಹೃದಯಾಘಾತಕ್ಕೆ ತುತ್ತಾಗಿ ತಮ್ಮ ಪ್ರಾಣ ತೊರೆದರು.

ಅರಣ್ಯ ಇಲಾಖೆಯಲ್ಲಿ ಹಿರಿಯ ಅಧಿಕಾರಿಯಾಗಿ ನಿವೃತ್ತಿ ಹೊಂದಿದ್ದ ಕೆಂಚಪ್ಪನವರು ಸರಳ ವ್ಯಕ್ತಿಯೂ, ಶುದ್ಧ ಹಸ್ತರೂ ಆಗಿದ್ದರು. ಅವರು ತಮ್ಮ ಪ್ರಾಮಾಣಿಕತೆಯಿಂದಲೇ ಇಲಾಖೆಯಲ್ಲಿ ಒಳ್ಳೆ ಹೆಸರು ಮಾಡಿದ್ದರು. ಈ ಕಾರಣಕ್ಕೆ ಅವರು ನಿವೃತ್ತಿ ಹೊಂದಿ ಹತ್ತಾರು ವರ್ಷಗಳಾಗಿದ್ದರೂ ಅವರ ಪಾರ್ಥೀವ ಶರೀರಕ್ಕೆ ಅಂತಿಮ ನಮನ ಸಲ್ಲಿಸಲು ಅರಣ್ಯ ಇಲಾಖೆಯ ಹಲವಾರು ಅಧಿಕಾರಿಗಳು ಮತ್ತು ಸಾಮಾನ್ಯ ನೌಕರರೂ ಹಾಜರಾಗಿದ್ದರು.

ಸಾಹಿತ್ಯಲೋಕದಿಂದ ಕೆಂಚಪ್ಪನವರು ದೂರ ಉಳಿದಿದ್ದರೂ ಅವರ ಬಗ್ಗೆ ಲಂಕೇಶರಿಗೆ ಅಪಾರ ಪ್ರೀತಿ ಮತ್ತು ಗೌರವ ಇತ್ತು. ಅವರಿಬ್ಬರು ಅದೆಷ್ಟು ಆಪ್ತ ಮಿತ್ರರಾಗಿದ್ದರೆಂದರೆ ವಾರಕ್ಕೆ ಮೂರು ಬಾರಿ ಇತರರೊಂದಿಗೆ ಜೊತೆಗೂಡಿ ಇಸ್ಪೀಟ್ ಆಡುತ್ತಿದ್ದರು. ಆ ಇಸ್ಪೀಟ್ ಸೆಶನ್‌ಗಳಲ್ಲಿ ಹರಟೆ, ಚರ್ಚೆ, ಕೀಟಲೆ, ಜಗಳ, ಪ್ರಚೋದನೆ, ಕಾಫಿ, ತಿಂಡಿ, ವಿಸ್ಕಿ ಎಲ್ಲವೂ ಇರುತ್ತಿದ್ದವು.

ಕೆಂಚಪ್ಪನವರಂತಹ ಸಭ್ಯ, ಸರಳ ಮತ್ತು ಪ್ರಾಮಾಣಿಕ ವ್ಯಕ್ತಿಗಳು ಈಗ ಸಿಗುವುದು ಕಷ್ಟ. ಅವರಿಗೆ ಪ್ರೀತಿಯ, ಗೌರವದ ನಮನ.

- ಗೌರಿ

ರಾಜ್ಯಾಂಗ V/s ಪಂಚಾಂಗ

ವಿಶೇಷ ಲೇಖನ

ಎ.ಕೆ.ಸುಬ್ಬಯ್ಯ



ಭಾರತೀಯ ಜನತಾ ಪಾರ್ಟಿಯವರು 2002ರ ಗುಜರಾತ್ ನರಮೇಧದ ರೂವಾರಿ ಎಂದೇ ಪರಿಚಿತವಾಗಿರುವ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯನ್ನು ಮುಂದಿನ ಲೋಕಸಭಾ ಚುನಾವಣೆಯಲ್ಲಿ ಪ್ರಧಾನ ಮಂತ್ರಿ ಸ್ಥಾನಕ್ಕೆ ತಮ್ಮ ಪಕ್ಷದ ಅಭ್ಯರ್ಥಿ ಎಂದು ಘೋಷಿಸಿದ್ದಾರೆ.

ಇಲ್ಲಿ ಪ್ರಧಾನ ಮಂತ್ರಿ ಸ್ಥಾನಕ್ಕೆ ಪಕ್ಷದ ಅಭ್ಯರ್ಥಿಯೆಂದರೇನು? ಬಿಜೆಪಿ ಪಕ್ಷದೊಳಗೆ ಪ್ರಧಾನ ಮಂತ್ರಿಯೆಂಬ ಹುದ್ದೆಯೊಂದಿದ್ದು, ಆ ಹುದ್ದೆಗೆ ಪಕ್ಷದೊಳಗೆ ನರೇಂದ್ರ ಮೋದಿ ಅಭ್ಯರ್ಥಿಯೆಂದಾದರೆ ಯಾರ ಆಕ್ಷೇಪವೂ ಇರಲಾರದು. ಆದರೆ ರಾಷ್ಟ್ರದ ಪ್ರಧಾನ ಮಂತ್ರಿ ಸ್ಥಾನಕ್ಕೆ ನರೇಂದ್ರ ಮೋದಿ ಬಿಜೆಪಿ ಅಭ್ಯರ್ಥಿಯೆನ್ನುವುದಾದರೆ, ಅಂತಹ ಘೋಷಣೆ ಅರ್ಥಹೀನವಾದುದೂ, ಅವಿವೇಕದ್ದೂ ಆಗುತ್ತದೆಂಬುದರಲ್ಲಿ ಎರಡು ಮಾತಿಲ್ಲ.

ಏಕೆಂದರೆ ಪ್ರಧಾನಿ ಸ್ಥಾನಕ್ಕೆ ನಮ್ಮ ಪ್ರಜಾಪ್ರಭುತ್ವದಡಿಯಲ್ಲಿ ಚುನಾವಣೆ ನಡೆಯುವುದಿಲ್ಲ, ದೇಶದ ಪ್ರಧಾನ ಮಂತ್ರಿಯನ್ನು ನಮ್ಮ ಜನ ಪ್ರಧಾನಿಯನ್ನು ಆರಿಸುವುದಿಲ್ಲ. ಜನತೆಯಿಂದ ಆರಿಸಲ್ಪಟ್ಟ ಪಾರ್ಲಿಮೆಂಟ್ ಸದಸ್ಯರೆಂಬ ಜನತಾ ಪ್ರತಿನಿಧಿಗಳು ಪ್ರಧಾನಿಯನ್ನು ಆರಿಸುತ್ತಾರೆ. ನಮ್ಮ ದೇಶದಲ್ಲಿ ಮುಂದೆ ನಡೆಯುವುದು ಪಾರ್ಲಿಮೆಂಟ್ ಚುನಾವಣೆ. ಪ್ರಧಾನ ಮಂತ್ರಿ ಚುನಾವಣೆಯಲ್ಲ. ನಡೆಯದಿರುವ ಪ್ರಧಾನ ಮಂತ್ರಿ ಚುನಾವಣೆಗೆ ಬಿಜೆಪಿ ಪಕ್ಷದಿಂದ ನರೇಂದ್ರ ಮೋದಿ ಅಭ್ಯರ್ಥಿಯೆಂದು ಘೋಷಿಸಲ್ಪಟ್ಟಿದ್ದಾನೆ. ಇಂತಹ ಬಿಜೆಪಿಯವರಿಗೆ ನಮ್ಮ ಪ್ರಜಾಪ್ರಭುತ್ವದ ಬಗ್ಗೆ ಅರಿವಿದೆಯಾ? ಅವರ ತಲೆ ನೆಟ್ಟಗಿದೆಯಾ? ಎಂದು ನಮ್ಮ ಪ್ರಜಾಪ್ರಭುತ್ವದ ಬಗ್ಗೆ ಕಿಂಚಿತ್ತಾದರೂ ಅರಿವುಳ್ಳ ಪ್ರತಿಯೊಬ್ಬರೂ ಪ್ರಶ್ನಿಸಬೇಕಾಗುತ್ತದೆ. ಇಂತಹ ಅರ್ಥಹೀನವಾದ ಅವಿವೇಕದ ಕಾರ್ಯಕ್ಕೆ ಮುಂದಾಗುವ ಸಾಮರ್ಥ್ಯ ನಮ್ಮ ದೇಶದಲ್ಲಿ ಭಾರತೀಯ ಜನತಾ ಪಾರ್ಟಿಯರನ್ನು ಬಿಟ್ಟರೆ ಇನ್ಯಾರಿಗೂ ಇಲ್ಲವೆಂಬುದು ಸಾಬೀತಾಗಿದೆ.

ಇದು ನಮ್ಮ ದೇಶದ ಪ್ರಜಾಪ್ರಭುತ್ವವನ್ನೇ ಅಣಕಿಸಿದಂತಿದೆಯಲ್ಲದೆ, ದೇಶದ ಜನರ ಬುದ್ಧಿಶಕ್ತಿಯನ್ನೇ ಅಪಮಾನಕ್ಕೀಡುಮಾಡಿದೆ. ಅಲ್ಲದೆ ಇದು ನಮ್ಮ ರಾಜ್ಯಾಂಗಕ್ಕೆ ಮಾಡಿದ ಅಪಮಾನವೂ ಹೌದು.

ಭಾರತೀಯ ಜನತಾ ಪಾರ್ಟಿಯ ಹೈಕಮಾಂಡ್ ಆರೆಸ್ಸೆಸ್ ಎಂಬುದರಲ್ಲಿ ಯಾವ ವಿಚಾರಶೀಲನಲ್ಲಿಯೂ ಅನುಮಾನವಿಲ್ಲ. ದೇಶದಲ್ಲಿ ಸ್ವಾತಂತ್ರ್ಯ ಹೋರಾಟ ನಡೆಯುತ್ತಿದ್ದ ಕಾಲಘಟ್ಟದಲ್ಲಿ ಆರೆಸ್ಸೆಸ್ ಬ್ರಿಟಿಷರ ಪರವಾಗಿತ್ತೇ ವಿನಃ, ಸ್ವಾತಂತ್ರ್ಯ ಹೋರಾಟದಲ್ಲಿ ಎಲ್ಲಿಯೂ ಭಾಗಿಯಾಗಿಲ್ಲವೆಂದು ಚರಿತ್ರೆ ಸಾಕ್ಷಿ ನುಡಿಯುತ್ತದೆ. ಗಾಂಧೀಜಿಯವರನ್ನಂತೂ ಆರೆಸ್ಸೆಸ್ ಆದಿಯಿಂದಲೂ ದ್ವೇಷಿಸುತ್ತಾ ಬಂದಿದೆ. ಸುಭಾಶ್‌ಚಂದ್ರ ಬೋಸರು ದೇಶಬಿಟ್ಟು ತೊಲಗುವುದಕ್ಕೆ ಅಂದಿನ ಆರೆಸ್ಸೆಸ್‌ನ ಸರ್ವೋಚ್ಚ ನಾಯಕ ಹೆಡ್ಗೆವಾರ್ ನಡಾವಳಿಕೆಯೇ ಕಾರಣವಾಯಿತೆಂಬುದಕ್ಕೆ ದಾಖಲೆಗಳಿವೆ. ಆರೆಸ್ಸೆಸ್ ಗಾಂಧಿ ದ್ವೇಷ ಕ್ರಮೇಣ ಗಾಂಧಿ ಹತ್ಯೆಯಲ್ಲಿ ಕೊನೆಯಾಯಿತೆಂಬುದಕ್ಕೆ ಆಧಾರವೇ ಬೇಕಾಗಿಲ್ಲ, ಅದು ಸ್ಫಟಿಕದಷ್ಟು ಸ್ಪಷ್ಟ.

ಸ್ವಾತಂತ್ರ್ಯಾನಂತರ ಅಂಗೀಕೃತಗೊಂಡ ನಮ್ಮ ರಾಜ್ಯಾಂಗವನ್ನಾಗಲೀ, ರಾಷ್ಟ್ರ ಧ್ವಜವನ್ನಾಗಲೀ, ಸಂವಿಧಾನದ ಆಶಯದ ಪ್ರಜಾತಂತ್ರ ವ್ಯವಸ್ಥೆಯನ್ನಾಗಲೀ, ಕಾನೂನಿನ ಆಡಳಿತವನ್ನಾಗಲೀ ಆರೆಸ್ಸೆಸ್ ನೇತೃತ್ವದ ಸಂಘ ಪರಿವಾರದವರು ಒಪ್ಪಿಕೊಳ್ಳಲೇ ಇಲ್ಲ, ಆದರೂ, ಅವುಗಳನ್ನು ಬಹಿರಂಗವಾಗಿ ನಿರಾಕರಿಸಲಾಗಿದೆ, ಒಪ್ಪಿಕೊಂಡಂತೆ ಸೋಗು ಹಾಕುತ್ತಾ ಅಂತರಂಗದಲ್ಲಿ ನಮ್ಮ ರಾಜ್ಯಾಂಗವನ್ನು ಒಳಹೊಕ್ಕು ಧ್ವಂಸಗೊಳಿಸಿ, ಆ ಸ್ಥಾನದಲ್ಲಿ ವೈದಿಕರ ಪವಿತ್ರ ಗ್ರಂಥವಾದ ಮನುಧರ್ಮ ಶಾಸ್ತ್ರವೆಂಬ, ನಿಜಸ್ಥಿತಿಯಲ್ಲಿ ಅಧರ್ಮ ಶಾಸ್ತ್ರವನ್ನು ಹೇರುವ ಅಘೋಷಿತ ಅಜೆಂಡಾವನ್ನು ತನ್ನದಾಗಿಸಿಕೊಂಡು, ಅದನ್ನು ಸಾಧಿಸಲು ನಿರಂತರ ಪ್ರಯತ್ನದಲ್ಲಿ ಆರೆಸ್ಸೆಸ್ ತೊಡಗಿರುವುದು, ಅದಕ್ಕಾಗಿ ಭಯೋತ್ಪಾದನಾ ಚಟುವಟಿಕೆಗಳಲ್ಲಿ ನಿರತವಾಗಿರುವುದು ರಹಸ್ಯವಾಗೇನೂ ಉಳಿದಿಲ್ಲ.

ಸ್ವಾತಂತ್ರ್ಯ ನಂತರದಲ್ಲಿ ನಮ್ಮ ದೇಶದಲ್ಲಿ ಘಟಿಸಿದ ಮೊದಲನೇ ಭಯೋತ್ಪಾದನಾ ಕೃತ್ಯ ಗಾಂಧಿ ಹತ್ಯೆ, ಎರಡನೆಯದು ಬಾಬ್ರಿ ಮಸೀದಿ ಧ್ವಂಸ. ಈಗ ದೇಶದಾದ್ಯಂತ ನಡೆದಿರುವ ಎಲ್ಲಾ ಭಯೋತ್ಪಾದಕ ಚಟುವಟಿಕೆಗಳು – ಅದು ಕೇಸರಿ ಭಯೋತ್ಪಾದನೆಯೇ ಆಗಿರಲಿ, ಇಸ್ಲಾಂ ಮೂಲಭೂತವಾದಿ ಭಯೋತ್ಪಾದನೆಯೇ ಆಗಿರಲಿ – ಅವುಗಳೆಲ್ಲದ್ದಕ್ಕೂ ಬಾಬ್ರಿ ಮಸೀದಿ ಧ್ವಂಸವೇ ಮೂಲವೆಂಬುದನ್ನು ಈ ದೇಶದ ಜನ ನಿಧಾನವಾಗಿಯಾದರೂ ಅರ್ಥ ಮಾಡಿಕೊಳ್ಳಹೊರಟಿರುವುದು ಸ್ವಾಗತಾರ್ಹ.

ಕೋಮುವಾದಕ್ಕೆ ಶರಣು


ಇಲ್ಲಿಯತನಕ ಬಿಜೆಪಿ ಆಡಳಿತ ನಡೆಸಿದ ಕಡೆಯೆಲ್ಲಾ ದುರಾಡಳಿತ, ಲಂಚಗುಳಿತನ, ಹಗರಣಗಳು ನಡೆದು ಸಾರ್ವಜನಿಕರ ದೃಷ್ಟಿಯಲ್ಲಿ ಬಿಜೆಪಿ ಎಂದರೆ ಈ ದೇಶದ ಶನಿಸಂತಾನದಂತೆ ವಿಜೃಂಭಿಸತೊಡಗಿತು. ಆದ್ದರಿಂದ ಸಾರ್ವಜನಿಕರ ಗಮನವನ್ನು ಬೇರೆಡೆಗೆ ಸೆಳೆಯಬೇಕಾದ ಅನಿವಾರ್ಯತೆ ಅದಕ್ಕೆ ಎದುರಾಯಿತು. ಹೀಗಾಗಿ ಮತ್ತೆ ಕೋಮುವಾದವನ್ನು ಆಶ್ರಯಿಸುವುದು, ಫ್ಯಾಸಿಸಂಗೆ ಶರಣಾಗುವುದು, ಆರೆಸ್ಸೆಸ್ ಯಜಮಾನಿಕೆಯು ಬಿಜೆಪಿಗೆ ಅನಿವಾರ್ಯವಾಯಿತು.

ಚುನಾವಣೆಯಲ್ಲಿ ಸರಿಯಾದ ಮೈತ್ರಿಕೂಟ ಇಲ್ಲದೆ ಬಿಜೆಪಿ ಏಕಾಂಗಿಯಾದರೂ ಚಿಂತೆಯಿಲ್ಲ, ಯಾರೊಡನೆಯೋ ರಾಜಿಮಾಡಿಕೊಳ್ಳದೆ ಮತ್ತೆ ಫ್ಯಾಸಿಸ್ಟ್ ಧೋರಣೆಗೆ ಮರಳಿ, ಕೋಮುವಾದವನ್ನೇ ಮುಂದುವರಿಸಿ, ಸಮಾಜವನ್ನು ಛಿದ್ರಗೊಳಿಸುವುದರ ಮೂಲಕ ತನ್ನ ಬೇಳೆ ಬೇಯಿಸಿಕೊಳ್ಳಬೇಕೆಂಬ ನಿರ್ಧಾರಕ್ಕೆ ಬಿಜೆಪಿ ಹಿಂದಿರುಗಿದೆ.

ಪಕ್ಷದ ಈ ಕೋಮುವಾದಿ ಮಾರ್ಗವನ್ನು ಅನುಸರಿಸಿ ಅದನ್ನು ಮುನ್ನಡೆಸುವ ನೇತಾರನಲ್ಲಿ ಮನುಷ್ಯತ್ವವಿರಬಾರದು. ಆತ ಮೃಗೀಯ ಸ್ವಭಾವದವನಾಗಿರಬೇಕು. ರಾಜ್ಯಾಂಗದ ಬಗ್ಗೆಯಾಗಲೀ, ಅದರ ಆಶಯವಾಗಿರುವ ಜಾತ್ಯತೀತ ಸಿದ್ಧಾಂತದ ಬಗ್ಗೆಯಾಗಲೀ, ಪ್ರಜಾಪ್ರಭುತ್ವ ಯಾ ಕಾನೂನು ಆಡಳಿತದ ಬಗ್ಗೆಯಾಗಲೀ ಕಿಂಚಿತ್ತೂ ಗೌರವ ಇಲ್ಲದವನಾಗಿರಬೇಕು. ಜೊತೆಗೆ ಆತ ಜೀವದ್ವೇಷಿಯಾಗಿರುವ ಶೂದ್ರನೇ ಆಗಿರಬೇಕು. ಶೂದ್ರನಾದರೂ ಆತ ಸ್ವಂತ ಬುದ್ಧಿಯನ್ನು ಕಳಕೊಂಡು ಪುರೋಹಿತಶಾಹಿಯ ಆಜ್ಞಾವರ್ತಿಯಾಗಿ, ಅವರ ದಾಸಾನುದಾಸನಾಗಿ ವರ್ತಿಸುತ್ತಾನೆ ಎಂಬ ವಿಶ್ವಾಸಕ್ಕೆ ಪಾತ್ರನಾಗಿರಬೇಕು. ಈ ಎಲ್ಲಾ ಗುಣಗಳು ನರೇಂದ್ರ ಮೋದಿಯಲ್ಲಿ ರಾರಾಜಿಸುತ್ತಿವೆಯೆಂಬುದನ್ನು ಗುರುತಿಸಿದ ಸಂಘ ಪರಿವಾರದ ಹಿಂದೂತ್ವವಾದಿಗಳು, ನರೇಂದ್ರ ಮೋದಿಯ ಹೆಗಲಿಗೆ ಈ ಜವಾಬ್ದಾರಿ ವಹಿಸಲು ನಿರ್ಧಾರ ತೆಗೆದುಕೊಂಡದ್ದರಲ್ಲಿ ಯಾವ ಆಶ್ಚರ್ಯವೂ ಇಲ್ಲ.

ಈ ವಿಚಾರದಲ್ಲಿ ನರೇಂದ್ರ ಮೋದಿಯನ್ನು ಮೀರಿಸುವ ಮತ್ತೊಬ್ಬ ವ್ಯಕ್ತಿ ಬಿಜೆಪಿ ಪಾಳಯದಲ್ಲಿ ಲಭ್ಯವಿಲ್ಲವೆಂಬುದು ಸತ್ಯಸಂಗತಿಯೇ ಆಗಿದೆ. ಶೂದ್ರನಾಗಿದ್ದೂ ನರೇಂದ್ರ ಮೋದಿ ಸ್ವಂತ ಬುದ್ಧಿ ಇಲ್ಲದವನು. ಆರೆಸ್ಸೆಸ್ ಪ್ರತಿನಿಧಿಸುವ ಫ್ಯಾಸಿಸ್ಟ್ ಶಕ್ತಿಗಳ ಆಣತಿಯನ್ನು ಶಿರಸಾವಹಿಸಿ ಪಾಲಿಸುವ ಗುಣವುಳ್ಳವನು. ಫ್ಯಾಸಿಸ್ಟ್ ತಂತ್ರಗಳಲ್ಲಿ ಸುಳ್ಳನ್ನೇ ಸತ್ಯವೆಂದು ಜನರನ್ನು ನಂಬಿಸುವುದು ಅತೀ ಮುಖ್ಯವಾದುದು. ನರಹಂತಕ ಹಿಟ್ಲರ್‌ನ ಪ್ರಚಾರ ಮಂತ್ರಿ ಗೋಬೆಲ್ಸ್ ಇದನ್ನೇ ಮಾಡುತ್ತಾ ಬಂದಿದ್ದ. ಸಂಘ ಪರಿವಾರದವರ ಕಣ್ಮಣಿ ಹಿಟ್ಲರ್ ಎಂಬುದಕ್ಕೆ ಆರೆಸ್ಸೆಸ್ ಸರಸಂಘ ಚಾಲಕ ಅಂದರೆ ಸರ್ವೋಚ್ಚ ನಾಯಕನಾಗಿದ್ದ ಗುರೂಜಿ ಗೋಲ್ವಾಲ್ಕರ್‌ಗಿಂತ ಬೇರೆ ಸಾಕ್ಷಿ ಬೇಕಿಲ್ಲ. ಅಂದರೆ, ಬಿಜೆಪಿಯ ಪ್ರಧಾನ ಮಂತ್ರಿ ಅಭ್ಯರ್ಥಿ ಹಿಟ್ಲರ್‌ನ ಅಪರಾವತಾರನೇ.

ಸಂಘಪರಿವಾರದೊಂದಿಗಿನ ನನ್ನ ಸ್ವಂತ ಅನುಭವದ ಆಧಾರದ ಮೇಲೆ ನಾನು 1984-85ರಲ್ಲಿ ಬರೆದ 'ಆರ್.ಎಸ್.ಎಸ್. ಅಂತರಂಗ' ಎಂಬ ಪುಸ್ತಕದಲ್ಲಿ ಆರೆಸ್ಸೆಸ್




ಮೋದಿಗೆ ಹೈಸ್ಕೂಲ್ ಪಠ್ಯಪುಸ್ತಕಗಳ ಉಡುಗೊರೆ


ತಕ್ಷಶಿಲ ವಿಶ್ವವಿದ್ಯಾಲಯವು ಬಿಹಾರದಲ್ಲಿತ್ತು, ಅಲೆಕ್ಸಾಂಡರ್ ಗಂಗಾ ನದಿಯ ತೀರದಲ್ಲಿ ನಡೆದ ಯುದ್ಧದಲ್ಲಿ ಸೋತ ಎಂದೆಲ್ಲ ಕಪೋಲಕಲ್ಪಿತ 'ಇತಿಹಾಸ'ವನ್ನು ಪಟ್ನಾದಲ್ಲಿ ಸೃಷ್ಟಿಸಿದ ನರೇಂದ್ರ ಮೋದಿಗೆ ಮುಂಬೈನ ಯುವ ಕಾಂಗ್ರೆಸ್ ಪಡೆ ಇತ್ತೀಚೆಗೆ ನಡೆದ ದೀಪಾವಳಿ ಹಬ್ಬದಂದು ಒಂದು ವಿಶಿಷ್ಟ ಉಡುಗೊರೆಯನ್ನು ಕಳುಹಿಸಿತು.

ಮುಂಬೈ ಯುವ ಕಾಂಗ್ರೆಸ್‌ನ ಅಧ್ಯಕ್ಷ ಗಣೇಶ್ ಕುಮಾರ್ ಯಾದವ್ ಅವರು ಪತ್ರಕರ್ತರಿಗೆ ಹೀಗೆಂದು ಹೇಳಿದ್ದಾರೆ: "ಮೋದಿಗೆ ನಮ್ಮ ದೇಶದ ಇತಿಹಾಸ ಸರಿಯಾಗಿ ಗೊತ್ತಿಲ್ಲ, ಅವರು ಇತಿಹಾಸವನ್ನು ಸರಿಯಾಗಿ ಅಧ್ಯಯನ ಮಾಡಲಿ ಎಂಬುದು ನಮ್ಮ ಆಶೆ. ಈ ನಿಟ್ಟಿನಲ್ಲಿ ನಾವು ಅವರಿಗೆ ಹಲವು ಇತಿಹಾಸ ಕುರಿತ ಪುಸ್ತಕಗಳನ್ನು ದಾನ ಮಾಡುತ್ತಿದ್ದೇವೆ."

ಯಾದವ್ ಅವರು ಮೋದಿಗೆ ಕಳುಹಿಸಿದ ಪುಸ್ತಕಗಳು ಯಾವುವು ಗೊತ್ತಾ? ಐದರಿಂದ ಹತ್ತನೆ ತರಗತಿ ತನಕ ಮಹಾರಾಷ್ಟ್ರದ ಶಾಲಾ ವಿದ್ಯಾರ್ಥಿಗಳು ಓದುವ ಪಠ್ಯ ಪುಸ್ತಕಗಳು!




ಮುತಾಲಿಕ್‌ನ ನರಿಪಾಲು



'ಭಾರತಕ್ಕೆ ಮೋದಿ-ಕರ್ನಾಟಕಕ್ಕೆ ಮುತಾಲಿಕ್' ಎಂಬ ಪ್ರಚಾರದ ಕೂಪನ್‌ಗಳನ್ನು ಪ್ರಿಂಟ್ ಮಾಡಿಸಿ ಶ್ರೀರಾಮ ಸೇನೆಯ ಪ್ರಮೋದ್ ಮುತಾಲಿಕ್ ಸಾರ್ವಜನಿಕರಿಂದ ದುಡ್ಡೆತ್ತುತ್ತಿದ್ದಾನೆ!!


ಈ ಮಾತನ್ನು ಪತ್ರಿಕಾಗೋಷ್ಠಿಯಲ್ಲಿ ಹೇಳಿರುವುದು ಧಾರವಾಡ ಜಿಲ್ಲಾ ಬಿಜೆಪಿ ಅಧ್ಯಕ್ಷ ಬಸವರಾಜ ಪಾಟೀಲರು!

ಕೆಲ ವರ್ಷಗಳ ಹಿಂದೆ ಭಜರಂಗ ದಳ ಕಟ್ಟಲು ಬೆಂಗಳೂರು ಬಿಜೆಪಿಗಳಿಂದ ಹದಿನೆಂಟು ಲಕ್ಷ ರೂಪಾಯಿ ಕಿತ್ತುಕೊಂಡು ತಿಂದು ಹಾಕಿದ ಪ್ರಮೋದ್ ಮುತಾಲಿಕ್‌ನನ್ನು ಈಗ ಬಿಜೆಪಿಗಳೇ 'ಪ್ರಮಾದ ಮುತಾಲಿಕ್' ಎಂದು ದೂರ ತಳ್ಳುತ್ತಿದ್ದಾರೆ. ಏಕೆಂದರೆ ಹಿಂದೂ ಧರ್ಮ ರಕ್ಷಣೆಯ ಹೆಸರಿನಲ್ಲಿ ಟಿಂಬರ್ ಸ್ಮಗ್ಲರ್‌ಗಳು, ರಸ್ತೆ ದರೋಡೆಕಾರರು, ದನಗಳ್ಳರೆಲ್ಲಾ ಭಜರಂಗ ದಳ ಸೇರಿಕೊಂಡು ಸಂಘ ಪರಿವಾರಿಗಳ ಮಾನ-ಮರ್ಯಾದೆ ಕಳೆದಿದ್ದರು. ಯಾರಿಗೂ ಗೊತ್ತಾಗದಂತೆ, ಚೂರೂ ನೋವಾಗದಂತೆ ಕುಯ್ದುಕೊಂಡು ತಿನ್ನುವುದರಲ್ಲಿ ಪ್ರಾವೀಣ್ಯತೆ ಗಳಿಸಿರುವ ಸಂಘ ಪರಿವಾರಿಗಳಿಗೆ ಈ ಮುತಾಲಿಕ್ ಹಸಿ ಮಾಂಸ ಕಿತ್ತು ತಿನ್ನುವವನಂತೆ, ಜನರಿಗೆ ಗೊತ್ತಾಗುವಂತೆ ರೋಲ್‌ಕಾಲ್ ಮಾಡುತ್ತಿರುವುದು ನಿಜಕ್ಕೂ ದೊಡ್ಡ ಸಮಸ್ಯೆಯಾಗಿ ಹೋಗಿದೆ. ಅದರಲ್ಲೂ ಮುತಾಲಿಕ್‌ನ 'ಭಾರತಕ್ಕೆ ಮೋದಿ-ಕರ್ನಾಟಕಕ್ಕೆ ಮುತಾಲಿಕ್'ನೆಂಬ ಸ್ಲೋಗನ್ ಕಿರಿಕಿರಿ ಮಾಡುತ್ತಿದೆ. ಹಾಗಾಗಿ ಬಿಜೆಪಿ ನಾಯಕರೇ ಈಗ ಮುತಾಲಿಕ್ ಒಬ್ಬ ರೋಲ್‌ಕಾಲ್ ದಂಧೆಯವ ಎನ್ನುತ್ತಿದ್ದಾರೆ. ಏನಾದರೇನು ಕಂಕನರಿ ಮುತಾಲಿಕ್ ತನ್ನ ಪಾಲು ಗಿಟ್ಟಿಸದೆ ಸುಮ್ಮನಿರುತ್ತಾನಾ?



ಪಟ್ನಾದಲ್ಲಿ ಸರಣಿ ಬಾಂಬ್ ಸ್ಫೋಟಿಸಿದ್ದು ಹಿಂದೂ ಯುವಕರು

ಮೋದಿಯ ಪಟ್ನಾ ರ್‍ಯಾಲಿಯ ಮುನ್ನ ಸಂಭವಿಸಿದ ಸರಣಿ ಬಾಂಬ್ ಸ್ಫೋಟಗಳಿಗೆ ಸಂಬಂಧಿಸಿದಂತೆ ಇತ್ತೀಚೆಗೆ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಹಲವಾರು ಹಿಂದೂ ಯುವಕರನ್ನು ಬಂಧಿಸಿದ್ದನ್ನು ನಮ್ಮ ಮಾಧ್ಯಮಗಳು



ಸರಿಯಾಗಿ ವರದಿ ಮಾಡದಿ[illegible] ರುವುದು ಅಚ್ಚರಿಯ ಸಂಗತಿ ಯೇನಲ್ಲ.

ಹಲವು ಜನರ ಸಾವಿಗೆ ಕಾರಣವಾದ ಬಾಂಬ್ ಸ್ಫೋಟಗಳ ಹಿಂದೆ ಮುಸಲ್ಮಾನರೇ ಇರಬೇಕೆಂದು ಆರಂಭದಲ್ಲಿ ಭಾವಿಸಿದ್ದ ಬಿಹಾರ್ ಪೊಲೀಸರು ಹಲವಾರು ಅಮಾಯಕ ಮುಸಲ್ಮಾನ ಯುವಕರನ್ನು ಬಂಧಿಸಿದ್ದರು. ಆದರೆ ತನಿಖೆಯಲ್ಲಿ ಆ ಯುವಕರಿಗೂ, ಬಾಂಬ್ ಸ್ಫೋಟಕ್ಕೂ ಸಂಬಂಧ ಇಲ್ಲವೆಂದು ಗೊತ್ತಾದ ಮೇಲೆ ಅವರನ್ನೆಲ್ಲ ಬಿಡುಗಡೆ ಮಾಡಲಾಯಿತು. ಅದಾದನಂತರ ಎನ್‌ಐಎ ಕೊಟ್ಟ ಸುಳಿವಿನ ಮೇರೆಗೆ ಬಿಹಾರ್ ಪೊಲೀಸರು ಆರು ಹಿಂದೂ ಯುವಕರನ್ನು ಬಂಧಿಸಿದರು. ರಾಜು ಸಾವ್ರೋ, ಗೋಪಾಲ್ ಕುಮಾರ್ ಗೋಯಲ್, ವಿಕಾಸ್ ಕುಮಾರ್, ಪವನ್ ಕುಮಾರ್ ಮತ್ತು ಗಣೇಶ್ ಕುಮಾರ್ ಎಂಬ ಹಿಂದೂ ಉಗ್ರರು ಈಗ ಜೈಲಿನಲ್ಲಿದ್ದು ವಿಚಾರಣೆಯನ್ನು ಎದುರಿಸುತ್ತಿದ್ದಾರೆ.

ಇದೆಲ್ಲದರ ಅರ್ಥವೇನು? ಮೋದಿಯ ರ್‍ಯಾಲಿಯ ಮುಂಚೆ ಬಾಂಬ್ ಸ್ಫೋಟಿಸುವ ಮೂಲಕ ಆತನ ಪ್ರಾಣಕ್ಕೆ ಮುಸಲ್ಮಾನರಿಂದ ಭೀತಿ ಇದೆ ಎಂದು ಸುಳ್ಳು ಹಬ್ಬಿಸುವುದಲ್ಲವೇ? ಜೊತೆಗೆ ಈ ಹಿಂದೂ ಉಗ್ರರು ತಮ್ಮ ರಾಜಕೀಯ ದುರುದ್ದೇಶಕ್ಕೆ ಅಮಾಯಕರನ್ನೂ ಕೊಲ್ಲಲು ಹೇಸುವುದಿಲ್ಲ ಎಂದಲ್ಲವೇ?

...ದಿ ಶಿಸ್ತಿನ ಸಿಪಾಯಿಗಳೂ ಅಲ್ಲ, ದೇಶಭಕ್ತರೂ ಅಲ್ಲ, ...ಮಾಣಿಕರೂ ಅಲ್ಲ, ಸ್ವಚ್ಛ ಬದುಕಿಗೆ ಅಂಟಿಕೊಂಡವರೂ ... ಬದಲಾಗಿ ಅವರು ಈ ದೇಶದ ಬಹು ಅಪಾಯಕಾರಿ ...ಕಾರಿ ಶಕ್ತಿಯಾಗಿದ್ದಾರೆಂದು ಪ್ರತಿಪಾದಿಸಿದ್ದೆ.

...ಆರೆಸ್ಸೆಸ್‌ನ ಆದರ್ಶ ವ್ಯಕ್ತಿಯೆಂದರೆ ಲಜ್ಜಾಹೀನನೂ, ...ಯೂ, ಸುಳ್ಳಿನ ಸರದಾರನೂ, ಜೀವದ್ವೇಷಿಯೂ ...ಬೇಕು. ನರೇಂದ್ರ ಮೋದಿ ಇದೆಲ್ಲಾ ಆಗಿದ್ದಾನೆ.

...ಮೋದಿ ಆರೆಸ್ಸೆಸ್‌ನ ಪೂರ್ಣ ಸಮಯ ...ರಕನೆಂದೂ, ಮದುವೆಯಾಗದ ಬ್ರಹ್ಮಚಾರಿಯೆಂದೂ ...ಜನಿಕವಲಯದಲ್ಲಿ ಬಿಂಬಿಸಲಾಗಿದೆ. ನಾನೂ ...ಯೇ ತಿಳಿದಿದ್ದೆ. ಆದರೆ ಆತ ಮದುವೆಯಾಗಿರುವ ...ನೆಂದೂ, ಮದುವೆಯಾದ ಹೆಂಡತಿಯನ್ನು ತಿರಸ್ಕರಿಸಿ ...ಮ ಬಾಳನ್ನು ನರಕವಾಗಿಸಿದನೆಂದೂ ನನಗೆ ಇತ್ತೀಚೆಗಷ್ಟೆ ...ಯಿತು. ನರೇಂದ್ರ ಮೋದಿಯ ಹೆಂಡತಿ ಈಗಲೂ ...ವುದೋ ಹಳ್ಳಿಯಲ್ಲಿ ಒಂದು ಸಣ್ಣ ವೃತ್ತಿಯನ್ನು ...ವಲಂಬಿಸಿ ಜೀವನ ಸಾಗಿಸುತ್ತಾ, ಶೌಚಾಲಯ ಸಹ ...ದ ಗುಡಿಸಲೊಂದರಲ್ಲಿ ಜೀವಿಸುತ್ತಿದ್ದಾರೆ. ನರೇಂದ್ರ ...ದಿ ಇಲ್ಲಿಯವರೆಗೆ ಆಕೆಯೊಂದಿಗೆ ದಾಂಪತ್ಯ ವಿಚ್ಛೇದನ ...ಕೊಂಡಿಲ್ಲ. ಒಬ್ಬ ಜವಾಬ್ದಾರಿ ವ್ಯಕ್ತಿ ಮದುವೆಯಾದ ...ಲೆ ಹೆಂಡತಿಯೊಡನೆ ಬಾಳ್ವೆ ನಡೆಸುವುದು ...ಲ್ಲವೆಂದುಕೊಂಡಾಗ, ಹೆಂಡತಿಗೆ ಸೂಕ್ತ ಪರಿಹಾರ ...ಟ್ಟು ದಾಂಪತ್ಯ ವಿಚ್ಛೇದನ ಮಾಡಿಕೊಳ್ಳಬೇಕು. ಹಾಗೆ ...ದೆ ನರೇಂದ್ರ ಮೋದಿ ತರಹ ಇದ್ದು ಬಿಡುವುದೆಂದರೆ ...ನ್ನು ಮನುಷ್ಯತ್ವವೆನ್ನಲಾಗದು. ನರೇಂದ್ರ ಮೋದಿ ...ಷ್ಯತ್ವದಿಂದ ಬಹಳ ದೂರವಿರುವುದರಿಂದಲೇ, ಆತ ...ನ ಮಂತ್ರಿ ಸ್ಥಾನಕ್ಕೆ ಬಿಜೆಪಿಯ ಸೂಕ್ತ ಅಭ್ಯರ್ಥಿಯೆಂದು ...ಯಾಗಿದ್ದಾನೆ.

...ಬಿಜೆಪಿಯ ಪ್ರಧಾನ ಮಂತ್ರಿ ಅಭ್ಯರ್ಥಿಯಾಗಲು ಇಷ್ಟೇ ...ಮ. ಆತ ಜೀವದ್ವೇಷಿಯಾದ ರಕ್ತಪಿಪಾಸು ಕೂಡ ...ಬೇಕು. 2002ರ ಗುಜರಾತ್ ನರಮೇಧ ನಡೆದಾಗ ...ಮಂತ್ರಿಯಾಗಿದ್ದವನು ಇದೇ ನರೇಂದ್ರ ಮೋದಿ. ...ನಡೆದದ್ದು ಎರಡು ಸಾವಿರಕ್ಕೂ ಹೆಚ್ಚಿನ ನಿರಪರಾಧಿ ... ಮಾರಣಹೋಮ. ತದನಂತರ ಗುಜರಾತಿನಾದ್ಯಂತ ...ಸರು ನಡೆಸಿದ ನಕಲಿ ಎನ್‌ಕೌಂಟರ್‌ಗಳಲ್ಲಿ ಇನ್ನೂ ...ಪ್ಪು ಅಮಾಯಕರ ಕಗ್ಗೊಲೆ ನಡೆಯಿತು.

...ದರೆ ಇದ್ಯಾವುದಕ್ಕೂ ಮುಖ್ಯಮಂತ್ರಿ ಸ್ಥಾನದಲ್ಲಿದ್ದ ...ದ್ರ ಮೋದಿ ಹೊಣೆಗಾರನಲ್ಲ ಎಂದು ಸುಳ್ಳನ್ನು ...ಗಿತ್ತು, ಇಂತಹ ಸುಳ್ಳುಗಳ ವಿರುದ್ಧ ಸೆಟೆದು ನಿಂತು ...ಡಿ, ಸತ್ಯವನ್ನು ಹೊರತರಬೇಕೆಂದು ಪಣತೊಟ್ಟವಳು ... ಭಾರತೀಯ ವೀರ ಮಹಿಳೆ. ಆಕೆಯ ಹೆಸರೇ ... ಸೆಟಲ್‌ವಾಡ್. ಇಡೀ ಭಾರತದ ಹೆಮ್ಮೆಯ ...ಯಾದ ತೀಸ್ತಾ ನರೇಂದ್ರ ಮೋದಿಯೆಂಬ ರಾಕ್ಷಸನನ್ನು ...ವಾಗಿ ಕಾಡಿದಳು. ತೀಸ್ತಾ ಸೆಟಲ್‌ವಾಡ್‌ರ ...ರಾಟದ ಫಲವಾಗಿ ಭಾರತದ ಶ್ರೇಷ್ಠ ನ್ಯಾಯಾಲಯ ... ಹೂತು ಹಾಕಲಾಗಿದ್ದ ಹಲವಾರು ಪ್ರಮುಖ ...ದ್ದೆಮೆಗಳನ್ನು ಹೊರ ತೆಗೆದು ಸಿಬಿಐಗೆ ರವಾನಿಸಿ ...ರ್ ತನಿಖೆಗೆ ಆದೇಶಿಸಿತು. ಪರಿಣಾಮವಾಗಿ ...ಹೋಮಕ್ಕೆ ಕಾರಣರಾಗಿದ್ದ ಮೋದಿಯ ಹಲವು ...ರು ಜೈಲು ಸೇರಿದರು.

...ಹರಲ್ಲಿ ಮೋದಿ ಸಂಪುಟದ ಸದಸ್ಯೆಯಾಗಿದ್ದ ... ಕೊಡ್ನಾನಿ ಮತ್ತು ಬಿಜೆಪಿಯ ಶಾಸಕನಾಗಿದ್ದ ... ಬಜರಂಗಿ ಪ್ರಮುಖರು. ಇವರಿಬ್ಬರೂ ಮೂವತ್ತು ... [illegible] ಸಜೆಗೊಳಗಾಗಿ ಈಗ ಜೈಲಿನಲ್ಲಿ ಕಂಬಿ ...ಸೆ. ಬಿಜೆಪಿ ರಂಗ ಪ್ರವೇಶಿಸುವ ಮುನ್ನ ಮಾಯಾ ... ಮತ್ತು ಬಾಬು ಬಜರಂಗಿ ವಿರುದ್ಧ ಮೊಕದ್ದಮೆ ...ರಾಗಿರಲಿಲ್ಲವೆಂಬುದು ಇಲ್ಲಿ ಗಮನಿಸಬೇಕಾದ ... [illegible] ವಿರುದ್ಧದ ಆರೋಪವನ್ನು ಮೋದಿಯ ... [illegible]

ನರೇಂದ್ರ ಮೋದಿಯ ಇನ್ನೊಬ್ಬ ಬಲಗೈ ಬಂಟ ಮತ್ತು ಆತನ ಸಂಪುಟದಲ್ಲಿ ಗೃಹ ಸಚಿವನೂ ಆಗಿದ್ದ ಅಮಿತ್ ಶಾ ನಕಲಿ ಎನ್‌ಕೌಂಟರ್ ಪ್ರಕರಣದಲ್ಲಿ ಆರೋಪಿಯಾಗಿ, ಆನಂತರ ಜಾಮೀನು ಪಡೆದು ಹೊರಬಂದಿದ್ದಾನೆ. ಮೋದಿ ಸರಕಾರದಲ್ಲಿ ನಡೆದ ಹಲವು ನಕಲಿ ಎನ್‌ಕೌಂಟರ್‌ಗಳಿಗೆ ಸಂಬಂಧಪಟ್ಟಂತೆ ಇಬ್ಬರು ಉನ್ನತ ಮಟ್ಟದ ಪೊಲೀಸ್ ಅಧಿಕಾರಿಗಳೂ ಸೇರಿದಂತೆ ಒಟ್ಟು ಮೂವತ್ತೆರಡು ಪೊಲೀಸ್ ಅಧಿಕಾರಿಗಳು ಈಗ, ಜೈಲಿನಲ್ಲಿ ಕಂಬಿ ಎಣಿಸುತ್ತಿದ್ದಾರೆ.

ಜೈಲಿನಲ್ಲಿರುವ ಒಬ್ಬ ಪೊಲೀಸ್ ಅಧಿಕಾರಿ ಒಂದು



ಪತ್ರ ಬರೆದು "ಸರಕಾರದ ನಿಯಮವಾಗಿದ್ದ ನಕಲಿ ಎನ್‌ಕೌಂಟರ್‌ಗಳನ್ನು ಮೋದಿಗೆ ವಿಧೇಯರಾದ ನಾವುಗಳು ಶಿರಸಾ ವಹಿಸಿದ್ದಕ್ಕಾಗಿ ನಮಗೆ ಜೈಲೇ?" ಎಂದು ಪ್ರಶ್ನಿಸಿದರಲ್ಲದೆ "ನರೇಂದ್ರ ಮೋದಿ ಸರಕಾರ ಜೈಲಿನಲ್ಲಿರಬೇಕೇ ವಿನಃ ನಾವಲ್ಲ" ಎಂದು ಸವಾಲು ಹಾಕಿದ್ದಾನೆ.

ಅಮಾಯಕರ ಮಾರಣಹೋಮ ಮತ್ತು ನಕಲಿ ಎನ್‌ಕೌಂಟರ್‌ಗಳಿಗೆ ನರೇಂದ್ರ ಮೋದಿ ಹೇಗೆ ಹೊಣೆಗಾರ ಎಂದು ಬಿಜೆಪಿಯ ಅಧ್ಯಕ್ಷ ರಾಜನಾಥ ಸಿಂಗ್ ಪ್ರಶ್ನಿಸುತ್ತಾರೆ. ಇವರೆಂಥ ಲಜ್ಜಾಹೀನರು ಎನ್ನುವುದಕ್ಕೆ ಬೇರೆ ಸಾಕ್ಷಿ ಬೇಕೆ?

ಇಂತಹ ಲಜ್ಜಾಹೀನ ಪಕ್ಷಕ್ಕೆ ಪ್ರಧಾನ ಮಂತ್ರಿ ಸ್ಥಾನದ ಅಭ್ಯರ್ಥಿಯಾಗಿ ನರೇಂದ್ರ ಮೋದಿಗಿಂತ 'ಉತ್ತಮ' ವ್ಯಕ್ತಿ ಸಿಗಲಾರ.

ರಾಜ್ಯದ ಮುಖ್ಯಮಂತ್ರಿ ಸ್ಥಾನದಲ್ಲಿದ್ದರೂ ಮೋದಿಯ ಸಹಯೋಗಿ ಮಂತ್ರಿಗಳು ಮತ್ತು ಶಾಸಕರುಗಳು ಅಪರಾಧಗಳನ್ನು ಹೇಯವಾಗಿ ಎಸಗಿದ್ದು ಮೋದಿಗೆ ಗೊತ್ತೇ ಇರಲಿಲ್ಲ; ಆತನ ಕೈಕೆಳಗಿನ ಪೊಲೀಸ್ ಅಧಿಕಾರಿಗಳು 'ನಕಲಿ ಎನ್‌ಕೌಂಟರ್‌ಗಳಲ್ಲಿ ನಿರಪರಾಧಿ ನಾಗರಿಕರನ್ನು ಹತ್ಯೆ ಮಾಡಿದ್ದೂ ಮೋದಿಗೆ ಗೊತ್ತೇ ಇರಲಿಲ್ಲ ಎಂದು ಸಂಘ ಪರಿವಾರದವರು ಪ್ರತಿಪಾದಿಸುತ್ತಾರೆ. ಅವರ ಪ್ರತಿಪಾದನೆ ನಿಜವೇ ಆಗಿದ್ದರೆ ಮೋದಿಯೊಬ್ಬ ಅಯೋಗ್ಯನೂ, ಮುಠ್ಠಾಳನೂ ಆಗುತ್ತಾನೆ. ಆದ್ದರಿಂದಲೇ ಮೋದಿ ಪ್ರಧಾನ ಮಂತ್ರಿ ಸ್ಥಾನಕ್ಕೂ ಅರ್ಹತೆ ಇಲ್ಲದವನಾಗುತ್ತಾನೆ.

ಮೋದಿಯ ಆಶಯ ಹಾಗೂ ನಿಯಂತ್ರಣದಲ್ಲಿಯೇ 2002ರ ನರಮೇಧ ಹಾಗು ನಂತರದ ನಕಲಿ ಎನ್‌ಕೌಂಟರ್‌ಗಳು ನಡೆದು, ಅವುಗಳಿಗೆಲ್ಲ ಮೋದಿ ತನ್ನ ಅನುಯಾಯಿಗಳನ್ನೇ ಬಲಿಪಶು ಮಾಡಿ, ಆಜ್ಞಾವರ್ತಿಗಳನ್ನೇ ಹಳ್ಳಕ್ಕೆ ತಳ್ಳಿ ಮೂರ್ಖರನ್ನಾಗಿಸುವುವಲ್ಲಿ ಸಫಲನಾಗಿದ್ದಾನೆ. ಈ ಹಿನ್ನೆಲೆಯಲ್ಲಿ ಆತ ಒಬ್ಬ ಪರಮ ನೀಚ ವ್ಯಕ್ತಿಯಾಗಿಯೂ ಶೋಭಿಸುತ್ತಾನೆ.

ಮಾನವರ ಮಾರಣಹೋಮ ಮಾಡಿದ ಜಗತ್ತಿನ ಯಾವನೇ ಸರ್ವಾಧಿಕಾರಿಯಾಗಲಿ, ಫ್ಯಾಸಿಸ್ಟನಾಗಲಿ ಆನಂತರ ಶಿಕ್ಷೆಯಿಂದ ತಪ್ಪಿಸಿಕೊಂಡದ್ದು ಅಪರೂಪ. ಹಿಟ್ಲರ್ ಕೂಡ ಕಡೇದಾಗಿ ಆತ್ಮಹತ್ಯೆ ಮಾಡಿಕೊಂಡ. ಪಾಕಿಸ್ತಾನದ ಸರ್ವಾಧಿಕಾರಿಯಾಗಿದ್ದ ಪರ್ವೇಜ್ ಮುಷರಫ್ ಕೂಡ ಬಹಳ ಸಮಯ ಅಂತರರಾಷ್ಟ್ರೀಯ ಕಾನೂನಿನಿಂದ ತಪ್ಪಿಸಿಕೊಂಡು ಬದುಕಿದ್ದರೂ, ಇದೀಗ ಪಾಕಿಸ್ತಾನದಲ್ಲಿ ತಾನೇ ತೋಡಿದ ಗುಂಡಿಗೆ ತಾನೇ ಬಿದ್ದು ಒದ್ದಾಡುತ್ತಿದ್ದಾನೆ. ಹಿಟ್ಲರ್‌ನ ಮಾನವ ವಿರೋಧಿ ಅಪರಾಧಗಳ ವಿರುದ್ಧ ನೂರ್‌ನ್‌ಬರ್ಗ್ ವಿಚಾರಣೆ ನಡೆದು ಅಪರಾಧಿಗಳಿಗೆ ಶಿಕ್ಷೆಯಾದದ್ದು ಇತಿಹಾಸ.

ಇದೇ ಸ್ಥಿತಿ ಮೋದಿಗೂ ಬರಬೇಕಿತ್ತು, ನರಮೇಧ ಮತ್ತು ಆನಂತರದ ನಕಲಿ ಎನ್‌ಕೌಂಟರ್‌ಗಳಿಗೆ ಸಂಬಂಧಪಟ್ಟಂತೆ ಇಷ್ಟು ಹೊತ್ತಿಗೆ ಮೋದಿ ವಿಚಾರಣೆಗೊಳಪಟ್ಟು ಜೈಲು ಸೇರಬೇಕಿತ್ತು, ಆದರೆ ಮೋದಿ ಇದುವರೆಗೆ ಕಾನೂನುನಿಂದ ಪಾರಾಗಿ ಈ ದೇಶದ ಪ್ರಧಾನಿ ಆಗುವ ಕನಸು ಕಾಣುತ್ತಿರುವುದು ನಮ್ಮ ಪ್ರಜಾಪ್ರಭುತ್ವದ ದುರಂತಗಳಲ್ಲಿ ಒಂದು.

ಮೋದಿ ಈ ದೇಶದ ಪ್ರಧಾನ ಮಂತ್ರಿ ಆಗಿಯೇ ಬಿಡುತ್ತಾನೆಂದು ಯಾರೂ ಭ್ರಮಿಸಬೇಕಿಲ್ಲ, ಅಂತಹ ಭ್ರಮೆ ಸ್ವಯಂಸಂಘ ಪರಿವಾರದವರಿಗೂ ಇಲ್ಲವೆಂದು ನಾನು ನಿಶ್ಚಿಂತವಾಗಿ ಹೇಳಬಲ್ಲೆ, ಪ್ರಧಾನ ಮಂತ್ರಿ ಸ್ಥಾನವನ್ನು ಮೋದಿ ಬಯಸುವುದೆಂದರೆ, ಅದು ಕತ್ತಲೆಕೋಣೆಯಲ್ಲಿ ಇಲ್ಲದಿರುವ ಕರಿ ಬೆಕ್ಕು ಹುಡುಕಿದಷ್ಟೇ ಹಾಸ್ಯಾಸ್ಪದ. ಮೋದಿ ಈ ದೇಶದ ಫ್ಯಾಸಿಸ್ಟ್ ಕೋಮುವಾದಿಗಳ ಆರಾಧ್ಯ ದೇವತೆಯೆನ್ನುವುದೇನೋ ನಿಜ. ಹಾಗಾಗಿ ಮೋದಿಯನ್ನು ಮುಂದೊಡ್ಡಿ ಇಡೀ ದೇಶದಲ್ಲಿ ವಿಷಕಾರಿಯಾದ ಹಿಂದೂತ್ವವಾದದ ಉತ್ಸಾಹ ತುಂಬುವುದೇ ಸಂಘ ಪರಿವಾರದವರ ಸದ್ಯದ ಉದ್ದೇಶ.

ಒಮ್ಮೆ ಹಿಂದೂತ್ವದ ವಿಷ ದೇಶದಲ್ಲಿ ವ್ಯಾಪಕವಾಗಿ ಹರಡಿದರೆ ಮುಂದೊಂದು ದಿನ ಆ ಪರಿಸ್ಥಿತಿಯ ದುರ್ಲಾಭ ಪಡೆದು ಇಡೀ ದೇಶವನ್ನು ಫ್ಯಾಸಿಸ್ಟರ ಮುಷ್ಟಿಯೊಳಗೆ ಬಂಧಿಸಬಹುದೆಂಬುದು ಸಂಘ ಪರಿವಾರದವರ ಲೆಕ್ಕಾಚಾರ. ಇದು ಅವರ ದೀರ್ಘಕಾಲಿನ ಯೋಜನೆ.

ಆದರೆ ಯಾವುದೇ ಪರಿಸ್ಥಿತಿಯಲ್ಲಿ ಈ ದೇಶ ಫ್ಯಾಸಿಸ್ಟರ ಮುಷ್ಟಿಯೊಳಗೆ ಸಿಲುಕುವುದಿಲ್ಲವೆಂದು ನಾನು ದೃಢವಾಗಿ ನಂಬಿದ್ದೇನೆ. ನಮ್ಮದು ಬಹು ಧರ್ಮಗಳ, ಬಹು ಸಂಸ್ಕೃತಿಯ, ಬಹು ಭಾಷಿಕರ ದೇಶ. ಅನೇಕತೆಯಲ್ಲಿ ಏಕತೆಯನ್ನು ಕಂಡುಕೊಂಡು ತಲತಲಾಂತರದಿಂದ ಶಾಂತಿ ನೆಮ್ಮದಿಯಿಂದ ಬಾಳಿ ಬದುಕಿದ ದೇಶ. ಇಲ್ಲಿ ಬುದ್ಧನ ಬೆಳಕು ಬೆಳಗುತ್ತಿದೆ. ಗಾಂಧೀಜಿಯವರ ಸತ್ಯಮೇವ ಜಯತೆ ಮೊಳಗುತ್ತಿದೆ. ಅಂಬೇಡ್ಕರ್ ಅವರು ದಲಿತರಲ್ಲಿ ಕೆರಳಿಸಿದ ಸ್ವಾಭಿಮಾನದ ಕಿಚ್ಚು ಸೆಟೆದು ನಿಂತು ಘರ್ಜಿಸುತ್ತಿದೆ. ಏಸು ಹಾಗೂ ಪ್ರವಾದಿ ಪೈಗಂಬರರ ಸಂದೇಶಗಳೂ ಇಲ್ಲಿ ಕಾರ್ಯೋನ್ಮುಖವಾಗಿವೆ. ಹೀಗಾಗಿ ಮೋದಿಯೆಂಬ ದುಷ್ಟ ಶಕ್ತಿಗೆ ಇಲ್ಲಿ ತನ್ನ ಬೇಳೆ ಬೇಯಿಸಿಕೊಳ್ಳಲಾಗದು.

ಆದರೂ ಈ ಸಂದರ್ಭದಲ್ಲಿ ಮೋದಿ ಮತ್ತು ಆತನ ಪಟಾಲಮ್ಮಿಗೆ ಮೈದಾನವನ್ನು ಖುಲ್ಲಾ ಬಿಟ್ಟು ಬಿಡಬಾರದು. ಇದು ಕೇವಲ ಮೋದಿಯೆಂಬ ವ್ಯಕ್ತಿಯೊಬ್ಬನನ್ನು ಎದುರಿಸುವ ಪ್ರಶ್ನೆಯಲ್ಲ, ಬದಲಾಗಿ ಆತ ಪ್ರತಿನಿಧಿಸುವ ದುಷ್ಟ ಶಕ್ತಿಯನ್ನು ದಮನ ಮಾಡುವ ಪ್ರಶ್ನೆ. ಒಂದೆಡೆ ಮೋದಿಯಂತಹ ಕರಾಳ ಮುಖವನ್ನು ಮುಂದಿಟ್ಟುಕೊಂಡು ಹಿಂದೂತ್ವವಾಗಿ ಫ್ಯಾಸಿಸ್ಟರು ತಮ್ಮ ಶಕ್ತಿಯನ್ನು ವೃದ್ಧಿಸುವ ಪ್ರಯತ್ನದಲ್ಲಿದ್ದರೆ ಇನ್ನೊಂದೆಡೆ ಈ ದೇಶದ ಆತ್ಮವೇ ಆಗಿರುವ ಜಾತ್ಯತೀತರು ಮೈಕೊಡವಿ ನಿಲ್ಲಬೇಕಾಗಿದೆ. ಮೋದಿಯ ನಿಜರೂಪ ಬಯಲು ಮಾಡುತ್ತ ಆತನನ್ನು ಸುತ್ತುವರಿದಿರುವ ದುಷ್ಟ ಶಕ್ತಿಯನ್ನೇ ದಮನ ಮಾಡಬೇಕಾಗಿದೆ.

ಯಾಕೆಂದರೆ ಇದು ವೈದಿಕ ಹಾಗೂ ಅವೈದಿಕರ ನಡುವಿನ ಸಂಘರ್ಷ. ಪುರೋಹಿತಶಾಹಿ ಮತ್ತು ಮಾನವತಾವಾದಿಗಳ ನಡುವಿನ ಸಂಘರ್ಷ. ರಾಜ್ಯಾಂಗ ಮತ್ತು ಅದರ ವೈರಿಗಳ ನಡುವಿನ ಸಂಘರ್ಷ. ಪ್ರಜಾಪ್ರಭುತ್ವ ಮತ್ತು ಅದರ ವಿರೋಧಿಗಳ ನಡುವಿನ ಸಂಘರ್ಷ. ರಾಜ್ಯಾಂಗ ಮತ್ತು ಪಂಚಾಂಗದ ನಡುವಿನ ಸಂಘರ್ಷ.

ಈ ಸಂಘರ್ಷ ಇಂದು ನಿನ್ನೆಯದಲ್ಲ. ಶತಶತಮಾನಗಳಿಂದ ನಡೆಯುತ್ತಾ ಬಂದಿರುವ ಸಂಘರ್ಷವಿದು. ಇವತ್ತು ಮೋದಿಯನ್ನು ಸುತ್ತುವರಿದಿರುವ ಸಂಘ ಪರಿವಾರ ದೇಶದಲ್ಲಿ ತನ್ನ ಪುರೋಹಿತಶಾಹಿಯ ಸಾರ್ವಭೌಮತ್ವ ಸ್ಥಾಪಿಸಿ, ಮನುವಾದವನ್ನು ಜಾರಿಗೆ ತಂದು, ಜಾತಿಗಳ ಮೇಲೆ ಜನರನ್ನು ಒಡೆದು ಎಲ್ಲರೂ ಬ್ರಾಹ್ಮಣನಿಗೆ ಅಧೀನ ಎಂಬ ಪರಿಸ್ಥಿತಿಯನ್ನು ಪುನರ್‌ನಿರ್ಮಿಸಲು ಹವಣಿಸುತ್ತಿದೆ. ಅದಾಗಬೇಕಾದರೆ ನಮ್ಮ ರಾಜ್ಯಾಂಗ, ಪ್ರಜಾಪ್ರಭುತ್ವ, ಕಾನೂನಿನ ವ್ಯವಸ್ಥೆ ಎಲ್ಲವನ್ನೂ ಸಂಘಪರಿವಾರ ನುಚ್ಚುನೂರಾಗಿಸಬೇಕು.

ನಾವು ಪ್ರಜಾಸತ್ತೆಯನ್ನು, ಜಾತ್ಯತೀತ ವ್ಯವಸ್ಥೆಯನ್ನು, ಸಮಾಜವಾದಿ ಸಿದ್ಧಾಂತವನ್ನು ಉಳಿಸಿಕೊಳ್ಳಬೇಕೆಂದರೆ ನಾವು ನರಹಂತಕ, ಸುಳ್ಳುಗಾರ, ನಕಲಿ ಅಭಿವೃದ್ಧಿಯ ಹರಿಕಾರ, ಸರ್ವಾಧಿಕಾರಿ ಮತ್ತು ಅವಿವೇಕಿಯೂ, ಅಜ್ಞಾನಿಯೂ ಆಗಿರುವ ಮೋದಿಯನ್ನು ದಮನ ಮಾಡಬೇಕು. ■

ಬೆಂಗಳೂರು ನಗರ ಪಾಲಿಕೆಗೆ 1.5 ಕೋಟಿ ರೂ. ತೆರಿಗೆ ವಂಚನೆ

ಬೆಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಯಾವುದೇ ಕಾರ್ಯಕ್ರಮದ ಬ್ಯಾನರ್-ಹೋರ್ಡಿಂಗ್‌ಗಳನ್ನು ಪ್ರದರ್ಶಿಸಲು ಚದರ ಮೀಟರಿಗೆ ನೂರಾ ಐವತ್ತು ರೂಪಾಯಿಯಂತೆ ತೆರಿಗೆ ಪಾವತಿಸಿ ಅನುಮತಿ ಪಡೆಯಬೇಕಾಗುತ್ತದೆ.

ನವೆಂಬರ್ 17 ರ ನರೇಂದ್ರ ಮೋದಿಯ ರ್‍ಯಾಲಿಗೆ ಬೆಂಗಳೂರಿನಲ್ಲಿ ಸುಮಾರು ಹತ್ತು ಸಾವಿರದಷ್ಟು ಬ್ಯಾನರ್ ಹಾಗೂ ಹೋರ್ಡಿಂಗ್‌ಗಳನ್ನು ಹಾಕಿರುವ ಬಿಜೆಪಿ ದೇಶಭಕ್ತರು ನಗರ ಪಾಲಿಕೆಗೆ ನಯಾಪೈಸೆಯಷ್ಟೂ ತೆರಿಗೆ ಕಟ್ಟದೆ, ಅನುಮತಿಯನ್ನು ಪಡೆಯದೆ ಭಂಡತನ ತೋರಿಸಿದ್ದಾರೆ.

ನಿಯಮದ ಪ್ರಕಾರ ಬಿಜೆಪಿಗಳು ಹಾಕಿರುವ ಈ ಪ್ರಚಾರ ವಸ್ತುಗಳು ಒಂದು ಲಕ್ಷ ಚದರ ಮೀಟರಿನಷ್ಟು ಸಾರ್ವಜನಿಕ ಅರ್ಥಾತ್ ಪಾಲಿಕೆಯ ಜಾಗ ಬಳಸಿಕೊಂಡಿದ್ದು ಚದರಡಿಗೆ ನೂರೈವತ್ತು ರೂಪಾಯಿಯಂತೆ ಲೆಕ್ಕ ಹಾಕಿದರೆ ಅದು ಒಂದೂವರೆ ಕೋಟಿ ರೂಪಾಯಿ ಆಗುತ್ತದೆ.

ಹಾಲಿ ಬೆಂಗಳೂರಿನ ಮೇಯರ್ ಸತ್ಯ ನಾರಾಯಣ ಬಿಜೆಪಿಯವನಾಗಿದ್ದು 'ಬಿಬಿಎಂಪಿ ಈಗ [illegible] [illegible] ನಮ್ಮ ಬಿಜೆಪಿ ಪಾರ್ಟಿ ತೆರಿಗೆ ಕಟ್ಟುವ ಅಗತ್ಯವಿಲ್ಲ' ಎಂದು [illegible] ಹೇಳಿದ್ದಾನೆ.

ಮೋದಿ ರ್‍ಯಾಲಿಗೆ ಬಿಜೆಪಿ ಅಂದಾಜು 20 ಕೋಟಿ [illegible] ಮಾಡುತ್ತಿದೆ. ಆದರೆ ಬಿಬಿಎಂಪಿ ಕಾನೂನು ಪಾಲಿಸಿ ಬ್ಯಾನರ್‌ನ ತೆರಿಗೆ ಕಟ್ಟದ [illegible].

ಇವರ ದೇಶಭಕ್ತಿಗೆ ಎಷ್ಟೊಂದು [illegible].

ನಂಬಿಕೆಯುವರದ್ದಲ್ಲ, ನಂಬಿಸುವವರ ಅಹಿಂದ ವಿರೋಧ

ವರ್ತಮಾನಕಾಲದ ಕನ್ನಡದ ಬಹುಮಟ್ಟಿಗಿನ ದಿನಪತ್ರಿಕೆಗಳ ಮೇಲೆ ಕಣ್ಣಾಡಿಸಿದರೆ ವಿಚಿತ್ರವೂ ಅಪಾಯಕಾರಿಯೂ ಆದ ಆತಂಕಕಾರಿ ಯತ್ನವೊಂದು ಗೋಚರವಾಗುತ್ತದೆ. ಜನರ ಧಾರ್ಮಿಕ ನಂಬಿಕೆಗಳು ಆಕ್ರಮಣದ ಆತಂಕ ಎದುರಿಸುತ್ತಿವೆ ಎಂಬಂತೆ ಕೆಲವು ಸ್ಥಾಪಿತಹಿತಾಸಕ್ತಿಗಳು ಕಟ್ಟಿಕೊಡುತ್ತಿರುವ ಕಲ್ಪಿತಕ್ಷೋಭೆಯ ಚಿತ್ರಗಳೇ ರಾರಾಜಿಸುತ್ತಿವೆ. ಬೆಟ್ಟಬಿದ್ದಂತೆ ಸಂಭವಿಸುತ್ತಿರುವ ಈ ಪ್ರತಿಕ್ರಿಯೆಗಳಲ್ಲಿ ಸಂಬಂಧವಿರದ ಸಂಗತಿಗಳನ್ನೆಲ್ಲಾ ತಂದು ನಡೆಸುತ್ತಿರುವ ವ್ಯವಸ್ಥಿತವಾದ ಅಪಪ್ರಚಾರಗಳಿವೆ. ವಿಷಯಕ್ಕೆ ಏನೇನೂ ಸಂಬಂಧವಿರದ ಬಟ್ಟೆಬರೆಯ ಸಂಗತಿಯನ್ನೂ ತಂದು ಜೋಡಿಸುವ ಮೂಲಕ ಮತದ್ವೇಷದ ಬಣ್ಣ ಮೆತ್ತುವ ಯತ್ನಗಳಿವೆ. ಸಾಮಾನ್ಯರ ದೈನಿಕ ಬದುಕಿನ ಸಂಕಟಗಳಿಗೆ ಪರಿಹಾರದ ಭರವಸೆಯೇ ಮೊಳಕೆಯೊಡೆಯದಂತೆ ತಡೆಯುವ ಹುನ್ನಾರಗಳಿವೆ. ಹೀಗೆ ಆಗಬಾರದ್ದು ಆಗಿಹೋದಂತೆ ಆಕ್ರಮಣಕ್ಕೆ ತುತ್ತಾಗುತ್ತಿರುವುದು ಮೌಢ್ಯನಿಷೇಧಕ್ಕೆ ಸಂಬಂಧಿಸಿದ ಕಾಯ್ದೆ. ಅಷ್ಟಕ್ಕೂ ಈ ಕೂಗು ಮೌಢ್ಯನಿಷೇಧ ಕಾಯ್ದೆಯನ್ನು ವಿರೋಧಿಸಿ ಅಲ್ಲ, ಕಾಯ್ದೆಯ ಮಾತಿರಲಿ ಅಂತಹ ಕರಡು ಕೂಡಾ ಸಿದ್ಧವಾಗಿರದ ಹೊತ್ತಿನಲ್ಲಿ ಆ ಪ್ರಸ್ತಾಪವನ್ನೇ ಮಾಡದಂತೆ ಏಳುತ್ತಿರುವ ಹುಯ್ಯಲಿದು. ಕೆಲವರು ಇದನ್ನೇ ಬಾಯಿಬಿಟ್ಟು ಹೇಳಿಯೂ ಮುಗಿಸಿದ್ದಾರೆ. ಇನ್ನು ಕೆಲವರು ಈ ಸಂಬಂಧವಾದ ಜಾಗೃತಿಯೇ ಇದಕ್ಕಿರುವ ಏಕೈಕ ಪರಿಹಾರವೆಂದೂ ಪ್ರತಿಪಾದಿಸಿ ಕಾನೂನಿನ ಆಗತ್ಯವನ್ನು ಪ್ರಶ್ನಿಸಿದ್ದಾರೆ. ನಂಬಿಕೆಗಳು ಕಳೆದುಹೋದರೆ ಬದುಕೇ ಶೂನ್ಯ ಎಂದು ಮತ್ತೆ ಕೆಲವರು ವಾದಿಸಿದ್ದಾರೆ. ಈ ಒಟ್ಟೂ ಪ್ರತಿಕ್ರಿಯೆಗಳು ಪ್ರತಿಗಾಮಿತನ ಮತ್ತು ಮೌಢ್ಯಪರತೆಯ ಜೊತೆಗೆ ಬದಲಾವಣೆಯನ್ನೇ ಆಗಗೊಡದಂತೆ ತಡೆಯುವ ಮೊಂಡುತನಕ್ಕೂ ಸಾಕ್ಷಿಯಂತಿವೆ.

ಮೌಢ್ಯವನ್ನು ಜಾಗೃತಿಯಿಂದ ನಿವಾರಿಸಬೇಕೆಂದೂ, ಅದಕ್ಕೆ ಕಾನೂನೊಂದರ ಅಗತ್ಯವಿಲ್ಲವೆಂದೂ ಪ್ರತಿಪಾದಿಸುವವರು ಮೂಢನಂಬಿಕೆಯನ್ನು ನಿಷೇಧಿಸಿ ತರುವ ಕಾನೂನು ಜನರ ನಂಬಿಕೆಯ ಮೇಲೆ ಪ್ರಹಾರ ನಡೆಸುತ್ತದೆಂದೂ, ಜನರ ಶ್ರದ್ಧೆಯ ಜಗತ್ತಿಗೆ ಆಪತ್ತನ್ನು ಉಂಟು ಮಾಡುತ್ತದೆ ಎಂದೂ ವಾದ ಮಾಡುತ್ತಿದ್ದಾರೆ. ಈ ವಾದವನ್ನು ಒಂದಿಷ್ಟು ಎಚ್ಚರದಿಂದ ಗಮನಿಸಬೇಕಾಗಿದೆ. ಯಾಕೆಂದರೆ ಈ ಜಾಣ ವಾದಗಳು ಬದಲಾವಣೆಯನ್ನು ಮುಂದಕ್ಕೆ ಹಾಕುವ ಮೂಲಕವೇ ತಡೆಯುವಲ್ಲಿ ಯಶಸ್ವಿಯಾಗುತ್ತವೆ. ನಂಬಿಕೆ ಅಥವಾ ಮೂಢನಂಬಿಕೆಯೊಂದು ತೀರಾ ವೈಯಕ್ತಿಕವಾಗಿದ್ದಾಗ, ಸಾಮಾಜಿಕವಾದ ಅವಮಾನದ ಸಂಗತಿಯಾಗದಿದ್ದಾಗ ಅದರ ಉಸಾಬರಿಗೆ ಯಾವ ಕಾಲದಲ್ಲಿಯೂ ಯಾವ ಕಾನೂನೂ ಬರಲಾರದು. ಆದರೆ ಕೆಲವರ ನಂಬಿಕೆ ಇನ್ನು ಕೆಲವರ ಬದುಕುವ ಹಕ್ಕನ್ನು ಕಸಿದರೆ, ಆತ್ಮಗೌರವವನ್ನು ಕಸಿದರೆ ಅದನ್ನು ಜಾಗೃತಿಯಿಂದಲೇ ನಿವಾರಿಸಬೇಕೆಂದು ವಾದಿಸುವುದು ಈ ಸಾಮಾಜಿಕ ಸಂದರ್ಭದಲ್ಲಿ ಹಾಸ್ಯದ ಸಂಗತಿಯಷ್ಟೇ ಆಗುತ್ತದೆ. ಯಾಕೆಂದರೆ ಸ್ವಾತಂತ್ರ್ಯ ಬಂದು 60 ವರ್ಷಗಳು ಕಳೆದ ಮೇಲೆ ಕೊರಗರ ಅಜಲು ಪದ್ಧತಿಗೆ ಕಾನೂನಿನ ನೆಲೆಯ ನಿಷೇಧದ ಮೂಲಕವೇ ತಡೆಯೊಡ್ಡಲಾಯಿತೆಂಬುದನ್ನು ನಿರಾಕರಿಸಲು ಪ್ರಾಯಶಃ ಸಾಧ್ಯವಾಗದು. ಕಂಬಳದಲ್ಲಿನ ಹನಿಕೂರುವುದು, ಸಾವಿನ ಅಜಲು, ಉಣ್ಣುವ ಅನ್ನಕ್ಕೆ ಕೂದಲು ಉಗುರು ಸೇರಿಸಿ ಕೊಡುತ್ತಿದ್ದುದು ಇವೆಲ್ಲವನ್ನೂ ತಮ್ಮ ಪಾಲಿನ ಸೇವೆಯೆಂದೇ ನಂಬಿ ಶತಮಾನಗಳಿಂದ ಕೊರಗರು ವಿರೋಧಿಸದೆ ಅನುಸರಿಸಿಕೊಂಡಿದ್ದರು. ಉಂಡ ಎಂಜಲೆಲೆಯಲ್ಲಿನ ಅನ್ನವನ್ನು ತಮ್ಮದೇ ಮಕ್ಕಳ ಎಂಜಲಿಗೆ ಸಮಾನವೆಂದು ಪ್ರಸ್ತವಿರುವ ಕಡೆ ಕರೆಯದೆಯೇ ಬಂದು ಕೊರಗರು ಸಂಗ್ರಹಿಸುತ್ತಿದ್ದರು. ಇಲ್ಲಿಯೂ ಜಗತ್ ಸೃಷ್ಟಿಯ ನಂಬಿಕೆ ಇತ್ತು, ಎಲ್ಲ ಜಾತಿಸಂಕುಲಗಳೂ ಕೊರಗರಿಂದಲೇ ಆದುವು ಎನ್ನುವ ಮಿಥ್ ಇತ್ತು ಮತ್ತು ಇದೆ. ಇದನ್ನು ಅವರು ನಂಬಿಕೆಯೆಂದೇ ಅನುಸರಿಸುತ್ತಿದ್ದರು. ಕಂಬಳ ಇತ್ಯಾದಿಗಳಲ್ಲಿ ಅಪಾಯಕಾರಿಯಾದ ಕದಿ(ಪಟಾಕಿ)ಗಳನ್ನು ಕೊರಗರೇ ಹಾರಿಸುತ್ತಿದ್ದರು. ಅವುಗಳಿಗೆ ಅವರು ಬಲಿಯಾಗುತ್ತಿದ್ದುದೂ ಇತ್ತು. ನಾಗರಿಕ ಸಮಾಜ ಸ್ವಲ್ಪವೂ ನಾಚದೆ ನಂಬಿಕೆಯ ಮೇಲಿನ ಗೌರವದಿಂದ ಇವನ್ನೆಲ್ಲಾ ಮುನ್ನಡೆಸಿಕೊಂಡು ಬಂದಿತ್ತು. ಈ ಅನಿಷ್ಟವನ್ನು ಕರ್ನಾಟಕ ಸರ್ಕಾರವು ಅಜಲು ನಿಷೇಧ ಕಾಯಿದೆಯ ಮೂಲಕವೇ ನಿಷೇಧಿಸಿತ್ತಲ್ಲದೆ ಜಾಗೃತಿಯೊಂದೇ ಸಾಕಾಗಿರಲಿಲ್ಲ. ಈ ನಿಷೇಧದ ತರುವಾಯವೂ ಅಲ್ಲಲ್ಲಿ ಅದನ್ನು ಉಲ್ಲಂಘಿಸಿಕೊಂಡು ನಡೆಸಲಾಗುತ್ತಿರುವ ಅಜಲು ಆಚರಣೆಗಳನ್ನು ಇಂದಿನ ಅಪಪ್ರಚಾರಕ್ಕೆ ಅವಕಾಶ ಮಾಡಿಕೊಡುತ್ತಿರುವ ಇವೇ ಪತ್ರಿಕೆಗಳೇ ವರದಿ ಮಾಡಿವೆ.



ಕೊರಗರಿಗೆ ಶಾಸನ ರೂಪದಲ್ಲಿ ಅಜಲಿನಿಂದ ಮುಕ್ತಿ ಸಿಕ್ಕಿದೆ. ಆದರೆ ಆದಿಮ ಮಾದರಿಯ ಅವರ ಸಂಗೀತ ಪರಿಕರವಾದ ದೋಲಿನವಾದನಕ್ಕೆ ದೈವದಮನೆಯ ಆವರಣದೊಳಕ್ಕೆ ಇಂದಿಗೂ ಪ್ರವೇಶ ಸಿಕ್ಕಿಲ್ಲ. ಅವರು ಬೇಡುತ್ತಿರುವುದು ಮನುಷ್ಯರಂತೆ ನಡೆಸಿಕೊಳ್ಳಿ. ನಮಗೂ ಉಳಿದವರಂತೆ ದೇವಸ್ಥಾನ ಅಥವಾ ದೈವದಮನೆಯ ಆವರಣದೊಳಕ್ಕೆ ಕರೆದು ಹೂವಿನ ಪ್ರಸಾದಕ್ಕೆ ಕೈಯೊಡ್ಡುವ ಗೌರವ ಕೊಡಿ ಎಂದಷ್ಟೇ. ಅದನ್ನು ಅವರು ಕೇಳುತ್ತಲೇ ಇದ್ದಾರೆ. ಆದರೆ ಕೊರಗರ ದೋಲುಗಳೇ ನಿರಾಕರಣೆಗೆ ಒಳಗಾಗಿವೆಯಲ್ಲದೆ ಎಲ್ಲಿಯೂ ನಂಬಿಕೆಯನ್ನು ಉಲ್ಲಂಘಿಸಿ ಕೊರಗನೊಬ್ಬನಿಗೆ ದೈವದಮನೆಯ ಆವರಣಕ್ಕೆ ಕರೆದು ಕೈಪ್ರಸಾದ ಕೊಟ್ಟ ಉದಾಹರಣೆ ಪ್ರಾಯಶಃ ಇರಲಾರದು. ಮಡಿ-ಮೈಲಿಗೆಯ ನಂಬಿಕೆಯ ನೆಲೆಯಲ್ಲಿಯೇ ಈ ಬಹಿಷ್ಕಾರ ಚಾಲ್ತಿಯಲ್ಲಿದೆ ಎಂಬುದನ್ನು ಗಮನಿಸಬೇಕು. ಜಾಗೃತಿಯ ಬಗೆಗೆ ಮಾತನಾಡುವವರು ಅಕ್ಷರಸ್ಥರ ಆಡುಂಬೊಲವಾದ ಕರಾವಳಿಯಲ್ಲಿಯೇ ಸಂಭವಿಸುತ್ತಿರುವ ಈ ಅಘೋಷಿತ ಬಹಿಷ್ಕಾರವನ್ನು ಏನೆನ್ನುತ್ತಾರೆ?

ಇನ್ನು ಕರಾವಳಿಯಲ್ಲಿನ ಇನ್ನೊಂದು ಮುಖ್ಯವಾದ ಆಚರಣೆ ನಾಗಾರಾಧನೆಗೆ ಸಂಬಂಧಿಸಿದುದು. ಯಾರು ಏನೇ ಹೇಳಿದರೂ ನಾಗನ ಕುರಿತಂತೆ ನಂಬಿಕೆಗಿಂತ ಹೆಚ್ಚು ಭಯವೇ ಇಲ್ಲಿ ಮನೆಮಾಡಿದೆ. ಈ ಭಯ ಅಥವಾ ನಂಬಿಕೆಯನ್ನು ನೆಲೆಮಾಡಿಕೊಂಡು ಬೆಳೆಯುತ್ತಿರು[...] ಆಸ್ತಿಕತೆಯ ಶೂನ್ಯಬಂಡವಾಳದ ಉದ್ಯಮ ಸ್ವರೂಪವ[...] ನಿಯಂತ್ರಿಸುವುದು ಬಡ ದುಡಿಮೆಗಾರರ ದೃಷ್ಟಿಯಿಂ[...] ಲಾದರೂ ಅಗತ್ಯವಿದೆ. ಬಿತ್ತಲಾದ ಭಯದಿಂದಾಗಿ [...] ನಾಗ ಸಂದರ್ಶನಗಳೆಂದರೆ ದುಬಾರಿ ಸೇವೆಗಳು. ಸಹಕಾ[...] ಸಂಘಗಳಿಂದ ಕರಾವಳಿಯ ರೈತರು ಪಡೆಯುತ್ತಿರುವ ಸಾಲ[...] ಬಹುಪ್ರಮಾಣವನ್ನು ನಾಗಸಂಸ್ಕಾರಗಳ ಆಚರಣೆಂ[...] ರೂಪದಲ್ಲಿ ನಿರಾಯಾಸವಾಗಿ ಕಸಿಯಲಾಗುತ್ತಿದೆ. ಕರಾವಳಿ[...] ಸಹಕಾರಿ ಸಂಘಗಳಲ್ಲಿನ ಕನಿಷ್ಠ 15% ಸಾಲಗ[...] ನಾಗಸಂಬಂಧಿತ ನಂಬಿಕೆಗಳ ದುಬಾರಿ ಖರ್ಚಿಗೆ ಬ[...] ಯಾಗುತ್ತಿವೆ ಎಂದರೆ ಅತಿಶಯೋಕ್ತಿಯಲ್ಲ. ಇಷ್ಟೇ ಅ[...] ಬೆಂಗಳೂರು, ಮುಂಬಯಿಗಳಲ್ಲಿರುವ ಯಾರದೋ ಹೋಟೆ[...] ಗಳಲ್ಲಿ ಮಕ್ಕಳನ್ನು ಕೂಲಿಗೆ ಹಾಕಿ ಪಡೆದ ಮುಂಗಡವೂ[...] ದುಡಿಮೆಯ ಫಲಿನ ದೊಡ್ಡ ಪ್ರಮಾಣವೋ ಈ ನಂಬಿಕೆ[...] ನೆವದಲ್ಲಿ ಕರಗುತ್ತಿವೆ. ಈ ಹಣವನ್ನು ಹಿ[...] ದಕ್ಕಿಸಿಕೊಳ್ಳುವವರು ಆ ಹಣಕ್ಕೆ ತೆರಿಗೆ ಕಟ್ಟುತ್ತಾರೆಯೆ[...] ಇದು ಕಪ್ಪುಹಣದ ಸಾಲಿಗೆ ಸೇರುವುದಿಲ್ಲವೆ? ಈ ಹಣವ[...] ಅನಿವಾರ್ಯ ಒತ್ತಡದಿಂದ ಕೊಡುವಂತೆ ಮಾಡಿ[...] ನಂಬಿಕೆಗಳಿಂದಾಗಿ ಕೊಡುವ ಕೈಗಳು ಅನುಭವಿಸು[...] ದಾಸ್ಯವನ್ನು ಹೇಗೆ ಪರಿಹರಿಸಬೇಕು? ನಾಗಮಂಡಲಗ[...] ಅಧಿಕೃತವಾದ ಪ್ರತ್ಯೇಕ ಚಪ್ಪರದಲ್ಲಿ ರಾಜಾರೋಷವಾ[...] ನಡೆಯುವ ಪಂಕ್ತಿಭೇದವನ್ನು ಹಾಗೆಯೇ ಮುಂದುವ[...] ಸಬೇಕೆ? ದೇವಸ್ಥಾನದಂತಹ ಸಾರ್ವಜನಿಕ ಸ್ಥಳದ[...] ಚಾಲ್ತಿಯಲ್ಲಿರುವ ಪಂಕ್ತಿಭೇದವನ್ನು ಹಾಗೆಯೇ ಮುಂದುವರೆ[...] ವುದು ದೈವ ನಿಯಮ ಎಂದು ಸಾಧಿಸುವುದು ಏನ[...] ಸೂಚಿಸುತ್ತದೆ? ನಂಬಿಕೆಯ ಜಗತ್ತಿನ ಅಸಮಾನತೆಗ[...] ಅಸಮಾನತೆಯ ಸಾಮಾಜಿಕ ಸಂರಚನೆಗೂ ಪರಸ[...] ಸಂಬಂಧವಿರಬೇಕಲ್ಲವೇ? ನಂಬಿಕೆಗಳು ಯಾಕೆ ಯಜಮಾ[...] ಅಧೀನ ಸಂಬಂಧವನ್ನೇ ಹೇರುತ್ತವೆ, ಸಮಾನತೆಯ[...] ಹೇಳಲಾರದಾಗುತ್ತವೆ? ಈ ಪ್ರಶ್ನೆಗಳನ್ನೇ ಎತ್ತದೆ ಇವೆಲ್ಲವನ[...] ನಂಬಿಕೆ ಎಂದು ಹಾಗೆಯೇ ಸಂಭಾಳಿಸಿಕೊಂಡ[...] ಹೋಗಬೇಕೆಂದರೆ ಏನು ಹೇಳಿದಂತಾಗುತ್ತದೆ?

ಇನ್ನೂ ಈ ನಾಡಿನಲ್ಲಿ ಮ್ಯಾನ್‌ಹೋಲ್‌ಗಳ ಸ್ವಚ್ಛತಾ[...] ಗುಂಡಿಗೆ ಇಳಿಯಲು ದಲಿತರು ಸಿಕ್ಕುತ್ತಿದ್ದಾರೆ. ಸುಮಾ[...] ಹತ್ತು ಸಾವಿರದಷ್ಟು ಮಂದಿ ತಲೆಮೇಲೆ ಮ[...] ಹೊತ್ತುಕೊಂಡು ಈ ನಾಡಿನಲ್ಲಿ ಜೀವನ ಸಾಗಿಸಿಕೊಂಡಿದ್ದಾ[...] ಸವಣೂರಿನ ಭಂಗೀಕಾರ್ಮಿಕರು ಒಂದು ಸೂರಿಗಾ[...] ಮೈಮೇಲೆ ಮಲ ಸುರಿದುಕೊಂಡೇ ಪ್ರತಿಭಟನೆಯನ[...] ಮಾಡುತ್ತಾರೆ. ಇನ್ನೊಂದು ಕಡೆ ಉಂಡ ಎಂಜಲೆಲೆಯ[...] ಬದುಕಿನ ಸುಖಕ್ಕಾಗಿ ಹಲವರು ಹೊರಳುತ್ತೇವೆ ಎಂ[...] ಮಡೆಸ್ನಾನದಲ್ಲಿ ಭಾಗವಹಿಸುತ್ತಾರೆ. ಇವೆಲ್ಲಾ ಒಂದು ನಾಗ[...]


ತೀರ್ಥಹಳ್ಳಿ ಗಂಗಾಧರ್ ಜೀವಂತಿಕೆಯಲ್ಲಿ ಅದೆಷ್ಟೋ ಅರ್ಥಗಳು


ಗಂಗಾಧರ್ ಬರೋಬ್ಬರಿ ಎಂಬತ್ತೆರಡು ವರ್ಷಗಳ ಕಾಲ ಬದುಕಿ ಮೊನ್ನೆ ತೀರಿಕೊಂಡರು. ತೀರ್ಥಹಳ್ಳಿಯ ಜವಾಬ್ದಾರಿಯುತ ಬದುಕು ಗಂಗಾಧರ್ ಇಲ್ಲದೆ ಹೇಗಿರುತ್ತದೆ ಎಂಬುದರ ಊಹೆ ಸ್ವಲ್ಪ ಕಷ್ಟ. ಅಪ್ಪಟ ಕೃಷಿಕ, ಸಾವಿರಾರು ವಿದ್ಯಾರ್ಥಿಗಳಿಗೆ ಪ್ರೀತಿಯ ಉಪನ್ಯಾಸಕ, ಬಳಕೆದಾರರ ವೇದಿಕೆಯ ಸಂಸ್ಥಾಪಕ, ಒಂದಷ್ಟು ಕಾಲ ಅಂದಿನ ಪುರಸಭೆಯ ಅಧ್ಯಕ್ಷ. ಹೀಗೆ ಹತ್ತು ಹಲವು ಜವಾಬ್ದಾರಿಗಳನ್ನು ನಿರಾಡಂಬರತೆಯಿಂದ ನಿರ್ವಹಿಸಿದ ಕೀರ್ತಿ ತೀರ್ಥಹಳ್ಳಿಯಲ್ಲಿ ಯಾರಿಗಾದರೂ ಸಲ್ಲಬೇಕಿದ್ದರೆ ಅದು ಗಂಗಾಧರ್ ಅವರಿಗೆ ಮಾತ್ರ.

ತುಂಗಾ ಕಾಲೇಜಿನಲ್ಲಿ ಅವರು ಉಪನ್ಯಾಸಕರಾಗಿದ್ದ ಅವಧಿಯಲ್ಲಿ ಸಂಬಳ ಪಡೆಯದೆ ಕೆಲಸ ಮಾಡಿದವರು ಎಂಬ ವಿಸ್ಮಯ ಅವರ ವಿದ್ಯಾರ್ಥಿಗಳಾಗಿದ್ದ ನಮಗೆಲ್ಲ ಕಾಡುತ್ತಾ ಇತ್ತು. ಕಾಲೇಜು ಉಪನ್ಯಾಸಕರಾಗಿದ್ದ ಅವಧಿಯಲ್ಲಿ ಕಾಲೇಜಿನ ಬಗ್ಗೆ ಅವರು ತೆಗೆದುಕೊಳ್ಳುತ್ತಿದ್ದ ರಿಸ್ಕ್ ತುಂಬಾ ದೂರಾಲೋಚನೆಯುಳ್ಳದ್ದಾಗಿತ್ತು. ಇಡೀ ತೀರ್ಥಹಳ್ಳಿಯ ಶೈಕ್ಷಣಿಕ ಕ್ಷೇತ್ರದಲ್ಲಿ ತುಂಗಾ ಮಹಾ ವಿದ್ಯಾಲಯ ವಹಿಸಿದ ಪಾತ್ರ ಇಂದು ಮತ್ತು ಎಂದೆಂದೂ ಅಲ್ಲಗಳೆಯುವಂತಿಲ್ಲ ಎಂದಿದ್ದರೆ ಅದಕ್ಕೆ ಕಾರಣಕರ್ತರಾದವರಲ್ಲಿ ಗಂಗಾಧರ್ ಕೂಡಾ ಒಬ್ಬರು.

ಕಾಲೇಜಿನ ಸುತ್ತಮುತ್ತ ಬೆಳೆದಿರುವ ಎಷ್ಟೋ ಗಿಡಗಳನ್ನು ಗಂಗಾಧರ್ ತಮ್ಮ ತೋಟ ಹಾಗೂ ಬ್ಯಾಣದಿಂದ ತಂದು ನೆಡುತ್ತಿದ್ದುದನ್ನು ಕಣ್ಣಾರೆ ಕಂಡ ವಿದ್ಯಾರ್ಥಿಗಳು ಅನೇಕರು. ಬಿಡುವಿನ ವೇಳೆ ವಿದ್ಯಾರ್ಥಿಗಳಿಗೆ ಹೇಗಾದರೂ ಬಳಕೆಯಾಗಲೇ ಬೇಕು ಎಂಬುದು ಅವರ ಅತೀವ ತುಡಿತ.

ಒಮ್ಮೆ ಕಾಲೇಜಿನಲ್ಲಿ ಗಂಗಾಧರ್ ಪಾಠ ಮಾಡುತ್ತಿದ್ದರು. ನಾನು ಬರುವುದು ಸ್ವಲ್ಪ ತಡವಾಗಿತ್ತು, ಅವರು ತಲ್ಲೀನರಾಗಿ ಪಾಠ ಮಾಡುತ್ತಿದ್ದುದನ್ನು ಲೆಕ್ಕಿಸದೆ "ಬರುವುದೆ?" ಎಂದೂ ಕೇಳದೆ ಕೈಯಲ್ಲಿ ಪುಸ್ತಕವನ್ನೂ ಹಿಡಿದುಕೊಳ್ಳದೆ ಒಳ ನುಗ್ಗಿಯೇ ಬಿಟ್ಟೆ. ನಾನು ಕೈ ಬೀಸಿಕೊಂಡು ನುಗ್ಗಿದ ರೀತಿಯೇ ವಿದ್ಯಾರ್ಥಿಯೊಬ್ಬನ ಅವಲಕ್ಷಣದ ಪ್ರತೀಕವಾಗಿತ್ತು. "ಯಾರಪ್ಪಾ ನೀನು ಮಹಾನುಭಾವ ಇಲ್ಲೇಕೆ ಬಂದೆ? ಅದೂ ಹೇಳದೆ ಕೇಳದೆ?" ಎಂದು ಪ್ರಶ್ನಿಸುವಾಗ ನಾನು ವಿದ್ಯಾರ್ಥಿ ಅಲ್ಲ, ನಾನೊಬ್ಬ ಧಾರಿಹೋಕ, ಅಪ್ಪಿತಪ್ಪಿ ಕ್ಲಾಸಿನೊಳಗೆ ನುಗ್ಗಿದ್ದೇನೆ ಎಂಬ ಭಾವನೆ ಅವರಲ್ಲಿ ಇತ್ತು. "ಸಾರ್ ನಾನು ಇದೇ ಕ್ಲಾಸಿನ ವಿದ್ಯಾರ್ಥಿ. ತಡವಾಯಿತು" ಎಂಬ ಉಡಾಫೆಯ ಉತ್ತರ ನನ್ನಿಂದ. "ಅಪ್ಪಣೆ ಪಡೆಯುವುದು ಬೇಡ. ಕೈಯಲ್ಲಿ ಪುಸ್ತಕವೂ ಇಲ್ಲದೆ ಬರುವುದು ವಿದ್ಯಾರ್ಥಿಯ ಲಕ್ಷಣವೆ? ಹೋಗಲಿ ಇದೇ ಕ್ಲಾಸಿನ ವಿದ್ಯಾರ್ಥಿ ಆಗಿದ್ದೀನಿ ಎನ್ನುತ್ತೀಯ. ಕೆಲವು ಪ್ರಶ್ನೆಗಳಿಗೆ ಉತ್ತರಿಸು ನೋಡೋಣ?" ಎಂದರು. ಅವರು ಕೆಲವು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರಿಸಿದ್ದರಿಂದ ಖುಷಿಯಾಗಿ ಲೈಬ್ರರಿಗೆ ಬರಹೇಳಿ ಅನೇಕ ಪುಸ್ತಕಗಳನ್ನು ಓದಲು ಕೊಡುವುದರ ಮೂಲಕ ನನಗೆ ಗಂಗಾಧರ್ ಬಗ್ಗೆ ಹೆಚ್ಚು ಗೌರವ ಬರುವಂತೆ ನೋಡಿಕೊಂಡರು.


ಕೆ.ವಿ.ಸುಬ್ಬಣ್ಣ


ಅನಂತಮೂರ್ತಿ

ಎಷ್ಟೋ ಸಲ ಅವರ ಮನೆಗೆ ಹೋಗಿದ್ದೇನೆ. ಹೊಸಹೊಸ ಹೊಳಹುಗಳನ್ನು ನಮ್ಮ ಹೋರಾಟಗಳಿಗೆ, ನಮ್ಮ ಚಟುವಟಿಕೆಗಳಿಗೆ ನಿರ್ಮಲ ಮನಸ್ಸಿನಿಂದ ನೀಡುತ್ತಿದ್ದರು. ಸಾಯುತ್ತಾರೆ ಎಂದು ಯಾರೂ ನಿರೀಕ್ಷೆ ಮಾಡಲು ಸಾಧ್ಯವಿರಲಿಲ್ಲ. ಏಕೆಂದರೆ ಕೊನೆಯ ತನಕವೂ ಗಂಗಾಧರ್ ಅವರ ಓಡಾಟ ತೀರ್ಥಹಳ್ಳಿ ನಾಗರಿಕರ ಮನಸ್ಸಲ್ಲಿ ಅಚ್ಚಳಿಯದೆ ಕಣ್ಣಿಗೆ ಕಟ್ಟುವಂತೆ ಕಾಣಿಸುತ್ತಾ ಇತ್ತು. ಈ ಸಂದರ್ಭದಲ್ಲಿ ಘಟನೆಯೊಂದನ್ನು ನೆನಪಿಸಲೇಬೇಕೆನಿಸುತ್ತಿದೆ. ನಾನಾಗ ಕುಪ್ಪಳ್ಳಿ ಕ್ಷೇತ್ರದಿಂದ ಜಿಲ್ಲಾ ಪಂಚಾಯತಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೆ. ದೇವಸ್ಥಾನಗಳಿಗೆ ಹೋಗಿ ಕೈ ಮುಗಿದು, ಪೂಜೆ ಸಲ್ಲಿಸಿ ಚುನಾವಣಾ ಪ್ರಚಾರ ಆರಂಭಿಸುವುದು ವಾಡಿಕೆ. ಅದೇ ರೀತಿಯಾಗಿ ನನ್ನೆಲ್ಲ ಪ್ರತಿಸ್ಪರ್ಧಿಗಳೂ ಮಾಡಿದ್ದರು. ಆದರೆ ನನ್ನ ಚುನಾವಣಾ ಪ್ರಚಾರ ಗಂಗಾಧರ್ ಅವರ ಹಾರೈಕೆಗಳೊಂದಿಗೆ ಆರಂಭಿಸಬೇಕು ಎಂದು ನಾವೊಂದಷ್ಟು ಜನ ಅವರ ಮನೆಗೆ ಬೆಳಗಿನ ಜಾವ ಹೊರಟೆವು. ಆದರೆ ನಮ್ಮ ದುರಾದೃಷ್ಟಕ್ಕೆ ಗಂಗಾಧರ್ ಇನ್ನೂ ಎದ್ದಿರಲಿಲ್ಲ, ಅಲ್ಲದೆ ಅವರ ಪುತ್ರ ಶ್ರೀಧರ್ ಕೂಡಾ ಹಾಸಿಗೆಯಲ್ಲಿದ್ದರು. ಅವರ ಸೊಸೆ ಮತ್ತು ಮೊಮ್ಮಗ 'ಮಿಹಿರ'ರನ್ನು ಭೇಟಿ ಮಾಡಿ ಹೊರಬರ ಬೇಕಾಯಿತು. ಚುನಾವಣೆಗೆ ಸಂಬಂಧಿಸಿದಂತೆ ಅವರ ನಿರ್ಮಲ ಮನಸ್ಸಿನ ಸಲಹೆ ಸೂಚನೆಗಳಿಂದ ವಂಚಿತನಾದ್ದರ ಬಗ್ಗೆ ಇನ್ನೂ ಬೇಸರವಿ[...]


ಗಂಗಾಧರ್

ನಮ್ಮ ಅನೇಕ ಹೋರಾಟಗಳಲ್ಲಿ ಪ್ರತ್ಯಕ್ಷವಾ[...] ಭಾಗವಹಿಸಿದ ಗಂಗಾಧರ್ ಯಾವುದೇ ಪೂರ್ವಾಗ್[...] ಇಟ್ಟುಕೊಳ್ಳದ ಹೊಸತನಕ್ಕಾಗಿ ತುಡಿಯುವ ವಯೋವ[...] ಯುವಕರಾಗಿದ್ದರು. ಯು.ಆರ್.ಅನಂತಮೂರ್[...] ಯವರೊಂದಿಗಿನ ಗಂಗಾಧರ್ ಒಡನಾಟ ತೀರ್ಥಹಳ್ಳಿಯ[...] ಸಾರ್ವಜನಿಕ ಬದುಕಿನ ಸಭ್ಯತೆಯ ಜೀವಂತಿಕೆ ಉಳಿಯ[...] ಕಾರಣವಾಗಿದೆ. ಇವರು ಸಾಯುವ ಎರಡು ದಿನಗಳ ಮುಂ[...] ಇವರ ಹೆಸರು ರಾಜ್ಯ ಮಾನವ ಹಕ್ಕುಗಳ ಆಯೋಗ[...] ನೇಮಕವಾಗಿರುವ ಸಂಗತಿ ಎಲ್ಲರಿಗೂ ಖುಷಿಕೊಡುವಂತ[...] ಸಾಹಿತಿ ನಾ.ಡಿಸೋಜಾರವರೊಂದಿಗೆ ಶ್ರೀಯುತರು ಸ[...]

ನದಿ ನೆಟುಗೆಯ ಬೇರು ಬಳ್ಳಿಗಳಿಲ್ಲದೆ ಸಾಧ್ಯವಾಗು ...? ಮಲದ ಗುಂಡಿಯನ್ನು ಸ್ವಚ್ಛ ಮಾಡೋದು, ...ನ್ನು ತೊರೋದು. ಅದನ್ನೇ ಮೈಮೇಲೆ ಸುರಿದು ...ಲ್ಲು ಪುತಿಭಟಿಸುವುದು. ಎಂಜಲ ಮೇಲೆ ಹೊರ ...ದು, ಅದನ್ನೇ ಸಂಗ್ರಹಿಸಿ ತಿನ್ನೋದು ಇವುಗಳನ್ನೆಲ್ಲಾ ...ಜಾತ ಯಾವ ವರ್ಗ ಮಾಡಿಕೊಂಡು ಬದುಕ್ತಾ ...ಂಬ ಪ್ರಶ್ನೆ, ನಂಬಿಕೆ ಮತ್ತು ಸಾಮಾಜಿಕ ವಾಸ್ತವದ ...ಗಿರುವ ನಂಟನ್ನೇ ಹೇಳುತ್ತವೆ. ನಂಬಿಕೆಗಳು ಉಳಿಯ ...ಬೇಕಾದಾಗ ಅವು ಇಂತಹ ನಂಬಿಕೆ ಮತ್ತು ಸಾಮಾಜಿಕ ...ಗಳೆಲ್ಲವನ್ನೂ ಉಳಿಸಿಕೊಳ್ಳಬೇಕೆಂದೇ ಮಾಡುವ ...ವಾಗುತ್ತವೆ. ನಂಬಿಕೆಗಳ ಮೂಲಕ ಪೊರೆದುಕೊಂಡು ಈ ಮಾದರಿಯ ಸಮಾಜವನ್ನು ಪರಿವರ್ತಿಸುವ ...ಕೊಂದು ಬರಬಾರದೆಂದು ಹಠ ಹಿಡಿಯುವುದು, ...ಗ ವಿತಂಡವಾದವನ್ನು ಮಾಡುವುದು ಮಾನವ ಘನತೆಯನ್ನು ...ಡಿಯುವ ವಾದಗಳಂತೂ ಖಂಡಿತಾ ಅಲ್ಲ.

...ದರೆ ಇಲ್ಲಿ ಪ್ರಶ್ನೆ ಉತ್ತರಗಳನ್ನೂ ಮೀರಿದ ಬೇರೆ ...ಗಳಿವೆ. ಯಾಕೆಂದರೆ ಇವುಗಳು ಜನರ ನಂಬಿಕೆಗಳ ...ಸ್ಥಿತಿಯನ್ನು ಕಾಯ್ದುಕೊಳ್ಳುವ ಪ್ರಯತ್ನಗಳಷ್ಟೇ ಅಲ್ಲ. ...ಳ ಹಿಂದೆ ಯೋಜಿತ ರಾಜಕೀಯ ಲೆಕ್ಕಾಚಾರವೂ ...ವರ್ತಮಾನ ಕರ್ನಾಟಕದ ಅಧಿಕಾರ ಸರಣಿಯಲ್ಲಿ ಯಥಾಸ್ಥಿತಿಯ ಕೊಂಡಿಯನ್ನು ಮರುಸ್ಥಾಪಿಸುವ ಹವಣಿಕೆಯೂ ಇದೆ. ಹಾಗಾಗಿ ಇದು ಮೊದಲ ಅಧಿಕಾರ ದಕ್ಕಿಸಿಕೊಂಡ ಅಹಿಂದದ ವಿರುದ್ಧದ ...ಯ ಭಾಗವೂ ಹೌದು. ಇದನ್ನು ಸಾವಧಾನದಿಂದ ...ಸಬೇಕಾಗುತ್ತದೆ. ಪತ್ರಿಕೆಗಳಲ್ಲಿ ನಡೆಯುತ್ತಿರುವ ...ಚಾರಗಳು ಮತ್ತು ಅಂತರ್ಜಾಲದಲ್ಲಿ ಪ್ರಕಟವಾಗು ... ಪ್ರತಿಕ್ರಿಯೆಗಳು ನೇರವಾಗಿ ಯಾರನ್ನು ಗುರಿಯಾಗಿಸಿ ...ದ ಮಾತಾಡುತ್ತಿವೆ ಎಂಬುದನ್ನು ಗಮನಿಸಿದರೆ ಇದು ...ಗುತ್ತದೆ. ಅವುಗಳಿಗೆ ಸಾಮಾಜಿಕ ಸತ್ಯಗಳ ಜೊತೆಗೆ ...ಗಳನ್ನಿಟ್ಟು ನೋಡಬೇಕೆನ್ನಿಸುವುದೇ ಇಲ್ಲ. ಆದರೆ ...ವೇಳೆ ಇನ್ನೂ ಒಂದು ಸಂಗತಿಯನ್ನು ನಾವು ಮರೆಯ ...ದು. ಅದು ಈ ಬಿರುಸಿನ ಅಪಪ್ರಚಾರಕ್ಕಿರುವ ...ಕ ಮತ್ತು ಮಾನಸಿಕ ದೌರ್ಬಲ್ಯ ಅಲ್ಲಿ ಸಿಟ್ಟಿದೆ, ...ದೆ, ನಿರಾಸೆಯೂ ವ್ಯಕ್ತವಾಗುತ್ತಿದೆ. ಕರ್ನಾಟಕ ನಮ್ಮ ...ಹೋಗುತ್ತಿದೆ ಎಂಬ ಪರಿತಾಪವೂ ಇದ್ದಂತಿದೆ. ಇದು ...ಯ್ದೆಯ ಪ್ರಸ್ತಾಪ ಮೂಡಿಸಿರುವ ತಲ್ಲಣ. ಈ ...ನಿರಾಸೆಗಳು ಯಾವ ಸಾಮಾನ್ಯರು ಈ ಕಾಯ್ದೆಯಿಂದ ...ರಾಗುತ್ತಾರೆಂದು ಹೇಳಲಾಗುತ್ತದೆಯೋ ಅವರದ್ದಲ್ಲ. ...ಯಾವುದೇ ಪ್ರತಿಕ್ರಿಯೆಯೂ ಪ್ರಾಯಶಃ ದಾಖ... ದಾಖಲಾಗುತ್ತಿರುವುದು ನಿರಾಯಾಸವಾಗಿ ಆ ...ನ್ಯರ ನಂಬಿಕೆಗಳ ಮೇಲೆ ಬದುಕು ಕಟ್ಟಿಕೊಂಡ ...ಸೈಟ್ ಮಾದರಿಗಳ ಪ್ರತಿಕ್ರಿಯೆಗಳಷ್ಟೇ. ಅದನ್ನು ಸಮೂಹದ ಕೂಗು ಎನ್ನುವಂತೆ ಕರೆದುಕೊಳ್ಳ ...ದೆ. ಆದರೆ ಇದನ್ನು ನಾಡು ಗಮನಿಸುತ್ತಿದೆ.

...ಯಪ್ರಕಾಶ್ ಶೆಟ್ಟಿ. ಹೆಚ್, ಕುಂದಾಪುರ

...ಸಂಸ್ಥೆಯ ಸದಸ್ಯರಾಗುವ ಮೂಲಕ ರಾಜ್ಯ ಮಾನವ ...ಆಯೋಗಕ್ಕೆ ಇನ್ನಷ್ಟು ಅರ್ಥವಂತಿಕೆ ನೀಡುತ್ತಿದ್ದರು. ...ಗಂಗಾಧರ್ ಇಷ್ಟು ಬೇಗ ನಮಗೆಲ್ಲ ನಷ್ಟ ಉಂಟು ...ತ್ತಾರೆ ಎಂದು ನಿರೀಕ್ಷಿಸಿರಲಿಲ್ಲ.

...ದೇ ಜುಬ್ಬ ಅದರ ಕೆಳಗೆ ಬೆಲ್ ಬಾಟಮ್ ಪ್ಯಾಂಟು, ...ಸೀರ, ಹಾಗೆಯೇ ಕೈಯಲ್ಲಿ ಆಗಾಗ ಕಾಣುವ ಹಿಡಿಯ ಛತ್ರಿ ಇನ್ನೆಲ್ಲಿ? ಈ ಬಾರಿ ಮಳೆ ...ವಾಗಿದ್ದರಿಂದ ಛತ್ರಿ ಬಿಟ್ಟು ಹೊರಬಂದದ್ದು ನೆನಪಿಲ್ಲ. ತಮ್ಮ ತಂಗಿ ದೂರದ ಚೆನ್ನೈನಲ್ಲಿ ತುಂಬಾ ...ರುವ ಸಂಗತಿಯಿಂದ ಆಕೆಗೊಂದಿಷ್ಟು ಸಹಾಯ ...ನೀಡಲು ಹೋದಾಗ ಆ ಯಾವ ಮಾಯಕದಲ್ಲಿ ...ಯ ಚೆನ್ನೈನಲ್ಲಿ ಬೆಂಬತ್ತಿದನೋ ಏನೋ? ಜ್ವರ..ಜ್ವರ. ...ಹಳ್ಳಿಯಲ್ಲಿ ಸಾಧ್ಯವಿಲ್ಲೆಂದಾದೊಡನೆಯೇ ಮಣಿಪಾಲದ ...ದಾಖಲು. ಆದಾಗಲೇ ಅವರ ಹಾರ್ಟೂ, ಕಿಡ್ನಿ ...ಸ್ತ್ರಿಯಗೊಂದಿದ್ದವು: ರಾತ್ರಿ ವೇಳೆ ಅವರ ಮನೆಗೆ ...ದ್ದು ಅವರ ಸಾವಿನ ಸುದ್ದಿ. "ಅವನೊಬ್ಬನಿದ್ದ ...ಮತ್ತು ತೀರ್ಥಹಳ್ಳಿಯ ಬಾಂಧವ್ಯಕ್ಕೆ ಅವನೂ ...ಲ್ಲ" ಎಂದು ಕುಸಿದು ಕುಳಿತವರು ಅವರ ಜೀವದ ಅನಂತಮೂರ್ತಿ. ಕೆ.ವಿ.ಸುಬ್ಬಣ್ಣ, ಅನಂತಮೂರ್ತಿ ...ಹ ಅನೇಕ ಸಾಹಿತಿಗಳ ಸಾಂಗತ್ಯವಿದ್ದರೂ ಬರೆಯು ...ದೆ ಅವರಿಗೆ ಆಗದ ಕೆಲಸ. ತೀರ್ಥಹಳ್ಳಿಯನ್ನಾದರೂ ...ಸು ಎಂದು ಅನಂತಮೂರ್ತಿ ಒತ್ತಾಯಿಸದೇ ...ದಿ ರುಜುವಾತು ಪ್ರಕಾಶನದ 'ತೀರ್ಥಹಳ್ಳಿಯ ಸುತ್ತ ...ವೂ ಪ್ರಕಟಗೊಳ್ಳುತ್ತಿರಲಿಲ್ಲ. ಹಾಗೆಂದು ಸಾಹಿತ್ಯಕ್ಕೆ ...ಸಿದ ಅನೇಕ ಕಾರ್ಯಕ್ರಮಗಳ ಯಶಸ್ವಿ ಸಂಘಟಕ ...ನ್ನು ಮರೆಯಲು ಸಾಧ್ಯವೆ? ಅಪಾರ ಶಿಷ್ಯರಿಗೆ ...ಗೆ ಹಾಗೂ ಆ ಮೂಲಕ ಹುಟ್ಟುವ ಅಸಹ್ಯತೆ ...'ಅನುಕಂಪವನ್ನು' ಅಳಿಸಿದ್ದು ಗಂಗಾಧರ್ ಅವರ ...ವ್ಯಕ್ತಿರೂಪಾಟೀಕ?

■ ಸೊಂತೆ ದೇವರಾಜ್. ತೀರ್ಥಹಳ್ಳಿ

ನ್ಯಾಯಾಲಯಗಳಲ್ಲಿ ಕನ್ನಡ ಭಾಷೆಯ ಬಳಕೆ ಏಕೆ ಕಡಿಮೆ?

ಅಧೀನ ನ್ಯಾಯಾಲಯಗಳಲ್ಲಿ ಕನ್ನಡ ಭಾಷೆಯನ್ನು ಬಳಸಲು ವಕೀಲರು ಮತ್ತು ನ್ಯಾಯಾಧೀಶರು ಅಡ್ಡಿಯಾಗಿದ್ದಾರೆ ಎನ್ನುವ ಆರೋಪ ಬಹಳ ವರ್ಷಗಳಿಂದ ಕೇಳಿಬರುತ್ತಿದೆ. ಇದು ಆಂಶಿಕ ಸತ್ಯವಾದರೂ ಪ್ರಮುಖ ಅಡ್ಡಿ ನಮ್ಮ ನ್ಯಾಯಾಂಗವು ವಿಕಾಸವಾದ ರೀತಿ ಮತ್ತು ಅದರಲ್ಲಿನ ಸಮಸ್ಯೆಗಳನ್ನು ಬಗೆಹರಿಸಲು ಇಚ್ಛಾಶಕ್ತಿ ತೋರದ ಸರ್ಕಾರವೇ ಆಗಿದೆ ಎನ್ನುವುದು ಬಹಳ ಜನರಿಗೆ ಗೊತ್ತಿಲ್ಲ. ಹೈಕೋರ್ಟ್ ನ್ಯಾಯಮೂರ್ತಿಗಳು, ಕರ್ನಾಟಕ ಸರ್ಕಾರವನ್ನು ಪದೇ ಪದೇ ಅಧೀನ ನ್ಯಾಯಾಲಯಗಳಲ್ಲಿ ಕನ್ನಡ ಭಾಷೆಯನ್ನು ಬಳಸಲು ಕಾನೂನುಗಳನ್ನು ಮಾಡಿ ಎಂದು ನಿರ್ದೇಶನ ನೀಡುತ್ತಿರುವುದೂ ಕೂಡ ಸರ್ಕಾರ ಈ ವಿಷಯವಾಗಿ ನಿಜವಾದ ಕಾಳಜಿಯನ್ನು ಇಟ್ಟುಕೊಂಡಿಲ್ಲ ಎಂಬುದನ್ನು ಖಚಿತಪಡಿಸುತ್ತದೆ. ವಕೀಲರು ಹಾಗೂ ನ್ಯಾಯಾಧೀಶರಿಗೆ ಕಾನೂನಿನ ಯಾವುದೇ ಪರಿಕರಗಳನ್ನು ಸರ್ಕಾರ ಒದಗಿಸದೆ ಅಧೀನ ನ್ಯಾಯಾಲಯಗಳಲ್ಲಿ ಕನ್ನಡ ಭಾಷೆಯನ್ನು ಬಳಸಲು ಒತ್ತಾಯಪಡಿಸುವುದು ಹಾಗೂ ಅದಕ್ಕೆ ವಕೀಲರು ಮತ್ತು ನ್ಯಾಯಾಧೀಶರೇ ಕಾರಣ ಎಂಬಂತೆ ಬಿಂಬಿಸುವುದು ಹೊಣೆಗೇಡಿ ಸರ್ಕಾರದ ರಾಜಕಾರಣ ಎಂಬುದನ್ನು ಸ್ಪಷ್ಟಪಡಿಸುವ ಅಗತ್ಯವಿಲ್ಲ. ನಿಜವಾದ ಕಾರಣಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.



ಇಂಗ್ಲಿಷರ ನ್ಯಾಯಾಂಗ ಪದ್ಧತಿ

ಇಂಗ್ಲಿಷರು ತಮ್ಮ ವಸಾಹತುಶಾಹಿ ಆಡಳಿತದಲ್ಲಿ ಇಂಗ್ಲೆಂಡ್‌ನಲ್ಲಿ ರೂಪಿಸಿಕೊಂಡಿದ್ದ ನ್ಯಾಯಾಂಗ ಪದ್ಧತಿಯನ್ನೇ ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಭಾರತಕ್ಕೂ ಅಳವಡಿಸಿದರು. ಕಾನೂನಿನ ಭಾಷೆ ಇಂಗ್ಲಿಷ್ ಆದ್ದರಿಂದ ಹಾಗೂ ಅದರ ರಚನಾ ವಿಧಾನವೇ ಭಾರತಕ್ಕೆ ಅಪರಿಚಿತವಾದ್ದರಿಂದ ಜನಸಾಮಾನ್ಯರು ನ್ಯಾಯಾಂಗದಿಂದ ದೂರವೇ ಉಳಿದು ಅದರ ಪರಿಣಾಮಗಳನ್ನು ಮಾತ್ರ ಅನುಭವಿಸಿದರು. 1947ರ ನಂತರವೂ ಇಂಗ್ಲಿಷರು ಅಳವಡಿಸಿದ್ದ ನ್ಯಾಯಾಂಗ ಪದ್ಧತಿಯನ್ನೇ ಮುಂದುವರಿಸಿದ್ದರಿಂದ ಹಾಗೂ ಪ್ರಾದೇಶಿಕ ಭಾಷೆಗಳಿಗೆ ಹೆಚ್ಚು ಪ್ರಾಧಾನ್ಯತೆ ಕೊಡದೆ ಹೋದುದರಿಂದ ಕಾನೂನುಗಳು ಇಂಗ್ಲಿಷ್ ಭಾಷೆಯಲ್ಲಿಯೇ ಉಳಿದು ಆ ಭಾಷೆಯೇ ಗೊತ್ತಿಲ್ಲದ ಶೇಕಡಾ 90ರಷ್ಟು ಭಾರತೀಯರನ್ನು ತಲುಪಲು ಸಾಧ್ಯವಾಗಲೇ ಇಲ್ಲ. ಈಗ ಬಳಕೆಯಲ್ಲಿರುವ ಇಡೀ ರಾಷ್ಟ್ರಕ್ಕೆ ಅನ್ವಯಿಸುವ ಸ್ವತ್ತು ವರ್ಗಾವಣೆ, ಒಪ್ಪಂದಗಳಂತಹ ಕಾನೂನುಗಳು, ಸಿವಿಲ್, ಕ್ರಿಮಿನಲ್ ಪ್ರೊಸೀಜರ್‌ಗಳು ಮತ್ತು ಇಂತಹ ಅನೇಕ ಕಾನೂನುಗಳು ಇಂಗ್ಲಿಷಿನ ಮೂಲ ಮಾದರಿಯಲ್ಲೇ ಪ್ರಕಟವಾಗುವುದರಿಂದ ಹಾಗೂ ಭಾಷೆ ಮತ್ತು ಮಾದರಿ ಸುಲಭವಾಗಿ ಗ್ರಾಹ್ಯವಾಗದ ಸಾಧ್ಯತೆ ಹೆಚ್ಚಾಗಿದ್ದರಿಂದ, ಅವುಗಳನ್ನು ಅರ್ಥಮಾಡಿಕೊಳ್ಳುವುದೇ ವಕೀಲರಿಗೆ ಮತ್ತು ನ್ಯಾಯಾಧೀಶರಿಗೆ ಕಷ್ಟವಾಗಿರುವಾಗ, ಅವುಗಳನ್ನು ಕನ್ನಡಕ್ಕೆ ಅನುವಾದಿಸಿಕೊಂಡು ನ್ಯಾಯ ವಿತರಣೆಮಾಡುವುದು ಕಷ್ಟದ ಕೆಲಸವೇ ಸರಿ.

ಶಾಸನಗಳ ರಚನೆ

ಒಕ್ಕೂಟ ಮತ್ತು ರಾಜ್ಯ ಮಟ್ಟದ ಎಲ್ಲಾ ಮಸೂದೆಗಳ ಅಧಿಕೃತ ಪಾಠ, ಅಧ್ಯಾದೇಶ, ನಿಯಮ ಮತ್ತು ಉಪನಿಯಮಗಳು ಇಂಗ್ಲಿಷ್ ಭಾಷೆಯಲ್ಲಿಯೇ ಇರತಕ್ಕದ್ದು ಎಂಬ ಸಂವಿಧಾನದ ಆಶಯದಂತೆ ಕೇಂದ್ರ ಹಾಗೂ ರಾಜ್ಯ ಶಾಸಕಾಂಗಗಳು ಎಲ್ಲಾ ಮಸೂದೆಗಳನ್ನು ಇಂಗ್ಲಿಷ್ ಭಾಷೆಯಲ್ಲಿಯೇ ರೂಪಿಸಿ ಪ್ರಕಟಿಸುತ್ತಿರುವುದರಿಂದ ಹಾಗೂ ಅವುಗಳ ರಚನಾ ವಿಧಾನವೂ ಹಿಂದಿನ ಆಂಗ್ಲೋ-ಸ್ಯಾಕ್ಸನ್ ವಿಧಾನವೇ ಆಗಿರುವುದರಿಂದ ಅಲ್ಪಸ್ವಲ್ಪ ಇಂಗ್ಲಿಷ್ ಭಾಷೆ ಕಲಿತವರೂ ಕೂಡ ಕಾನೂನಿನ ಪರಿಭಾಷೆಗಳನ್ನು ಅರಗಿಸಿಕೊಳ್ಳಲು ಸಾಧ್ಯವಾಗಿಲ್ಲ. ಹಾಗಾಗಿ ಈ ಮಾದರಿಗಳು ಹಾಗೂ ಸಂವಿಧಾನದ ಇಂಗ್ಲಿಷ್ ಆಸ್ಥೆ ಬದಲಾಗದ ಹೊರತು ಕನ್ನಡ ಭಾಷಾ ಬಳಕೆ ಸಾಧ್ಯವಿಲ್ಲದ ಮಾತು.

ಭಾಷಾಂತರದ ತೊಡಕು

ಭಾರತದ ಒಕ್ಕೂಟ ಮತ್ತು ರಾಜ್ಯ ಮಟ್ಟದ ಎಲ್ಲಾ ಮಸೂದೆಗಳು ಇಂಗ್ಲಿಷ್ ಭಾಷೆಯಲ್ಲಿಯೇ ಇರುವುದರಿಂದ ಅವುಗಳನ್ನು ಸರಳ ಭಾಷೆಯಲ್ಲಿ ಮತ್ತು ಅರ್ಥಪೂರ್ಣವಾಗಿ ಪ್ರಾದೇಶಿಕ ಭಾಷೆಗಳಿಗೆ ಅನುವಾದಿಸಲು ಎರಡೂ ಭಾಷೆಯಲ್ಲಿ ಪ್ರೌಢಿಮೆಯುಳ್ಳ ತಜ್ಞರ ತಂಡವು ಬೇಕಾಗುತ್ತದೆ ಮತ್ತು ಭಾಷಾಂತರದ ಕೆಲಸ ನಿರಂತರವಾಗಿರುವಂತೆ ನೋಡಿಕೊಳ್ಳಬೇಕಾಗುತ್ತದೆ. ಆದರೆ ಕೇಂದ್ರ ಸರ್ಕಾರ ತಾನು ಜಾರಿಗೆ ತಂದ ಮಸೂದೆಗಳನ್ನು ಪ್ರಾದೇಶಿಕ ಭಾಷೆಗಳಿಗೆ ಭಾಷಾಂತರಿಸುವ ಹೊಣೆಗಾರಿಕೆಯನ್ನು 'ರಾಜಭಾಷಾ ವಿಧಾಯಿ ಆಯೋಗ'ಕ್ಕೆ ಮತ್ತು ಅದನ್ನು ಪರಾಮರ್ಶಿಸುವ ಕೆಲಸವನ್ನು 'ಅಧಿಕೃತ ಭಾಷಾ ವಿಭಾಗ'ಕ್ಕೆ ವಹಿಸಿದ್ದು, ಎರಡೂ ತಂಡಗಳು ಪ್ರಾದೇಶಿಕ ಭಾಷೆಗಳ ನೆಲೆಯ ... ಹಿಡಿದುಕೊಂಡು ಭಾಷಾಂತರ ಕಾರ್ಯವನ್ನು ಮಾಡುತ್ತಿಲ್ಲ. ಹಾಗೆ ಭಾಷಾಂತರ ... ಪಡೆದುಕೊಂಡ ಮೂಲ ಇಂಗ್ಲಿಷ್ ಶಾಸನವೇ ... ಎನ್ನುವ [illegible]

ಹೈಕೋರ್ಟ್‌ಗಳಲ್ಲಿ ಸ್ಥಳೀಯ ಭಾಷೆಯ ಬಳಕೆ, ಸಂವಿಧಾನ ಮತ್ತು ಸುಪ್ರೀಂ ಕೋರ್ಟ್

ಸಂವಿಧಾನದ 348ನೇ ವಿಧಿಯ ಪ್ರಕಾರ ... [illegible]

[illegible]

ಹಾಗೆ ಮಾಡಿಬಿಟ್ಟಿವೆ. ಹಾಗೆಯೇ ರಾಜ್ಯ ಮಟ್ಟದಲ್ಲಿ ಮಸೂದೆಯ ಕರಡನ್ನು ಇಂಗ್ಲಿಷ್‌ನಲ್ಲಿ ತಯಾರಿಸಿ ನಂತರ ಭಾಷಾಂತರ ವಿಭಾಗದ ಮೂಲಕ ಕನ್ನಡಕ್ಕೆ ಅನುವಾದ ಮಾಡುವುದರಿಂದ ಹಾಗೆ ಅನುವಾದ ಮಾಡುವವರು ಸರಳ ಕನ್ನಡವನ್ನು ಬಳಸದೆ ಇಂಗ್ಲಿಷ್ ವಾಕ್ಯ ರಚನೆಯನ್ನೇ ಚಾಚೂತಪ್ಪದೆ ಪಾಲಿಸುವುದರಿಂದ ಭಾಷಾಂತರಗೊಂಡ ಮಸೂದೆಗಳನ್ನು ಓದುವ ಸಾಹಸವನ್ನು ಯಾರೂ ಮಾಡುತ್ತಿಲ್ಲ. ಇದರಾಚೆ ದೇಶದ ಎಲ್ಲಾ ಹೈಕೋರ್ಟ್‌ಗಳು ಮತ್ತು ಸುಪ್ರೀಂಕೋರ್ಟ್ ಮಾಡುತ್ತಿರುವ ತೀರ್ಮಾನಗಳನ್ನು ಆಯಾ ಪ್ರಾದೇಶಿಕ ಭಾಷೆಗೆ ಅನುವಾದ ಮಾಡಲು ಯಾವ ವ್ಯವಸ್ಥೆಯೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬಳಿ ಇಲ್ಲ. ಹೀಗಿರುವಾಗ ವಕೀಲರು ಮತ್ತು ನ್ಯಾಯಾಧೀಶರು ಮಸೂದೆಗಳನ್ನು ಸ್ಥಳೀಯ ಭಾಷೆಗೆ ಭಾಷಾಂತರಿಸಿಕೊಂಡು ಸ್ಥಳೀಯ ಭಾಷೆಯಲ್ಲಿ ನ್ಯಾಯ ತೀರ್ಮಾನಗಳನ್ನು ಮಾಡಲು ಸಾಧ್ಯವೇ?

ಪುಸ್ತಕಗಳ ಕೊರತೆ

ಮೊದಲಿನಿಂದಲೂ ಪ್ರಾದೇಶಿಕ ಭಾಷೆಗಳನ್ನು ಕಾನೂನಿನ ಪರಿಭಾಷೆಗಳಿಗೆ ಮತ್ತು ಬರವಣಿಗೆಗೆ ಒಗ್ಗಿಸುವ ಕೆಲಸ ನಡೆಯಲೇ ಇಲ್ಲ. ಪರಿಣಾಮವಾಗಿ ಕಾನೂನಿಗೆ ಸಂಬಂಧಿಸಿದ ಎಲ್ಲಾ ಪುಸ್ತಕಗಳು ಇಂಗ್ಲಿಷ್ ಭಾಷೆಯಲ್ಲಿಯೇ ಇವೆ. ಅಪವಾದ ಎಂಬಂತೆ ಪ್ರಾದೇಶಿಕ ಭಾಷೆಯಲ್ಲಿರುವ ಪುಸ್ತಕಗಳೂ ಸಮಗ್ರ ಮತ್ತು ಪಾಂಡಿತ್ಯಪೂರ್ಣವಾಗಿರದೆ, ಇರುವುದಷ್ಟೇ ಸಾಧನೆ ಎನ್ನುವಂತಾಗಿದೆ. ಇದಕ್ಕೆ ಸರ್ಕಾರದ ಕಡೆಯಿಂದ ಯಾವುದೇ ಪ್ರೋತ್ಸಾಹ ಸಿಗದಿದ್ದದ್ದೂ ಒಂದು ಕಾರಣವಾದರೆ ಪ್ರಾದೇಶಿಕ ಭಾಷೆಯ ಪುಸ್ತಕಗಳಿಗೆ ಇರುವ ಸೀಮಿತ ಮಾರುಕಟ್ಟೆ ಮತ್ತೊಂದು ಕಾರಣ. ಕೇಂದ್ರ ಸರ್ಕಾರ ತರುವ ಮಸೂದೆಗಳನ್ನು ಅದರ ಎಲ್ಲಾ ತಿದ್ದುಪಡಿಗಳು, ಚರ್ಚೆಗಳೊಂದಿಗೆ ಹಾಗೂ ಅದರ ಮೇಲೆ ಬಂದ ತೀರ್ಪುಗಳೊಂದಿಗೆ ಮ್ಯಾನ್ಯುಯಲ್‌ಗಳಾಗಿ, ಡೈಜೆಸ್ಟ್‌ಗಳಾಗಿ ಮತ್ತು ರೆಫರೆನ್ಸ್‌ಗಳಾಗಿ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟಿಸುವ ಖಾಸಗಿ ವ್ಯಕ್ತಿಗಳು ಅವುಗಳಿಂದ ಲಕ್ಷಾಂತರ ರೂ. ಲಾಭ ಮಾಡಿಕೊಳ್ಳುವುದನ್ನು ಬಿಟ್ಟು ಅವುಗಳನ್ನು ಪ್ರಾದೇಶಿಕ ಭಾಷೆಯಲ್ಲಿ ಪ್ರಕಟಿಸಿ ನಷ್ಟ ಮಾಡಿಕೊಳ್ಳುತ್ತಾರೆಯೇ? ಇಂತಹ ಸ್ಥಿತಿಯಲ್ಲಿ ವಕೀಲರು, ನ್ಯಾಯಾಧೀಶರು ಯಾವ ಪುಸ್ತಕಗಳ ನೆರವು ಪಡೆದು ನ್ಯಾಯಾಲಯಗಳಲ್ಲಿ ಕನ್ನಡವನ್ನು ಬಳಸಬೇಕು?

ವಕೀಲರು ಮತ್ತು ನ್ಯಾಯಾಧೀಶರ ಅಸಹಕಾರ

ಕೆಲಮಟ್ಟಿಗೆ ಹಿರಿಯ ವಕೀಲರು ಮತ್ತು ನ್ಯಾಯಾಧೀಶರು ನ್ಯಾಯಾಲಯಗಳಲ್ಲಿ ಕನ್ನಡದ ಬಳಕೆಗೆ ಅಡ್ಡಿ ನಿಂತಿರುವುದಂತೂ ಸ್ಪಷ್ಟ. ಏಕೆಂದರೆ ಕಳೆದ ಮೂರು-ನಾಲ್ಕು ವರ್ಷಗಳಿಂದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕನ್ನಡದಲ್ಲಿ ತೀರ್ಪು ನೀಡಿದ ನ್ಯಾಯಾಧೀಶರಿಗೆ ಪುರಸ್ಕಾರಗಳನ್ನು ನೀಡುತ್ತಿದ್ದರೂ, ರಾಜ್ಯದಲ್ಲಿ ಒಟ್ಟಾರೆ ಸುಮಾರು 1,500ರಷ್ಟಿರುವ ನ್ಯಾಯಾಧೀಶರಲ್ಲಿ ಪುರಸ್ಕಾರ ಸ್ವೀಕರಿಸಿರುವವರ ಸಂಖ್ಯೆ 200ನ್ನೂ ದಾಟದಿರುವುದು ದುರದೃಷ್ಟಕರ. ಕೆಲವು ನ್ಯಾಯಾಧೀಶರಂತೂ ಇಂಗ್ಲಿಷ್ ಬರದಿರುವ ಕಿರಿಯ ವಕೀಲರನ್ನು ಬೈದು ಹೊರಗಟ್ಟಿರುವ ಉದಾಹರಣೆಗಳೂ ಇವೆ. ಕನ್ನಡ ಮಾತನಾಡುವುದೇ ಅಪಮಾನಕರವೆಂದು ಭಾವಿಸುವ ಕೆಲವು ಹಿರಿಯ ವಕೀಲರು ಇಂಗ್ಲಿಷ್ ಬಾರದ ಕಿರಿಯ ವಕೀಲರನ್ನು ಅವರ ಕಚೇರಿಗೆ ಸೇರಿಸುವುದೇ ಇಲ್ಲ. ಇನ್ನು ನ್ಯಾಯಾಲಯದಲ್ಲಿ ಕನ್ನಡ ಬಳಕೆಗೆ ಪ್ರೋತ್ಸಾಹ ನೀಡುವ ಅವರ ಮಾತು ದೂರವೇ ಉಳಿಯಿತು. ಇವುಗಳ ಆಚೆಗೆ ಬೆರಳೆಣಿಕೆಯಷ್ಟು ವಕೀಲರು (ಹಿರಿಯರೂ ಸಹ) ಕನ್ನಡವನ್ನು ಬಳಸುತ್ತಿರುವುದು ಇದೆಯಾದರೂ ಅದರ ಪ್ರಮಾಣ ಬಹಳ ಕಡಿಮೆ.

ಜನರು ಬಾಧಿತರು ಮತ್ತು ವಕೀಲರೂ ಬಾಧಿತರು

ಜನಸಾಮಾನ್ಯರು ಹತ್ತು ಹಲವು ರೀತಿಯಲ್ಲಿ ಬಾಧಿತರಾಗಲು, ನ್ಯಾಯಾಲಯಗಳಲ್ಲಿ ಕನ್ನಡದ ಬಳಕೆ ಇಲ್ಲದಿರುವುದೂ ಒಂದು ಕಾರಣವಾಗಿದೆ. ಅದೇ ರೀತಿ ಹಳ್ಳಿಗಾಡಿನಿಂದ ಮತ್ತು ಕನ್ನಡ ಮಾಧ್ಯಮದಲ್ಲಿ ಓದಿ ಬರುವ ವಕೀಲರುಗಳು ಎಲ್ಲಾ ಸಾಮರ್ಥ್ಯವಿದ್ದೂ ಅತ್ಯುತ್ತಮವಾಗಿ ಕೆಲಸ ಮಾಡುವುದು ಸಾಧ್ಯವಾಗುತ್ತಿಲ್ಲ. ಹೀಗಾಗಿ ಪರಿಹಾರೋಪಾಯಗಳ ಕುರಿತು ಚಿಂತಿಸುವುದು ಮತ್ತು ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವುದು ಅತ್ಯಂತ ಅಗತ್ಯವಾಗಿದೆ.

ಪರಿಹಾರವೇನು? ಹಲವು ಸಲಹೆಗಳು

ಅ) ಕೇಂದ್ರ ಮತ್ತು ರಾಜ್ಯ ಶಾಸಕಾಂಗಗಳು ಶಾಸನಗಳನ್ನು ಸುತ್ತು ಬಳಸು ಮಾದರಿಯಲ್ಲಿರುವ ಇಂಗ್ಲಿಷ್ ಹಾಗೂ ವಿಶ್ವಸಂಸ್ಥೆಯ ಮಾದರಿಗಳನ್ನು ಕೈಬಿಟ್ಟು ಸರಳವಾಗಿ ಅರ್ಥವಾಗುವ ಮಾದರಿಯಲ್ಲಿ ತರಬೇಕು.

ಆ) ಕೇಂದ್ರ ಸರ್ಕಾರ ತಾನು ಅನುಮೋದಿಸಿದ ಶಾಸನಗಳನ್ನು ಸಮರ್ಪಕವಾಗಿ ಗೊಂದಲಕ್ಕೆ ಅವಕಾಶವಿಲ್ಲದಂತೆ ಹಾಗೂ ಶೀಘ್ರವಾಗಿ ಪ್ರಾದೇಶಿಕ ಭಾಷೆಗಳಿಗೆ ಅನುವಾದ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೂ ಪ್ರಾದೇಶಿಕ ಭಾಷೆಗಳ ಹಳೆಯ ಅವತರಣಿಕೆಗಳಿಗೆ ಕಟ್ಟು ಬೀಳದೆ ಸರಳವಾದ ಭಾಷೆಗೆ ಅನುವಾದ ಮಾಡಬೇಕು.

ಇ) ರಾಜ್ಯ ಸರ್ಕಾರ ತಾನು ರೂಪಿಸುವ ಶಾಸನಗಳ ಕರಡನ್ನು ಮೊದಲು ಕನ್ನಡದಲ್ಲಿ ತಯಾರಿಸಿ ನಂತರ ಇಂಗ್ಲಿಷಿಗೆ ಅನುವಾದಿಸಬೇಕು.

ಈ) ರಾಜ್ಯ ಸರ್ಕಾರ ಇದುವರೆಗೆ ಇಂಗ್ಲಿಷ್‌ನಿಂದ ಅನುವಾದ ಮಾಡಿರದ ಕಾನೂನುಗಳನ್ನು ಸೂಕ್ತ ಅನುವಾದಕರಿಂದ ಸರಳ ಭಾಷೆಯಲ್ಲಿ ಕನ್ನಡಕ್ಕೆ ಅನುವಾದಿಸಬೇಕು.

ಉ) ರಾಜ್ಯ ಸರ್ಕಾರ ಕನ್ನಡ ಭಾಷೆಯನ್ನು ವಿಶೇಷವಾಗಿ ಅಧ್ಯಯನ ಮಾಡಿದವರನ್ನು ನ್ಯಾಯಾಂಗದ ಹುದ್ದೆಗಳಿಗೆ ಆದ್ಯತೆಯಲ್ಲಿ ನೇಮಕ ಮಾಡಿಕೊಳ್ಳಬೇಕು.


ಊ) ನ್ಯಾಯಾಧೀಶರಿಗೆ ಕನ್ನಡ ಭಾಷೆ ಬಳಕೆಯ ಬಗ್ಗೆ ವಿಶೇಷ ತರಬೇತಿ ನೀಡಬೇಕು.

ಋ) ರಾಜ್ಯ ಸರ್ಕಾರ ನ್ಯಾಯಾಲಯಗಳಲ್ಲಿ ಕನ್ನಡ ಭಾಷೆಯನ್ನು ಆದ್ಯತೆಯಲ್ಲಿ ಬಳಸಬೇಕೆಂದು ನ್ಯಾಯಾಧೀಶರಿಗೆ ನಿರ್ದೇಶನ ನೀಡಬೇಕು.

ಎ) ಸರ್ಕಾರವೇ ಮುಂದೆ ನಿಂತು ಖಾಸಗಿ ವ್ಯಕ್ತಿ/ಸಂಸ್ಥೆಗಳು ಪ್ರಕಟಿಸಿರುವ ಮೌಲ್ಯಯುತ ಕಾನೂನು ಪುಸ್ತಕಗಳನ್ನು ಕನ್ನಡಕ್ಕೆ ಸರಳ ಭಾಷೆಯಲ್ಲಿ ಭಾಷಾಂತರಿಸಬೇಕು. ಈ ಪುಸ್ತಕಗಳು ಕಡಿಮೆ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡಬೇಕು.

ಏ) ರಾಜ್ಯದ ಹಿರಿಯ ವಕೀಲರು ನ್ಯಾಯಾಲಯಗಳಲ್ಲಿ ಕನ್ನಡ ಭಾಷೆ ಬಳಸಲು ಮುಂದಾಗಬೇಕು ಮತ್ತು ಕಿರಿಯ ವಕೀಲರಿಗೆ ಸೂಕ್ತ ಮಾರ್ಗದರ್ಶನ ಮಾಡಬೇಕು.


ಐ) ರಾಜ್ಯ ಸರ್ಕಾರ ನ್ಯಾಯಾಲಯಗಳಲ್ಲಿ ಕನ್ನಡ ಭಾಷೆಯ ಬಳಸುವ ವಕೀಲರನ್ನು ಗುರುತಿಸಿ ಸನ್ಮಾನಿಸಬೇಕು.



ಮೇಲೆ ಹೇಳಿದ ಕಾರಣಗಳಿಂದ ... [illegible] ... ಹೋಗದ ಹೊರತು ಕನ್ನಡ ಭಾಷೆಯನ್ನು ನ್ಯಾಯಾಲಯಗಳಲ್ಲಿ ಸಮರ್ಪಕವಾಗಿ ಬಳಸುವುದು ಕಷ್ಟಕರ.

■ ದಿನೇಶ ಅಫ್ಲಯಿ, [illegible]

ಚುನಾವಣೆಗೆ ಆರು ತಿಂಗಳಿರುವಾಗ ಕೇಳಬೇಕಾದ ಪ್ರಶ್ನೆಗಳೇನ



ಈ ವಾರದಲ್ಲಿ ಮೂರ್‍ನಾಲ್ಕು ಅಂಶಗಳು ನಮ್ಮ ಮುಂದೆ ಬರುತ್ತಿವೆ. ಒಂದು, 'ಭಾರತ ಗೆಲ್ಲಿಸಿ' ಎಂಬ ಘೋಷವಾಕ್ಯ ದೊಂದಿಗೆ ನರೇಂದ್ರ ಮೋದಿ ಬೆಂಗಳೂರಿಗೆ ಬರುವ ಕುರಿತು ನಡೆಯುತ್ತಿರುವ ಅಬ್ಬರ. ಎರಡು, ಕರ್ನಾಟಕದಲ್ಲಿ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರವು ಆರು ತಿಂಗಳನ್ನು ಪೂರೈಸಲಿದೆ. ಈಗಾಗಲೇ ಮೋದಿ, ಎನ್‌ಡಿಎ ಅಧಿಕಾರಾವಧಿಯಲ್ಲಿ ಅಭಿವೃದ್ಧಿಯ ದರ ಹೆಚ್ಚಿತ್ತೆಂದೂ, ಯುಪಿಎ ಬಂದ ಮೇಲೆ ಎಲ್ಲವೂ ಹಾಳಾಗಿದೆಯೆಂದೂ ಹೇಳಿ ಆಗಿದೆ. ಯುಪಿಎ 'ಭಾರತ ನಿರ್ಮಾಣ'ದ ಹೆಸರಿನಲ್ಲಿ ಒಂದು ಪ್ರಚಾರ ಯೋಜನೆಯನ್ನು ಆರಂಭಿಸಿದೆ. ಆ ಯೋಜನೆಯಡಿ ದೇಶಾದ್ಯಂತ ಯುಪಿಎಯ 'ಆಮ್ ಆದ್ಮಿ' ಯೋಜನೆಗಳ ಪ್ರಚಾರ ನಡೆಯುತ್ತದೆ. ಅದರ ಜೊತೆಗೆ ದೇಶದ ವಿವಿಧ ಇಲಾಖೆಗಳ ನೌಕರರು ಮತ್ತು ಸ್ವಯಂಸೇವಕರು ಸೇರಿ ಈ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಮತ್ತು ಫಲಾನುಭವಿಗಳಿಗೆ ಸರ್ಕಾರದ ಯೋಜನೆಗಳು ಲಭ್ಯವಾಗುವ ಕೆಲಸ ಮಾಡಲೂ ಕಾರ್ಯಕ್ರಮ ರೂಪಿತವಾಗಿದೆ.

ಈ ಭಾರತ ನಿರ್ಮಾಣ ಜಾಹೀರಾತು ಪರಿಕ್ರಮದ ಮತ್ತೊಂದು ಮಜಲು ಈಗ ಕರ್ನಾಟಕವನ್ನು ಆವರಿಸಲಿದೆ. ಅದರ ಭಾಗವಾಗಿ ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ಕಳೆದೊಂದು ದಶಕದಲ್ಲಿ ನೀಡಿರುವ ಅನುದಾನದ ಅಂಕಿ-ಅಂಶಗಳನ್ನು ಕಳೆದ ವಾರ ಬಿಡುಗಡೆ ಮಾಡಲಾಗಿದೆ. ಸಿದ್ದರಾಮಯ್ಯನವರ ಸರ್ಕಾರವು ಅನ್ನಭಾಗ್ಯ, ಕ್ಷೀರಭಾಗ್ಯ ಶಾದಿ ಭಾಗ್ಯ ಮುಂತಾದ ಕಾರ್ಯಕ್ರಮಗಳನ್ನು ಬಿಂಬಿಸುವ ದೊಡ್ಡ ಹೋರ್ಡಿಂಗ್‌ಗಳೂ ಎಲ್ಲೆಡೆ ರಾರಾಜಿಸುತ್ತಿವೆ. ಬಹುಶಃ ಇನ್ನೆರಡು ವಾರದಲ್ಲಿ ಆರಂಭವಾಗಲಿರುವ ಬೆಳಗಾವಿ ಅಧಿವೇಶನದಲ್ಲಿ ಇವೆಲ್ಲವೂ ಸಾಕಷ್ಟು ಸುದ್ದಿ ಮಾಡಲಿವೆ. ಅದಕ್ಕೆ ಪೂರ್ವಭಾವಿಯಾಗಿ ಕೆಲವು ಕಟು ವಾಸ್ತವಗಳತ್ತ ಗಮನ ಹರಿಸುವ ಅಗತ್ಯವಿದೆ.

ಪ್ರಚಾರ ಹಾಗೂ ಅಬ್ಬರದಲ್ಲಿ ಬಿಜೆಪಿಯ ಕಾರ್ಪೋರೇಟ್ ಶೈಲಿ ಮತ್ತು ಸುಳ್ಳುಗಳನ್ನು ಬೇರೆಯವರು ಸರಿಗಟ್ಟಲು ಸಾಧ್ಯವಿಲ್ಲವಾದರೂ, ಕಾಂಗ್ರೆಸ್ ಸಹ ಜಾಹೀರಾತು ಏಜೆನ್ಸಿಗಳಿಗೆ ಸಾಕಷ್ಟು ದುಡ್ಡು ಸುರಿಯುತ್ತಿರುವುದರಲ್ಲಿ ಅನುಮಾನವಿಲ್ಲ. ಈಗಾಗಲೇ ಮೋದಿಯ ಗುಜರಾತ್‌ನಲ್ಲಿ ಅಭಿವೃದ್ಧಿಯ ಸುಳ್ಳುಗಳ ಅನಾವರಣ ಸಾಕಷ್ಟು ಆಗಿದೆ. ಮೋದಿ ಸಂಪೂರ್ಣ ಸುಳ್ಳುಬುರುಕ ಎಂಬುದು ಸ್ಪಷ್ಟವಾಗಿದೆ. ಆದರೆ ಇಡೀ ದೇಶದ ಸಾಮಾನ್ಯ ಜನರು ಈ ಎರಡೂ ಕೂಟಗಳ (ಎನ್‌ಡಿಎ ಮತ್ತು ಯುಪಿಎ) ಆಡಳಿತದ ಅವಧಿಯಲ್ಲಿ ಸಾಧಿಸಿದ್ದೇನು ಎಂಬುದನ್ನು ಜನಗಣತಿಯ ಅಂಕಿ-ಅಂಶಗಳು ಬಿಚ್ಚಿ ತೋರಿಸುತ್ತಿವೆ.

1999ರಿಂದ 2004ರವರೆಗೆ ವಾಜಪೇಯಿ ನೇತೃತ್ವದ ಎನ್‌ಡಿಎ ಒಕ್ಕೂಟ ಅಧಿಕಾರದಲ್ಲಿದ್ದರೆ, ಅಲ್ಲಿಂದ ಇಲ್ಲಿಯವರೆಗೆ ಯುಪಿಎ ಇದೆ. ಎನ್‌ಡಿಎ ಇದ್ದಾಗಲೇ 2001ರ ಜನಗಣತಿ ನಡೆದಿತ್ತು, ಯುಪಿಎ ಇದ್ದಾಗಿನ 2011ರ ಜನಗಣತಿಯ ವಿವರಗಳು ಈಗ ಸಂಪೂರ್ಣವಾಗಿ ಹೊರಬಿದ್ದಿವೆ. ಅದರ ಆಧಾರದಲ್ಲಿ ಅಶ್ವಿನಿ ಮಹಾಜನ್ ಎಂಬುವರು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಅಂಕಿಅಂಶಗಳ ಮೂಲಕ ಕೆಲವು ವಿಚಾರಗಳನ್ನು ಮುಂದಿಟ್ಟಿದ್ದಾರೆ.

ಅದರ ಪ್ರಕಾರ 2001ರಲ್ಲಿ ಪರಿಶಿಷ್ಟ ಪಂಗಡದ ಜನರಲ್ಲಿ (ಪ್ರಧಾನವಾಗಿ ಆದಿವಾಸಿಗಳು) ಶೇ. 44.7ರಷ್ಟು ಮಂದಿ ಈ ಹಿಂದೆ ತಮ್ಮ ಸ್ವಂತ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದರು. 2011ಕ್ಕೆ ಈ ಪ್ರಮಾಣ ಶೇ.34.5ಕ್ಕೆ ಕುಸಿದಿದೆ. ಇದೇ ಅವಧಿಯಲ್ಲಿ ಇದೇ ವಿಚಾರದಲ್ಲಿ ಪರಿಶಿಷ್ಟ ಜಾತಿಗಳ ಪ್ರಮಾಣ ಶೇ.20ರಿಂದ ಶೇ.14.8ಕ್ಕೆ ಕುಸಿದಿದೆ. ಇದೇ ಅವಧಿಯಲ್ಲಿ ಬೇರೆಯವರ ಜಮೀನಿನಲ್ಲಿ ಭೂರಹಿತ ಕಾರ್ಮಿಕರಾಗಿ ಕೆಲಸ ಮಾಡುವವರ ಪ್ರಮಾಣ ಶೇ.36.8ರಿಂದ ಶೇ.44.4ಕ್ಕೆ ಏರಿಕೆಯಾಗಿದೆ. ಕೇವಲ 10 ವರ್ಷಗಳಲ್ಲಿ ಈ ವ್ಯತ್ಯಾಸ ಆಗಲು ಕೇವಲ ಭೂ ಹಿಡುವಳಿಯ ಪಾಲು (ಅಣ್ಣತಮ್ಮಂದಿರ ನಡುವೆ) ಕಾರಣ ಎನ್ನಲು ಬರುವುದಿಲ್ಲ. ಇಷ್ಟು ಪ್ರಮಾಣದ ಜನರ ಭೂಮಿಯನ್ನು ಕೇವಲ ರಿಯಲ್ ಎಸ್ಟೇಟ್ ಬೆಳವಣಿಗೆಯು ಕಿತ್ತುಕೊಂಡಿರುವುದೂ ಸಾಧ್ಯವಿಲ್ಲ. ವಿವಿಧ 'ಅಭಿವೃದ್ಧಿ ಯೋಜನೆ'ಗಳ ಹೆಸರಿನಲ್ಲಿ ಭೂಮಿ ಕಳೆದುಕೊಂಡಿರುವವರೂ ಈ ಪ್ರಮಾಣಕ್ಕೆ ಇರಲಿಕ್ಕಿಲ್ಲ. ಆದರೆ ಇಂತಹ ಎಲ್ಲಾ ಕಾರಣಗಳು ಒಟ್ಟು ಸೇರಿರಲು ಸಾಧ್ಯ. ಅದರಲ್ಲೂ ಹೆಚ್ಚಿನ ಪ್ರಮಾಣದ ಒಕ್ಕಲೆಬ್ಬಿಸುವಿಕೆ ನಡೆಯುವುದು ಅತ್ಯಂತ ಹೆಚ್ಚಿನ ಬಡ ಜನರು ಇರುವ ಕಡೆ ಮತ್ತು ಆದಿವಾಸಿಗಳ ಪ್ರದೇಶದಲ್ಲಿ ಎನ್ನುವುದು ಗಮನಾರ್ಹ.


ಹಾಗಾಗಿ ಶೇ.25ಕ್ಕೂ ಹೆಚ್ಚಿರುವ ಈ ದೇಶದ ಅತ್ಯಂತ ತುಳಿತಕ್ಕೊಳಗಾದ, 'ಸಾಂವಿಧಾನಿಕ ರಕ್ಷಣೆ ಇರುವ', 'ಮೀಸಲಾತಿಯ ಸೌಲಭ್ಯವನ್ನು ಪಡೆದುಕೊಂಡಿರುವ' ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರ ಪರಿಸ್ಥಿತಿ ಹೀಗೇಕಾಗಿದೆ? ಇದೇ ಅವಧಿಯಲ್ಲಿ 'ಸಾಮಾಜಿಕ ಪ್ರತ್ಯೇಕತೆ ಮತ್ತು ಒಳಗೊಳ್ಳುವ ಅಧ್ಯಯನ ಹಾಗೂ ಅಧ್ಯಯನ ಕೇಂದ್ರಗಳೂ' ಸಾಕಷ್ಟು ಹೆಚ್ಚಾದವು. ಇದೇ ಸಮುದಾಯಗಳ ಕೆಲವರಿಗೆ, ಅದರಲ್ಲೂ ಅತ್ಯಂತ ಮೇಲಿನ ಸ್ತರದಲ್ಲಿರುವವರನ್ನು 'ಒಳಗೊಳ್ಳುವ' ಕೆಲಸ ನಡೆದಿದೆ. ಆದರೆ ಈ ರೀತಿ 'ಕೆಲವರನ್ನು ಹೆಚ್ಚಾಗಿ ಒಳಗೊಳ್ಳುವ' ಆದರೆ 'ಹೆಚ್ಚಿನವರನ್ನು ಹೊರದೂಡುವ' ಯಕ್ಷಿಣಿಯನ್ನು ಜಾಗತೀಕರಣ ನಂತರದ ಆಳುವ ಜನರು ಕರಗತ ಮಾಡಿಕೊಂಡಿದ್ದಾರೆ.

ಹೀಗೆ ತಮ್ಮ ಭೂಮಿಗಳಿಂದ ಸ್ವಯಂಪ್ರೇರಿತವಾಗಿ ಅಥವಾ ಬಲಾತ್ಕಾರವಾಗಿ ಒಕ್ಕಲೆದ್ದವರು ಬೇರ‍್ಯಾವುದೋ ವೃತ್ತಿಯನ್ನು ಕೈಗೆತ್ತಿಕೊಂಡು ನೆಮ್ಮದಿಯಾಗಿದ್ದಾರೆ ಎಂದೂ ಹೇಳಲಾಗುವುದಿಲ್ಲ. ಏಕೆಂದರೆ ಎನ್‌ಎಸ್‌ಎಸ್‌ಓ (ರಾಷ್ಟ್ರೀಯ ಮಾದರಿ ಸರ್ವೇಕ್ಷಣಾ ಸಂಸ್ಥೆ)ದ 66ನೇ ಸುತ್ತಿನ ವರದಿಯ ಪ್ರಕಾರ 2004-05ರಿಂದ 2009-10ರ ಅವಧಿಯಲ್ಲಿ ಸುಮಾರು 2.50 ಕೋಟಿ ಜನರು ತಮ್ಮ ಸ್ವಂತ ಉದ್ಯೋಗಗಳನ್ನು ಕಳೆದುಕೊಂಡಿದ್ದಾರೆ. ಅದರ ಪ್ರಕಾರ ಅಭದ್ರ ಕಾರ್ಮಿಕರ ಸಂಖ್ಯೆ ಈ ಐದು ವರ್ಷಗಳಲ್ಲಿ 2.20 ಕೋಟಿಗಳಷ್ಟು ಹೆಚ್ಚಾಗಿದೆ. ಈ ವರದಿಯನ್ನು ಜನಗಣತಿಯ ಅಂಕಿ-ಅಂಶಗಳೂ ಪುಷ್ಟೀಕರಿಸುತ್ತವೆ. ಅಶ್ವಿನಿಯವರ ಪ್ರಕಾರ, ಎನ್‌ಎಸ್‌ಎಸ್‌ಒದ ಮಾಹಿತಿಯು ಕೆಲವರನ್ನು ಸಂಪರ್ಕಿಸಿ, ದೊಡ್ಡ ಸಮೂಹಕ್ಕೆ ಅದನ್ನು ವಿಸ್ತರಿಸಿ ಅಂದಾಜು ಮಾಡುವ ವಿಧಾನದ್ದಾದ್ದರಿಂದ, ಅದಕ್ಕಿಂತ ಜನಗಣತಿಯ ವಿವರಗಳು ಹೆಚ್ಚು ಪಕ್ಕಾ ಆಗಿರುತ್ತವೆ. ಅದರ ಪ್ರಕಾರ ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳಲ್ಲಿ ಆರು ತಿಂಗಳಷ್ಟು ಸತತವಾಗಿ ಒಂದೇ ಉದ್ಯೋಗದಲ್ಲಿ ಮುಂದುವರೆಯುವ ಭದ್ರತೆಯೂ ಕಡಿಮೆಯಾಗುತ್ತಾ ಬಂದಿದೆ. ಈ ಜನಗಣತಿಯ ಪ್ರಕಾರ ಅದು ಈ ಸಮುದಾಯಗಳಲ್ಲಿ ಕ್ರಮವಾಗಿ ಶೇ.3ರಿಂದ ಶೇ.5ರಷ್ಟು ಕಡಿಮೆಯಾಗಿದೆ. ಇನ್ನು 20 ವರ್ಷ ಕೆಲಸ ಮಾಡಿದರೂ, ಭದ್ರತೆಯನ್ನಾಗಲೀ, ಬದುಕುವ ವೇತನವನ್ನಾಗಲೀ ಪಡೆದುಕೊಳ್ಳದ ಗುತ್ತಿಗೆ ಕಾರ್ಮಿಕರ ಸಂಖ್ಯೆಯೂ ಇದೇ ಅವಧಿಯಲ್ಲಿ ಅಪಾರವಾಗಿ ಹೆಚ್ಚಾಗಿದೆ.

ಇವೆಲ್ಲವೂ ಜಾಗತೀಕರಣ ನೀತಿಯ ಪರಿಣಾಮಗಳೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಅಭದ್ರ ಕಾರ್ಮಿಕರು, ಗುತ್ತಿಗೆ ಕಾರ್ಮಿಕರು, ಭೂಮಿ ಕಳೆದುಕೊಳ್ಳುವುದು ಎಲ್ಲವೂ ಜಾಗತೀಕರಣ ನೀತಿಗಳ ಫಲವೇ ಆಗಿವೆ. ಜಾಗತೀಕರಣ ನೀತಿಗಳಿಂದ ಶೋಷಿತ ಸಮುದಾಯಗಳೂ ಪಡೆದುಕೊಂಡಿವೆ ಎಂದು ಹೇಳುವ ಒಂದು ಚಿಂತನೆಯು 'ಕೆಲವರನ್ನು ಒಳಗೊಳ್ಳುವ' ರಾಜಕಾರಣದಿಂದ ತೃಪ್ತವಾಗಿ, ಅಂತಹ ಉದಾಹರಣೆಗಳನ್ನು ಯಥೇಚ್ಛವಾಗಿ ನೀಡುತ್ತಾ ಸಮಾಧಾನದಲ್ಲಿದೆ.

ಆದರೆ ಓಟನ್ನು ಹಾಕುವವರಲ್ಲಿ ಹೆಚ್ಚಿನವರು 'ಹೊರದೂಡಲ್ಪಟ್ಟ' ವಿಭಾಗದಲ್ಲೇ ಇರುವುದರಿಂದ ಸರ್ಕಾರಗಳು ಸುಮ್ಮನಿರಲು ಸಾಧ್ಯವಾಗುವುದಿಲ್ಲ. ನಿರಂತರ ಶೋಷಣೆಯಿಂದ ಉಂಟಾಗಬಹುದಾದ '...' - ಸುವ್ಯವಸ್ಥೆ'ಯನ್ನೂ ನಿಭಾಯಿಸಬೇಕಾಗುತ್ತದಾ... 'ಖಾತರಿ ಯೋಜನೆ'ಗಳು ಮತ್ತು 'ಭಾಗ್ಯ ಯೋಜನೆ...' ಜಾರಿಗೆ ತರುತ್ತಾರೆ. ಗ್ರಾಮೀಣ ಉದ್ಯೋಗ ಖಾತರಿ... ರೋಜ್‌ಗಾರ್ ಯೋಜನೆ, ಅನ್ನಭಾಗ್ಯ ಆಹಾರ ... ಭಾಗ್ಯಲಕ್ಷ್ಮಿಯಂತಹ ಯೋಜನೆಗಳೆಲ್ಲವೂ ಮಾಡುತ್ತಿ... ಅದನ್ನೇ ಆಗಿದೆ. ಇದರ ಜೊತೆಗೆ 'ಅಸಂಘಟಿತ ಕಾ... ಸಾಮಾಜಿಕ ಭದ್ರತಾ ಮಂಡಳಿ'ಯಂತಹ ಅಪ್ರಂ... ಮಂಡಳಿಗಳೂ ಕೇವಲ ಕಣ್ಣೊರೆಸುವ ತಂತ್ರಗಳಾ...


ದಮನಿತ ಸಮುದಾಯಗಳಿಗೆ ಭದ್ರತೆ... ನೀಡುವುದು, ಉತ್ಪಾದಕ ಆಸ್ತಿಯನ್ನು ಅವರಿಗೆ ದಕ್ಕಿ... ಮಾಡುವುದು ಮತ್ತು ಭದ್ರತೆಯಿರುವ ಉದ್ಯೋಗ... ಸೃಷ್ಟಿಸುವ ಮೂಲಕ ಮಾತ್ರ ಸಾಧ್ಯ. ಅದನ್ನು ಎ... ಮಾಡಲಿಲ್ಲ; ಯುಪಿಎ ಸಹಾ ಮಾಡಲಿಲ್ಲ. ... ತಾವು ಆಮ್ ಆದ್ಮಿಯ ಪರ ಭದ್ರತೆಯ ಯೋಜನೆ...



ತರುತ್ತಿದ್ದೇವೆ ಎಂದು ನಂಬಿಸುವ ಪ್ರಯತ್ನ ಮಾ... ಎನ್‌ಡಿಎ ಎಲ್ಲವೂ ಚೆನ್ನಾಗಿಯೇ ಇದೆ '... ಪ್ರಕಾಶಿಸುತ್ತಿದೆ' ಎಂದು ನಂಬಿಸಲು ಹೊರಡುತ್ತದೆ. ಸ್ವತಃ ಸರ್ಕಾರವೇ ನಡೆಸಿರುವ ಜನಗಣತಿ ಸರ್ವೇ... ಅಂಕಿ-ಅಂಶಗಳಿಗೆ ಉತ್ತರ ನೀಡಬೇಕಾದ ಹೊಣೆ... ಇವೆರಡೂ ಕೂಟಗಳಿಗೆ ಇದೆ. ಮೋದಿ ಮತ್ತು ರಾ... ಗಾಂಧಿ ಎಂಬ ಎರಡೇ ಆಯ್ಕೆ ಅಥವಾ ಆರ್ಥಿಕ ನೀ... ಇವೆರಡೂ ಮಾದರಿಗಳಿಗಿಂತ ಬೇರೆಯಾದ ಇನ್ನೊ... ಮಾರ್ಗವನ್ನು ಹೊಂದಿರದ ಮೂರು, ನಾಲ್ಕನೇ ರಂಗ... ಯಾವ ನಿರೀಕ್ಷೆ ಇಟ್ಟುಕೊಳ್ಳಲು ಸಾಧ್ಯ?

ಉತ್ಪಾದಕ ಆಸ್ತಿಯ ಒಡೆತನ, ಬೆಳೆಯುವ ... ಇರುವ ಸ್ವಯಂ ಕಸುಬು, ಭದ್ರತೆಯಿರುವ ಉ... ಈ ಮೂರನ್ನೂ ಕೊಡದ ಸರ್ಕಾರ ಸಮಾಜವಾದವ... ತರುವುದಿಲ್ಲ. ಆದರೆ ಕನಿಷ್ಠ ಕಲ್ಯಾಣ ಕಾ... ಗಳನ್ನಾದರೂ ಹೊಂದಿರಬೇಕೆಂದರೆ, ಆಹಾರ ಭ... ಜೊತೆಗೆ ಶಿಕ್ಷಣ, ಆರೋಗ್ಯ ಮತಿಯನ್ನು ಖಾತರಿಗೊ... ಅಗತ್ಯವಿದೆ. ಈ ಮೂರೂ ಕ್ಷೇತ್ರಗಳಲ್ಲಿ ಖಾಸಗಿಂ... ವಿಜೃಂಭಿಸಲು ಏನು ಬೇಕೋ ಅದನ್ನು ಸರ್ಕಾ... ಖಾತರಿಗೊಳಿಸುತ್ತಿವೆ. ಮುಂದಿನ ಚುನಾವಣೆಯ... ಮೂಲಭೂತ ಪ್ರಶ್ನೆಗಳನ್ನು ಕೇಳುವ ಅವಕಾಶ ಇರುತ್ತದೆಯೇ?

ಯಾರಿವಳು 'ಭಾಗ್ಯ' ಕಂಡು ಹಿಡಿತೀನಿ ಅಂತ ಯಡ್ಡಿನೂ ಹುಡುಕುತ್ತಿದ್ದಾರೆ



- ಹುಡುಗಿಯರು ಬರೇ ಹಣ್ಣು ತಿನ್ನುತ್ತಾರೆ ಯಾಕಿರಬಹುದು?

  \- ಬಿ.ಜೆ. ಪ್ರವೀಣ್‌ಕುಮಾರ್, ರಾಯಚೂರು

- ಕಲಗಚ್ಚಿನ ತರದ ಕಾಫಿ-ಟೀಯಿಂದ ಕೆನ್ನೆಗೆ ಹೊಳಪು ಬರಲ್ಲ ಅಂತ.

- ನಮ್ಮ ಸರ್ಕಾರದ ಯೋಜನೆಗಳಿಗೆಲ್ಲಾ ಯಾಕೆ 'ಭಾಗ್ಯ' ಅಂತ ಹೆಸರು?

  \- ರಾಮು, ಮಲ್ಲಿಕಟ್ಟೆ, ಕೋಣಂದೂರು

- ಯಾರಿವಳು 'ಭಾಗ್ಯ' ಕಂಡುಹಿಡಿತೀನಿ ಅಂತ ಯಡ್ಡಿನೂ ಹುಡುಕುತ್ತಿದ್ದಾರಂತೆ.

- ಹುಡುಗಿಯರ ಕೈ ನೋವಾಗದಂತೆ ಬಳೆ ತೊಡಿಸುವುದೇಗೆ?

  \- ಪ್ರಶಾಂತ್ ರಜಪೂತ್, ಬೆಳಗಾವಿ

- ಬಳೆಗಾರ ಸ್ಮಾರ್ಟ್ ಇದ್ದರೆ ಈ ಆಕ್ಷೇಪಣೆ ಬರಲಾರದು ಅಂತ ಜಾನಪದ ಕತೆಗಳಲ್ಲಿದೆ.

- ಈ ಸೆಕ್ಯುರಿಟಿಗಳೇಕೆ ದಪ್ಪ ಮೀಸೆ ಬಿಟ್ಟು ಕೊಂಡಿರ್ತಾರೆ?



  \- ಕೀಟಲೆ

- ತಮ್ಮ ಪುಕ್ಕಲುತನ ಮರೆ ಮಾಡಲು.

- ಕುದುರೆ ಪಳಗಿಸಲು ಚಾಟಿ ಬೇಕು ಆದರೆ ಹೆಣ್ಣನ್ನು ಪಳಗಿಸಲು?

  \- ಸಿದ್ದಾರ್ಥ ಶಿಂಗೆ, ಅಥಣಿ

- ಹೆಣ್ಣನ್ನೂ ಪ್ರಾಣಿ ಅಂದುಕೊಂಡಿರೋ ನಿನಗೆ ಚಾಟಿ ಬೀಸಬೇಕು.

- ನಾನು ಮತ್ತೆ ಚಿಕ್ಕ ಮಗು ಆಗಬೇಕು ಅನ್ನಿಸಿಬಿಟ್ಟಿದೆ.

  \- ಕಿರಣ್‌ಕುಮಾರ್, ಕೆಬ್ಬೆಹಳ್ಳಿ

- ಸಾರಿ... ಹೆಚ್ಚೆಂದರೆ ನೀನು ಅಪ್ಪ ಆಗಬಹುದಷ್ಟೆ.

- ಮತ್ತೆ ವಿದೇಶಿ ಬಂಡವಾಳ ಹೂಡಿಕೆದಾರರು ಬರ್ತಾರಂತೆ ಹೌದೆ?

  \- ಮಹಾದೇವ ಬಿರಾದಾರ್, ಬೆಳಗಾಂ

- ಸ್ವದೇಶಿ ಕೂಡಿಕೆದಾರರ ಕಾತರ ಅದು.

- ಪ್ರೀತಿಸೋದರಿಂದ ಕಣ್ಣೀರು ತುಂಬಾನೆ ವ್ಯರ್ಥ ಆಗುತ್ತಂತೆ ನಿಜಾನಾ?

  \- ಶಮೀಮ, ಪೆರುವಜೆ

- ಒಳ್ಳೇದನ್ನು ಹುಡುಕುವಾಗ ಅಷ್ಟು ಖರ್ಚಾಗುವುದು ಸಹಜ ಮರಿ.

- ಪ್ರಮೋದ್ ಮುತಾಲಿಕ್ ಮೋದಿ ಹೆಸರಲ್ಲೂ ದುಡ್ಡು ತಿಂದನಂತೆ!

  \- ರಾಜಾನಂದಿ, ...

- ಬೇಧಿ ಸಿಕ್ಕರೂ ತಿನ್ನಲು ತಯಾರಿರುವವನಿಗೆ ... ಯಾವ ಲೆಕ್ಕ.

- ರೈತರ ಪಾಲಿಗೆ ಕಬ್ಬು ಸಿಹಿಯಾಗುವ ... ಕಹಿಯಾಗುತ್ತಿದೆ ಯಾಕೆ?

  \- ಪ್ರಭುಸ್ವಾಮಿ, ಚಾಮರಾ...

- ಹಣ ಕೊಡಲು 'ನಹಿ' ಎನ್ನುವ ಕಾ... ಮಾಲೀಕರ ಪಿತೂರಿ.

- ರಾಜಕಾರಣಿಗಳಿಗೆ ರಜಾ ಯಾವಾಗ?

  \- ಡಿಸೋಜಾ, ಬ...

- ಜನ ಒದ್ದೋಡಿಸಿದಾಗ.

- ಪೇಜಾವರ ಸ್ವಾಮಿ ಬರೀ ಸುಳ್ಳು ಹೇಳ್ತಾರೆ ...

  \- ದಿನೇಶ್ ಶಹಾ...

- ಆತನ ಪರಂಪರೆಯ ಪ್ರಭಾವ.

(... ಅಂಚೆ ಮೂಲಕ ... 9980... SMS ... kannamuchchale@gmail.com ಇ-ಮೇಲ್ ಮೂಲಕವೂ ಕಳುಹಿಸಬಹುದು. ಹೆಸರು, ಊರು ತಪ್ಪದೆ ಬರೆಯಿರಿ)

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಇಂದ್ರ: ಶಸ್ತ್ರ ಮತ್ತು ಶಾಸ್ತ್ರಗಳ ನಡುವೆ

ದೇವೇಂದ್ರ ಎಡವಟ್ಟುಗಳ ರಾಯ

ಇಂದ್ರ ಎಂಬುದು ಪುರಾಣಗಳಲ್ಲಿ ಮತ್ತು ವೈದಿಕ ಹಾಸಗಳಲ್ಲಿ ಬಲು ಪರಿಚಿತ ಹಾಗೂ ಪ್ರಮುಖವಾದ ಟೀಕಾಚಾರ್ಯರಾಗಿಯೇ ನೋಡಲು ಹೋದರೆ, ವನೆಂದ ಕೂಡಲೇ ನಮಗೆ ನೆನಪಿಗೆ ಬರುವುದು ತ್ಯಯೊಡನೆ ಮಲಗುವುದು, ಸುರೆಯನ್ನು ಕುಡಿಯುತ್ತಾ ಲೋಕದ ನರ್ತಕಿಯರೊಡನೆ ಮೋಜು ಮಾಡುತ್ತಿರು ಅಥವಾ ದಾನವರು ತಪಸ್ಸು ಮಾಡುವಾಗ ಅಪ್ಸರೆಯ ಕಳುಹಿಸಿ ಅವರ ತಪೋಭಂಗ ಮಾಡುವುದು. ಮಾಡಲಷ್ಟೇ ವಿಷಯವನ್ನು ಅಥವಾ ಪರಿಕಲ್ಪನೆಯನ್ನು ಡಲು ಹೋದರೆ ಬರಿಯ ನಕಾರಾತ್ಮಕವಾದವುಗಳನ್ನೇ ಗೆ ಹೊರ ತೆಗೆಯಲಾಗುವುದು. ವಸ್ತುನಿಷ್ಠವಾಗಿ ಲೋಕನ ಮಾಡಿ, ಅಧ್ಯಯನಶೀಲರಾದರೆ ಇನ್ನೆಷ್ಟೋ ಷಗಳು ನಮಗೆ ದೊರಕುವುದು. ಇಂದ್ರನ ಬಗ್ಗೆಯೂ ಷ್ಟ ನಿಲುವನ್ನು ತಳೆದಾಗ ಅನೇಕ ಅಂಶಗಳು ಗಮನಕ್ಕೆ ತ್ತವೆ.

ಮುಖ್ಯವಾಗಿ ಇಂದ್ರನೆಂಬುವನು ಆರ್ಯರ ಬುಡಕಟ್ಟಿನ ಯಕನಾಗಿ ಹೊಮ್ಮಿರುವುದಕ್ಕೆ ಕಾರಣ ಅವನ ಶಕ್ತಿ ತ್ತು ಪರಾಕ್ರಮ. ಇಂದ್ರನೆಂಬುದು ಪದವಿಯಾಗಿದ್ದು ಕ ಇಂದ್ರರು ಬಂದು ಹೋಗಿ, ಪ್ರಮುಖವಾಗಿ 14 ನ್ನು ಗುರುತಿಸುತ್ತಾರೆ. ಅವರಲ್ಲಿ ಪುರಂದರನೆಂದು ಬಲಾದ ಇಂದ್ರನು ಹೆಚ್ಚು ಮಾನ್ಯನಾಗಿದ್ದನೆಂದು ತೋರು ಶಚೀಂದ್ರನೇ ಈತನು ಎಂಬ ಬಗ್ಗೆ ಅಷ್ಟು ಖಚಿತ ತೆ ಇಲ್ಲ. ನಮ್ಮ ದೇಶದಲ್ಲಿ ಪುರಾಣೇತಿಹಾಸವೆಂದು ಹಾಸವನ್ನೂ ಪುರಾಣವನ್ನೂ ಬೆರಕೆ ಮಾಡಿಟ್ಟಿರುವ ಬಲ್ಲ ಚತುರರು ಈಗ ನಮ್ಮೆಲ್ಲ ಗೊಂದಲಗಳಿಗೆ ರಾಗಿದ್ದಾರೆ.

ಇಂದ್ರನ ಬಗ್ಗೆ ನಮಗೆ ಪುರಾಣದಲ್ಲಿ ತಿಳಿದಿರುವಂತಹ ಗಳನ್ನೇ ಗಮನಿಸುತ್ತಾ ಹೋದರೆ ಆತನೆಂತವನೆಂದು ದ ಹಂತಕ್ಕೆ ಸ್ಪಷ್ಟವಾಗುತ್ತದೆ. ಇವನು ಪುರಂದರ; ಟೆಗಳ ಭಂಜಕ. ಯಾವುದೋ ಕಾರಣಕ್ಕೆ ವಾಲಖಿಲ್ಯ ಗಳ ಕೋಪಕ್ಕೆ ಪಾತ್ರನಾದವನು. ದೂರ್ವಾಸರ ಪ್ರಶಕ್ತಿಗೆ ಒಳಗಾಗಿ ಪಾಂಡು ರಾಜನ ಹೆಂಡತಿ ಕುಂತಿಗೆ ನನನ್ನು ದಯಪಾಲಿಸಿದ. ಅರ್ಜುನನ ಮೇಲಿನ ತೆಯಿಂದ ಕರ್ಣನ ಬಳಿಗೆ ಬಂದು ಅವನ ರಕ್ಷಣೆಗೆ ವಾಗಿದ್ದ ಕವಚ ಕುಂಡಲಗಳನ್ನು ಬೇಡಿ ಪಡೆದ. ನ್ನು ವಿರೋಧಿಸಿ ಗೋಕುಲದ ಮೇಲೆ ಮುಸುಲಧಾರೆ ಗರೆದ. ಋಕ್ಷರಜಸ್ಸೆಂಬ ವಾನರಕನ್ಯೆಯನ್ನು ಮೋಹಿಸಿ ಯ ತಂದೆಯಾದ. ರಾಮರಾವಣರ ಯುದ್ಧಕಾಲದಲ್ಲಿ ನಿಗೆಂದು ಮಾತಲಿಯೊಡನೆ ಯುದ್ಧರಥವನ್ನು ಸಿದ. ದಮಯಂತಿಯ ಸ್ವಯಂವರಕ್ಕೆ ದೇವತೆಗಳೊಡನೆ ಗಿದ್ದ. ವಿರೂಪಾಕ್ಷಚಾರ್ಯನನ್ನು ಕೊಂದು ಬ್ರಹ್ಮಹತ್ಯಾ ಪವನ್ನು ತಂದುಕೊಂಡ. ದುರ್ವಾಸನ ಪ್ರಸಾದವನ್ನು ಮಾನಿಸಿ ಪದವಿ ಕಳೆದುಕೊಂಡ. ಬೃಹಸ್ಪತಿಗೆ ಅವಮಾನ ಮತ್ತೊಮ್ಮೆ ಪದವಿ ಕಳೆದುಕೊಂಡು. ಅಮೃತದಾನದ ಮದಲ್ಲಿ ಉದಂಕ ಋಷಿಗೆ ವಂಚನೆ ಮಾಡಿದ. ಮನ ಹೆಂಡತಿ ಅಹಲ್ಯೆಯನ್ನು ಕೂಡಿ ಶಾಪಕ್ಕೆ ಗುರಿ ದ. ವಿಶ್ವಾಮಿತ್ರನ ತಪೋಭಂಗಕ್ಕೆ ಮೇನಕೆಯನ್ನು ಸಿದಂತೆ, ಶಿವನ ತಪೋಭಂಗಕ್ಕೆ ಮನ್ಮಥನನ್ನು ಸಿದ.

ಇಂದ್ರನನ್ನು ಅಥವಾ ಇಂದ್ರ ಪದವಿಗೆ ಬಂದಿರುವಂತಹ ಸುಗಳನ್ನೆಲ್ಲಾ ಗಮನಿಸುತ್ತಾ ಹೋದರೆ ಅವರುಗಳು ಕಟ್ಟುಗಳ ಸರದಾರರು ಎಂದೇ ತೋರುತ್ತದೆ. ಯಾಗಿ ಅವರು ಮೋಜು ಮಜಗಳ ವ್ಯಸನಿಗಳಂತೆ ಸುವುದಲ್ಲದೇ ತಮಗಾಗಿ ಅಂದರೆ ವೈಯಕ್ತಿಕವಾಗಿ ರುವಂತವು ಎಂದರೆ ಯಾರನ್ನೋ ಕೂಡುವುದು ಅಹಂಕಾರದಿಂದ ವರ್ತಿಸಿ ಶಾಪಗಳನ್ನು ಪಡೆಯು. ಆದರೆ, ಪ್ರಮುಖವಾಗಿ ಕೆಲಸ ಮಾಡುವ ಸಂದರ್ಭ ದೇವತೆಗಳ ಅಥವಾ ದೇವರ್ಷಿಗಳ ಕರಣಗಳಾಗಿ ಸುವರು. ಶಕ್ತಿ, ಸಾಮರ್ಥ್ಯ, ಸಾಹಸ ಪ್ರವೃತ್ತಿಯಿದ್ದರೂ ಕೇಳುತ್ತಿದ್ದುದ್ದೆಲ್ಲಾ ದೇವರ್ಷಿಗಳ ಹಾಗೂ ಇತರ ಗಳ ಮಾತುಗಳನ್ನು, ಇದೇಕೆ ಹೀಗೆ? ದೇವತೆಗಳಿಗೆಲ್ಲಾ ನಾಗಿದ್ದರೂ ಅವನೇಕೆ ಅಷ್ಟೊಂದು ಶಾಪಗಳಿಗೆ ನಾಗುತ್ತಿದ್ದ? ಏಕೆ ಎಂದೂ ಸ್ವಂತ ನಿರ್ಣಯಗಳನ್ನು ಕೊಳ್ಳುತ್ತಿರಲಿಲ್ಲ?

ಶಸ್ತ್ರ ಮತ್ತು ಶಾಸ್ತ್ರ

ಡಿಗೂ ಕೆಲವು ಹಿಂದೂ ಪರ ಸಂಘಟನೆಗಳು ಧಿಕೃತ ನಿಯಂತ್ರಣದಲ್ಲಿದ್ದು ಅವರ ಸ್ಪಷ್ಟ ನಿಲುವು ಕೈಯಲ್ಲಿ ಶಸ್ತ್ರ ಮತ್ತು ಮತ್ತೊಂದು ಕ್ರಿಯಲ್ಲಿ ದಾಗಿದೆ. ಕೆಲವು ಚತುರ ಸಂಘಟನೆಗಳು ಅಗತ್ಯವಿರುವ ಎಲ್ಲಾ ಶಾಸ್ತ್ರಗಳನ್ನು ಅಂದರೆ ಬ್ರಾಹ್ಮಣಾಧಿಕ್ಯದ ಪರವಾದ ಅಧ್ಯಯನಗಳನ್ನು ಮಾಡಿಸಿ ವಾಗ್ಮಿಗಳನ್ನು, ಪರಿತ-ನುರಿತ ಬರಹಗಾರರನ್ನು ತಯಾರು ಮಾಡುತ್ತವೆ. ಅವರು ತಮ್ಮ ಕಾರ್ಯವಾದ ಅಧ್ಯಯನ, ವಿಷಯ ಮಂಡನೆಗಳನ್ನು ಬಿಟ್ಟು ಹೋರಾಟ ಮಾಡಲು ಬೀದಿಗಿಳಿಯುವುದಿಲ್ಲ, ಅದಕ್ಕೆ ಇತರರನ್ನು ನೇಮಿಸಿರುತ್ತಾರೆ. ಅವರಿಗೆ ಅಧ್ಯಯನ-ಗಿಧ್ಯಯನವೆಲ್ಲಾ ತಲೆಗೆ ಹೋಗದು. ಶಾಸ್ತ್ರ-ಪಾಸ್ತ್ರಗಳನ್ನು ಓದಿ ಅರಗಿಸಿಕೊಳ್ಳುವಷ್ಟು ಸಹನೆಯಾಗಲಿ, ಸಾಮರ್ಥ್ಯವಾಗಲಿ ಇರುವುದಿಲ್ಲ, ಆದ್ದರಿಂದ ಅವರಿಗೆ ದೊಂಬಿ ಎಬ್ಬಿಸಲು, ಗಲಭೆ ಮಾಡಲು ಬೇಕಾದಷ್ಟು ಪ್ರಚೋದನೆ ಮತ್ತು ಪ್ರೇರಣೆಗಳನ್ನು ನೀಡಿರುತ್ತಾರೆ, ಸೇನೆಗಳನ್ನು ಕಟ್ಟಿರುತ್ತಾರೆ. ಅವರಲ್ಲಿ ಕೆಲವು ದಡ್ಡರಾದ, ಬಲಶಾಲಿಗಳಾದ ಬ್ರಾಹ್ಮಣರಿದ್ದರೂ, ಶೂದ್ರರು ಮತ್ತು ಅರೆ ಶೂದ್ರರೇ ಹೆಚ್ಚಾಗಿರುತ್ತಾರೆ. ಬ್ರಾಹ್ಮಣಿಕೆಯ ಮನೋಭಾವದ ಈ ಶೂದ್ರರು ಬ್ರಾಹ್ಮಣರಿಗಿಂತಲೂ ಹೆಚ್ಚು ಅಪಾಯಕಾರಿಗಳು. ಏಕೆಂದರೆ, ತಮ್ಮ ನಿಲುವನ್ನು, ನೆಲೆಯನ್ನು ಗುರುತಿಸಿಕೊಳ್ಳದೇ, ಚತುರ ಚಾಣಕ್ಯರ ಪರವಾಗಿ ಗುದ್ದಾಡಿ ತಾವು ಹಳ್ಳಕ್ಕೆ ಬೀಳುವುದಲ್ಲದೇ ತಮ್ಮವರನ್ನು ಹಳ್ಳಕ್ಕೆ ಕೆಡವುತ್ತಾರೆ. ಇವರನ್ನು ಪ್ರೇರೇಪಿಸುವ ಕೌಟಿಲ್ಯರು ಅಪಾಯದ ಸೋಂಕಿಲ್ಲದೇ ತಮ್ಮ ಉದ್ದೇಶವನ್ನು ನೆರವೇರಿಸಿಕೊಂಡಿರುತ್ತಾರೆ. ಈ ಕಾರಣದಿಂದಲೇ ಹಿಂದೂಪರ ಸಂಘಟನೆಗಳು 'ಛೂ' ಎಂದಾಗ ಶಸ್ತ್ರಾಧಾರಿತ ರಾಜಕಾರಣ ಮಾಡಲು ನಿಂತಿರುವ ಸಂಘಟನೆಗಳು ಕಚ್ಚುವ ದಾಳಿಗೆ ತೊಡಗುತ್ತವೆ. ಇದರ ಅಭ್ಯಾಸವಾಗಿರುವ ಇಂತಹ ಸೇನೆಗಳು ಕೆಲವೊಮ್ಮೆ ಛೂ ಕೇಳದಿದ್ದರೂ, ಕೆಲವು ಸಂದರ್ಭಗಳಲ್ಲಿ ವಿವೇಚನೆ ಇಲ್ಲದೇ ಕಚ್ಚುವ ದಾಳಿ ಮಾಡಿಬಿಡುತ್ತವೆ. ಆಗ ಶಾಸ್ತ್ರಧಾರಿತ ಸಂಘಟನೆಗಳು ಅದಕ್ಕೆ ಸಂಬಂಧಪಟ್ಟಿಲ್ಲದ್ದಂತೆ ವರ್ತಿಸುವುದು ಆಶ್ಚರ್ಯವೇನಲ್ಲ. ಸೇನೆಗಳು ಹೊಡೆದಾಡಿ ಕೊಳ್ಳುತ್ತಿದ್ದರೆ ಶಾಸ್ತ್ರಾಧಾರಿತವಾಗಿರುವ ಸಂಘಟನೆಗಳು ಮೌನವಾಗಿರುತ್ತವೆ. ಆಗ ಅವರು ಸೇನೆಗಳ ಮೂರ್ಖ ನಿರ್ಣಯಕ್ಕೆ ಬೆಂಬಲ ನೀಡಿದರೆ ಅವರೂ ಅವಿವೇಕಿಗಳು ಎಂದು ಸಾಬೀತಾಗಿಬಿಡುವುದರಿಂದ ಈ ಮೌನ ಅಗತ್ಯವಾಗಿರುತ್ತದೆ.



ಇಂದ್ರ ಸಾಹಸಿ ಮತ್ತು ಶೂರ

ಆರ್ಯರ ಆಗಮನಕ್ಕೆ ಮುನ್ನ ಅತ್ಯಂತ ಉತ್ತಮ ಸ್ಥಿತಿಯಲ್ಲಿದ್ದ ನಾಗರಿಕತೆ ಭಾರತವೆಂದು ಈಗ ಕರೆಯಲ್ಪಡುತ್ತಿರುವ ಈ ಭೌಗೋಳಿಕ ಪ್ರದೇಶದಲ್ಲಿತ್ತು ಎಂಬುದು ನಿರ್ವಿವಾದ. 'ಗಂಗಾನದಿಯ ಬಯಲು ಪ್ರದೇಶದಲ್ಲಿ ತಮ್ಮಷ್ಟೇ ನಾಗರಿಕರಾಗಿದ್ದ ಜನಾಂಗದ ಜೊತೆ ಸಂಪರ್ಕ ಬೆಳೆಸಿ ಅವರ ಸಂಗಡ ಸಲೀಸಾಗಿ ಬೆರೆಯಲು ಆರಂಭಿಸುವ ತನಕ ಆರ್ಯರ ಧೋರಣೆ ಆದಿವಾಸಿಗಳ ಬಗ್ಗೆ ಗರ್ವಾಂಧ ಪ್ರತ್ಯೇಕತೆಯಿಂದಲೂ ಕ್ರೂರ ತಿರಸ್ಕಾರದಿಂದಲೂ ಕೂಡಿ ವಿಶಿಷ್ಟವಾಗಿತ್ತು. ಆರ್ಯರು ಪ್ರಧಾನವಾಗಿ ಸೈನಿಕ ಜನಾಂಗದವರಾಗಿದ್ದರು. ದೇಶದ ಒಂದು ಸ್ಥಳಕ್ಕಿಂತ ಇನ್ನೊಂದು ಸ್ಥಳದ ನೈಸರ್ಗಿಕ ಸಂಪತ್ತು ಮತ್ತು ಸೌಂದರ್ಯಗಳಿಂದ ಆಕರ್ಷಿತರಾಗಿ ಸಾಗುತ್ತಿದ್ದ ಆವರು ತಮ್ಮ ನಡೆಯನ್ನು ವಿರೋಧಿಸಿದ ಆದಿವಾಸಿಗಳನ್ನು ಗೆಲ್ಲುತ್ತಾ, ಕೆಲವೇಳೆ ಅವರನ್ನು ನಿರ್ದಯದಿಂದ ನಿರ್ನಾಮ ಮಾಡುತ್ತಾ, ಗಂಗಾನದಿಯ ಬಯಲು ಪ್ರದೇಶದಲ್ಲಿ ನೆಮ್ಮದಿಯಿಂದ ನೆಲೆಸಿ ಪ್ರಬಲ ರಾಜ್ಯಗಳನ್ನು ಸ್ಥಾಪಿಸಲು ಸಮರ್ಥರಾಗುವವರೆಗೂ ತಮ್ಮ ವಲಸೆಗಳನ್ನು ಒಂದೇ ಸಮನೆ ವಿಸ್ತರಿಸಿಕೊಂಡರು. (ನೋಡಿ, ಸ್ವಾಮಿ ಧರ್ಮತೀರ್ಥರ ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ) ಕರಿಯ ದಸ್ಯುಗಳೆಂದೂ, ರಾಕ್ಷಸರೆಂದೂ ತಾವು ತಿರಸ್ಕಾರದಿಂದ ಕರೆದ ಆದಿವಾಸಿ ಬುಡಕಟ್ಟುಗಳನ್ನು ನಾಶಪಡಿಸಿರಿ ಎಂದು ಅವರು ತಮ್ಮ ದೇವತೆಗಳಿಗೆ ಮೊರೆಯಿಡುತ್ತಿದ್ದರು. "ಎಲ್ಲ ಕಡೆಗಳಿಂದಲೂ ನಾವು ದಸ್ಯುಗಳಿಂದ ಸುತ್ತುವರಿದಿದ್ದೇವೆ. ಅವರು ಯಜ್ಞಗಳನ್ನು ಮಾಡುವುದಿಲ್ಲ, ಅವರು ನಾಸ್ತಿಕರು. ಅವರ ಆಚರಣೆಗಳೆಲ್ಲಾ ಭಿನ್ನ. ಅವರು ಮನುಷ್ಯರೇ ಅಲ್ಲ! ಓ ಶತ್ರುಹಂತಕನೇ, ಅವರನ್ನು ಕೊಲ್ಲು, ದಾಸ ಜನಾಂಗವನ್ನು ನಾಶ ಮಾಡು." (ಋಗ್ವೇದ, 1.10.51.8) ಇಂದ್ರನಿಗೆ ಈ ಬಗೆಯ ಪ್ರಾರ್ಥನೆ ಮಾಡುವ ಸೂಕ್ತಗಳು ಋಗ್ವೇದದಲ್ಲಿ ಅನೇಕ.

ಸಿಂಧೂ ನದಿ ಮತ್ತು ಅದರ ಉಪನದಿಗಳ ಪ್ರವಾಹಕ್ಕೆ ತಡೆಯಾಗಿ ಮಹಾಗೋಡೆಗಳನ್ನು ಕಟ್ಟಿಕೊಂಡು ತಮ್ಮ ನಾಗರಿಕತೆಯನ್ನು ಬೆಳೆಸಿಕೊಂಡಿದ್ದ ಹರಪ್ಪ ಸಂಸ್ಕೃತಿಯ ನಗರಗಳ ನಾಶಕ್ಕೆ ಒಡ್ಡನ್ನು ಒಡೆದ ಇಂದ್ರ ಕಾರಣನಾದ. ವೃತ್ರ ಅಸುರನ ಮೇಲೆ ವಿಜಯ ಸಾಧಿಸಿದ. (The language of the Harappans; by Malati J Shendge) ಆಗಿನ ದಾಳಿಗೆ ಇಂದ್ರ ಮತ್ತು ವಿಷ್ಣು ಪ್ರಮುಖರಾಗಿದ್ದರೂ, ವಿಷ್ಣು ತಮ್ಮ ಶತ್ರುಗಳ ರಹಸ್ಯಗಳನ್ನು ತಿಳಿದುಕೊಳ್ಳುವುದರಲ್ಲಿ ಕ್ರಿಯಾಶೀಲನಾಗಿದ್ದರೆ, ಸೈನ್ಯಕ್ಕೆ ಇಂದ್ರನೇ ಮುಂದಾಳತ್ವವನ್ನು ವಹಿಸಿದ್ದ. ಇಂತಹ ಅನೇಕ ದಾಳಿಗಳಿಗೆ ಕಾರಣನಾಗಿದ್ದ ಇಂದ್ರ ಕೇವಲ ಇನ್‌ಸ್ಟ್ರುಮೆಂಟಲ್ ಆಗಿದ್ದ ಎಂಬುದಕ್ಕೆ ಉದಾಹರಣೆಗಳನ್ನು ನೋಡಿ. ದೂರ್ವಾಸ ಮುನಿಯ ನಿರ್ದೇಶನಕ್ಕೆ ಒಪ್ಪಿ ಕುಂತಿಯೊಡನೆ ಕೂಡಿ ಮಗುವನ್ನು ಕರುಣಿಸಿದ. ಆದರೆ, ಅವನೇ ಮೋಹಿತನಾಗಿ ಅಹಲ್ಯೆಯ ಜೊತೆ ಮಲಗಿದಾಗ ಗೌತಮನ ಶಾಪಕ್ಕೆ ಗುರಿಯಾದ. ದೂರ್ವಾಸನನ್ನು ಮತ್ತು ಬೃಹಸ್ಪತಿಯನ್ನು ತನ್ನ ಅಹಂಕಾರದ ಕಾರಣದಿಂದಾಗಿ ತನ್ನ ಪದವಿಯನ್ನು ಕಳೆದುಕೊಂಡ. ಅಂದರೆ, ಇವನಿಗೆ ಅಧಿಕಾರ ನೀಡಲ್ಪಟ್ಟಿದ್ದಾಗಿದ್ದು ಅದು ಶಾಸ್ತ್ರ ರಾಜಕಾರಣ ಮಾಡುವಂತಹ ಋಷಿಗಳ ಕೈಲಿತ್ತು ಎಂಬುದನ್ನು ಗಮನಿಸಿ. ಇವನ ಕೃತ್ಯಗಳನ್ನೆಲ್ಲಾ ಗಮನಿಸಿದರೆ ಆರ್ಯನಾಗಿರುವುದಕ್ಕಿಂತ ಆರ್ಯರ ಹಿಡಿತದಲ್ಲಿದ್ದ ಬೇರೊಬ್ಬನೇ ಇರಬಹುದೇ ಎಂಬ ಅನುಮಾನ ಮೂಡುತ್ತದೆ. ಕುದುರೆಗಳ ಸವಾರಿಯಲ್ಲಿ ಪರಿಣಿತನೆಂದು ವರ್ಣಿಸುವ ಇವನಿಗೆ ಹಳದಿ ಹೊಂಬಣ್ಣದ ಗಡ್ಡ ಮತ್ತು ಒತ್ತಾಗಿ ಬೆಳೆದಿರುವ ಕೇಶರಾಶಿಯಿತ್ತು ಎಂದು ಋಗ್ವೇದದಲ್ಲಿ (10.96) ಹೇಳುತ್ತಾರೆ. ತಮ್ಮ ಕೆಲಸವಾಗಲೇ ಬೇಕಾದ ಸಂದರ್ಭಗಳಲ್ಲಿ ಈತನನ್ನು ಮುಂದಿಟ್ಟುಕೊಳ್ಳುತ್ತಿದ್ದ ಆರ್ಯರು, ಇವನಿಗೆ ಎಲ್ಲಾ ಅಧಿಕಾರಗಳನ್ನು ಕೊಟ್ಟಿರಲಿಲ್ಲ. ಅಷ್ಟೇನೂ ಬುದ್ಧಿಮಂತಿಕೆಯಿಲ್ಲದ, ತೀರಾ ಲೌಕಿಕನಾದ, ಆದರೆ ಶೂರನೂ, ಪೊಂಡು ಸಾಹಸಿಯೂ, ಹೊಗಳಿದರೆ ಉಬ್ಬಿ ಹೋಗುವವನಾಗಿಯೂ ಕಾಣುತ್ತಾನೆ. ಹಾಗೆಯೇ ಅಧಿಕಾರ ಕಳೆದುಕೊಂಡಾಗ ಇತರ ದೇವತೆಗಳನ್ನು ಬೇಡಿ, ಋಷಿಗಳಿಗೆ ದಮ್ಮಯ್ಯ ಹಾಕಿ ಮತ್ತೆ ಅಧಿಕಾರಕ್ಕೆ ಬರುತ್ತಾನೆ. ಯಾರೇ ಅಸುರರು ಶಕ್ತಿಯ ಸಾಧನೆಗಾಗಿ ತಪಸ್ಸು ಮಾಡಲು, ದೇವತೆಗಳು ಇವನನ್ನು ಛೂಬಿಡುತ್ತಾರೆ. ಅವರು ಛೂಬಿಡದೇ ಈತನೇ ಏನಾದರೂ ಸ್ವಯಂಪ್ರೇರಿತವಾಗಿ ವರ್ತಿಸಿದರೆ ದೇವತೆ ಮತ್ತು ಋಷಿಗಳಿಂದ ಅಪಾಯ ಕಟ್ಟಿಟ್ಟ ಬುತ್ತಿ.

"ಪ್ರಾಚೀನ ಕಾಲದಲ್ಲಿ ಬಾಯಿಮಾತಿನ ಒಪ್ಪಂದ ಕೂಡಾ ತೀರಾ ಪವಿತ್ರವೆನಿಸಿಕೊಂಡಿತ್ತು ಎಂಬುದಾಗಿ ಅರ್ಥ ಶಾಸ್ತ್ರ ತಿಳಿಸುತ್ತದೆ. ಹಾಗಿದ್ದಾಗ್ಯೂ ಒಪ್ಪಂದಗಳನ್ನು ಉಲ್ಲಂಘಿಸುವುದು ಅರ್ಥಶಾಸ್ತ್ರದ ರಾಜನಿಗೆ ಮಾಮೂಲಿ ಅಭ್ಯಾಸವಾಗಿತ್ತು. ಈ ಎಲ್ಲಾ ಕರಾಳ ಸಾಹಸಗಳನ್ನೂ ಇಂದ್ರನು ವೈದಿಕ ಪರಂಪರೆಯಲ್ಲಿ ಮಾಡಿದ್ದಾನೆ. ಆದರೆ ಎಲ್ಲರೂ ಭಕ್ತಿ ತೋರಿಸಲೇಬೇಕಾದ ಶ್ರೇಷ್ಠ ಪರಮಾತ್ಮನು ತಾನು ಎಂದು ಘೋಷಿಸಿಕೊಳ್ಳುವ ಅವಕಾಶವನ್ನು ಈ ಪರಂಪರೆ ಅವನಿಗೆ ಎಲ್ಲಿಯೂ ನೀಡುವುದಿಲ್ಲ. ಪಾಪ ಮತ್ತು ಭಕ್ತಿ ಎರಡೂ ವೈದಿಕ ಪರಿಕಲ್ಪನೆಗಳಲ್ಲ. 'ಸರ್ವಧರ್ಮಗಳನ್ನೂ ಪರಿತ್ಯಾಗ ಮಾಡಿ ನನ್ನೊಬ್ಬನಿಗೇ ಶರಣಾಗು. ನಾನು ಸರ್ವಪಾಪಗಳಿಂದ ನಿನ್ನನ್ನು ಮುಕ್ತಗೊಳಿಸುತ್ತೇನೆ. ಹೆದರಬೇಡ' ಎಂದು ಗೀತೆ 18.66 ರಲ್ಲಿ ನೀಡುವ ನಿರ್ವಿಕಲ್ಪ ಮೋಕ್ಷದ ಆಶ್ವಾಸನೆಯನ್ನು ಯಾವೊಬ್ಬ ವೈದಿಕ ದೇವತೆಯೂ ನೀಡಲಾರ. ಇದು (ವಿಷ್ಣುವಿನ ಅವತಾರವಾಗಿರುವ?) ಕೃಷ್ಣನಿಗಷ್ಟೇ ಸಾಧ್ಯ ಇಂದ್ರನಿಗಲ್ಲ, ಏಕೆಂದರೆ ಇಂದ್ರನು ಅಪೌರುಷೇಯವಾದ ವೇದ ಸೂಕ್ತಗಳ ಮಿತಿಯಲ್ಲೇ ಕೆಲಸ ಮಾಡಬೇಕಿತ್ತು ಹಾಗೂ ಅವನು ವೈದಿಕ ಯಜ್ಞದ ಆಚರಣೆಗೆ ಕಟ್ಟುಬಿದ್ದವನಾಗಿದ್ದ ಇಂದ್ರನು ಜೊತೆಗಾರರೊಡನೆ ಕುಡಿದು, ಯುದ್ಧದಲ್ಲಿ ಅವರಿಗಾಗಿ ಹೋರಾಡಿ ಗೆಲ್ಲಿಸುತ್ತಿದ್ದ ಒಬ್ಬ ಬರ್ಬರ ಆರ್ಯ ಸಮರನಾಯಕನ ಒಂದು ಮಾದರಿಯಾಗಿದ್ದ" (ನೋಡಿ; ಡಿ.ಡಿ. ಕೋಸಾಂಬಿಯವರ ಪುರಾಣ ಮತ್ತು ವಾಸ್ತವ)

ಯಾವನೊಬ್ಬ ಇಂದ್ರನನ್ನು ನೂರು ಅಶ್ವಮೇಧ ಯಾಗಗಳನ್ನು ಮಾಡಿದವನು ಪದಚ್ಯುತಿಗೊಳಿಸಬಹುದಿತ್ತು, ಹಾಗಾಗಿ ತನ್ನ ಅಧಿಕಾರ ಮತ್ತು ಸಂಪತ್ತಿನ ಭೋಗದ ಬಗ್ಗೆ ಇಂದ್ರನಿಗೆ ಸದಾ ಸುರಕ್ಷಿತವಾದ ಭಾವ ಎಂದಿಗೂ ಇಲ್ಲವಾಗಿತ್ತು, ಅವನು ಆರ್ಯ ವೈದಿಕರ ಮತ್ತು ಇತರ ದೇವತೆಗಳ ರಬ್ಬರ್ ಸ್ಟ್ಯಾಂಪ್ ಆಗಿದ್ದನು. ಅವನಿಗೆ ಬೇಕಾದ ಸುರೆಯನ್ನು ಕುಡಿಸಿ ಅವನಿಗೆ ಹೋರಾಡಲು ಪ್ರೇರೇಪಿಸುತ್ತಿದ್ದರು.

ಉಪ ನಃ ಸವನಾಗಹಿ ಸೋಮಸ್ಯ ಸೋಮಪಾಃ ಪಿಬ । ಗೋದಾ ಇದ್ರೇವತೋ ಮದಃ ॥ (ಋಗ್ವೇದ: 1.4.2) ಓ ಸೋಮಪಾನ ಮಾಡುವವನೇ, ಸೋಮವನ್ನು ಅರ್ಪಿಸುತ್ತಿದ್ದೇವೆ ಬಾ; ಸೋಮವನ್ನು ಪಾನ ಮಾಡು. ನಮ್ಮಲ್ಲಿ ಇಂದ್ರನ ಆನಂದಾತಿರೇಕದ ವರ್ಧನೆ ನಿಜಕ್ಕೂ ಪ್ರಕಾಶದಾಯಕವಾಗಿದೆ. ಇನ್ನೊಂದು ಮಂತ್ರವನ್ನು ನೋಡಿ, ಏಮಾಶುಮಾಶವೇ ಭರ ಯಜ್ಞಶ್ರಿಯಂ ನೃಮಾದನಂ । ಪತಯನ್ ಮಂದಯತ್ಸಖಮ್ ॥ ದೇವತೆಗಳಿಗೆ ಆನಂದದಾಯಕವಾದ ಯಜ್ಞಸಂಪತ್ತಾದ ಸೋಮವನ್ನು ತೀವ್ರಗಾಮಿಯಾದ ಇಂದ್ರನಿಗೆ ತೆಗೆದುಕೊಂಡು ಬಾ. ನಮಗೆ ಸಂತೋಷ ನೀಡುವ ಇಂದ್ರನನ್ನು ಅದು ಮುನ್ನಡೆಸುತ್ತದೆ. (1.4.7)

ಇಂದ್ರನಿಗೆ ಆರ್ಯದೇವತೆಗಳಿಂದ ಕೆಲಸದ ಒತ್ತಡ ಬಹಳವಿತ್ತು ಎಂಬುದನ್ನು ಈ ಶ್ಲೋಕದಲ್ಲಿ ನೋಡಿ. ಅಸ್ಯ ಪೀತ್ವಾ ಶತಕ್ರತೋ ಘನೋ ವೃತ್ರಾಣಾಮಭವಃ । ಪ್ರಾವೋ ವಾಜೇಷು ವಾಜಿನಮ್ ॥ ಸಾವಿರಾರು ಕಾರ್ಯ ಚಟುವಟಿಕೆಗಳುಳ್ಳ ಓ ಇಂದ್ರನೇ, ಈ ಸೋಮವನ್ನು ಕುಡಿದು, ನೀನು ವೃತ್ರರ ಸಂಹಾರಕನಾಗು ಮತ್ತು ಸಂಪದ್ಭರಿತರ ಸಂಪತ್ತನ್ನು ಸಂರಕ್ಷಿಸು. (1.4.8)

ಆದರೆ, ಈ ಪೌರಾಣಿಕನಾದ ಇಂದ್ರನನ್ನು ಚಾರಿತ್ರಿಕವಾಗಿ ಅಥವಾ ವಾಸ್ತವ ಮೂರ್ತಿಯಲ್ಲಿ ನೋಡದೇ ಆರ್.ಎಲ್.ಕಶ್ಯಪ್ ಮನೋವೈಜ್ಞಾನಿಕ ವಿಶ್ಲೇಷಣೆ ನೀಡುತ್ತಾ ಇಂದ್ರನೆಂದರೆ ಮನೋಶಕ್ತಿಯ ಸಂಕೇತವಾಗಿ ಕಾಣುತ್ತಾರೆ. ಅದೇ ರೀತಿಯಲ್ಲಿ ಇಂದ್ರನ ಕುರಿತಾದ ಸೂಕ್ತಗಳಿಗೂ ವಿವರಣೆಗಳನ್ನು ನೀಡುತ್ತಾರೆ.

ಬೌದ್ಧ ಮತ್ತು ಜೈನಧರ್ಮಗಳಲ್ಲಿ ಇಂದ್ರ

ದೇವತೆಗಳ ರಾಜನಾಗಿರುವ ಇಂದ್ರನು ತನ್ನ ವೈಭವೋಪೇತ ಪಟ್ಟಣವಾದ ಅಮರಾವತಿ, ಅವನ ಸ್ವರ್ಗ ಸಂಪತ್ತುಗಳಾದ ಐರಾವತ, ಉಚ್ಚೈಶ್ರವಸ್ಸು, ವಜ್ರಾಯುಧ, ಕಲ್ಪವೃಕ್ಷ ಇತ್ಯಾದಿಗಳೊಂದಿಗೆ ಇತರ ಧಾರ್ಮಿಕ ಗ್ರಂಥಗಳಲ್ಲೂ ಕಾಣಿಸಿಕೊಳ್ಳುತ್ತಾನೆ. ಹಾಗಾಗಿಯೇ ಒಂದೇ ಇಂದ್ರನಲ್ಲದೇ ಇಂದ್ರ ಪದವಿಗೆ ಬಂದ ಇತರ ಇಂದ್ರರು ಎಂಬುದನ್ನು ನಾವು ಸ್ಪಷ್ಟೀಕರಿಸಿಕೊಳ್ಳಬಹುದು. ಛಾಂದೋಗ್ಯೋಪನಿಷತ್ತಿನಲ್ಲಿ ಇಂದ್ರನು ಓರ್ವ ಜಿಜ್ಞಾಸುವಾಗಿ ಪ್ರಜಾಪತಿಯ ಬಳಿ ಮುಕ್ತವಾಗಿ ಸಂವಾದಗಳನ್ನು ಮಾಡುವಂತೆ, ಉಪದೇಶಗಳನ್ನು ಪಡೆದುಕೊಳ್ಳುವಂತೆ ಬುದ್ಧನು ಸಾವತ್ತಿಯ ಜೇತವನದ ಅನಂತ ಪಿಂಡಿಕ ಆರಾಮದಲ್ಲಿ ವಿಹರಿಸುವಾಗ ದೇವೇಂದ್ರನು ಬಂದು ನಮಸ್ಕರಿಸಿ, "ಭಂತೆ, ಎಂಥವರಿಗೆ ದಾನ ಕೊಡುವುದರಿಂದ ಅದು ಶ್ರೇಷ್ಠದಾನವಾಗಿ ಫಲವನ್ನು ನೀಡುತ್ತದೆ?" ಎಂದು ಕೇಳುತ್ತಾನೆ. ಬುದ್ಧನು, "ಸಕ್ಕ, ಭಿಕ್ಕುಗಳಿಗೆ ನೀಡಿದ ದಾನವು ಶ್ರೇಷ್ಠ ಫಲವನ್ನು ಕೊಡುತ್ತದೆ. ಕಾರಣ..." ಇದೇ ರೀತಿಯಾಗಿ ಸಂಭಾಷಣೆ ಮುಂದುವರಿಯುತ್ತದೆ. ಹಾಗೆಯೇ ಬುದ್ಧನ ಶಿಷ್ಯನಾದ ಭಿಕ್ಕು ಮೊಗ್ಗಲಾನನು ಇಂದ್ರನ ಆಸ್ಥಾನಕ್ಕೇ ಹೋದ ಹಾಗೂ ಅವನ ಗರ್ವಭಂಗ ಮಾಡಿರುವ ಕಥೆಗಳಿವೆ.

ಜೈನ ತೀರ್ಥಂಕರರಲ್ಲಿ ಮೊದಲಿಗನಾದ ಋಷಭದೇವ ಅಥವಾ ಆದಿನಾಥನು ತೀರ್ಥಂಕರನಾಗುವ ಮುನ್ನ ತಾನು ಆಳುತ್ತಿದ್ದ ಅಯೋಧ್ಯೆಯ ಆಸ್ಥಾನದಲ್ಲಿ ಇಂದ್ರನಿಗೂ ಮತ್ತು ಇತರ ಗಣ್ಯರಿಗೂ ಔತಣಕೂಟವೇರ್ಪಡಿಸಿರುವ ಉಲ್ಲೇಖವಿದೆ. ಸಭೆಯಲ್ಲಿ ನರ್ತಿಸುತ್ತಿದ್ದ ನೀಲಾಂಜನೆಯು ನರ್ತನ ಸಭೆಯ ಮಧ್ಯೆಯಲ್ಲೇ ಸಾವನ್ನಪ್ಪಲು ಇಂದ್ರನು ಅದನ್ನು ಗಮನಿಸಿ ಕೂಟದ ರಸಭಂಗವಾಗದಿರಲೆಂದು ಆಕೆಗೆ ಜೀವದಾನ ಮಾಡಿ ಮತ್ತೆ ನೃತ್ಯ ಮುಂದುವರಿಸುವಂತೆ ನೋಡಿಕೊಳ್ಳುತ್ತಾನೆ. ಇಂದ್ರನು ಈ ವಿಷಯ ಯಾರಿಗೂ ತಿಳಿಯಲಿಲ್ಲ ಎಂದುಕೊಂಡರೂ ಸೂಕ್ಷ್ಮಮತಿಯಾಗಿದ್ದ ಋಷಭದೇವನಿಗೆ ಇದರ ಅರಿವುಂಟಾಗಿ ವೈರಾಗ್ಯವುಂಟಾಗುತ್ತದೆ.

ಹೀಗೆ ಇಂದ್ರ ಪದವಿಗೆ ಬಂದ ಯಾರ್ಯಾರೋ ಇಂದ್ರರ ವಿವಿಧ ಮುಖಗಳು ಎಲ್ಲೆಲ್ಲೋ ತೋರ್ಪಡುತ್ತವೆ. ■

ಗ್ರಾಮ ಸ್ಥಿತ್ಯಂತರದ ಕಥನ 'ಹೊರಬೀಡು'

ಪುಸ್ತಕ ವಿಮರ್ಶೆ

ಆತ್ಮಕತೆಗಳು ವೈಯಕ್ತಿಕ ಬದುಕಿನಿಂದ ರೂಪಗೊಂಡಿದ್ದೂ ಜೀವಿತ ಕಾಲದ ಚರಿತ್ರೆಗೆ ದಾಖಲಾಗದ ವಿವರಗಳನ್ನು ಕಟ್ಟಿಕೊಡುತ್ತವೆ. ಸಾಮಾಜಿಕ ಬದುಕನ್ನು ವಿಶಿಷ್ಟವಾಗಿ ಕಾಣಿಸುವ ಗುಣ ಈ ಪ್ರಕಾರಗಳಲ್ಲಿದೆ. ತನ್ನ ಕಥೆಯನ್ನು ಬರೆಯುತ್ತಲೇ ತನ್ನ ಕಾಲದ ಸಾಂಸ್ಕೃತಿಕ ಸಂಘರ್ಷಗಳಿಗೆ ಲೇಖಕ ಪ್ರತಿಕ್ರಿಯಿಸುತ್ತಿರುತ್ತಾನೆ. ಹೀಗಾಗಿ ಆತ್ಮಕಥಾನಕ/ಅನುಭವ ಕಥಾನಕಗಳ ಓದು ಒಂದು ಕಾಲದ ಸಾಂಸ್ಕೃತಿಕ ನೆನಪನ್ನು ಪುನರ್ ನೆನಪಿಸಿಕೊಳ್ಳುವ, ತನ್ನ ಕಾಲದ ಜತೆ ಸಮಕಾಲೀನಗೊಳಿಸುವ ಕ್ರಿಯೆಗಳು ಜತೆಜತೆಯಾಗಿ ನಡೆಯುತ್ತಿರುತ್ತವೆ. ಬಹುಪಾಲು ಎಲ್ಲ ಆತ್ಮಕಥನಗಳು ವೈಯಕ್ತಿಕತೆಯಿಂದಲೇ ಆರಂಭವಾದರೂ ಸಾರ್ವಜನಿಕ ರೂಪಿಕೆಗಳಾಗುತ್ತ ಸಾಂಸ್ಕೃತಿಕ ಮೆರಗನ್ನು ಪಡೆಯುತ್ತವೆ. ಯಾವ ಆತ್ಮಕಥನಗಳು ವೈಯಕ್ತಿಕ ನೆಲೆಗೆ ನಿಲ್ಲುತ್ತವೆ ಅವು ವಿಫಲವಾಗುತ್ತವೆ; ದಿನಚರಿಗಳಾಗುತ್ತವೆ.


ಡಾ. ಸಂಜೀವರಾಯರ 'ಹೊರಬೀಡು' ತುಮಕೂರು ನೆಲದ ವಿಭಿನ್ನ ಆತ್ಮಕಥಾನಕ. ಈಗಾಗಲೇ ಇದೇ ಪರಿಸರದಲ್ಲಿ ಎರಡು ದಲಿತ ಆತ್ಮಕಥನಗಳು, ಮತ್ತೊಂದು 'ಕಿಚ್ಚಿಲ್ಲದ ಬೇಗೆ' ಶೈಲಜ ನಾಗರಘಟ್ಟರ ಸ್ತ್ರೀ ಆತ್ಮಕಥೆ ಬಂದಿವೆ. ತುಂಬಾಡಿ ರಾಮಯ್ಯನವರ 'ಮಣೆಗಾರ' ಮತ್ತು ಅದರ ಮುಂದುವರಿಕೆಯಂತಿರುವ 'ಮುತ್ತಿನಜೋಳ' ಅನುಭವ ಕಥಾನಕಗಳು ಬಂದಿವೆ. 'ಮಣೆಗಾರ' ಮತ್ತು ಈ 'ಹೊರಬೀಡು' ಒಂದೇ ಕಾಲಘಟ್ಟದ ಒಂದಷ್ಟು ಆಸುಪಾಸಿನ ಪರಿಸರದವು. ಎರಡು ಅನುಭವಕಥಾನಕಗಳ ಅಂತರ ಕೇವಲ 10 ಕಿ.ಮೀ.ನಷ್ಟು. ಆದರೆ ಕಟ್ಟಿಕೊಡುವ ಅನುಭವಗಳು ಭಿನ್ನವಾದವು. ಒಂದೇ ದಾರಿಯಲ್ಲಿ ಸಿಗುವ ಎರಡು 'ತುಂಬಾಡಿ' 'ಗೊಲ್ಲಹಳ್ಳಿ' ಊರುಗಳಲ್ಲಿನ ಅನುಭವಗಳು. ಒಂದೇ ಸಮುದಾಯದಿಂದ (ಮಾದಿಗ) ಬಂದವರು ಬರೆದ ಆತ್ಮಕಥೆಗಳು. ಸುಮಾರು 1960 ರ ದಶಕದಿಂದೀಚೆಗಿನ ತುಮಕೂರಿನ ಗ್ರಾಮ್ಯ ಬದುಕನ್ನು ಇವು ಕಟ್ಟಿಕೊಡುತ್ತಲೇ ಮಾನವೀಯ ಸೆಲೆಗಳ ಅದಮ್ಯ ಪ್ರೀತಿ, ಅಭಿವ್ಯಕ್ತಿ, ಭೀಕರ ಬಡತನ, ಶಿಕ್ಷಣ ಪಡೆಯಲು ಹೆಣಗಿದ ವಿವರಗಳೆಲ್ಲ ಹೊಮ್ಮಿವೆ.

'ಹೊರಬೀಡು' ಒಂದು ಜನಪದ ಆಚರಣೆ. ವರ್ಷಕ್ಕೊಮ್ಮೆ ಊರಿನ ಜನರೆಲ್ಲ ತಾವು ಸಾಕಿದ ಬೆಕ್ಕು, ಕುರಿ, ಕೋಳಿ ಎಲ್ಲವನ್ನು ಹಿಡಿದುಕೊಂಡು ಮನೆಯ ಮುಂದೆ ಬೇಲಿ ಎಳೆದು, ಊರಿನ ದಾರಿಗಳಿಗೂ ಬೇಲಿ ಹಾಕಿ, ಊರಿನ ಹೊರಗಡೆ ಮರಗಳ ತೋಪಿನಲ್ಲೋ, ಹಳ್ಳದ ಪಕ್ಕದಲ್ಲೋ ಅಡುಗೆ ಮಾಡಿಕೊಂಡು ಇಡೀ ದಿನ ಅಲ್ಲೇ ಕಳೆಯುತ್ತಾರೆ. ಸಂಜೆ ಊರಿನ ಕೈವಾಡದವರು ಊರಿನ ಮುಂದೆ ಹೊರಬೀಡಮ್ಮನನ್ನು ಪೂಜಿಸಿ ಮರಿಯನ್ನು ಬಲಿಗೊಟ್ಟು ಹೊರಬೀಡನ್ನು ಅಂತ್ಯಗೊಳಿಸುತ್ತಾರೆ. ಹೊರಬೀಡು ಒಂದು ಆದಿಮಾ ನೆನಪಿನ ಪುನರ್ ಅಭಿನಯದ ಆಚರಣ ರೂಪಕವಾಗಿದೆ.

ಇಲ್ಲಿ 'ಹೊರಬೀಡು' ಹೆಸರೇ ಸೂಚಿಸುವಂತೆ ಸಮಾಜದಿಂದ ದೂರವಾಗಿ ಬದುಕುವ ಆಚರಣೆಯಂತೆ, 'ಹೈರಾರ್ಕಿ ಸಿಸ್ಟಮ್' ನಿಂದ ನೊಂದಿರುವ, ಪ್ರಧಾನ ಧಾರೆಯಿಂದ ದೂರವಿರುವ ಕಟ್ಟಕಡೆಯ ಸಮೂಹವನ್ನು, ಸಮುದಾಯವನ್ನು ಸಂಕೇತಿಸುತ್ತದೆ. 'ಹೊರಬೀಡು' ಅತ್ಯಂತ ಸಣ್ಣ ಪುಸ್ತಕ. 11 ಅಧ್ಯಾಯಗಳನ್ನು ಒಳಗೊಂಡಿರುವ 52 ಪುಟಗಳ ಪುಸ್ತಕದಲ್ಲಿ ಎಪ್ಪತ್ತರ ದಶಕದಿಂದ ಇಲ್ಲಿಯವರೆಗಿನ ತುಮಕೂರು ಪರಿಸರವನ್ನು ಕಟ್ಟಿಕೊಟ್ಟಿದೆ.

ಜಗತ್ತಿಗೆ ದಾಖಲಾಗದ ಹಳ್ಳಿ ಬದುಕು ಎರಡನೇ ತಲೆಮಾರು ಎದುರಿಸಿದ ಆತಂಕಗಳು ಇದರಲ್ಲಿ ವ್ಯಕ್ತವಾಗಿವೆ. ಸ್ವಾತಂತ್ರ್ಯ ನಂತರದ ಗ್ರಾಮ್ಯ ಭಾರತದ ಪರಿಸ್ಥಿತಿ ಬದಲಾಗದೆ ಜಡ್ಡಿನಿಂದ ವ್ಯಾಪಿಸಿರುವ ಜಾತಿವ್ಯವಸ್ಥೆಗಳು, ದಲಿತರ ಬದುಕು ಯಾವುದೇ ಬದಲಾವಣೆಯಿಲ್ಲದೇ ಇರುವ ವಿವರಗಳನ್ನು 'ಹೊರಬೀಡು' ಹೇಳುತ್ತದೆ.

ಇಡೀ 'ಹೊರಬೀಡು' ಅನುಭವ ಸಾಂದ್ರತೆಯನ್ನು ವಿಭಾಗಿಸಿಕೊಳ್ಳದಂತೆ ಹೆಣೆದುಕೊಂಡಿದೆ. ಲೇಖಕರ ಊರಾದ ಗೊಲ್ಲಹಳ್ಳಿಯಿಂದ ಹಿಡಿದು ಅಗ್ರಹಾರ, ಚಿಕ್ಕಗ್ರಹಾರ, ಬೆಳಧರ, ಘರಟಿ, ದ್ಯಾವಲಾಪುರ, ಕೊರಟಗೆರೆ, ತೀತಾ, ತುಮಕೂರು, ಚಿನುಗ, ಕೋರ, ದಮಲಯ್ಯನಗಿರಿಪಾಳ್ಯ, ಅಜ್ಜಿಹಳ್ಳಿ, ಹನುಮಂತಪುರ, ವಂಸಣಿಪಾಳ್ಯ, ದೊಡ್ಡನರಸಯ್ಯನಪಾಳ್ಯ ಹೊಸಕೋಟೆ, ಪುಟ್ಟದೇವ್ರುಪಾಳ್ಯ ಹುಲಿಕುಂಟೆ, ಗೌರಿಬಿದನೂರ ಹತ್ತಿರದ ಕಲ್ಲೂಡಿಯವರೆಗೆ ಕಥನ ವ್ಯಾಪಿಸಿದೆ. ಪ್ರತಿ ಊರುಗಳಿಂದಲೂ ಲೇಖಕರ ಅನುಭವಗಳು ಗಟ್ಟಿಗೊಂಡಿವೆ. ಲೇಖಕರನ್ನು ಬೆಳೆಸಿವೆ. ತೀತಾ ಡ್ಯಾಂ ಆಧುನಿಕತೆ ಮತ್ತು ನರಬಲಿಯ ವಿವರಗಳನ್ನು ಕಟ್ಟಿಕೊಡುವಾಗ ಆ ಕಾಲದ ಆತಂಕಗಳನ್ನು ಬಿಚ್ಚಿಡುತ್ತದೆ. ಈ ಊರುಗಳಿಂದ ಭೌಗೋಳಿಕ ವಿವರಗಳನ್ನು, ದಾಖಲಾಗದ ಗೊಲ್ಲಹಳ್ಳಿಯ ಚರಿತ್ರೆಯನ್ನು ಜತನದಿಂದ 'ಹೊರಬೀಡು' ದಾಖಲಿಸುತ್ತದೆ. ಊರಿನ ಸುತ್ತಮುತ್ತಲಿನ



ವಿವರಗಳು, ಕೆರೆಯ ಕಾರಣಕ್ಕೆ ಆ ಊರಿನ ವಿಶೇಷತೆ ಬಂದಿದ್ದು, ದಾರಿಬದಿಗೆ ಹನುಮಂತ ನೆಲೆಗೊಂಡಿದ್ದು ಇವೆಲ್ಲ ಊರಿನ ಭೌಗೋಳಿಕ ವಿನ್ಯಾಸಕ್ಕೆ ಆಕರವಾಗಿ ನಿಲ್ಲುತ್ತವೆ.

'ಹೊರಬೀಡು' ಮೂಲಕ ಗೊಲ್ಲಹಳ್ಳಿ, ಗೊಲ್ಲಹಳ್ಳಿಯ ಮೂಲಕ ಅಲ್ಲಿನ ಸಾದ್ರು, ಒಕ್ಕಲಿಗ, ಬ್ರಾಹ್ಮಣ, ಮಾದಿಗ ಜಾತಿಯ ವಿವರಗಳನ್ನು ಅನಾವರಣಗೊಳಿಸುತ್ತವೆ. ಅಲ್ಲದೇ ಅಲ್ಲಿನ ಮಾದಿಗ ಜಾತಿಯ ಅನನ್ಯತೆ, ಜಾತಿಯ ಸಂಕಟಗಳು, ಅವಮಾನಗಳು, ಅನ್ನಕ್ಕಾಗಿ ಪರದಾಡುತ್ತಿರುವ ಸ್ಥಿತಿ.. ಇಲ್ಲೆಲ್ಲ ಗೊಲ್ಲಹಳ್ಳಿಯ ಹಟ್ಟಿಯೇ ಮಾತಾಡುತ್ತಿರುವಂತೆ ನಿರೂಪಿತಗೊಂಡಿದೆ.



ಹಸಿವು ಎನ್ನುವುದು ಇಲ್ಲದೇ ಹೋದರೆ ದಲಿತ ಆತ್ಮಕಥನಗಳು ಹುಟ್ಟುತ್ತಲೇ ಇರಲಿಲ್ಲ, ಇದೇ ಕಾರಣಕ್ಕೆ 'ಊರುಕೇರಿ' ಯಿಂದ ಹಿಡಿದುಕೊಂಡು 'ಗೋಮೆಂಟ್ ಬ್ರಾಹ್ಮಣ', 'ಮಣೆಗಾರ', 'ಸಂಬೋಳಿ', 'ಹೊರಬೀಡು' ಇತ್ಯಾದಿಗಳನ್ನೆಲ್ಲ ಒಟ್ಟಿಗಿಟ್ಟು ನೋಡಿದರೂ ಇವುಗಳಲ್ಲೆಲ್ಲಾ ಹಸಿವಿನ ಚಿತ್ರಣ ವೈವಿಧ್ಯಮಯವಾಗಿವೆ.

ಇಡೀ ಬದುಕಿನೊಳಗೆ ಹಸಿವಿನ ನಿವಾರಣೆಗೆ ಪಟ್ಟಪಾಡು, ಕಳೆದುಕೊಂಡ ಜೀವನಾನುಭವ, ಸವಲತ್ತುಗಳು, ಮನುಷ್ಯರಿಗಿಂತ ನಿಕೃಷ್ಟವಾಗಿ ಬದುಕಿದ ಸ್ಥಿತಿ, ಹೇಯವಾದ ಪರಿಸ್ಥಿತಿ, ಶಿಕ್ಷಣದಿಂದ, ಸವಲತ್ತುಗಳಿಂದ ವಂಚಿತ ಮಾಡಿದ ಭ್ರಷ್ಟ ಮತ್ತು ಅಸಮಾನ ವ್ಯವಸ್ಥೆ, ಸಾಂಪ್ರದಾಯಿಕ ಮೌಲ್ಯಗಳಿಗೆ ಬಗ್ಗಿಸುವ ಸಮಾಜದ ನೀತಿಗೆಟ್ಟ ಮೌಲ್ಯಗಳು ಇಲ್ಲೆಲ್ಲ ದಲಿತರ ರಕ್ತದ ಹನಿಹನಿಯೂ ಸಮಾಜದ ಹೊಸ ಚರಿತ್ರೆಯನ್ನು ಕಟ್ಟುವ ಶಾಯಿಗಳಾಗುತ್ತಿವೆ.


ಈ ಆತ್ಮಕಥನದಲ್ಲಿ ಹಸಿವಿನ ಪ್ರಸಂಗವನ್ನು ಲೇಖಕರು ಹೀಗೆ ಬರೆದುಕೊಳ್ಳುತ್ತಾರೆ: "ರಾಮಕೃಷ್ಣಪ್ನೋರು ಒಂದೊಂದು ಜೊನ್ನೆ ಮುತ್ತುಗದ ಎಲೆ ನೀಡಿದ್ರು. 'ಎಲೆಗಳು ದೊಡ್ಡವು ಸಿಕ್ಲಿಲ್ಲ ಸಣ್‌ದಾಗವೆ. ಎಡಗೈ ಅಂಗೈ ಮೇಲಿಟ್ಕೊಂಡು ಮುದ್ದೆ ಉಣ್‌ಬೇಕು' ಅಂತ ಹೇಳ್ತಿದಂಗೆ ರಂಗಮ್ಮ ಎಲ್ರೂ ಕೈಗೂ ಒಂದೊಂದು ಮುದ್ದೆ ತಂದು ಹಾಕಿದ್ರು. ಜೊನ್ನೆಲಿ ಮೊಳಕೆ ಹುರುಳಿಕಾಳಿನ ಎಸರಿನಲ್ಲಿ ಹಿಟ್ಟು ಮುರುಕೊಂಡು ಬೆಳ್ದಿಂಗಲ್ಲಿ ಒಂದೊಂದು ತುತ್ತು ಮಾಡ್ಕೊಂಡು ಗುಳುಂ.. ಗುಳುಂ ಅಂತ ನುಂಗ್ತಾ ಇದ್ರೆ ದೇಹದಲ್ಲೆಲ್ಲಾ ಶಕ್ತಿಯ ಪರಮಾತ್ಮ ಓಡಾಡಿದಂತಾಗಿ ನಿಶ್ಶಕ್ತಿಯ ಜೀವಕ್ಕೆ ಮತ್ತು ಬಂದಂಗಾಯ್ತು, ಎಲ್ರೂ ಎರಡೆರಡು ಮುದ್ದೆ ಜೊನ್ನೆಗೆ ಒಂದಿಷ್ಟು ಅನ್ನ ಹಾಕಿ ಕಲ್ಸಂಡು ಉಂಡ್ವಿ." (ಪು. 19)

ಕಾಡುವ ಪ್ರಸಂಗಗಳು

ಜಾತಿಯ ಕಾರಣಕ್ಕೆ ಜೀತಕ್ಕೆ ಹೋಗಬೇಕಾದ ಪ್ರಸಂಗ, ಇಕ್ಕಿಸಾಕಬರುವ ಊಟ, ಅಜ್ಜನ ಸಾವು, ಮೋಟುದಾಸಪ್ಪನ ಕುಟುಂಬ, ಊರಿನ ಸುದ್ದಿಗಳು, ಗುಸುಗುಸು ಕತೆಗಳು, ಅಕ್ಕಮ್ಮನ ಹಲಸಿನ ಮರದ ಸುತ್ತ ಹಬ್ಬಿಕೊಂಡ ಕತೆಗಳು. ಅಲ್ಲದೇ ಬೇರೆಯವರ ಕಷ್ಟಗಳನ್ನು ತನ್ನದೆಂಬಂತೆ ಭಾವಿಸುವ ಹೃದಯವಂತ ಒಕ್ಕಲಿಗ ರಾಮಣ್ಣನಂಥವನು, ಶಾನುಭೋಗ ರಾಮರಾಯರ ವ್ಯಕ್ತಿತ್ವವನ್ನು, ರಾಮಕ್ಕ-ಹನುಮಕ್ಕ ಜಗಳದ ವಾಗ್ಲರಿಯನ್ನು, ಕೋಳಿಹುಂಜ- ಕುಂಭಿಹೆಂಡ್ತಿಯ ಗುಪ್ತ ಸಂಬಂಧವನ್ನು, ಗೊಲ್ಲರಹಟ್ಟಿ-ಮಾದಿಗರ ನಡುವಿನ ನಿಷೇಧಗಳನ್ನು, ಗಂಗೇ-ಗೌರಿಯನ್ನೂ ಮಕ್ಕಳಂತೆ ಕಂಡ ಕದ್ರಜ್ಜನನ್ನು 'ಹೊರಬೀಡು' ಜೀವಂತವಾಗಿಸಿದೆ.


ಇಡೀ ಆತ್ಮಕಥನ ವಿಷಾದವನ್ನೂ, ಸಂಕಟವನ್ನೂ ಹೇಳುತ್ತಲೇ ಕೊನೆಗೊಳ್ಳುತ್ತದೆ. ಅನುಭವ ಕಥಾನಕದಂತೆ ಆರಂಭದಲ್ಲಿ ಕಂಡರೂ ಕೊನೆಕೊನೆಗೆ ಕಥನದ ಸ್ವರೂಪವನ್ನು ತಾಳಿ ವಿಷಾದಕ್ಕೆ ನಿಂತುಬಿಡುತ್ತದೆ. ಡಾ.ಸಂಜೀವರಾಯರು ಓದಿದ್ದು ಪಶು ವೈದ್ಯಕೀಯ. ಬರೆಯುತ್ತಿರುವುದು ವೃತ್ತಿಯೇತರವಾದುದು. ಸಾಹಿತ್ಯ ಒಗ್ಗಿಸಿಕೊಂಡು ಭಾಷೆಯ ನಟನಾತಂತ್ರದಂತೆ ಬಳಸುತ್ತಾರೆ. ಗೊಲ್ಲಹಳ್ಳಿ ಸುತ್ತಮುತ್ತ ಭಾಷೆಯನ್ನು ದಾಖಲಿಸುವ ವಾರಸುದಾರಿಕೆಯುಳ್ಳವರ ಲೇಖಕರು ಕಾಣುತ್ತಾರೆ. ತುಮಕೂರಿನ ಗೊಲ್ಲಹಳ್ಳಿ ಪ್ರಾಂತ ಭಾಷೆ ವೈವಿಧ್ಯಮಯವಾಗಿ, ವಿಶಿಷ್ಟವಾಗಿ 'ಹೊರಬೀಡು' ಮೂಲಕ ಪುನರ್ ಅವತರಿಸಿದೆ.

ಸಮಾಜದ ಕರಾಳ ವ್ಯವಸ್ಥೆಯನ್ನು ಸಾವಧಾನದಿಂ ಓದುಗರಿಗೆ ಒಪ್ಪಿಸುತ್ತಾ ಹೋಗುವ ಈ ಕಥನದ ಮಾದ ವಿಶಿಷ್ಟ ರೂಪದ್ದಾಗಿದೆ. ಆಕ್ರೋಶ ವ್ಯಕ್ತವಾಗದೆ ಶೋಷಣೆ ನೆಲೆಗಳನ್ನು ಹುಡುಕಲು ಯತ್ನಿಸುತ್ತದೆ. ಶೋಷಣೆ ಕಾರಣವಾದ ಸಮಾಜದ/ವ್ಯವಸ್ಥೆಯ ಬಗೆಗೆ ಸಿಟ್ಟಿದ್ದ ಅದು ದಾಳಿಯ ರೂಪದಲ್ಲಿಲ್ಲ, ಒಳದಾರಿಗಳ ಮೂ ಶೋಷಣೆಯಿಂದ ಬಿಡಿಸಿಕೊಳ್ಳುವ ಬಗೆಯನ್ನು ಸೂಚಿಸುತ್ತ ವಿವಿಧ ಸಮುದಾಯ, ಜಾತಿಗಳ ನಡುವೆ ಬದುಕುತ್ತ ತನ್ನದೇ ಆದ ಅಸ್ಮಿತೆಯನ್ನು ಕಾಪಾಡಿಕೊಳ್ಳುತ್ತಾ ಇದೊಂದು ಬಿಡಿಸಿಕೊಳ್ಳಲಾಗದ ಸಾಮಾಜಿಕ ಸಿಕ್ಕು. ತ ಸ್ಥಿತಿಗೆ ಮೇಲ್ಜಾತಿಗಳೇ ಕಾರಣವಾದರೂ ಅವುಗಳೊಂದಿ ಬದುಕಬೇಕಾದ ಅನಿವಾರ್ಯ ಸ್ಥಿತಿಯೂ ಇ 'ಉಳುವವನೇ ಭೂಮಿಯ ಒಡೆಯ' ಕಾನೂನು ಬಂದಾ ಕೆಲವರು ಬೈಯ್ದು ಜಮೀನುಗಳನ್ನು ಬಿಟ್ಟು ನಗ ವಲಸೆಹೋದರೆ, ಲೇಖಕರ ಮನೆಯವರು ಅದ ಕೇಳುವುದೇ ಇಲ್ಲ, ಇದನ್ನು ಹೊಂದಾಣಿಕೆ ಅನ್ನಬೇಕೋ ಹಕ್ಕುದಾರಿಕೆಯ ಆತಂಕ ಎನ್ನಬೇಕೋ? ಇಸುಬಿನ ಈಸ್ವರ ಕೆಟ್ಟ ಮನುಸ್ಸುಗಳು ಒಂದು ಕಡೆ, ಸದಾ ಸಹಿಷ್ಣು ಒಕ್ಕ ರಾಮಣ್ಣ ಇಬ್ಬರೂ ಒಟ್ಟಿಗೆ ಒಂದೇ ಊರಲ್ಲೇ ಬದು ತ್ತಿದ್ದಾರೆ. ಹಾಗಾಗಿ ಈ ಕಥನ ಕೇವಲ ಡಾ.ಸಂಜೀವರಾಯರ ಕಥನವಾಗಿಯಷ್ಟೇ ಉಳಿಯುವುದಿಲ್ಲ, ಗೊಲ್ಲಹಳ್ಳಿ ಸುತ್ತೇಳು ಹಳ್ಳಿಗಳ ಕಥನವಾಗಿ ಬೆಳೆಯುತ್ತದೆ.



ಡಾ.ರವಿಕುಮಾರ್ ನೀಹ,
ಬಿ.ಡಿ.ಪುರ, ತುಮಕೂರು ಜಿಲ್ಲೆ.

ಎದ್ದೇಳೋ ಅಣ್ಣಪ್ಪ



ಸುಳ್ಳು ಹೇಳಿ ನಂಗೊತ್ತಿಲ್ಲ
ನಾನು ಯಾವತ್ತೂ ನಿನ್ನ ಭಕ್ತ
ಆಗಿರ್ಲಿಲ್ಲ ಸ್ವಾಮಿ.
ಆದ್ರೆ
ನೀನು ಜೀತಕ್ಕೆ ಬಿದ್ದ ಮಂಜುನಾಥನನ್ನು
ಜೀತಕ್ಕಿಟ್ಟುಕೊಂಡ
ಖಾವಂದರಿಗೆ ಸೆಡ್ಡು ಹೊಡೆದು
'ಉಳುವವನೇ ನೆಲದೊಡೆಯ'
ಅಂದು ಎದ್ದು ನಿಂತ ನಿನ್ನ
ಗೇಣಿದಾರ ಭಕ್ತರ ಬೆನ್ನಿಗೆ
ಎದೆಯೊಡ್ಡಿ ನಿಂತು ಸತ್ತ
ಎಳಿಚ್ಚಾತ್ತಾಯರ ಶಿಷ್ಯ ಸ್ವಾಮಿ,
ಸುಳ್ಳು ಹೇಳಿ ನಂಗೊತ್ತಿಲ್ಲ,

ಸುಳ್ಳು ಹೇಳಿ ನಂಗೊತ್ತಿಲ್ಲ ಅಣ್ಣಪ್ಪ!
ಇವತ್ತು ಕರುಳು ಚುರ್ ಅಂತಿದೆ.
ಚಂದಪ್ಪ, ಕುಸುಮಾವತಿ ಅಂತ
ನಿನ್ನ ಸಾಕ್ಷಿಯಾಗಿ ಮಕ್ಕಳಿಗೆ ಹೆಸರಿಟ್ಟೋರು
ನಿನಗೆ ಹರಕೆ ಹೊತ್ತೇ ಅವ್ರಿಬ್ರಿಗೆ ಕಂಕಣ
ತೊಡಿಸಿದರೋ ಸ್ವಾಮಿ-
ನಿನ್ನ ನಂಬಿಕೆಯಲ್ಲಿ ಅವರಿಬ್ಬರಿಗೆ ಇಟ್ಟ
ಹೆಸರು ನೋಡೋ ಸ್ವಾಮಿ!


ನೀನು ಹಾಕಿದ ಮರ್ಯಾದೆ ಗೆರೆ ದಾಟೋಲ್ಲ ಅಂತ
ಚಂದಪ್ಪ ಕುಸುಮಾವತಿ ತಮ್ಮ ಮಕ್ಕಳಿಗೆ
ನಿನ್ನನ್ನೇ ಸಾಕ್ಷಿಯಾಗಿಟ್ಟುಕೊಂಡು ಇಟ್ಟ
ಹೆಸರು ಕೇಳೋ ಸ್ವಾಮಿ:
ಸೌಮ್ಯ ಸೌಜನ್ಯ ಸೌಂದರ್ಯ, ಸೌಹಾರ್ದ, ಸುಖೇಶ.

ಕಿವಿ ತೆರೆಯೋ ಸ್ವಾಮಿ. ಹೆಸರು ಕೇಳಿದೆಯಾ!
ನಾನಲ್ಲದಿದ್ದರೂ. ಅವರು,
ನಿನ್ನ ಸಾಕ್ಷಿಯಾಗಿ ಮಕ್ಕಳಿಗೆ ಆ ಹೆಸರಿಟ್ಟವರು!
ನಿನ್ನನ್ನು ಸ್ವಾಮಿ ಎಂದು ನಂಬಿ,
ನಿನ್ನ ಮರ್ಯಾದೆಗಾಗಿ ಹಾಗೇ
ಆ ಮಕ್ಕಳ ಹೆಸರಿಗೆ ತಕ್ಕ ಹಾಗೆ
ಬದುಕಿದೋರ.
ಸೌಜನ್ಯ ಅತ್ಯಾಚಾರಕ್ಕೊಳಗಾಗಿದೆ ಸ್ವಾಮಿ!
ಇನ್ನೂ ಸೌಂದರ್ಯ, ಸೌಹಾರ್ದ, ಸುಖೇಶರ
ನಾಶಕ್ಕೆ ಕಾಯುತ್ತಿರುವೆಯಾ ಅಣ್ಣಪ್ಪ!

ನಿನ್ನನ್ನು ತೆಂಗಿನ ಮರದೆತ್ತರ ಅನ್ನದ ಋಣಕ್ಕೆ
ಕೆಡವಿದ ಮಂಜುನಾಥ
ತನ್ನನ್ನು ಕೀರ್ತಿಯ ಋಣಕ್ಕೆ ಕೆಡವಿದ
ಖಾವಂದರ ಕೇಡಿಗೆ ಕಣ್ಣು ಮುಚ್ಚಿದ್ದಾನೆ ಸ್ವಾಮಿ!
ನೀನೂ ಅವನ ಜೋಳವಾಲಿಗೆ ಬಿದ್ದು
ನಿನ್ನನ್ನು ನಂಬಿದ ಸೌಜನ್ಯದ ಭಕ್ತರಿಗೆ
ಕೇಡು ಮಾಡದಿರು ಸ್ವಾಮಿ!
ಕೇಡಿಗಳಿಗೆ ಸಲ್ಲದೋ ಸೌಜನ್ಯ
ಖಾವಂದರಿಗಿಲ್ಲದ, ಮಂಜುನಾಥನಿಗಿಲ್ಲದ
ಕರುಣೆ ಜೋಳವಾಳಿಯ ಮೇಲೆ ನಿನಗೇಕೆ?
ಸೌಜನ್ಯವಿದ್ದರೆ ಜೋಳವಾಳಿಗೂ ಅರ್ಥ ಅರಿವು!
ಅದಿಲ್ಲದ ಜೀತ ನಿನಗೇಕೋ ಅಣ್ಣಪ್ಪ!
ಎದ್ದೇಳು ಅಣ್ಣಪ್ಪ ಭಕ್ತರ ಸೌಜನ್ಯ ಕರೆಯುತ್ತಿದೆ!
ಜೋಳವಾಳಿಯ ಮುರಿಯೋದೇ ಧರ್ಮ
ಅಣ್ಣಪ್ಪ ಸ್ವಾಮಿ ಎದ್ದೇಳು!


■ ಕೆ. ಫಣಿರಾಜ

...ಂಗ-ಅಂತರಂಗ



ಕುಂದಾಪುರದ ಹಿರಿಮೆಗೊಂದು ಗರಿ: ರಂಗ ಅಧ್ಯಯನ ಕೇಂದ್ರ


ಕುಂದಾಪುರ ಮೊದಲಿನಿಂದಲೂ ರಂಗ ಚಟುವಟಿಕೆ ...ಗೆ ಹೆಸರಾದ ಊರು. ಸುಮಾರು 1910 ರ ವೇಳೆಗೇ ...ಂದಾಪುರದ ಪಕ್ಕದ ಬಸ್ರೂರಿನಲ್ಲಿ ಹೆಂಗಸರೆ ...ನೀಲಮಣಿ ಕಂಪನಿ' ಎಂಬ ನಾಟಕ ಸಂಸ್ಥೆಯನ್ನು ...ಟ್ಟಿದ್ದರು. ಗರುಡ, ಸದಾಶಿವ ರಾಯರ ಕಂಪನಿಗಳು ...ಗೂ ಗುಬ್ಬಿ ಕಂಪನಿಗಳು ಕುಂದಾಪುರದಲ್ಲಿ ಮೊಕ್ಕಾಮ್ ...ಯೇ ಮುಂದೆ ಹೋಗುತ್ತಿದ್ದವು. ಇದು ಅನೇಕ ...ವ್ಯಾಸಿ ರಂಗ ಸಂಸ್ಥೆಗಳ ಹುಟ್ಟಿಗೆ ಕಾರಣವಾಯಿತು. ...ಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿಯೂ ವಿಶಿಷ್ಟ ...ಗೆಯ ರಂಗಚಟುವಟಿಕೆಗಳು ಆರಂಭಗೊಂಡವು. ...ದೆಲ್ಲದರ ಫಲಶ್ರುತಿ ಎಂಬಂತೆ 1997 ರಲ್ಲಿ ...ಡಾರ್‌ಕಾರ್ಸ್ ಕಾಲೇಜಿನ ಆವರಣದಲ್ಲಿ ರಂಗ ಅಧ್ಯಯನ ...ಂದ್ರವು ಸ್ಥಾಪನೆಗೊಂಡಿತು. ಇದರ ಹಿಂದೆ ಇರುವುದು ...ಡಾರ್‌ಕಾರ್ಸ್ ಕಾಲೇಜಿನ ಮುಂದಾಳು ...ರುವ ಡಾ.ಹೆಚ್. ಶಾಂತಾರಾಮರ ಶ್ರಮ.



ವಸಂತ ಬನ್ನಾಡಿ


...ಇಂದು ರಂಗ ಅಧ್ಯಯನ ಕೇಂದ್ರವು ...ರ್ನಾಟಕದ ಮುಖ್ಯ ನಾಟಕ ಶಾಲೆಯಾಗಿ ...ದಿದೆ. 2006 ರಲ್ಲಿ ಕೇಂದ್ರಕ್ಕೆ ಹಂಪಿಯ ...ದ ವಿಶ್ವವಿದ್ಯಾಲಯದ ಮಾನ್ಯತೆ ದೊರಕಿತು. ...ದರಿಂದಾಗಿ ಕೇಂದ್ರದಲ್ಲಿ ನಾಟಕದಲ್ಲಿ ಒಂದು ...ರ್ಷದ ಪೂರ್ಣಾವಧಿ ಡಿಪ್ಲೊಮ ಕೋರ್ಸ್‌ನ್ನು ...ಸಿಕೊಂಡು ಬರಲು ಅನುವು ಮಾಡಿ ...ಟ್ಟಿತು. ಇದೀಗ ನಾಡಿನ ಎಲ್ಲೆಡೆಯಿಂದ ...ರುವ ವಿದ್ಯಾರ್ಥಿಗಳು ಇಲ್ಲಿ ರಂಗ ಶಿಕ್ಷಣ ಪಡೆಯುತ್ತಿದ್ದಾರೆ. ...ಂತಾರಾಮರ ಜೊತೆಗೆ ಕೇಂದ್ರದ ಚಟುವಟಿಕೆಗಳಿಗೆ ... ರೂಪು ನೀಡುತ್ತಿರುವವರೆಂದರೆ ವಸಂತ ಬನ್ನಾಡಿ, ...ರೇಶ ಆನಗಳ್ಳಿ ಹಾಗೂ ಗೋಪಾಲಕೃಷ್ಣ ನಾಯರಿ.

... ರಂಗ ಅಧ್ಯಯನ ಕೇಂದ್ರವು ಈಗ ತನ್ನದೇ ... ಸುಸಜ್ಜಿತ ಕಟ್ಟಡವನ್ನು ಹೊಂದಿದೆ. ನಾಟಕ ...ಸಲೆಂದೇ ನಿರ್ಮಿಸಲಾದ ಕಿರು ರಂಗ ...ಮಂದಿರವೂ ಇಲ್ಲಿದೆ. ಇಲ್ಲಿ ದಿನವಿಡೀ ...ಪ್ರವಚನ, ಕಾರ್ಯಾಗಾರ, ತರಬೇತಿ ಹಾಗೂ ...ಟಕದ ಸಿದ್ಧತೆ ನಡೆಯುತ್ತಿವೆ. ವರ್ಷಂಪ್ರತಿ ...ಮು ನಾಟಕೋತ್ಸವಗಳೂ ನಡೆಯುತ್ತಿವೆ.



... ತನ್ನದೇ ನಾಟಕಗಳನ್ನು ತಯಾರಿಸಿ ...ರ್ಶಿಸಿದಾಗ ಮಾತ್ರ ಒಂದು ರಂಗಕೇಂದ್ರಕ್ಕೆ ಮಹತ್ವ ಬರುತ್ತದೆ. ಜೊತೆಗೆ ಜಗತ್ತಿನ ನಾಟಕಗಳಿಗೆ ತೆರೆದುಕೊಳ್ಳುತ್ತಾ ತನ್ನ ಮಿತಿಗಳನ್ನು ತಾನೇ ಮೀರುತ್ತ ಬೆಳೆಯುವ ಕ್ರಿಯೆಗೆ ಅದು ಒಳಗಾಗುತ್ತಲೇ ಇರಬೇಕಾಗುತ್ತದೆ. ಹತ್ತಾರು ಮಂದಿ ಸೇರಿ ಮುಖಾಮುಖಿ, ವಾಗ್ವಾದಗಳನ್ನು ನಡೆಸುವುದು ಇಲ್ಲಿ ಮುಖ್ಯ. ಅಂತಹ ಒಂದು ಪರಂಪರೆಯನ್ನು ಹುಟ್ಟುಹಾಕಿದಾಗಲೇ ಹೊಸ ಅರಿವು ಮೂಡುವುದು ಸಾಧ್ಯ. ಕಳೆದ ಸುಮಾರು 15 ವರ್ಷಗಳಿಂದ ರಂಗ ಅಧ್ಯಯನ ಕೇಂದ್ರವು ಈ ಎಲ್ಲ ಅಂಶಗಳ ಕಡೆಗೆ ಗಮನ ಹರಿಸಿದೆ. 70ಕ್ಕೂ ಹೆಚ್ಚು ಸ್ವಂತ ನಾಟಕಗಳನ್ನೂ ಮತ್ತು ಸುಮಾರು ಅಷ್ಟೇ ಸಂಖ್ಯೆಯ ಇತರ ತಂಡದ ನಾಟಕಗಳನ್ನೂ ಪ್ರದರ್ಶಿಸಿದೆ.


ಪ್ರತೀ ವರ್ಷವೂ ಕೇಂದ್ರವು ತನ್ನ ಡಿಪ್ಲೊಮ ವಿದ್ಯಾರ್ಥಿಗಳಿಗಾಗಿ ಮೂರು ಹೊಸ ನಾಟಕಗಳನ್ನು ಸಿದ್ಧಪಡಿಸುತ್ತದೆ. ಕೇಂದ್ರದಲ್ಲಿ ನಿರಂತರವಾಗಿ ನಾಟಕ ನಿರ್ದೇಶಿಸುತ್ತಾ ಬಂದವರೆಂದರೆ ಗೋಪಾಲಕೃಷ್ಣ ನಾಯರಿ ಮತ್ತು ವಸಂತ ಬನ್ನಾಡಿ. ವಸಂತ ಬನ್ನಾಡಿಯವರು 'ಚೆರ್ರಿ ತೋಟ', 'ಎಲ್ಲರೂ ನನ್ನ ಮಕ್ಕಳೇ', 'ತಲೆದಂಡ', 'ಮ್ಯಾಕ್‌ಬೆತ್', 'ಚಾಕ್‌ಸರ್ಕಲ್', 'ಅಗ್ನಿಲೋಕ', 'ಜನಶತ್ರು' ಮುಂತಾದ ನಾಟಕಗಳನ್ನು ನಿರ್ದೇಶಿಸಿದರೆ,



ಗೋಪಾಲಕೃಷ್ಣ ನಾಯರಿ ನಿರ್ದೇಶಿಸಿದ "ಮತ್ತ ವಿಲಾಸ" ನಾಟಕದ ಒಂದು ದೃಶ್ಯ

'ಕರಾವಳಿ ಕರ್ಣಭಾರ', 'ಭಗವದಜ್ಜುಕೀಯ', 'ಮತ್ತ ವಿಲಾಸ' ಹಾಗೂ 'ಹೀಂಗೂ ಇತ್ತಾ' ಗೋಪಾಲಕೃಷ್ಣ ನಾಯರಿಯವರು ನಿರ್ದೇಶಿಸಿದ ಕೆಲವು ಮುಖ್ಯ ನಾಟಕಗಳು. ನಾಡಿನ ಖ್ಯಾತ ರಂಗತಜ್ಞರೂ ಈ ಕೇಂದ್ರಕ್ಕೆ ಆಗಮಿಸಿ ನಾಟಕಗಳನ್ನು ಆಡಿಸಿದ್ದಾರೆ. 'ಅಧ್ವಾನಪುರ' (ಸುರೇಶ ಆನಗಳ್ಳಿ), 'ಆಷಾಢದ ಒಂದು ದಿನ' (ರಬಿಜಿತ ಗಗೊಯ್), 'ಸದ್ದು! ವಿಚಾರಣೆ ನಡೆಯುತ್ತಿದೆ' (ಜಯರಾಂ ತಾತಾಚಾರ್), 'ಕೊಂದವರಾರು' (ಪ್ರಮೋದ್ ಶಿಗ್ಗಾಂವ್), 'ಮೀಡಿಯಾ' (ಮಾಲತೇಶ್ ಬಡಿಗೇರ), 'ಆಚೆ-ಈಚೆ' (ಜೊಸೆಫ್), 'ಮಹಾಚೈತ್ರ' (ಸ್ಯಾಮ್ ಕುಟ್ಟಿ ಪಟ್ಟಾಂಕರಿ) ಮುಂತಾದವು ಈ ನಾಟಕಗಳಲ್ಲಿ ಮುಖ್ಯವಾದುವು.

ಒಂದು ರಂಗಸಂಸ್ಥೆ ಕಾಲದ ಜೊತೆಗೆ ಹೆಜ್ಜೆ ಹಾಕುತ್ತಾ ಬೆಳೆಯಬೇಕು. ನಿರಂತರವಾಗಿ ಸಕ್ರಿಯವಾಗಿರಬೇಕು. ಈ ಅರಿವು ಇರುವುದರಿಂದಲೆ ರಂಗ ಅಧ್ಯಯನ ಕೇಂದ್ರವು ಸ್ಥಗಿತಕ್ಕೆ ಒಳಗಾಗದೆ ತನ್ನ ಚಟುವಟಿಕೆಗಳನ್ನು ವಿಸ್ತರಿಸುತ್ತಲೇ ಸಾಗಿದೆ. ಇದೀಗ ತನ್ನ ಹದಿನೈದನೇ ವರ್ಷಕ್ಕೆ ಕಾಲಿಟ್ಟಿದೆ. ಈ ಸಂದರ್ಭದಲ್ಲಿ ಲಂಕೇಶರ 'ಸಂಕ್ರಾಂತಿ' ನಾಟಕದ ಪ್ರದರ್ಶನವೂ ಕೇಂದ್ರದಲ್ಲಿ ನಡೆಯಿತು. ಸರಳ ಸುಂದರವಾದ ಬಯಲು ರಂಗಮಂಟಪವೊಂದು ಇದೀಗ ಸಿದ್ಧಗೊಂಡಿದೆ. ಡಿಸೆಂಬರ್ ತಿಂಗಳಲ್ಲಿ ಈ ರಂಗಮಂಟಪದ ಉದ್ಘಾಟನೆ ಸುರೇಶ ಆನಗಳ್ಳಿಯವರ ನಾಟಕಗಳ ಉತ್ಸವದೊಂದಿಗೆ ನಡೆಯಲಿದೆ. ಮುಂದಿನ ವರ್ಷದಿಂದ ತನ್ನ ಹಳೆ ವಿದ್ಯಾರ್ಥಿಗಳನ್ನು ಒಳಗೊಂಡು ಸಂಚಾರಿ ನಾಟಕ ಮೇಳವೊಂದನ್ನು ಆರಂಭಿಸುವ ಯೋಜನೆಯನ್ನೂ ರಂಗ ಅಧ್ಯಯನ ಕೇಂದ್ರವು ಹೊಂದಿದೆ. ಹೀಗೆ ಕುಂದಾಪುರದಂತಹ ಸಣ್ಣ ಊರಿನಲ್ಲಿದ್ದೂ ನಾಟಕ ರಂಗದ ಎಲ್ಲ ಹೊಸ ಅನ್ವೇಷಣೆಗಳಿಗೂ ನಿರಂತರವಾಗಿ ತನ್ನನ್ನು ತೆರೆದುಕೊಳ್ಳುತ್ತಾ ಬೆಳೆಯುತ್ತಿರುವ ರಂಗ ಅಧ್ಯಯನ ಕೇಂದ್ರವು ನಾಡಿನ ಮುಖ್ಯ ಸಾಂಸ್ಕೃತಿಕ ಕೇಂದ್ರವಾಗಿ ರೂಪುಗೊಳ್ಳುತ್ತಿದೆ.



■ ರಾಮಕೃಷ್ಣ ಹೇರ್ಳೆ ಎ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

...ಶಾದಿ ಭಾಗ್ಯ ಬೇಡ, ಸಂವಿಧಾನಿಕ ಹಕ್ಕು ಬೇಕು

ಇತ್ತೀಚೆಗೆ ರಾಜ್ಯ ಸರಕಾರವು ಜಾರಿಗೊಳಿಸಿರುವ ...ದಿ ಭಾಗ್ಯ ಯೋಜನೆಯು ತೋರಿಕೆಯದಾಗಿದ್ದು ...ಸ್ಲಿಮ್ ಸಮುದಾಯದ ನೈಜ ಸಮಸ್ಯೆಗಳಿಗೆ ಯಾವ ...ಸಮಾಧಾನ, ಪರಿಹಾರಗಳನ್ನು ನೀಡುವಲ್ಲಿ ...ಪ್ರಯೋಜಕವಾಗಿರುವ ಯೋಜನೆಯದಾಗಿದೆ. ಇದು ...ಸ್ಲಿಮ್ ಸಮುದಾಯದ ನ್ಯಾಯೋಚಿತ ಸಂವಿಧಾನ ...ತ್ತು ಧಾರ್ಮಿಕ ಹಕ್ಕುಗಳನ್ನು ರಕ್ಷಿಸಲಾಗದ ಸರಕಾರ ...ತಹ ತೋರಿಕೆಯ ಆಮಿಷಗಳ ಮೂಲಕ ಮುಸ್ಲಿಮ್ ...ಮುದಾಯವನ್ನು ದಿಕ್ಕುತಪ್ಪಿಸುವ ರಾಜಕೀಯ ಮಾರ್ಗ ...ನುಸರಿಸುತ್ತಿದೆ ಎನ್ನುವುದು ನಮ್ಮ ಅಭಿಪ್ರಾಯವಾಗಿದೆ. ...ಈ ವೇಳೆಯಲ್ಲಿ ಪ್ರಸ್ತುತ ಯೋಜನೆಯನ್ನು ವಿರೋಧಿಸುವ ...ದಲ್ಲಿ ಕೋಮುವಾದಿಗಳು ಈಗಾಗಲೇ ಅಪಾರವಾದ ...ಷೆ, ಅವಗಣನೆಗಳಿಗೆ ತುತ್ತಾಗಿರುವ ಸಮುದಾಯವನ್ನು ...ಕ್ಷ್ಯವಾಗಿಸಿ, ಬಹುಸಂಖ್ಯಾತ ಸಮುದಾಯವನ್ನು ಮುಸ್ಲಿಮ್ ...ಮುದಾಯದ ವಿರುದ್ಧ ಎತ್ತಿಕಟ್ಟುವ ತಮ್ಮ ಲಾಗಾಯ್ತಿನ ...ದ ಮತ್ತೊಂದು ದಾಳವಾಗಿಸಿಕೊಳ್ಳುತ್ತಿದ್ದಾರೆ.

... ಶಾದಿ ಭಾಗ್ಯ ಹೆಸರಿನ ಈ ನೂತನ ಯೋಜನೆಯು ...ಕಾರ ಬಜೆಟ್‌ನಲ್ಲಿ ಪ್ರಕಟಿಸಿರುವ ಮತ್ತು ಕಾಯ್ದಿರಿಸಿರುವ ...ಮುದಾನದಲ್ಲಿ ಅಲ್ಪ ಮೊತ್ತವನ್ನು ವಿಂಗಡಿಸಿ, ಇದಕ್ಕೊಂದು ...ರಿಟ್ಟು ಜಾರಿಗೊಳಿಸುತ್ತಿರುವುದಾಗಿದ್ದು, ಮುಸ್ಲಿಮ್ ...ಹಿಳೆಯರ ಕಲ್ಯಾಣ ಸಾಧಿಸಲು ಮತ್ತು ಅವರ ಜೀವನ ...ಷತೆಯ ದೃಷ್ಟಿಯಿಂದ ಜಸ್ಟೀಸ್ ರಾಜೇಂದ್ರ ಕುಮಾರ್ ...ಚಾರ್ ನೇತೃತ್ವದ ಸಾಚಾರ್ ಸಮಿತಿ ಸೂಚಿಸಿರುವ ...ವುದೇ ಅಂಶಗಳನ್ನು ಒಳಗೊಳ್ಳದೇ ಇರುವುದು ...ಗಮನಿಸಬೇಕಾದ ಅಂಶವಾಗಿದೆ. ಅಷ್ಟಕ್ಕೂ ಮುಸ್ಲಿಮ್ ...ಹಿಳೆಯ ಮದುವೆಗೆ ನಿಕಾಹ್ ಎನ್ನಲಾಗುತ್ತಿದೆ ಹೊರತು ...ದಿ ಅಂತಲ್ಲ, ಈಗ ವಿರೋಧಿಸುವವರ ಪಾಲಿಗೆ ಈ ...ಷ್ಟೇ ಒಂದು ಆಡಿಕೊಳ್ಳುವ ವಸ್ತುವಾಗಿರುವುದನ್ನು ...ಗಮನಿಸಿದರೆ, ಯಾರಿಗೂ ವಾಸ್ತವತೆಯ ಅರಿವು ...ಇರುವುದು ಬೇಡವೆನಿಸಿದೆ. ಮುಸ್ಲಿಮ್ ಸಮಾಜದಲ್ಲಿ ...ಹಿಳೆಯ ಮದುವೆಗೆ ವರದಕ್ಷಿಣೆಯ ಪದ್ಧತಿ ಇರದೇ, ...ಹೆಣ್ಣಿಗೆಯುಂತಹ ಮಹರ್ ನೀಡುವ ಸಂಪ್ರದಾಯವಿದೆ. ... ಯೋಜನೆಯನ್ನು ಜಾರಿಗೆ ತರುತ್ತಿರುವವರು ಇದನ್ನು ಗಮನಿಸದೇ ಇರುವುದು ನಮ್ಮ ಗಮನಕ್ಕೆ ಬಂದಿದೆ. ವಿರೋಧ ಮಾಡುತ್ತಿರುವ ವರ್ಗ ಇದನ್ನು ತಿಳಿದುಕೊಳ್ಳಬೇಕಿದೆ.

ಈ ಯೋಜನೆಯು ವಾಸ್ತವಿಕವಾಗಿ ಮಹಿಳೆಗೆ ನಿಜವಾಗಿಯೂ ಯಾವುದೇ ನೆರವು ಒದಗಿಸುವುದಿಲ್ಲ. ಉದಾಹರಣೆಗೆ ಉಡುಪಿ ಜಿಲ್ಲೆಯಲ್ಲಿ ಇದರ ಫಲಾನುಭವಿಗಳಾಗಿ ಕೇವಲ 13 ಮಹಿಳೆಯರಿಗೆ ಮಾತ್ರ ನೆರವು ಸಿಗಲಿದೆ. ಅದರ ಒಟ್ಟಾರೆ ಮೊತ್ತ ರೂ. 6,50,000 ಮಾತ್ರ! ಒಬ್ಬ ಫಲಾನುಭವಿಗೆ ರೂ.50,000 ದ ನೆರವು ಎಂದು ಘೋಷಿಸಲಾಗಿದೆ. ಆದರೆ, ಇದರಲ್ಲಿ ರೂ.15,000 ನಗದಾಗಿ ದೊರಕಿದರೇ, ಉಳಿದ ರೂ.35,000 ದಲ್ಲಿ ಬಟ್ಟೆ, ಮಂಚ ಇನ್ನಿತರ ಸಾಮಗ್ರಿಗಳ ರೂಪದಲ್ಲಿ ದೊರಕಲಿದೆ. ಸರಕಾರದ ಇಂತಹ ಹಲವು ಯೋಜನೆಗಳು ವ್ಯಾಪಕ ಭ್ರಷ್ಟಾಚಾರಕ್ಕೆ ಸರಕಾರಿ ಅಧಿಕಾರಿಗಳಿಗೆ ಅವಕಾಶ ಕಲ್ಪಿಸಿರುವುದು ಈಗಾಗಲೇ ಸಾಬೀತಾಗಿದ್ದು, ಈ ಯೋಜನೆಯೂ ಅಂತಹ ಅಧಿಕಾರಿಗಳ ದುಡ್ಡಿನ ಹಪಾಹಪಿಗೆ ಸಹಕಾರಿಯಾಗಲಿದೆ ಹೊರತು ಮಹಿಳೆಯರ ನೈಜ ಸಮಸ್ಯೆ ಪರಿಹಾರಕ್ಕಲ್ಲ. ಅದಕ್ಕಿಂತಲೂ ಲಕ್ಷಾಂತರ ಮಹಿಳೆಯರ ಪೈಕಿ ಕೇವಲ 13 ಜನರನ್ನು ಆಯ್ಕೆ ಮಾಡುವುದೂ ಅನೇಕ ಸಮಸ್ಯೆಗಳನ್ನು ತಂದೊಡ್ಡಲಿದ್ದು, ನೈಜ ಫಲಾನುಭವಿಗೆ ಇದರ ನೆರವು ದೊರಕುವುದು ದೂರದ ಮಾತಾಗಲಿದೆ. ಆದುದರಿಂದ ಈ ಯೋಜನೆಯು ಒಂದು ರೀತಿಯಲ್ಲಿ ನಿರುಪಯುಕ್ತವಾಗಿರುವಂತೆ ಕಾಣಿಸುತ್ತಿದ್ದು, ಅದರ ಬದಲಿಗೆ ಮಹಿಳಾ ಶಿಕ್ಷಣ, ವೈದ್ಯಕೀಯ ನೆರವು ಮತ್ತು ಇತರ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಬದಲಾದರೇ ಉತ್ತಮ ಎನ್ನುವುದು ನಮ್ಮ ಆಗ್ರಹವಾಗಿದೆ.

ಸರಕಾರ ಅಲ್ಪಸಂಖ್ಯಾತ ಕಲ್ಯಾಣ ಮಂಡಳಿಯಲ್ಲಿ ಈ ಹಿಂದೆ ಒಳಮೀಸಲಾತಿ ಮತ್ತು ಕ್ರೈಸ್ತ ಕಲ್ಯಾಣ ಮಂಡಳಿಯಂತಹ ಪ್ರತ್ಯೇಕತೆಯನ್ನು ಮಾಡಿರುವುದರಿಂದ ಮುಸ್ಲಿಮ್ ಸಮುದಾಯಕ್ಕೆ ಅಲ್ಪಸಂಖ್ಯಾತ ಕಲ್ಯಾಣ ಮಂಡಳಿಯಿಂದ ದೊರಕುವ ಸಹಾಯಧನದ ಯೋಜನೆಗಳಿಗೂ ತೊಂದರೆಯಾಗಿದೆ. ಇದನ್ನು ಗಮನಿಸಿಕೊಂಡು ಮತ್ತು ಸಾಚಾರ್ ಸಮಿತಿಯ ವರದಿಯಲ್ಲಿ ಕಾಣಿಸಿರುವಂತೆ ರಾಜ್ಯದ



ಕರಾವಳಿಯ ಕೆಲವು ಭಾಗಗಳನ್ನು ಹೊರತುಪಡಿಸಿ, ಅನೇಕ ಕಡೆ ಮುಸ್ಲಿಮ್ ಸಮುದಾಯದ ಸ್ಥಿತಿಗತಿ ದಲಿತರಿಗಿಂತಲೂ ಕಡೆಯಾಗಿದ್ದು, ಅದರ ಉದ್ಧಾರಕ್ಕೆ ಇಂತಹ ಅನುಮಾನಾಸ್ಪದ ಯೋಜನೆಗಳಿಗಿಂತ, ವಸತಿ -ಶಿಕ್ಷಣ - ಉದ್ಯೋಗ ಮತ್ತು ಆರೋಗ್ಯ ಸಂಬಂಧಿ ಯೋಜನೆಗಳಿಗೆ ಹೆಚ್ಚಿನ ನೆರವು ಅಗತ್ಯವಿದೆ ಎನ್ನುವುದು ನಮ್ಮ ಅಭಿಪ್ರಾಯ.

ಕರಾವಳಿಯ ಕೆಲ ಪ್ರದೇಶಗಳಲ್ಲಿ ಮುಸ್ಲಿಮರು ತಮ್ಮ ಧರ್ಮವನ್ನು ಪರಿಪಾಲಿಸುವ ಮತ್ತು ನಿತ್ಯ ಪ್ರಾರ್ಥನೆಗೆ ಅವಶ್ಯವಾಗಿರುವ ಮಸೀದಿ ನಿರ್ಮಾಣ ಮತ್ತು ಉದರ ಪೋಷಣೆಯ ಉದ್ಯೋಗಗಳನ್ನು ನಡೆಸುವುದಕ್ಕೂ ಕೆಲ ಫ್ಯಾಸಿಸ್ಟ್ ಕೋಮುವಾದಿ ಶಕ್ತಿಗಳು ಅಡ್ಡಿ ಉಂಟುಮಾಡಿ, ವಿಘ್ನ ಸಂತೋಷಪಡುತ್ತಿವೆ. ಕಾನೂನು ಪಾಲಕರು, ಸ್ಥಳೀಯಾಡಳಿತ ಮತ್ತು ಜಿಲ್ಲಾಡಳಿತವೂ ಈ ಫ್ಯಾಸಿಸ್ಟ್ ಶಕ್ತಿಗಳೊಂದಿಗೆ ಶಾಮೀಲಾಗಿ ಸಂವಿಧಾನಾತ್ಮಕ ಹಕ್ಕುಗಳನ್ನು ಪಡೆಯುವುದರಲ್ಲಿ ಸಮುದಾಯವನ್ನು ವಂಚಿಸುತ್ತಿವೆ ಮತ್ತು ನೊಂದವರ ಮೇಲೆಯೇ ಸುಳ್ಳು ಆರೋಪಗಳನ್ನು ಹಾಕುವುದರ ಮೂಲಕ ವ್ಯವಸ್ಥಿತವಾಗಿ ದಮನಿಸುತ್ತಿದೆ. ಇವೆಲ್ಲದಕ್ಕೂ ಇಲ್ಲಿನ ಜನಪ್ರತಿನಿಧಿಗಳು ಮೌನವಾಗಿರುವುದೂ ಅಥವಾ ಆ ಕೋಮುಶಕ್ತಿಗಳ ಜೊತೆ ಸಂಬಂಧ ಇಟ್ಟುಕೊಂಡು ಮುಸ್ಲಿಮ್ ಸಮುದಾಯವನ್ನು ಮೌನವಾಗಿಸುತ್ತಿವೆ. ಇಂತಹ ವಾತಾವರಣ ಇರುವಾಗ ಸರಕಾರ ಘೋಷಿಸಿರುವ ಈ ಯೋಜನೆಯೂ ಕೂಡಾ ಅಂತಹ ಶಕ್ತಿಗಳು ಸಮುದಾಯವನ್ನು ಹೀಯಾಳಿಸಲು ಅವಕಾಶ ಕಲ್ಪಿಸುವಂತೆ ಕಂಡುಬರುತ್ತಿದೆ. ಆದುದರಿಂದ ನೆರವು ನೀಡುವುದೇ ಆಗಿದ್ದಲ್ಲಿ ಅದು ಎಲ್ಲಾ ಸಮುದಾಯದ ಬಡವರ್ಗದ ಮಹಿಳೆಯರ ಸಬಲೀಕರಣಕ್ಕೆ ವಿನಿಯೋಗಿಸಬೇಕು ಮತ್ತು ಅದಕ್ಕೆ ರಾಜ್ಯದಲ್ಲಿ ಜಾರಿಯಲ್ಲಿರುವ ಇತರ ಅನೇಕ ಯೋಜನೆಯಂತೆ ಹೆಚ್ಚು ಮೊತ್ತವನ್ನು ವಿಂಗಡಿಸಿ, ಅದು ಅವರ ಬಾಳಿನ ಜೀವನ ಉದ್ಧಾರಕ್ಕೆ ಬಳಕೆಯಾಗುವಂತಹದ್ದಾಗಿದ್ದರೆ ಉತ್ತಮ ಎಂದು ಒಕ್ಕೂಟ ತಿಳಿಯಪಡಿಸುತ್ತದೆ.

ಕಾಂಗ್ರೆಸ್ ಪಕ್ಷದ ಸರಕಾರ ಒಕ್ಕೂಟದ ಈ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿ, ಮುಸ್ಲಿಮ್ ಸಮುದಾಯ ಸಂವಿಧಾನಬದ್ಧ ಹಕ್ಕಿನಂತೆ ನೆಮ್ಮದಿಯಿಂದ ಜೀವನ ನಡೆಸಲು ಅವಕಾಶ ಕಲ್ಪಿಸಬೇಕು. ಅದರ ಬದಲು ಇಂತಹ ನಾಟಕೀಯ ಯೋಜನೆಗಳನ್ನು ಜಾರಿಗೊಳಿಸುವುದರ ಮೂಲಕ ಕೋಮುಶಕ್ತಿಗಳ ಆಟಕ್ಕೆ ಆಹಾರ ಒದಗಿಸುವುದಲ್ಲ ಎನ್ನುವುದು ನಮ್ಮ ಸೂಚನೆ. ಸರಕಾರ ಈ ಬಗ್ಗೆ ಗಮನ ಹರಿಸಿ, ಹೆಚ್ಚುತ್ತಿರುವ ಕೋಮುಶಕ್ತಿಗಳ ಅಟ್ಟಹಾಸವನ್ನು ಕೊನೆಗೊಳಿಸಿದರೇ, ಅದೇ ಸಮುದಾಯಕ್ಕೆ ಮಾಡುವ ನೆರವಾಗುತ್ತದೆ. ಈ ನಿಟ್ಟಿನಲ್ಲಿ ಕರಾವಳಿ ಭಾಗದ ಅಧಿಕಾರಿಗಳು ಮತ್ತು ಕಾಂಗ್ರೆಸ್ ಪಕ್ಷದ ನಾಯಕರುಗಳು ಸಂವಿಧಾನಿಕ ಹಕ್ಕುಗಳು ಮುಸ್ಲಿಮ್ ಸಮುದಾಯಕ್ಕೆ ದಕ್ಕುವ ಬಗೆಯಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದು ನಾವು ಒತ್ತಾಯಿಸುತ್ತೇವೆ.

■ ಪ್ರಧಾನ ಕಾರ್ಯದರ್ಶಿ ಮತ್ತು ಅಧ್ಯಕ್ಷರು, ಉಡುಪಿ ಜಿಲ್ಲಾ ಮುಸ್ಲಿಮ್ ಒಕ್ಕೂಟ (ರಿ.)

ವಿಕೃತ ಭಟ್ಟನ ವಿಶ್ವಾಸಕ್ಕಿಂತ ಬುದ್ಧಿಜೀವಿ ಸ್ನೇಹ ಮಾಡಿ

ತರೀಕೆರೆ ಮೈಲಾರಿ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದನಂತಲ್ಲಾ, ಕಾಂಗ್ರೆಸ್‌ನಿಂದ ಎಲ್ಲವನ್ನೂ ಮಾಡಿಕೊಂಡು ಈಗ ದಿಢೀರನೆ ಪಾರ್ಟಿ ಬದಲಿಸಲು ಕಾರಣವೇನೆಂದು ಕೇಳಿದರೆ "ಏ, ಈ ಹಾಳು ಕಾಂಗ್ರೆಸ್ ಪಾರ್ಟಿ ಬೋರು ಕಂಡ್ರಿ. ಆ ಸಿದ್ದರಾಮಯ್ಯನ್ನ ಮಾತಾಡಸದೇ ಕಷ್ಟ. ಮಾತಾಡಿಸಿದ್ರು ಯಾಕಯ್ಯ ಬಂದೆ ಅಂತರೆ. ಇನ್ನು ಲೋಕಲ್ ಎಮ್ಮೆಲ್ಲೆಗೆ ಓಲಿಸಿದ್ರೆ ನಾನೇ ಪರವಾಗಿಲ್ಲ, ಯಾಕೊ ಈ ಪಾರ್ಟಿಲಿರಕ್ಕೆ ಬೇಜಾರು. ಅದೇ ಬಿಜೆಪಿ ನೋಡಿ ಎಷ್ಟು ಲವಲವಿಕೆಯಾಗಿದೆ. ನಮ್ಮ ಸಂಬಂಧಿ ಈಶ್ವರಪ್ಪನ ಮಾತು ಕೇಳಕೇ ಒಂದು ಚೆಂದ. ಇನ್ನ ಎಡೂರಪ್ಪ ಕೆಜೆಪಿಲಿದ್ರೂ, ಆದ್ರೂ ಬಿಜೆಪ್ಪಿ ಲೀಡ್ರು ತರನೇ ಇದಾರೆ. ಶೋಭಕ್ಕನ ನೋಡಿದ ಕೂಡ್ಲೆ ನಗಾಡ್ತರೆ. ಆಗ ನಮಗೊಂತರ ಲವಲವಿಕೆ ಆಗತ್ತೆ, ರೇಣುಕಾಚಾರಿ ನೆನೆಸಿಕೊಂಡ್ರೆ ಸಾಕು, ಹೋಗಿ ಮಾತಾಡ್ಸಿ, ಪಾರ್ಟಿ ಮಾಡನ ಅನ್ಸುತ್ತೆ. ಹಾಗೆನೆ ಸವದಿ, ಉಡುಪಿ ಭಟ್ಟ, ಅಷ್ಟು ದೂರ ಬೇಡಿ ನಮ್ಮ ಶೃಂಗೇರಿ ಜೀವರಾಜ ಅಳ್ವ, ಥೇಟ್ ನನ್ನ ತರನೇ ನಡಕೊಳ್ತಾ ಇದಾನೆ. ಇಂತವರ ಜೊತೆ ಇರೋದು ಬಿಟ್ಟು ಈ ಹಾಳು ಕಾಂಗ್ರೆಸ್ನಲ್ಲಿ ಯಾಕಿದ್ದೆ ಅಂತ ಈಗನ್ನಸ್ತು, ಕಾಂಗ್ರೆಸ್ ಬಿಟ್ಟೆ ಕಂಡ್ರಿ. ಪವರ್‌ನಲ್ಲಿ ಇಲ್ದೆಯಿರೊ ಪಾರ್ಟಿಗೆ ಯಾರೂ ಹೋಗಲ್ಲ, ಆದ್ರು ನಾನು ಹೋದೆ ಅಂದ್ರೆ ನೀವೆ ಯೋಚನೆ ಮಾಡಿ" ಎಂದನಂತಲ್ಲಾ, ಥೂತ್ತೇರಿ!

* * *

"ಮುಂದೆ ಶನಿ ಕ್ರೂರವಾಗೋದ್ರಿಂದ ಹೆಣ್ಣು ಮಕ್ಕಳಿಗೆ ತುಂಬ ತೊಂದ್ರೆ ಕಾದಿದೆ. ಗರ್ಭಕೋಶ, ಗುಪ್ತಾಂಗ ಎಲ್ಲಾ ಹಾಳಾಗುತ್ತೆ, ನೀವೆಷ್ಟೇ ಎಚ್ಚರ ವಹಿಸಿದ್ರು ಅಪಶಕುನಗಳು ನಡೆಯುತ್ತೆ, ಹಣೆಬೊಟ್ಟು ಜಾರತಾಯಿರುತ್ತೆ, ಕುಂಕುಮ ಅಳಿಸಿ ಹೋಗ್ತಾಯಿರುತ್ತೆ, ಅದನ್ನ ನೀವು ಗಮನಿಸಲ್ಲ, ಅದರ ಸೂಚನೆ ಏನಂದ್ರೇ ನಿಮ್ಮ ಗಂಡನಿಗೆ ಅಪಾಯ ಇದೆ ಅಂತ. ಅದಕ್ಕಾಗಿ ನೀವು ವ್ರತಗಳನ್ನ ಮಾಡಬೇಕು, ಪೂಜೆ ಮಾಡಬೇಕು. ಈ ಪೂಜೆ ಮಾಡುವಾಗ ನೈಟಿ ಇಕ್ಕೊಬಾರ್ದು. ಸೀರೆನೆ ಉಟ್ಕೊಂಡಿರಬೇಕು. ನೈಟಿಲೇನಾದ್ರು ನೀವು ಪೂಜೆ ಮಾಡಿದ್ರೆ ಮುಂಡಾ ಮೋಚಿತು. ಯುಲ್ಲಾ ಹಾಳಾಗೋಗತ್ತೆ, ಅದಕ್ಕೆ ನಾನೇಳದೇನಂದ್ರೆ ಸರಿಯಾಗಿ ಕೇಳಿಸಿಕೊಳ್ಳಿ. ಗಂಡ ದೂರಾ ಇದಾನೆ, ಹತ್ರ ಬರಲ್ಲ, ಅದಕ್ಕೇನು ಮಾಡಬೇಕು? ಗಂಡನ ಒಂದು ಹಳೆ ಬಟ್ಟೆ, ಅಂದ್ರೆ ಅಂಗಿ, ಚೆಡ್ಡಿ ಕಾಚ ಯಾವುದೋ ಒಂದು ಹಳೆ ಬಟ್ಟೆ ತಗೊಂಡು, ಜೊತೆಗೆ ಒಂದು ಯಕ್ಕಡ ತಗೊಂಡು ಹೋಗಿ, ಅತ್ತಿ ಮರದ ಕೆಳಗೆ ಹೂಳಬೇಕು. ಅದರ ಮೇಲೆ ದೀಪ ಹಚ್ಚಿ ಭಕ್ತಿಯಿಂದ ದೇವರನ್ನ ನೆನೆದು ಪೂಜೆ ಮಾಡಬೇಕು. ಹಿಂಗೆ ಮಾಡಿದ್ರೆ ಗಂಡ ಓಡಿಬಂದು ನಿಮ್ಮೆದುರಿಗೆ ಕುಕ್ಕುರು ಬಡೀತಾನೆ. ಅರ್ಥವಾಯ್ತಾ? ಹೇಳಿದಷ್ಟು ಮಾಡಿ. ಜಾಸ್ತಿ ತಲೆಹರಟೆ ಮಾಡಬೇಡಿ." ಈ ಬೇಧಿ ಮಾತುಗಳನ್ನ ಯಾರು ಯಾರಿಗೆ ಯಾವಾಗ ಹೇಳಿದರೆಂಬ ವಿವರದ ಅಗತ್ಯವಿಲ್ಲ ಅಲ್ಲವೇ. ಕುಮಾರಸ್ವಾಮಿಯವರ ಕಸ್ತೂರಿ ಚಾನಲ್‌ನಲ್ಲಿ ಕುಳಿತು ಹೀಗೆ ಮಾತನಾಡಿದ ಬ್ರಹ್ಮಾಂಡ ದೇವು ಕುಟುಂಬಕ್ಕೆ ದೆವ್ವನಂತೆ ವಕರಿಸಿ ಒಳ್ಳೆ ಮನರಂಜನೆಯನ್ನೆ ನೀಡುತ್ತಿದ್ದಾನಂತಲ್ಲಾ, ಥೂತ್ತೇರಿ!!

* * *

ಇಂತಹ ಬ್ರಹ್ಮಾಂಡನ ಪರಿವಾರಕ್ಕೆಲ್ಲಾ ಆಶ್ರಯದಾತರಾಗಿರುವ ಕಸ್ತೂರಿ ಮಾಲೀಕರಾದ



ಕುಮಾರಣ್ಣನವರನ್ನು ಮಾತನಾಡಿಸಬೇಕೆನಿಸಿ ಫೋನ್ ಮಾಡಿದರೆ ರಿಂಗಾಯ್ತು,

ರಿಂಗ್ ಟೋನ್: "ರಾಧಿಕೆ ನಿನ್ನ ಸರಸವಿದೇನೆ ರಾಧಿಕೆ....."

"ಹಲೋ ಯಾರು?"

"ನಾನು ಸಾರ್, ಯಾಹು."

"ಏನ್ರಿ ಯಾಹು, ಬನ್ರಿ ಮಾತಾಡೋಣ."

"ಏನ್ ಸಾರ್, ನಮ್ಮನ್ನೆಲ್ಲಾ ವಿದೂಷಕರು ಅಂತ ಕರದಿದ್ದಿರಿ."

"ಅಂಗಾದ್ರೆ ನೀವು ಬುದ್ಧಿಜೀವಿಗಳೇನ್ರಿ?"

"ಹೌದು ಸಾರ್. ಬುದ್ಧಿಯಿಂದ್ಲೆ ನಾಲ್ಕು ಮಾತಾಡಿ, ಅದನ್ನೆ ಬರದು, ಅದರಲ್ಲೇ ಜೀವನ ಮಾಡ್ತಿನಿ ಸಾರ್."

"ಮೊದ್ಲೆ ಹೇಳಿದ್ರೆ ಏನಾದ್ರು ಮಾಡಕೊಡ್ತಿದ್ದೆ, ನಾನು ಮುಖ್ಯಮಂತ್ರಿಯಾಗಿದ್ದಾಗ ನನ್ನತ್ರ ಬರಬೇಕಿತ್ತು."

"ಏನು ಮಾಡದು ಸಾರ್, ಆಗ ನಿಮ್ಮತ್ರ ತಲೆಹಿಡುಕ್ರು, ಅಕ್ರಮ ಡಿನೋಟಿಫಿಕೇಶನ್ ಗಿರಾಕಿಗಳು, ಭೂಗತ ಲೋಕದವರೇ ತುಂಬಿದ್ರು. ಹೆದ್ರಿಕೊಂಡು ಬರಲಿಲ್ಲ ಸಾರ್."

"ರಿ ಅವ್ರುರೆಲ್ಲಾ ಇದ್ರೂ ಬಂದು ನಿಮ್ಮ ಕೆಲಸ ಮಾಡಿಸಿಕೊಂಡು ಹೋಗಬೇಕಾಗಿತ್ತು ಕಂಡ್ರಿ."

"ಹೋಳೀಲಿಲ್ಲ ಸಾರ್. ಈಗ ನೆನಿಸಿಕೊಂಡ್ರೆ ಬೇಜಾರಾಗತ್ತೆ ಸಿದ್ದರಾಮಯ್ಯನತ್ರ ಹೋಗಣ ಅಂದ್ರೆ ಅಲ್ಲಿ ಬುದ್ಧಿಜೀವಿಗಳು ಜಾಮಾಗಿದಾರೆ."

"ಬುದ್ಧಿಜೀವಿಗಳ ಮಾತ ಕೇಳಿದ್ರೆ ಆಡಳಿತ ಮಾಡಕ್ಕಾಗತ್ತೇನ್ರಿ?"

"ಅದ್ಕೆ ಅಲ್ಲವ ಸಾರ್ ನೀವು ಕಬಡ್ಡಿ ಬಾಬು, ಜಮೀರ್ ಅಹಮ್ಮದ್, ಚಲುವ, ಚೆನ್ನಿಗ, ಬಾಲಕೃಷ್ಣ ಇಂಥೋರ ಮಾತ ಕೇಳಿ, ಸಲಹೆ ಕೇಳಿ, ಸಹಾಯ ತಗೊಂಡು ಎಷ್ಟು ಒಳ್ಳೆ ಆಡಳಿತ ಕೊಟ್ರಿ. ನಿಜಕ್ಕೂ ಅಪರೂಪದ ಆಡಳಿತದ ಅನುಭವ ಇರೊ ನಿಮ್ಮನ್ನ ಈ ಸಿದ್ದರಾಮಯ್ಯ ಕೇಳಬೇಕಾಗಿತ್ತು ಸಾರ್."

"ಎಲ್ಲಿ ಕೇಳ್ತರೆ? ಅವ್ರುರಿಗೆ ಅಹಂಕಾರ ಬಂದಿದೆ. ಅವರ ಮಾತು, ನಡವಳಿಕೆ ನೋಡಿದ್ರೆ ಸರ್ವಾಧಿಕಾರಿಯಂಗೆ ಕಾಣ್ತರೆ."

"ಅವರೂ ನಿಮ್ಮ ಕುಟುಂಬದ ಕಾಣಿಕೆನೆ ಅಲ್ಲವಾ ಸಾರ್?"

"ಅದೇನೋ ನಿಜ. ಒಂದು ಕಾಲದಲ್ಲಿ ನಮ್ಮ ತಂದೆಯವರು ನಮಗಿಂತ್ಲೂ ಸಿದ್ದರಾಮಯ್ಯನ್ನ ತುಂಬಾ ಹಚ್ಚಗೊಂಡಿದ್ರು."

"ಅದು ಸಿದ್ದರಾಮಯ್ಯನ ಮುಖಾಂತರ ನಿಮ್ಮನ್ನು ಬೆಳಸಕ್ಕಂತಲ್ಲಾ ಸಾರ್."

"ನಮ್ಮನ್ನ ಯಾರೂ ಬೆಳಸಲಿಲ್ಲ, ನಾವೆ ಬೆಳದೊ ಕಂಡ್ರಿ."

"ಸುಳ್ಳು ಸಾರ್. ಸಿದ್ದರಾಮಯ್ಯ ಕಾರಿಂದ ಇಳಿದಕೂಡ್ಲೆ ಅವ್ರುರ ಬ್ಯಾಗಿಡಕಂಡು ನೀವಿಳುದು ಬರೊ ಫೋಟೋಗಳು ನನ್ನತ್ರ ಇವೆ ಸಾರ್."

"ಆ ಫೋಟೋಗಳ ನಂಬಬೇಡಿ ಕಂಡ್ರಿ. ಇವತ್ತು ಯಾರ ಜೊತೆ ಬೇಕಾದ್ರು ನಮ್ಮ ಫೋಟೋ ಪ್ರಿಂಟಾಕಬವುದು."

"ಅದೇನೊ ನಿಜ ಸಾರ್. ಮೊದ್ಲು ಸ್ಟುಡಿಯೋಗಳಲ್ಲಿ ಕೈಗೆ ಹ್ಯಾಂಡ್ಲು, ಸ್ಟೇರಿಂಗ್ ಕೊಟ್ಟು ಫೋಟೋ ತೆಗಿಯೋರು. ಆಮೇಲೆ ನೋಡಿದ್ರೆ ಬುಲೆಟ್ ಮೇಲೆ ಕುಳತಿರೊ ಫೋಟೋ ಕೊಡೋರು ಇಂಪಾಲ ಕಾರಲ್ಲಿ ಕುಳಿತಿರೊ ಫೋಟೊ ಕೊಡೋರು. ಖುಷಿಯಾಗಿ ಮೂರು ರೂಪಾಯಿ ಜಾಸ್ತಿ ಕೊಡತಿದ್ವೊ. ಈಗ ಅಂಗಿಲ್ಲ, ನಿಮ್ಮ ಭುಜದ ಮೇಲೆ ಕೈಹಾಕಿರೊ ಫೋಟೋ, ನೀವು ಮುತ್ತು ಕೊಡ್ತಾಯಿರೊ ಫೋಟೊನು ಸಿಗತದೆ ಸಾರ್."

"ನಾನು ಮುತ್ತು ಕೊಡೊ ಫೋಟೋ ಇದಾವೇನ್

"ಹೌದು ಸಾರ್. ಬೆಂಗಳೂರ ಪರಿಮಳ ಥಿಯೇಟ ಓನರ್‌ಗೆ ನೀವು ಮುತ್ತು ಕೊಡೋ ಫೋಟೋ ನೋಡಿ ಚೆನ್ನಾಗಿದೆ. ಆ ಸಿದ್ದರಾಮಯ್ಯ ಪ್ರೀತಿಯಿಂದ ಥ್ಯಾ ಕೊಟ್ಟರೊ ಫೋಟೋನು ಇಲ್ಲಾ."

"ಅವ್ರುರಿಗೆ ಬುದ್ಧಿಜೀವಿಗಳ ಜೊತೆಲಿರೊ ಅಹಂಕ ಕಂಡ್ರಿ."

"ನಿಮ್ಮತ್ರ ಯಾರು ಇಲ್ಲವಾ ಸಾರ್?"

"ನಾನು ಯಾವತ್ತು ಬುದ್ಧಿಜೀವಿಗಳ ವಿರೋಧಿ ಕಂಡಿ

"ಯಾಕ್ ಸಾರ್?"

"ಏನೇನೊ ಅರ್ಥವಾಗದಂಗೆ ಮಾತಾಡ್ತರೆ ಕಂ ಅನಂತಮೂರ್ತಿ ಕಡಿಯವರಂತು ಮಾರ್ಕ್ಸ್, ಲೋಹಿಯ ಮ್ಯಾಗ್ನಿಜಂ (ಮ್ಯಾಕ್ಸಿಂಗಾರ್ಕಿ) ಗೊರಕೆ ಅಂತ ಏನೇನ ಹೇಳ್ತಾರೆ. ನಮ್ಮಲ್ಲಿ ಒಂದು ರೀತಿಯಾಗಿರತಕ್ಕಂತ ಕೀ ಭಾವನೆ ಉಂಟು ಮಾಡತಕ್ಕಂತ ಉದ್ದೇಶದಿಂದ್ಲೆ ಅ ಮಾತಾಡ್ತಾರೆ."

"ಅಂಗೇನು ಇಲ್ಲ ಸಾರ್. ಸಾಯಂಕಾಲದ ಒಂ ಸೂಕ್ತ ಸಂದರ್ಭಕ್ಕಾಗಿ ಅಂಗೆ ಮಾತಾಡ್ತರೆ. ಅವ ನಿರುಪದ್ರವಿಗಳು."

"ಅಂಗನ್ನಕೋಗಬೇಡ್ರೀ. ಸಮಾಜವನ್ನ ಒಡಿತಕ್ಕಂತವ್ರು ಇವರು. ಮೂಢನಂಬಿಕೆ ವಿರೋಧಿಗಳು. ಅದಕ್ಕೋ ನಮ್ಮ ತಂದೆ ಅವರನ್ನ ಎಷ್ಟು ಬೇಕೊ ಅಷ್ಟು ಮಾತನಾ ದೂರಾ ಇಟ್ಟಿದ್ರು. ನಾನೂ ಹಾಗೇ ಇಟ್ಟಿದ್ದೆ, ಅದೇನ ಅಕಸ್ಮಾತ್ ಒಂದು ಸಾರಿ ಅನಂತಮೂರ್ತಿ ಬಂ ಶರಬತ್ತು ಕುಡಿಸಿದ್ರು. ಆದ್ರು ಅವರ ವಿಶ್ವಾ ಇಟ್ಟುಕೊಳ್ಳಲಿಲ್ಲ."

"ಅಲ್ಲ ಸಾರ್, ರಾಮಚಂದ್ರಾಪುರದ ಮಠದ ಭಕ್ತ ಮತ್ತು ರೋಗಿಷ್ಟನಂತೆ ಕೈಗೆ ಬಿಳಿ ಹಳದಿ ಕೆಂಪು ದ ಸುತ್ತಿಕೊಂಡೋರಿಗೆ ಅನಂತಮೂರ್ತಿ ಪರಿವಾರ ಬುದ್ಧಿಜೀವಿ ವಲಯ ಇಷ್ಟವಾಗಲ್ಲ, ನಿಮ್ಮ ಇ ಮಾತುಕತೆನ ನೋಡಿದ್ರೆ, ಜಾತ್ಯತೀತ ಜನತಾದಳ ನಾಯಕನ ಮಾತಿನ ತರ ಕೇಳಲ್ಲ ಸಾರ್."

"ಇನ್ನಾವ ತರ ಕೇಳ್ತವುರಿ?"

"ಈಶ್ವರಪ್ಪನ ತಮ್ಮನ ಮಾತಿನಂಗೆ ಕೇಳ್ತವಲ್ಲ ಸಾರ್

ಥೂತ್ತೇರಿ !!!

ಹೊಗಳಿಕೆ ತೆಗಳಿಕೆ

ಸೌಜನ್ಯಳಿಗೆ ನ್ಯಾಯ ಸಿಗಬೇಕಿದೆ

ಸೌಜನ್ಯಾ ಪ್ರಕರಣವನ್ನು ಸರಕಾರ ಸಿಬಿಐಗೆ ವಹಿಸುವುದರೊಂದಿಗೆ ಸೌಜನ್ಯಾ ಪರ ದನಿ ಎತ್ತಿದವರಿಗೆ ಮುಖ್ಯ ಗೆಲುವೊಂದು ದೊರೆತಂತಾಗಿದೆ. ಆದರೆ ಕ್ರಮಿಸಬೇಕಾದ ದಾರಿ ಮಾತ್ರ ಇನ್ನೂ ಸುದೀರ್ಘವಿದೆ.

ಅಕ್ಟೋಬರ್ 31 ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭ ಭಾಯ್ ಪಟೇಲರ ಜನ್ಮ ದಿವಸ. ಆ ಸಂದರ್ಭದಲ್ಲಿ ಪ್ರತಿವರ್ಷ ಭ್ರಷ್ಟಾಚಾರ ವಿರೋಧಿ ಸಪ್ತಾಹವನ್ನಾಗಿಯೂ ದೇಶಾದ್ಯಂತ ಆಚರಿಸಲಾಗುತ್ತದೆ. ಭ್ರಷ್ಟಾಚಾರವೆಂದರೆ ಕೇವಲ ಲಂಚ ತಗೊಳ್ಳೋದು ಮಾತ್ರವಲ್ಲ, ತನ್ನ ಕರ್ತವ್ಯವನ್ನು ವ್ಯಕ್ತಿಯೊಬ್ಬ ಸರಿಯಾಗಿ ನಿರ್ವಹಿಸದೇ ಅದನ್ನ ಹಾದಿ ತಪ್ಪಿಸುವುದೂ ಕೂಡ ಭ್ರಷ್ಟಾಚಾರದ ವ್ಯಾಪ್ತಿಯಲ್ಲೇ ಬರುತ್ತದೆ. ಚೋದ್ಯವೆಂಬಂತೆ ಅಕ್ಟೋಬರ್ 31ರ ದಿನದಲ್ಲೇ ಸೌಜನ್ಯಾ ಕೇಸಿನ ಸಿಒಡಿ ತನಿಖಾ ವರದಿಯೂ ಸರಕಾರಕ್ಕೆ ಸಲ್ಲಿಸಲ್ಪಟ್ಟಿತು. ಅದು ಗುಡ್ಡ ಅಗೆದು ಇಲಿ ಹಿಡಿದಂತೆ ಇತ್ತು, ಅದು ನಿರೀಕ್ಷಿತ ಫಲಿತಾಂಶವೇ ಆಗಿತ್ತು, ಯಾಕೆಂದರೆ ವರದಿಯಲ್ಲಿ ಸಂತ್ರಸ್ತೆಗೆ ನ್ಯಾಯ ಕೊಡುವುದಕ್ಕಿಂತಲೂ ದೊಡ್ಡ ವ್ಯಕ್ತಿಗಳ ರಕ್ಷಣೆಗೇ ಹೆಚ್ಚು ಒತ್ತು ಕೊಡಲಾಗಿತ್ತು. ಇದು ಗೊತ್ತಾಗಿದ್ದೇ ತಡ ಜನತೆ ಜನತೆ ಪುನಃ ಸಿಡಿದೇಳಲು ಸಿದ್ಧರಾದರು. ಇದಾಗುವ ಮುನ್ನವೇ ಸರಕಾರ ಎಚ್ಚೆತ್ತುಕೊಂಡು ಪ್ರಕರಣವನ್ನು ಸಿಬಿಐಗೆ ವಹಿಸಿದೆ.

ಶಂಖದಿಂದ ಬಂದರಷ್ಟೇ ತೀರ್ಥ ಎಂಬಂತೆ ಈ ಹಸ್ತಾಂತರವನ್ನು ಸ್ವತಃ ಧರ್ಮಾಧಿಕಾರಿಯೇ ಸ್ವಾಗತಿಸಿ (ಸಾಕ್ಷಿ ನಾಶದ ಭೀತಿಯ ಮೇಲೆ) ಸರಕಾರಕ್ಕೆ ಪತ್ರವನ್ನೂ ಬರೆದರಂತೆ. ಸೌಜನ್ಯಾಳ ಪರ ಪ್ರತಿದಿನ ಜನತೆ ಬೀದಿಗೆ ಬಂದು ಬೊಬ್ಬೆ ಹೊಡೆಯುತ್ತಿದ್ದರೆ ಕರಾವಳಿಯ ಹಳೆಯ ದಿನಪತ್ರಿಕೆಯೊಂದು ಸಂತೋಷ ರಾವ್ ಎಂಬಾತನೇ ಆರೋಪಿ ಎಂದ ಸಿಐಡಿ ವರದಿಯನ್ನು ಹೇಗೆ ಪ್ರಕಟಿಸಿತ್ತು ಗೊತ್ತೇ? "ಅಂತೂ ಸಂತೋಷನೇ ಆರೋಪಿಯೆಂದು ಗುರುತಿಸಲ್ಪಟ್ಟು ನೊಂದವರಿಗೆ ನ್ಯಾಯ ಕೊನೆಗೂ ಸಿಗುವಂತಾಯಿತು. ಈ ಸಂತೋಷಕ್ಕಾಗಿ ಸೌಜನ್ಯಾಳ ಗ್ರಾಮದಲ್ಲಿ ಗ್ರಾಮಸ್ಥರು ಹರ್ಷ ವ್ಯಕ್ತ ಪಡಿಸಿದರು"! ಸಾವಿನ ಮನೆಯಲ್ಲೂ ತಮಾಷೆ ಮಾಡುವ ಮಂದಿಗೆ ಏನೆನ್ನಬೇಕೋ.

ಮತ್ತೆ ಸರ್ದಾರ್ ಪಟೇಲರ ವಿಷಯಕ್ಕೇ ಬಂದರೆ, ಒಮ್ಮೆ ಪಟೇಲರು ಕೋರ್ಟಿನಲ್ಲಿದ್ದಾಗ ಯಾರೋ ಒಂದು ಚೀಟಿ ಕೊಟ್ಟರಂತೆ. ಅದನ್ನು ನೋಡಿ ಕಿಸೆಯಲ್ಲಿಟ್ಟುಕೊಂಡ ಪಟೇಲರು ತಮ್ಮ ಕರ್ತವ್ಯವನ್ನು ಯಶಸ್ವಿಯಾಗಿ ಮುಗಿಸಿದ ಬಳಿಕವೇ ಮನೆಗೆ ಹೋದರಂತೆ. ಆ ಚೀಟಿಯಲ್ಲಿದ್ದದ್ದು ಬೇರೇನಲ್ಲ, ಅವರ ಮಗನ ಸಾವಿನ ಸುದ್ದಿ. ನ್ಯಾಯ ಧರ್ಮಕ್ಕೆ ಹೆಸರಾದ 'ಕ್ಷೇತ್ರ'ದಲ್ಲೂ ಒಂದು ಅತೀ ಅಮಾಯಕ ಹಾಗು ಬಡ ಹೆಣ್ಣಿಗೆ ನ್ಯಾಯ ದೊರಕಿಸುವ ಸಲುವಾಗಿ ಸಹೋದರ, ಮಗ ಎಂಬಂತಹ ಸಂಬಂಧಗಳು ಇದೇ ರೀತಿ ಅಡ್ಡಿಯಾಗದೇ ಇರಲಿ.

ಕೊಲೆಗಾರ ಯಾವತ್ತಿದ್ದರೂ ಕೊಲೆಗಾರನೇ. ಸೌಜನ್ಯಾ ಮಾತ್ರವಲ್ಲದೇ ಎಲ್ಲಾ ಅತ್ಯಾಚಾರ ಮತ್ತು ಕೊಲೆ ಕೇಸುಗಳಲ್ಲೂ ಅದು ಯಾರೇ ಆದರೂ ಶಿಕ್ಷೆಗೊಳಗಾಗಲೇ ಬೇಕು. ಅದೇ ನಿಜವಾದ ನ್ಯಾಯ ಹಾಗು ನಿಜವಾದ ಧರ್ಮ. ಈತನಕ ಈ ಕ್ಷೇತ್ರದಲ್ಲಿ ಇಂತಹ ಹಲವಾರು ಪ್ರಕರಣಗಳು ನಡೆದಿದ್ದರೂ ಒಂದೇ ಒಂದು ಪ್ರಕರಣದಲ್ಲೂ ನ್ಯಾಯ ಸಿಗದೇ ಇರುವುದೇ ಜನರ ಅನುಮಾನಗಳಿಗೆ ಹಾಗು ಕೋಪಕ್ಕೆ ಮೂಲ ಕಾರಣವಲ್ಲವೇ? ಜನ ಯಾಕೆ ಸಿಡಿದೆದ್ದಿದ್ದಾರೆ ಎಂದು ಧರ್ಮಾಧಿಕಾರಿಗಳೂ ಮೊದಲು ಅರ್ಥಮಾಡಿಕೊಳ್ಳಬೇಕು. ಸಿಬಿಐ ತನಿಖೆ ಪ್ರಾಮಾಣಿಕವಾಗಿ ಜರುಗಿ ಸೌಜನ್ಯಾಳಿಗೆ ಸಿಗಬೇಕಾದ ನ್ಯಾಯ ಸರಿಯಾಗಿ ದೊರೆತರೆ ಮಾತ್ರ ಅದು ಧರ್ಮಸ್ಥಳದ ಗೆಲುವಾಗುತ್ತದೆ. ಇಲ್ಲವಾದಲ್ಲಿ ಇದು ಒಂದು ಅಳಿಸಲಾಗದ ಕಳಂಕವಾಗಿ ಪವಿತ್ರ ಕ್ಷೇತ್ರವನ್ನು ನಿರಂತರವಾಗಿ ಕಾಡುವುದು ಖಂಡಿತಾ.

ಪತ್ರಿಕೆಯಲ್ಲಿ ಸುಳ್ಯದ ಜೈನಧರ್ಮೀಯ ಓದುಗರೊಬ್ಬರು ಬರೆದಿರುವಂತೆ ಜೈನರಿಗೆ ಹಿಂದೂ ದೇವತೆಗಳ ಬಗ್ಗೆ ಭಕ್ತಿಯೂ ಇಲ್ಲ, ಭಯವೂ ಇಲ್ಲ ಎಂಬುದು ಸತ್ಯದ ಮಾತು. (ಕೃಷ್ಣ ಜೈನ ಸ್ತ್ರೀಯರನ್ನು ಕದ್ದು ನೋಡಿದ ಎಂಬ ನಂಬಿಕೆ ಜೈನರಲ್ಲಿದೆ. ಆ ಕಾರಣಕ್ಕೆ ಅವನನ್ನು ಅವಮಾನಿಸಿ ನೋಡುವ ಸಂಪ್ರದಾಯ ಇಂದಿಗೂ ಅವರಲ್ಲಿ ಚಾಲ್ತಿಯಲ್ಲಿದೆ.) ದೊಡ್ಡ ದೊಡ್ಡ ಘಟಾನುಘಟಿಗಳೇ (ಯಡ್ಡಿ-ಕುಮ್ಮಿ ಪ್ರಮಾಣ ಪ್ರಕರಣ ನೆನಪಿದೆಯಲ್ಲ) ಇಲ್ಲಿನ ದೈವ ದೇವರಿಗೆ ಹೆದರಿದರೂ ಜೈನರಿಗೆ ಮಾತ್ರ ಈ ದೇವರು ಕಸಕ್ಕೆ ಸಮಾನ. ಒಂದುವೇಳೆ ಭಯ ನಿಜಕ್ಕೂ ಇದ್ದಿದ್ದರೆ ಪದ್ಮಲತಾ, ಸೌಜನ್ಯಾ, ವೇದವಲ್ಲಿಯಂತಹ ಮಹಿಳೆಯರು ಇಲ್ಲಿ ಕೊಲೆಯಾಗುತ್ತಿರಲಿಲ್ಲ.

ಅಕ್ಟೋಬರ್ 1, 2013ರ 'ವಿಕ' ಪತ್ರಿಕೆಯಲ್ಲಿನ ತಮ್ಮ ಚಿನ್ನುಡಿ ಅಂಕಣದಲ್ಲಿ ಹೆಗ್ಗಡೆಯವರು 'ಸತ್ಯ ನುಡಿಯುವಲ್ಲಿ ಎಚ್ಚರವಿರಲಿ' ಎಂಬ ವಿಷಯವನ್ನು ಪ್ರಸ್ತಾಪಿಸಿದ್ದರು. 'ಯಾರು ಎಷ್ಟು ದೊಡ್ಡವನಾಗಿ ಬಿಂಬಿಸಿಕೊಂಡರೂ ಕಠಿಣ ಪರೀಕ್ಷಾ ಸಮಯ ಬಂದಾಗ ಗುಟ್ಟು ರಟ್ಟಾಗುತ್ತದೆ. ಕೆಲವರು ಬೇರೆಯವರಿಂದ ಕೆಲಸವನ್ನು ಮಾಡಿಸಿಕೊಂಡು ಆ ತಪ್ಪಿನಲ್ಲಿ ತಾವು ಭಾಗಿಗಳಾಗಿರುವುದಿಲ್ಲ ಎಂಬ ಭ್ರಮೆಯಲ್ಲಿರುತ್ತಾರೆ. (... ಕಥೆಯೊಂದರ ಉದಾಹರಣೆ ಕೊಡುತ್ತಾ) ಮನ, ವಚನ, ಕಾಯಗಳಿಂದ (ಕಾಯೇನ ವಾಚಾ ಮನಸಾ) ಹಾಗೂ ಕೃತ, ಕಾರಿತ ಮತ್ತು ಅನುಮೋದಿತ ಪಾಪಕೃತ್ಯಗಳಿಂದ ದೂರವಿರಬೇಕು' ಎಂದಿದ್ದರು. ಆದರೆ ಇಂದು ಅವರಿಗೆ ಅವರ ಸುತ್ತಮುತ್ತಲಿನವರೇ ಮಗ್ಗುಲ ಮುಳ್ಳಾಗಿ ಕಾಡುತ್ತಿರುವುದು ವಿಚಿತ್ರವಾಗಿದೆ.

ಈಗ ನಿಷ್ಠುರತೆಯಿಂದ ತನಿಖೆ ಮಾಡುವ ಪಳಗಿದ ಸಿಬಿಐ ಅಧಿಕಾರಿಗಳು ಬರಬೇಕೇ ಹೊರತು ಪಾದಪೂಜೆಯ ಮೆಂಟಾಲಿಟಿಯವರು ಬರುವುದು ಬೇಡ. ಯಾಕೆಂದರೆ ನಾವೆಲ್ಲ ನಿರೀಕ್ಷೆಯಲ್ಲಿರುವುದು ನಮ್ಮದೇ ಮಗಳಂತಿರುವ ಒಂದು ಹೆಣ್ಣಿನ ಕುರಿತಾದ ನ್ಯಾಯವನ್ನೇ ಹೊರ ಯಾವುದೋ ದೊಂಬರಾಟವನ್ನಲ್ಲ.

-ಅವಿನಾಶ್ ಎಂ.ಎಸ್. ಈ ಮೇಲ್ ಮೂ



ಪೇಜಾವರರಿಗೆ ಜ್ಞಾನವೇ ಇಲ್ಲ

ಕುರುಬರಿಗೆ ವೈಷ್ಣವ ದೀಕ್ಷೆ ಕೊಡಲು ಪೇಜಾ ಶ್ರೀಗಳು ಒಂದು ಷರತ್ತು ಹಾಕಿದ್ದಾರೆ. ಅದೇನೆಂ ವೈಷ್ಣವ ದೀಕ್ಷೆಯ ನಂತರ ಕುರುಬರು ಮದ್ಯ ಮ ಮಾಂಸ ಸೇವನೆ ಮಾಡಬಾರದೆಂದು. ಮದ್ಯ ನಿಲ್ಲಿಸ ಷರತ್ತು ಸರಿಯಿದೆ, ಕಾರಣ ಮದ್ಯ ಸೇವನೆಯಿಂದ ಎಷ್ಟೋ ಕುಟುಂಬಗಳು ನಾಶವಾಗಿರುವುದು ನಿಜ. ಆದರೆ ಮಾ ಸೇವಿಸಬಾರದೆಂಬ ನಿಬಂಧನೆ ತರ್ಕವಿಹೀನ. ಯಾಕೆಂ ಕುರುಬರ ಕುಲಕಸುಬೇ ಕುರಿ ಸಾಕುವುದು ಹಾಗ ಆದರಿಂದ ಉಣ್ಣೆ ತೆಗೆದು ನಂತರ ಕಾಲಕಾಲಕ್ಕೆ ಅವುಗಳ ಕಸಾಯಿಖಾನೆಗೆ ಮಾರಿ ತಮ್ಮ ಜೀವನ ಸಾಗಿಸುವು

"ಫೋನ್‌ನಲ್ಲೇ ಹಾಡಿ ಅವಕಾಶ ಪಡೆದೆ"

ಸಂದರ್ಶನ

ಯೋಗರಾಜ್ ಭಟ್ಟರ 'ಮನಸಾರೆ' ಚಿತ್ರದ ಮೂಲಕ ಗಾಯಕರಾಗಿ ಚಿತ್ರರಂಗ ಪ್ರವೇಶಿಸಿ, ಇದೀಗ ಇದೇ ವಾರ ತೆರೆಕಾಣುತ್ತಿರುವ 'ಜೀತು' ಎಂಬ ಚಿತ್ರದ ಮೂಲಕ ಸಂಗೀತ ನಿರ್ದೇಶಕರೂ ಆಗಿರುವ, ಜೊತೆಗೆ ಗೀತರಚನೆಯಲ್ಲೂ ಆಸಕ್ತಿಯಿರುವ ಯುವ ಪ್ರತಿಭೆ ವಿಕಾಸ್ ವಸಿಷ್ಠ ಇಲ್ಲಿ ತಮ್ಮ ಮನದ ಮಾತುಗಳನ್ನು ಹಂಚಿಕೊಂಡಿದ್ದಾರೆ.

ನಿಮ್ಮ ಕುಟುಂಬದ ಹಿನ್ನೆಲೆ ಸ್ವಲ್ಪ ಹೇಳ್ತೀರಾ?

ನಾನು ಮೂಲತಃ ಗೌರಿಬಿದನೂರಿನ ಹುಡುಗ. ಅಪ್ಪ ...ರಾ ಬ್ಯಾಂಕ್‌ನಲ್ಲಿ ಮ್ಯಾನೇಜರ್. ಅಮ್ಮ ಅಡ್ವೋಕೇಟ್ ... ನಿರ್ವಹಿಸ್ತಾ ಇದ್ರು. ಈಗ ಹೌಸ್ ವೈಫ್. ತಮ್ಮ ...ದ್ದಾನೆ. ಅವನೂ ಕೂಡ ಹಾಡ್ತಾನೆ. ಈಗ ನಾವಿರೋದು ...ಗಳೂರಿನಲ್ಲಿ.

ನಿಮ್ಮ ಮನೆಯಲ್ಲಿ ಯಾರಿಗಾದರೂ ಸಂಗೀತದ ...ವಿತ್ತಾ?

ನನ್ನ ತಾತ ದಾಸಕೂಟದಲ್ಲಿ ಹಾಡ್ತಾ ಇದ್ರು. ಅವರು ...ಸರ ಕೀರ್ತನೆಗಳನ್ನು ಹಾಡುವಾಗ ಚಿಕ್ಕಂದಿನಲ್ಲಿ ಅದನ್ನು ...ಕೇಳೋದೇ ಒಂಥರಾ ಮಜಾ ಇತ್ತು ನನಗೆ. ಅವರ ...ಮುಗಾರಿಕೆಯೇ ನನ್ನೊಳಗೆ ಸಂಗೀತದ ಕಡೆ ಆಸಕ್ತಿ ...ಟ್ಟಲು ಕಾರಣವಾಯ್ತು ಅನ್ನಬಹುದು. ಹಾಗೇನೆ, ಅಪ್ಪ ...ಮ್ಮಂಗೂ ಮ್ಯೂಸಿಕ್ ಅಂದ್ರೆ ತುಂಬಾನೇ ಇಷ್ಟ. ...ದಲಿಂದಲೂ ನನಗೆ ಫುಲ್ ಸಪೋರ್ಟ್ ಕೊಟ್ರು, ...ಲೂ ಕೊಡ್ತಿದ್ದಾರೆ. ನಂದು ಬಿ.ಇ. ಮುಗಿದಕೂಡಲೇ ...ಬ್ ಮಾಡ್ತೀನಿ ಅಂದಾಗ ಬೇಡ ನೀನು ಮ್ಯೂಸಿಕ್‌ನಲ್ಲೇ ...ಮುಂದುವರಿ ಅಂತ ಬೆನ್ನು ತಟ್ಟಿದ್ರು.

ನಿಮ್ಮ ಆರಂಭಿಕ ಸಂಗೀತ ಕಲಿಕೆಯ ಬಗ್ಗೆ ಹೇಳ್ತೀರಾ?

ನನಗೆ ಏಳು ವರ್ಷ ವಯಸಿದ್ದಾಗ, ಬೆಂಗಳೂರಿನ ...ಸುಬ್ರಹ್ಮಣ್ಯ ಶರ್ಮ ಅನ್ನುವವರ ಬಳಿ 'ಕರ್ನಾಟಕ ...ಯ ಸಂಗೀತ' ಕಲಿಯಲು ಸೇರಿಕೊಂಡಿದ್ದೆ. ಅವರ ... ಆರು ವರ್ಷ ಕಲಿತೆ. ಅಷ್ಟರಲ್ಲಿ ಅಪ್ಪ ಶಿವಮೊಗ್ಗಕ್ಕೆ ...ರ್ ಆದರು. ಶಿವಮೊಗ್ಗಕ್ಕೆ ಶಿಫ್ಟಾದ ನಂತರ ಹೊಸಳ್ಳಿ ...ತ ಅನ್ನುವವರ ಹತ್ತಿರ ಕರ್ನಾಟಕ ಶಾಸ್ತ್ರೀಯ ಸಂಗೀತ ...ಯನ್ನು ಮುಂದುವರಿಸಿದೆ. ಇನ್ನು ಸುಗಮ ಸಂಗೀತದ ...ಮದ ಬಗ್ಗೆ ಹೇಳೋದಾದ್ರೆ, ಬೆಂಗಳೂರಿನಲ್ಲಿದ್ದಾಗ ಉಪಾಸನ ಮೋಹನ್ ಅವರ ಬಳಿ ಸ್ವಲ್ಪ ಕಾಲ ಕಲಿತೆ.

ನೀವು ಯಾವುದಾದ್ರು ಆಲ್ಬಮ್ ಮಾಡಿದ್ದುಂಟ?

ನಾನು ಪಿಯುಸಿ ಓದುವ ಸಂದರ್ಭದಲ್ಲಿ 'ಹರೇ ವೆಂಕಟ' ಹಾಗು ಆನಂತರ ಒಂದು ವರ್ಷದ ಬಳಿಕ 'ರಾಮಾ ರಘುಕುಲ ರಾಮಾ' ಎನ್ನುವ ಎರಡು ಆಲ್ಬಮ್‌ಗಳಿಗೆ ಹಾಡಿದ್ದೆ. ಎರಡೂ ಸಿಡಿಗಳು ಕೂಡ ಲಹರಿ ಆಡಿಯೋ ಕಂಪನಿ ಮೂಲಕ ಹೊರಬಂದಿದ್ದವು.

ನೀವು 'ಕಾನ್ಫಿಡೆಂಟ್ ಸ್ಟಾರ್ ಸಿಂಗರ್' ರಿಯಾಲಿಟಿ ಷೋನಲ್ಲಿ ಭಾಗವಹಿಸಿದ್ರಿ ಅಲ್ವಾ? ಅದರ ಬಗ್ಗೆ ಸ್ವಲ್ಪ ಹೇಳಿ.

ಹೌದು. ಆ ಕುರಿತು ಪತ್ರಿಕೆಯಲ್ಲಿ ಜಾಹಿರಾತು ಬಂದಿತ್ತು. ಹೋದೆ. ಆಡಿಶನ್ ನಡೀತಿತ್ತು. ಜಡ್ಜ್‌ಗಳಾಗಿ ಗುರುಕಿರಣ್, ಪ್ರವೀಣ್ ಡಿ ರಾವ್ ಹಾಗೂ ನಂದಿತಾ ಇದ್ರು. ಮೊದಲಿಗೆ ನನಗೆ ಹೆದರಿಕೆ ಇತ್ತು. ಆಮೇಲೆ ಮನಸಿಗೆ ಧೈರ್ಯ ತಂದುಕೊಂಡು ಹಾಡಿದೆ. ಸೆಲೆಕ್ಟ್ ಆದೆ. 'ಜೀವನಚೈತ್ರ' ಚಿತ್ರದ 'ನಾದಮಯಾ...' ಅಲ್ಲಿ ನಾನು ಹಾಡಿದ ಗೀತೆ. ಅಲ್ಲಿ ಸಾಕಷ್ಟು ಕಲಿತೆ. ಅತಿಥಿಗಳಾಗಿ ಬರುತ್ತಿದ್ದ ಸಂಗೀತಗಾರರು ಕೊಡುತ್ತಿದ್ದ ಟಿಪ್ಸ್ ನಂಗೆ ಮುಂದಿನ ದಿನಗಳಲ್ಲಿ ತುಂಬಾ ಸಹಕರಿಸಿದವು ಅನ್ನಬಹುದು.

ಕಾನ್ಫಿಡೆಂಟ್ ಸ್ಟಾರ್ ಸಿಂಗರ್ ರಿಯಾಲಿಟಿ ಷೋಗೆ ಸಂಬಂಧಿಸಿದಂತೆ ಯಾವುದಾದ್ರು ಘಟನೆ ನೆನಪಿದೆಯಾ?

ಒಂದಿನ ಏನಾಯ್ತೂಂದ್ರೆ, ಸಂಗೀತ ನಿರ್ದೇಶಕ ಎಮಿಲ್ ಗೆಸ್ಟ್ ಆಗಿ ಬಂದಿದ್ರು. ನಾನು ಸ್ಟೇಜ್ ಮೇಲೆ ನಿಂತು ಹಾಡ್ತಾ ಇದ್ದೆ. ಅವರಿಗೆ ನನ್ನ ವಾಯ್ಸ್ ಇಷ್ಟ ಆಯ್ತು ಅಂತ ಕಾಣುತ್ತೆ. ಸೀದಾ ಸ್ಟೇಜ್ ಮೇಲೆ ಬಂದು 'ನಿಮ್ಮ ವಾಯ್ಸ್ ನಂಗೆ ಇಷ್ಟ ಆಯ್ತು. ನನ್ನ ಸಂಗೀತದ ಸಿನಿಮಾದಲ್ಲಿ ನಿಮಗೆ ಹಾಡಲು ಅವಕಾಶ ಕೊಡ್ತೀನಿ' ಅಂದಿದ್ರು. ನನ್ನೊಳಗೆ ಆಗ ನಾನೂ ಕೂಡ ಮುಂದೆ ಸಿನಿಮಾಗಳಿಗೆ ಹಾಡಬಲ್ಲೆ ಅನ್ನುವ ಆತ್ಮಸ್ಥೈರ್ಯ ಮೂಡಿತ್ತು. ಅದೇ ರೀತಿ ಎಮಿಲ್ ಅವರು ಆನಂತರ ತಮ್ಮ ಸಂಗೀತದ ಒಂದು ಹಾಡು ಹಾಡಿಸಿದ್ರು ಕೂಡ.

ನೀವು ಸಿನಿಮಾಗೆ ಹಾಡಿದ ಮೊದಲ ಗೀತೆ ಯಾವುದು? ಆ ಅವಕಾಶ ಹೇಗೆ ಬಂತು?

'ಮನಸಾರೆ' ಚಿತ್ರದ 'ನಾನು ಮನಸಾರೆ ಮರುಳನಾಗಿಯೇ ಇರುವೆನು ಇನ್ನು ಮುಂದೆ' ಎನ್ನುವ ಹಾಡು ನಾನು ಸಿನಿಮಾಗೆ ಹಾಡಿದ ಮೊದಲ ಹಾಡು. ಆ ಅವಕಾಶ ಹೇಗೆ ಬಂತು ಅಂದ್ರೆ, ಸಂಗೀತ ನಿರ್ದೇಶಕ ಮನೋ ಮೂರ್ತಿಯವರು ನನಗೆ ಕಾಲ್ ಮಾಡಿ, ಫೋನ್‌ನಲ್ಲೇ ಎರಡು ಸಾಲು ಹಾಡುವಂತೆ ಹೇಳಿದ್ರು. ನಾನು ಹಾಡಿದೆ. ಆಮೇಲೆ ಸ್ಟುಡಿಯೋಗೆ ಬರಲು ಹೇಳಿದ್ರು. ಹೋದೆ.



ವಾಯ್ಸ್ ಚೆನ್ನಾಗಿದೆ ಅಂತ ಪ್ರೋತ್ಸಾಹದ ಮಾತುಗಳನ್ನಾಡಿ ಹಾಡಿಸಿದ್ರು. ಬಹುಶಃ ಟ್ರ್ಯಾಕ್‌ಗೆ ಹಾಡಲು ಕರೆಸಿದ್ದಾರೆ ಅನ್ಕೊಂಡಿದ್ದೆ. ನನ್ನ ವಾಯ್ಸನ್ನೇ ಫೈನಲ್ ಮಾಡಿ ಉಳಿಸಿಕೊಂಡಿದ್ದಾರೆ ಅಂತ ಸಿಡಿ ಬಿಡುಗಡೆಯಾದ ಮೇಲಷ್ಟೇ ಗೊತ್ತಾಯ್ತು. ಸಿಡಿಯಲ್ಲಿ ನನ್ನ ಹೆಸರಿದ್ದದ್ದನ್ನು ನೋಡಿದ ಆ ನಿಮಿಷವಂತೂ ನನಗೆ ತುಂಬಾ ಅಂದ್ರೆ ತುಂಬಾ ಆನಂದವಾಗಿತ್ತು.

ಆನಂತರ ಬೇರೆ ಯಾವ್ಯಾವ ಸಿನಿಮಾಗಳಿಗೆ ಹಾಡಿದ್ರಿ?

'ಪರಮಾತ್ಮ', 'ಸರ್ಕಸ್', 'ಗುಲಾಮ', 'ಲೈಫು ಇಷ್ಟೇನೆ' ಚಿತ್ರಗಳಿಗೆ ಟ್ರ್ಯಾಕ್ ಹಾಡಿದೆ. 'ಮನಸಾರೆ' ಹೊರತುಪಡಿಸಿದರೆ 'ಮನದ ಮರೆಯಲ್ಲಿ', 'ಅತೀತ' ಎಂಬ ಸಿನಿಮಾಗಳಲ್ಲಿ ನನ್ನದೇ ಫೈನಲ್ ವಾಯ್ಸ್ ಇರುವ ಹಾಡುಗಳಿವೆ.

ಇದೇ ವಾರ ಬಿಡುಗಡೆಯಾಗುತ್ತಿರುವ 'ಜೀತು' ಅನ್ನುವ ಸಿನಿಮಾಗೆ ನೀವು ಸಂಗೀತ ಕೂಡ ನೀಡಿದ್ದೀರಿ ಅಲ್ವಾ?

ನನಗೆ ಮೊದಲಿಂದಲೂ ಸಂಗೀತ ನಿರ್ದೇಶಕನಾಗುವ ಬಯಕೆಯಿತ್ತು. ಆ ನಿಟ್ಟಿನಲ್ಲಿ 'ಜೀತು' ಚಿತ್ರದ ಮೂಲಕ ನನ್ನ ಬಯಕೆ ಈಡೇರುತ್ತಿದೆ. ಎಡ್ವಿನ್ ಅನ್ನೋರು ಈ ಚಿತ್ರದ ನಿರ್ಮಾಪಕರು. ಜೊತೆಗೆ ನಿರ್ದೇಶನ ಕೂಡ ಅವರೇ ಮಾಡಿದ್ದಾರೆ. ಹಾಗೇನೆ ಹೀರೋ ಕೂಡ.

'ಜೀತು' ಚಿತ್ರದ ಹಾಡುಗಳ ಬಗ್ಗೆ ಹೇಳಿ.

'ಜೀತು'ವಿನಲ್ಲಿ ಒಟ್ಟು ಐದು ಹಾಡುಗಳಿವೆ. ಪ್ರತಿ ಹಾಡನ್ನೂ ನಾನು ತುಂಬಾ ಇಂಟರೆಸ್ಟ್ ಕೊಟ್ಟೇ ಮಾಡಿದ್ದೀನಿ. ಕೇಳಿದವರೆಲ್ಲ ಮೆಚ್ಚಿಕೊಂಡಿದ್ದಾರೆ. ಸೋನು ನಿಗಂ, ರಾಜೇಶ್ ಕೃಷ್ಣನ್, ಕಾರ್ತಿಕ್, ಜೆಸ್ಸಿ ಗಿಫ್ಟ್, ಅನುರಾಧಾ ಭಟ್, ಸುನಿತಾ ಹಾಗು ಆರ್.ಕೆ.ಸ್ಪರ್ಶ ಹಾಡಿದ್ದಾರೆ. ಈ ಚಿತ್ರದಲ್ಲಿ ನಾನು ಯಾವುದೇ ಹಾಡು ಹಾಡಿಲ್ಲ. ಬದಲಿಗೆ 'ಇಡ್ಲಿ ವಡೆ ಪೂರಿ ದೋಸೆ' ಅನ್ನುವ ಒಂದು ಹಾಡು ಬರ್ದಿದೀನಿ. ಈ ಹಾಡು ಈಗಾಗಲೇ ಅನೇಕ ಬಾರಿ ಟಿವಿಯಲ್ಲಿ ಪ್ರಸಾರವಾಗುತ್ತಿದೆ. ರೇಡಿಯೋಗಳಲ್ಲೂ ಕೂಡ ಪ್ರಸಾರವಾಗುತ್ತಿದೆ. ನನಗಂತೂ ಖುಷಿಯಾಗುತ್ತಿದೆ. ಇದೇ ಖುಷಿಯಲ್ಲಿ ಮುಂದಿನ ದಿನಗಳಲ್ಲಿ ಮತ್ತೊಂದಿಷ್ಟು ಒಳ್ಳೊಳ್ಳೆಯ ಹಾಡುಗಳನ್ನು ಕೊಡುವಾಸೆ. ಪ್ರತಿಭಾವಂತ ನಿರ್ದೇಶಕರ ಜೊತೆ ಕೆಲಸ ಮಾಡುವಾಸೆ.

ನಿಮ್ಮ ನೆಚ್ಚಿನ ಸಂಗೀತ ನಿರ್ದೇಶಕರು ಯಾರು?

ಎ.ಆರ್.ರೆಹಮಾನ್ ನನಗೆ ತುಂಬಾ ಇಷ್ಟದ ಸಂಗೀತ ನಿರ್ದೇಶಕ. ಅವರು ಕ್ಲಾಸಿಕಲ್ ಮ್ಯೂಸಿಕ್‌ಅನ್ನು ತುಂಬಾ ಚೆನ್ನಾಗಿ ಸಿನಿಮಾಗೆ ಬಳಸಿಕೊಳ್ಳುವುದರಿಂದ ಇಷ್ಟವಾಗುತ್ತಾರೆ. ನಾನೂ ಕೂಡ ಕ್ಲಾಸಿಕಲ್ ಮ್ಯೂಸಿಕ್‌ನ ಹಿನ್ನೆಲೆಯುಳ್ಳವನಾದ್ದರಿಂದ ಅವರು ಬಹುಶಃ ನನಗೆ ಇಷ್ಟವಾಗುತ್ತಾರೆ ಅನ್ನಬಹುದು. ಅವರ 'ಸ್ವದೇಶ್' ಚಿತ್ರದ ಹಾಡುಗಳು ನನ್ನ ಫೇವರಿಟ್. ಉಳಿದಂತೆ ಕನ್ನಡದಲ್ಲಿ ಹರಿಕೃಷ್ಣರ ಮ್ಯೂಸಿಕ್ ನಂಗಿಷ್ಟ. ತುಂಬಾ ವರ್ಸಟೈಲ್ ಮ್ಯೂಸಿಕ್ ಅವರದು. ಹಾಗೇನೆ ಎಲ್ಲ ಕಾಲಕ್ಕೂ ಹಂಸಲೇಖ ಇಷ್ಟವಾಗುತ್ತಾರೆ ನನಗೆ. ನಾನೂ ಕೂಡ ಅವರಂತಾಗಬಯಸುತ್ತೇನೆ. ನಾನೇ ಬರೆದ ಸಾಹಿತ್ಯಕ್ಕೆ, ನನ್ನದೇ ರಾಗ ಸಂಯೋಜನೆಯಲ್ಲಿ ನಾನೇ ಹಾಡುವ ಒಂದು ಮಹತ್ವಾಕಾಂಕ್ಷೆ ನನಗಿದೆ. ಮುಂದೆ ನೋಡೋಣ ಏನಾಗುತ್ತೋ...

ನುಡಿಸಲು ಯಾವ ವಾದ್ಯ ನಿಮಗಿಷ್ಟವಾಗುತ್ತೆ?

ನಾನು ಹೆಚ್ಚಾಗಿ ಪಿಯಾನೋ ಬಳಸುತ್ತೇನೆ. ಟ್ಯೂನ್ ಹಾಕಲೂ ಕೂಡ ಪಿಯಾನೋ ನನಗೆ ಅನುಕೂಲಕರ ವಾದ್ಯ.

ಒಂದು ಹಾಡು ಕಂಪೋಸ್ ಮಾಡುವಾಗ ಹೇಗೆಲ್ಲಾ ತಯಾರಿ ನಡೆಸಿಕೊಳ್ತೀರಿ?

ನಿರ್ದೇಶಕರು ಕೊಟ್ಟಿರುವ ಸನ್ನಿವೇಶವನ್ನು ಮೊದಲು ಮನದಟ್ಟು ಮಾಡಿಕೊಳ್ಳುತ್ತೇನೆ. ನಂತರ ಒಂದು ಡಮ್ಮಿ ಲಿರಿಕ್ಸ್ ಬರೆದುಕೊಂಡು, ಆ ಸನ್ನಿವೇಶಕ್ಕೆ ಹೊಂದುವ ಒಂದು ರಾಗದ ಮೇಲೆ ಟ್ಯೂನ್ ಹಾಕುತ್ತೇನೆ.

ನಿಮ್ಮಿಷ್ಟದ ರಾಗಗಳು ಯಾವುವು?

ತೋಡಿ, ಚಾರುಕೇಶಿ, ಅಭೇರಿ, ಕಲ್ಯಾಣಿ... ಇತ್ಯಾದಿ.

ಬಿ.ಇ. ಓದಿದ್ದರೂ ಸಂಗೀತ ಕ್ಷೇತ್ರವನ್ನೇ ಆಯ್ಕೆ ಮಾಡಿಕೊಂಡಿದ್ದೀರಲ್ಲಾ... ಮುಂದೆ ಈ ಕ್ಷೇತ್ರದಲ್ಲೇ ಯಶಸ್ವಿಯಾಗುತ್ತೇನೆ ಅನ್ನುವ ಭರವಸೆಯುಂಟಾ?

ಸಿಕ್ಕ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ನನ್ನ ಮ್ಯಾಕ್ಸಿಮಮ್ ಎಫರ್ಟ್ ಹಾಕಲು ಪ್ರಯತ್ನಿಸುತ್ತೇನೆ. ಕಲಿಕೆ, ಗ್ರಹಿಕೆ, ಆತ್ಮವಿಶ್ವಾಸವಿರುವ ಕಡೆ ಗೆಲುವೂ ಇರುತ್ತೆ ಅಂತ ನಂಬಿದ್ದೀನಿ. ■

...ಲ್ಲಿ ಉಣ್ಣೆಗಾಗಿ ಕುರಿ ಸಾಕುವುದು ಆರ್ಥಿಕವಾಗಿ ...ರ್ಯಸಾಧುವೂ ಅಲ್ಲ. ಹಾಗಾಗಿ ವೈಷ್ಣವ ದೀಕ್ಷೆಯ ...ದ ಕುರುಬರು ಕುರಿ ಸಾಕುವುದನ್ನು ನಿಲ್ಲಿಸಬೇಕಾಗುತ್ತದೆ. ...ಕರ್ನಾಟಕದಲ್ಲಿರುವ ಅರವತ್ತು ಲಕ್ಷ ಕುರುಬರು ತಮ್ಮ ... ಕಸುಬು ಬಿಟ್ಟ ಮೇಲೆ ಅವರಿಗೆ ಪರ್ಯಾಯ ...ಜೀವನೋಪಾಯಕ್ಕೆ ಪೇಜಾವರರು ಏನು ವ್ಯವಸ್ಥೆ ಮಾಡಿ ...ತ್ತಾರೆ? ಅರವತ್ತು ಲಕ್ಷ ಕುರುಬರಿಗೆ ಭೂಮಿ ಕೊಟ್ಟು ...ಯ ಮಾಡಿಸಲು ಪೇಜಾವರರಿಗೆ ಸಾಧ್ಯವೇ? ಉಳಿದ ...ಮಾಂಸಾಹಾರಿಗಳಿಗೆ ಬೇಕಾದ ಮಾಂಸ ವಿದೇಶದಿಂದ ...ದು ಮಾಡಿಕೊಳ್ಳಬೇಕೆ? ಕರ್ನಾಟಕದ ಉಣ್ಣೆ ತಯಾರಿಕೆ ...ಮಗಳನ್ನೆಲ್ಲಾ ಬಂದ್ ಮಾಡಿ ಲಕ್ಷಾಂತರ ಜನರು ...ವಾಸ ಸಾಯುವಂತೆ ಮಾಡಬೇಕೆ? ನಮ್ಮ ದೇಶದಲ್ಲಿ ... ಕುಲ ಕಸುಬು - ಆರ್ಥಿಕ ಚಕ್ರ - ಜೀವನನೋ... ...ಇವೆಲ್ಲ ಒಂದಕ್ಕೊಂದು ಹೇಗೆ ಅವಲಂಬಿತವಾಗಿವೆ ...ವುದರ ಬಗ್ಗೆ ಸ್ವಾಮೀಜಿಗಳಿಗೆ ಸ್ವಲ್ಪವಾದರೂ ಜ್ಞಾನ ...ಯೇ? ಮಠದಲ್ಲಿ ಸ್ವಾಮಿಗಳಿಗೆ ಕುಳಿತಲ್ಲಿಯೇ ಬೇಕಾ... ...ಲ್ಲ ಬಂದು ಬೀಳುವುದರಿಂದ ಹೆಚ್ಚಿನ ಕಾವಿಧಾರಿಗಳಿಗೆ ...ಜದ ಆರ್ಥಿಕ ಚಕ್ರದ ಪರಿಜ್ಞಾನ ಸ್ವಲ್ಪವೂ ಇರುವುದಿಲ್ಲ. ...ಡೆ ಕುಳಿತು ಮಂತ್ರ ಉಗುಳಿದಷ್ಟು ಸುಲಭವಲ್ಲ ...ಕಸುಬು ನಡೆಸಿ ಜೀವನ ಸಾಗಿಸುವುದು.

...ತುಳುನಾಡಿನ ಬೇರೆ ಎಲ್ಲ ಶೂದ್ರರು ಶೈವರಾದರೂ ...ವೀರ ಜಾತಿಯವರು (ಮೀನುಗಾರರು) ಮಾತ್ರ ...ವರು ಎಂದು ಪೇಜಾವರರು ಅನೇಕ ಬಾರಿ ಹೇಳಿದ್ದಾರೆ. ...ರಾಜರ ಸಮಯದಲ್ಲಿ ಅನೇಕ ಮೀನುಗಾರರು ...ಣರಾಗಿ ಮತಾಂತರ ಹೊಂದಿದ್ದರಿಂದ ಮಾಧ್ವ ...ಣರು ಇತರ ಬ್ರಾಹ್ಮಣರಿಗಿಂತ ದೃಢಕಾಯರಾಗಿದ್ದಾರೆ ... ಸ್ವಲ್ಪ ಕಪ್ಪು ಬಣ್ಣ ಹೊಂದಿದ್ದಾರೆ ಹಾಗೂ ಶೈವ ...ಣರೆಲ್ಲ ಬಿಳಿ ವರ್ಣದವರಾಗಿದ್ದು ... ...ಜನರಾಗಿದ್ದಾರೆ ಎಂದು ಒಂದೊಮ್ಮೆ ಉಡುಪಿ ...ಧೀಶರೊಬ್ಬರು ಹೇಳಿದ್ದರು. ಮೀನುಗಾರ ...ಬ್ರಾಹ್ಮಣರು ಮೀನು ತಿನ್ನುವುದನ್ನು ಬಿಡಿಸಲು ...ಜೀ ರುಚಿಯಿರುವ ಗುಳ್ಳ ಬದನೆಕಾಯಿಯನ್ನು ...ರಾಜರು ಮಂತ್ರಶಕ್ತಿಯಿಂದ ಸೃಷ್ಟಿಸಿದರು ಎಂದು



ಇದೇ ಉಡುಪಿ ಮಠಾಧೀಶರು ಹೇಳಿದ್ದರು. ಹಾಗಾದರೆ ಈಗ ಎಲ್ಲಾ ಮೀನುಗಾರರು ಪಕ್ಕಾ ವೈಷ್ಣವ ಸಂಪ್ರದಾಯ ಅನುಸರಿಸಿದರೆ ಅವರು ಮೀನು ತಿನ್ನುವುದನ್ನು ನಿಲ್ಲಿಸುವುದರ ಜೊತೆಗೆ ಮೀನು ಹಿಡಿಯುವುದನ್ನೂ ನಿಲ್ಲಿಸಬೇಕಾಗುತ್ತದೆ. ಯಾಕೆಂದರೆ ವೈಷ್ಣವ ಪಂಥ ಮೀನು ಹಿಡಿಯುವುದನ್ನೂ ನಿಷೇಧಿಸುತ್ತದೆ. ತುಳುನಾಡಿನಲ್ಲಿ ಮೀನುಗಾರರು ಒಟ್ಟು ಜನಸಂಖ್ಯೆಯ 20% ಇದ್ದಾರೆ! ಹಾಗಾದರೆ ಲಕ್ಷಾಂತರ ಮೀನುಗಾರರೆಲ್ಲ ವೈಷ್ಣವ ಪಂಥಕ್ಕೆ ಅನುಗುಣವಾಗಿ ಮೀನು ಹಿಡಿಯುವುದನ್ನು ನಿಲ್ಲಿಸಿದರೆ ಅವರೆಲ್ಲ ಜೀವನ ನಿರ್ವಹಣೆಗೆ ಏನು ಮಾಡಬೇಕು? ಮತ್ಸ್ಯೋದ್ಯಮವೆಲ್ಲ ನಂತರ ಮೀನು ತಿನ್ನುವ ಕ್ರೈಸ್ತರ - ಮುಸ್ಲಿಮರ ಪಾಲಾದರೆ ಪೇಜಾವರ ಶ್ರೀಗಳು ಇಷ್ಟೊಂದು ಶಾಖಾಹಾರಿ (ಮೀನುಗಾರ) ವೈಷ್ಣವರಿಗೆ ಹೊಟ್ಟೆಪಾಡಿಗಾಗಿ ಯಾವ ಶಾಖಾಹಾರಿ ಕಸುಬು ಒದಗಿಸಬಲ್ಲರು? ಸಮಾಜಶಾಸ್ತ್ರದ ಬಗ್ಗೆ ಮತ್ತೂ ದೇಶದ ಅರ್ಥವ್ಯವಸ್ಥೆಯ ವಿಷಯದಲ್ಲಿ ಸ್ವಲ್ಪವೂ ಜ್ಞಾನವಿಲ್ಲದ ಪೇಜಾವರರು ಇಡಿಯಾಗಿ ಒಂದು ದೊಡ್ಡ ಜನಾಂಗವನ್ನು ಮಾಂಸಾಹಾರಿಯಿಂದ ಶಾಖಾಹಾರಿಯಾಗಿ ಪರಿವರ್ತಿಸುವ ಮಾತುಗಳನ್ನು ನಿಲ್ಲಿಸಿದರೆ ಒಳ್ಳೆಯದು.

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

'ಪತ್ರಿಕೆ' ನಿಲುವು ಇತರರಿಗೂ ಮಾದರಿಯಾಗಲಿ

ಇತ್ತೀಚೆಗೆ ಈ ದೇಶದ ಪುಣ್ಯ ಕ್ಷೇತ್ರಗಳೆಲ್ಲ ದೇವರನ್ನು ಒಂದಿಕ್ಕಿನ ಪೂಜಾರಿ, ಪಾರುಪತ್ಯದಾರರ ಸೆಕ್ಸ್ ಮತ್ತು ಕ್ರೈಂ ಸುದ್ದಿಗಳಿಂದ ಕುಖ್ಯಾತವಾಗುತ್ತಿವೆ. ಹಾಗೆ ನೋಡಿದರೆ, ನಮ್ಮ ಆಧ್ಯಾತ್ಮ ಪುರಾಣೋಕ್ತ ಪುಂಡರ ಸೆಕ್ಸ್ ಹಾವಳಿಯೇ ಈ ಪುಣ್ಯ ಕ್ಷೇತ್ರಗಳಿಗೂ ಸ್ಫೂರ್ತಿ. ವಾಸ್ತವವಾಗಿ 'ಪುಣ್ಯಕ್ಷೇತ್ರ'ವೂ ಇದಕ್ಕೆ ಹೊರತಲ್ಲ. ಅದೀಗ ಮಂಜುನಾಥನನ್ನು ಹೊರಗಿಕ್ಕಿದ ಅಧರ್ಮ ಸ್ಥಳವಾಗಿ ಪರಿಣಮಿಸಿದೆ. ಉದಾಹರಣೆಗೆ ಪದ್ಮಲತಾ, ಸೌಜನ್ಯ ಮುಂತಾದ ಅನೇಕ ಹೆಣ್ಣು ಮಕ್ಕಳ ಮಾನ-ಪ್ರಾಣಹಾನಿಗೆ ಕ್ಷೇತ್ರದ ಧರ್ಮಾಧಿಕಾರಿಗಳ ಕಾಣದ ಕೈ ಕೃಪೆ ಇದೆ. ಇದನ್ನೆಲ್ಲ ಸಿಬಿಐಯಿಂದ ಮಾತ್ರ ಬಹಿರಂಗಪಡಿಸಬಹುದಾಗಿದೆ.

ಈ ನಿಟ್ಟಿನಲ್ಲಿ 'ಗೌರಿ ಲಂಕೇಶ್ ಪತ್ರಿಕೆ' ತಳೆದಿರುವ ನಿಲುವು ಉಳಿದ ಪತ್ರಿಕೆಗಳಿಗೂ ಮಾದರಿಯಾಗಲಿ- ಧರ್ಮಕ್ಷೇತ್ರದ ಅಧರ್ಮ ಬಹಿರಂಗವಾಗಲಿ.

-ಪ್ರೊ. ಶಿವರಾಮಯ್ಯ, ಬೆಂಗಳೂರು

ಸಸ್ಯಾಹಾರಿಗಳಿಗೆ ಮಾತ್ರ!

'ಮನೆ ಬಾಡಿಗೆಗೆ ದೊರೆಯುತ್ತದೆ, ಸಸ್ಯಾಹಾರಿಗಳಿಗೆ ಮಾತ್ರ.'

ಯಲಚೇನಹಳ್ಳಿಯ ಚರ್ಚ್ ರಸ್ತೆಯಲ್ಲಿ ಇಂತಹದೊಂದು ಬೋರ್ಡ್ ಕಳೆದ ಮೂರು ತಿಂಗಳಿನಿಂದಲೂ ಇದೆ. ಇಲ್ಲಿ 'ಸಸ್ಯಾಹಾರಿಗಳು' ಎಂದರೆ ಯಾರು ಎಂಬುದನ್ನು ಸುಲಭವಾಗಿ ಗ್ರಹಿಸಬಹುದು. ದಲಿತರನ್ನೂ, ಹಿಂದುಳಿದವರನ್ನೂ ಮನೆಯೊಳಗೆ ಬಿಟ್ಟುಕೊಳ್ಳದವರು ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಇಲ್ಲ, ಬೆಂಗಳೂರಿನಂಥ ಮುಂದುವರಿದ ನಗರಗಳಲ್ಲೂ ಇದ್ದಾರೆ.

- ಕೆ.ಎಂ. ಓದುಸಿದ್ದೇಗೌಡ, ಕೆಬ್ಬೇಹಳ್ಳಿ

ನಿರಂಜನಪುರಿಸ್ವಾಮಿ 'ಬಾಲಕ' ಪೇಜಾವರರಿಗೆ ಬುದ್ಧಿ ಹೇಳಲಿ

'ಮೂರು ಬಿಟ್ಟವ ಊರಿಗೆ ದೊಡ್ಡವ' ಎಂಬಂತಾಗಿದೆ 90 ದಾಟಿರುವ ಪೇಜಾವರ ಶ್ರೀಗಳ ಪರಿಸ್ಥಿತಿ. ಇವರ ಅಪ್ರಬುದ್ಧ ಹೇಳಿಕೆಗಳು, ದೀಕ್ಷೆಗಳು, ಮಡಿ-ಮೈಲಿಗೆಗಳು ಬೇಸರ ಮೂಡಿಸುತ್ತವೆ. ಇವರಿಗಿರುವ ಪ್ರಚಾರದ ಅಮಲು ದಣಿವಿಲ್ಲದಂತೆ ಇವರಿಂದ ಸುಳ್ಳುಗಳನ್ನೇ ನಿರಂತರವಾಗಿ ಹೇಳಿಸುತ್ತದೆ.

ವಿವೇಕದಲ್ಲಿ ಹಿರಿತನ ದಕ್ಕಿಸಿಕೊಂಡಿರುವ ನಿರಂಜನಪುರಿ ಸ್ವಾಮಿ ಅವರ ನುಡಿಗಳಲ್ಲಿ ವೈಚಾರಿಕ ಚೇತನತ್ವವಿದೆ. ಪೇಜಾವರ ಶ್ರೀ ಎಂಬ 'ಬಾಲಕ'ನನ್ನು ತಿದ್ದುವ ಸಜ್ಜನಿಕೆಯ ನಿಷ್ಠುರತೆ ಇದೆ.

ಕಸದ ನಡುವೆ ಇರುವ ಕನಕದಾಸ ಪ್ರತಿಮೆಯನ್ನು ಅಲ್ಲಿಂದ ಜಾಗ ಖಾಲಿ ಮಾಡಿಸಿ ಕಾಗಿನೆಲೆಯ ಕಸರಹಿತ ಸ್ಥಳದಲ್ಲಿ ಇರಿಸಿಕೊಳ್ಳಬಾರದೇಕೆ?

-ಮೂರ್ನಾಡ್ ರಾಮಸ್ವಾಮಿ, ಮಡಿಕೇರಿ

ವಿಶೇಷಾಂಕ ಚೆನ್ನಾಗಿತ್ತು

ನವೆಂಬರ್ 20, 2013ರ ಸಂಚಿಕೆಯಲ್ಲಿ ಗೌರಿ ಲಂಕೇಶರ 'ಕಂಡಹಾಗೆ' ಓದಿ ನಿಜಕ್ಕೂ ಶಾಕ್ ಆಯಿತು. ಲಂಕೇಶರಂತಹ ದೊಡ್ಡ ಸಾಹಿತಿಯ ಮಗಳಾಗಿರುವ ಗೌರಿ ನಿಜವಾಗಲೂ ಕನ್ನಡ ಪಂಡಿತರೇ ಇರಬೇಕೆಂದು ತಿಳಿದಿದ್ದೆ. ಹಾಗೆಂದೇ ಹಲವು ಕಾರ್ಯಕ್ರಮಗಳಲ್ಲಿ ಅವರನ್ನು ಕಂಡಾಗ ಮಾತನಾಡಿಸಬೇಕೆನಿಸಿದರೂ - ನನ್ನ ಕನ್ನಡದ ದುಸ್ಥಿತಿಯ ಬಗ್ಗೆ ನನಗೆ ಚೆನ್ನಾಗಿ ಗೊತ್ತಿರುವುದರಿಂದ- ಧೈರ್ಯ ಸಾಲದೆ ಸುಮ್ಮನಾಗಿದ್ದೆ. ಒಂದು ಕಾಲದಲ್ಲಿ ಅವರೂ ನಮ್ಮಂತೆಯೇ ಕನ್ನಡದಲ್ಲಿ ನಾಪಾಸ್ ಎಂದು ತಿಳಿದ ಮೇಲೆ ಅವರ ಜೊತೆ ಮಾತನಾಡಬಹುದೆನಿಸುತ್ತಿದೆ. ಆದರೂ, ಅವರು ಇಷ್ಟು 'ಸರಳ ಸುಂದರ ನೇರ'ವಾಗಿ ಬರೆಯುತ್ತಾರಲ್ಲ, ಅದೇ ಆಶ್ಚರ್ಯ.

ಅಂದಹಾಗೆ ಕರ್ನಾಟಕ ರಾಜ್ಯೋತ್ಸವ ವಿಶೇಷಾಂಕ ಚೆನ್ನಾಗಿತ್ತು. ಅಶೋಕ ಚಕ್ರವರ್ತಿಯವರು ಕರ್ನಾಟಕದ ಕೆಲವು ಪ್ರದೇಶಗಳನ್ನೂ ಆಳಿದ್ದರೆಂದು ಕೇಳಿದ್ದೆನಾದರೂ, ಅದಕ್ಕೆ ಬೇರೊಂದು ಆಯಾಮವೂ ಇದೆ ಎಂದು ತಿಳಿದದ್ದೇ ರಘೋತ್ತಮ ಹೊ.ಬಾ ಅವರು ಪತ್ರಿಕೆಯಲ್ಲಿ ಬರೆದಿದ್ದ ಲೇಖನವನ್ನು ಓದಿದ ಮೇಲೆ.

-ಸ್ವಾಲಿಹ್ ಜೆ.ಎಂ., ಮಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ... ಅಥವಾ ಬರಹ ... ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೆ ... SMS ...

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 27-11-2013 RNI No. KARKAN2005/14

ಬರಗೂರು ಪಿಕ್ಚರ್ ತೋರಿಸ್ತಾರೆ



'ಬರಗೂರು ರಾಮಚಂದ್ರಪ್ಪ ಪ್ರತಿಷ್ಠಾನ'ವು ನವೆಂಬರ್ 15ರಿಂದ 17ರ ವರೆಗೆ ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ 'ಕೋಮು ಸೌಹಾರ್ದ ಕನ್ನಡ ಚಿತ್ರೋತ್ಸವ' ಹಮ್ಮಿಕೊಂಡಿದೆ. 180 ಜನ ಕೂತು ನೋಡಬಹುದಾದ ಸಿನಿಮಾ ಹಾಲ್ ವ್ಯವಸ್ಥೆ ಕಲ್ಪಿಸಿದ್ದು, ಈ ಚಿತ್ರೋತ್ಸವದಲ್ಲಿ 'ಮಹಾತ್ಮ ಕಬೀರ್', 'ಸಂತ ಶಿಶುನಾಳ ಷರೀಫ್', 'ಬೆಳ್ಳಿ ಕಿರಣ', 'ತಮಸ್ಸು' ಹಾಗೂ 'ಉಗ್ರಗಾಮಿ' ಚಿತ್ರಗಳನ್ನು ಪ್ರದರ್ಶಿಸಲಾಗುವುದೆಂದು ಈ ಫೌಂಡೇಶನ್‌ನ ಉಪಾಧ್ಯಕ್ಷರುಗಳಾದ ಮುರಳೀಧರ ಹಾಲಪ್ಪ ಹಾಗೂ ಸುರೇಶ್ ಅರಸ್ ತಿಳಿಸಿದ್ದಾರೆ.

ಜ್ಞಾನಪೀಠ ಪುರಸ್ಕೃತ ಸಾಹಿತಿ ಡಾ.ಚಂದ್ರಶೇಖರ ಕಂಬಾರರ ನೇತೃತ್ವದಲ್ಲಿ ಜರುಗುವ ಈ ವಿಶಿಷ್ಟ ಕಾರ್ಯಕ್ರಮದಲ್ಲಿ ಡಾ.ಬಂಜಗೆರೆ ಜಯಪ್ರಕಾಶ್, ಟಿ.ಎನ್.ಸೀತಾರಾಂ, ಮಾವಳ್ಳಿ ಶಂಕರ್, ಡಾ.ಸರೋಜಾ ಭಾಗವಹಿಸಲಿದ್ದಾರೆ. ಪತ್ರಿಕೋದ್ಯಮ ವಿದ್ಯಾರ್ಥಿಗಳು ಹಾಗೂ ಸಮೂಹ ಸಂವಹನಗಳಿಗಾಗಿ ಈ ಚಿತ್ರ ಪ್ರದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆಯೆಂದು ಮುರಳೀಧರ ಹಾಲಪ್ಪ ಅವರ ಅಭಿಪ್ರಾಯ.

ಕ್ಯಾಮೆರಾಮನ್ ಮಲ್ಲಿಕಾರ್ಜುನ್ ನಿಧ



ನೂರಕ್ಕೂ ಹೆಚ್ಚು ಚಿತ್ರಗಳಿಗೆ ಕ್ಯಾಮೆರಾ ಹಿಡಿದಿದ್ದ ಪ್ರತಿಭಾನ್ವಿತ.

ಕ್ಯಾಮೆರಾಮನ್ ಮಲ್ಲಿಕಾರ್ಜುನ್ ಅವರು ಕಿಡ್ನಿ ವೈಫಲ್ಯದಿಂದ ತೀರಿಕೊಂಡಿದ್ದಾರೆ.

'ಮುಖವಾಡ' ಚಿತ್ರಕ್ಕೆ ಸ್ವತಂತ್ರವಾಗಿ ಕ್ಯಾಮೆರಾ ಹಿಡಿಯುವ ಮೂಲಕ ತಮ್ಮ ವೃತ್ತಿ ಬದುಕು ಆರಂಭಿಸಿದ್ದ ಮಲ್ಲಿಕಾರ್ಜುನ್ 'ಸಾಂಗ್ಲಿಯಾನ', 'ಅವಳೇ ನನ್ನ ಹೆಂಡ್ತಿ', 'ಸಿ.ಬಿ.ಐ. ಶಂಕರ್', 'ಹುಲಿಯ', 'ಮರಣ ಮೃದಂಗ', 'ಪ್ರೇಮ ಪ್ರೇಮ ಪ್ರೇಮ', 'ದಂಡ ನಾಯಕ', 'ಪಾಂಡವರು', 'ಚಂಡಿಚಾಮುಂಡಿ', 'ಕೆಂಪು ಮುಗಿಲು', 'ಓ ಗಂಡಸರೇ ನೀವೆಷ್ಟು ಒಳ್ಳೆಯವರು', 'ತಲವಾರ್', 'ಎಲ್ಲೆಲ್ಲು ನೀನೆ ನನ್ನಲ್ಲು ನೀನೆ', 'ಪೊನ್ನಮ್ಮ', 'ಕಾಜರ್', 'ಲವ್ ಇನ್ ಸಿಂಗಪೂರ್' ಸೇರಿದಂತೆ ಇನ್ನೂ ಹಲವಾರು ಚಿತ್ರಗಳಿಗೆ ಕ್ಯಾಮೆರಾಮನ್ ಆಗಿ ಕೆಲಸ ಮಾಡಿದ್ದರು. 'ಗಂಧದ ಗುಡಿ- ಭಾಗ 2' ಚಿತ್ರದ ಅತ್ಯುತ್ತಮ ಕ್ಯಾಮೆರಾ ವರ್ಕ್‌ಗಾಗಿ ರಾಜ್ಯ ಪ್ರಶಸ್ತಿಯನ್ನೂ ಗಳಿಸಿದ್ದರು.

ಕೆ.ವಿ.ರಾಜು, ನಂಜುಂಡಪ್ಪ, ರಿಚರ್ಡ್ ಕ್ಯಾಸ್ಟೆಲಿನೋರಿಗೆ ಪರ್ಮನೆಂಟ್ ಕ್ಯಾಮೆರಾಮನ್ ಆಗಿದ್ದ ಇತ್ತೀಚಿನ ದಿನಗಳಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದರು. ಈಗ ತೀರಿಕೊಂಡಿದ್ದಾರೆ. ಈ ಮೂಲಕ ಒಬ್ಬ ಪ್ರತಿಭಾವಂತ ಕ್ಯಾಮೆರಾಮನ್ ಕಳೆದುಕೊಂಡ ದುಃಖ ಚಿತ್ರರಂಗಕ್ಕೆ.

ಚಿನ್ನಾರಿ ಮುತ್ತ ವಿಜಯ್ ಇನ್ 'ಕಿಸ್ಮತ್'

ಒಂದು ಕಡೆ ಪುನೀತ್ ರಾಜ್‌ಕುಮಾರ್ ಅವರ 'ಅಪ್ಪು' ಸಿನಿಮಾ ಭರ್ಜರಿಯಾಗಿ ಓಡುತ್ತಿದ್ದರೆ, 'ಅಪ್ಪು'ವಿಗೆ ಸರಿಸಾಟಿಯಾಗಿ ಸ್ಪರ್ಧಿಸಿದ ಚಿತ್ರವೆಂದರೆ ವಿಜಯ್ ರಾಘವೇಂದ್ರ ನಟಿಸಿದ್ದ 'ನಿನಗಾಗಿ' ಚಿತ್ರ. ಪುನೀತ್ ಹಾಗೂ ವಿಜಯ್ ಇಬ್ಬರೂ ಬಾಲನಟರಾಗಿಯೇ ಚಿತ್ರರಂಗ ಪ್ರವೇಶಿಸಿದವರು. ಅವರಿಬ್ಬರೂ ಬೆಳೆದು ದೊಡ್ಡವರಾದ ಬಳಿಕವೂ ಏಕಕಾಲಕ್ಕೆ ಹೀರೋಗಳಾದರು. 'ಅಪ್ಪು'ವಿನ ಮೂಲಕ ಪುನೀತ್‌ಗೆ ಸಿಕ್ಕಷ್ಟೇ ಯಶಸ್ಸು 'ನಿನಗಾಗಿ' ಮೂಲಕ ವಿಜಯ್‌ಗೂ ಸಿಕ್ಕಿದ್ದೇನೋ ನಿಜ. ಆದರೆ ಕಾಲ ಉರುಳುತ್ತಿದ್ದಂತೆಯೇ ಅದೇಕೋ ಪುನೀತ್‌ಗೆ ಒಲಿದಷ್ಟು ಅದೃಷ್ಟ ವಿಜಯ್‌ಗೆ ಒಲಿಯಲಿಲ್ಲ.

ಅತ್ತ ಪುನೀತ್ ಒಂದರ ಮೇಲೊಂದರಂತೆ ಹಿಟ್ ಸಿನಿಮಾಗಳನ್ನು ಕೊಡುತ್ತಾ ದಿನೇ ದಿನೇ ತಮ್ಮ ಸ್ಟಾರ್ ವ್ಯಾಲ್ಯೂ ಹೆಚ್ಚಿಸಿಕೊಳ್ಳುತ್ತಾ ಹೋದರೆ, ಇತ್ತ ವಿಜಯ್ ಮಾರುಕಟ್ಟೆ ಕಳೆದುಕೊಳ್ಳುತ್ತಾ ತಮ್ಮ ವೃತ್ತಿ ಬದುಕಿನಲ್ಲಿ ಇಳಿಮುಖ ಕಾಣುತ್ತಾ ಹೋದರು. ವಿಜಯ್ ವಿಶಿಷ್ಟ ಪ್ರಯೋಗಗಳನ್ನು ಮಾಡುವ ಮೂಲಕವೂ ಸಕ್ಸಸ್ಸಿಗಾಗಿ ಹೋರಾಡಿದರು. ಆ ಪ್ರಯತ್ನಗಳಲ್ಲಿ ಮುಖ್ಯವಾಗಿ ಸಂಬಂಧಿ ಕಂ ನಿರ್ದೇಶಕ ಪ್ರಕಾಶ್ ನಿರ್ದೇಶನದ 'ಶ್ರೀ' ಒಂದು. ಆ ಚಿತ್ರದ ಫೈಟ್‌ಗಾಗಿ ವಿಜಯ್ ಬ್ಯಾಂಕಾಕ್, ಸಿಂಗಪೂರ್‌ಗಳಲ್ಲಿ ತರಬೇತಿ ಪಡೆದು ಬಂದಿದ್ದರು. 'ಶ್ರೀ' ನಿರೀಕ್ಷಿತ ಮಟ್ಟದಲ್ಲಿ ಯಶಸ್ಸು ಗಳಿಸಲಿಲ್ಲ, ಆ ನಂತರ ಅದೇ ಪ್ರಕಾಶ್ ಶಿವಣ್ಣನಿಗೆ 'ರಿಷಿ' ಮಾಡಲು ಮುಂದಾದಾಗ ಶಿವಣ್ಣನ ಜೊತೆ ವಿಜಯ್ ಅವರನ್ನು ಕೂಡ ಮುಂದಕ್ಕೆ ತಳ್ಳೋಣ ಅಂದುಕೊಂಡು 'ರಿಷಿ'ಯಲ್ಲಿ ಒಂದು ಒಳ್ಳೆಯ ಪಾತ್ರ ಕೊಟ್ಟರು. 'ರಿಷಿ' ಗೆದ್ದಿತು. ಆಮೇಲೆ ಇನ್ನೊಂದಿಷ್ಟು ಸಿನಿಮಾಗಳಲ್ಲಿ ವಿಜಯ್ ಹೀರೋ ಆದರು. ಆದರೂ ಪುನೀತ್ ಮಟ್ಟಕ್ಕೆ ಅವರಿಗೆ ಸಕ್ಸಸ್ ಸಿಗಲೇ ಇಲ್ಲ.



ತಮ್ಮದೇ ಬ್ಯಾನರಿನಡಿ ನಿರ್ಮಿಸಿದ್ದ 'ಸೇವಂತಿ ಸೇವಂತಿ' ರೇಂಜಿಗಾದರೂ ಆಗೊಂದು ಈಗೊಂದು ಸಿನಿಮಾ ಕೈ ಹಿಡಿದಿದ್ದರೆ ವಿಜಯ್ ಬಚಾವಾಗಿಬಿಡುತ್ತಿದ್ದರು. ಅದೇಕೋ ಹುಳ್ಳಾಯಿತು. ಒಂದರ ಮೇಲೊಂದರಂತೆ ಸಿನಿಮಾ ಫ್ಲಾಪ್ ಆಗುತ್ತಾ ಬಂದವು. ಈ ನಡುವೆ ಹೊಸ ಮುಖಗಳು ಲೈಮ್ ಲೈಟಿನಡಿ ಹೊಳೆಯತೊಡಗಿದವು. ವಿಜಯ್ ಗ್ರಾಫ್ ಹೆಚ್ಚುಕಮ್ಮಿ ಇಳಿದೇಹೋಯಿತು ಅನ್ನಬಹುದು. 'ಚಲಿಸುವ ಮೋಡಗಳು' ಚಿತ್ರದ ಮೂಲಕ ಬಣ್ಣ ಹಚ್ಚಿದ ಮುಖ ನಿಧಾನವಾಗಿ ಮರೆಯಾಗುತ್ತಾ ಹೋಯಿತು.

ಆಗ, ಅವರಿಗೆ ಮತ್ತೆ ಪುನರ್ಜನ್ಮ ನೀಡಿದ್ದು 'ಬಿಗ್ ಬಾಸ್' ರಿಯಾಲಿಟಿ ಷೋ! 'ಬಿಗ್ ಬಾಸ್'ನಲ್ಲಿ ವಿಜಯ್ ವಿಜಯಿಯಾದ ನಂತರ ಅದೃಷ್ಟ ಸ್ವಲ್ಪ ಕುದುರಿತು ಅನ್ನಬಹುದು. ವಿಜಯ್ ಎದುರಿಗೆ ಸಿಕ್ಕಾಗ ಜನ ಮಾತಾಡಿಸತೊಡಗಿದರು. ಅಪರಿಚಿತರಂತೆ ವರ್ತಿಸುತ್ತಿದ್ದ ಚಿತ್ರರಂಗದ ಮಂದಿ ಕೂಡ 'ಹಾಯ್ ವಿಜಯ್ ಹೌ ಆರ್ ಯೂ...' ಅನ್ನತೊಡಗಿದರು. ಒಂದಿಷ್ಟು ಸಿನಿಮಾಗಳೂ ಬರತೊಡಗಿದವು. ಇವೆಲ್ಲಕಿಂತ ಮುಖ್ಯವಾಗಿ ವಿಜಯ್ ಅವರಲ್ಲಿ ಮತ್ತೆ ಜೀವನ ಪ್ರೀತಿ ಹುಟ್ಟಿತು. ಅದೇ ಜೋಶಿನಲ್ಲೀಗ ವಿಜಯ್ ಡೈರೆಕ್ಟರ್ ಆಗುತ್ತಿದ್ದಾರೆ. ತಮ್ಮ ಮಡದಿ ಸ್ಪಂದನ ಅವರ ಹೆಸರಿನಲ್ಲಿ 'ಸ್ಪಂದನ ಸೃಷ್ಟಿ' ಎಂಬ ಹೊಸದೊಂದು ಚಿತ್ರ ನಿರ್ಮಾಣ ಸಂಸ್ಥೆ ಹುಟ್ಟುಹಾಕಿದ್ದಾರೆ. ನವೆಂಬರ್ ಕೊನೆಯ ವಾರ ಆರಂಭವಾಗಲಿರುವ ಹೊಸ ಚಿತ್ರಕ್ಕೆ 'ಕಿಸ್ಮತ್' ಅಂತ ನಾಮಕರಣ ಮಾಡಿದ್ದು, ಸ್ವತಃ ವಿಜಯ್ ರಾಘವೇಂದ್ರರೇ ಹೀರೋ. ಗೆಳೆಯ ನವೀನ್ ಕೃಷ್ಣ ಸಂಭಾಷಣೆ ಬರೆಯುತ್ತಿದ್ದಾರೆ. ವಿಶೇಷವೆಂದರೆ, ಒಂದು ಕಾಲದಲ್ಲಿ ತಮಗೆ ಪ್ರಶಸ್ತಿ, ಸ್ಟಾರ್ ವ್ಯಾಲ್ಯೂ ಎಲ್ಲವನ್ನೂ ತಂದುಕೊಟ್ಟಿದ್ದ 'ಚಿನ್ನಾರಿ ಮುತ್ತ' ಚಿತ್ರದ ಹೆಸರನ್ನು ಪೋಸ್ಟರ್‌ಗಳಲ್ಲಿ, ಸ್ಕ್ರೀನ್‌ನಲ್ಲಿ ತಮ್ಮ ಹೆಸರಿನ ಮೊದಲಿಗೆ ಸೇರಿಸಿಕೊಳ್ಳಲು ವಿಜಯ್ ತೀರ್ಮಾನಿಸಿದ್ದಾರೆ. ರಾಘವೇಂದ್ರ ಕಾಣೆಯಾಗುತ್ತಿದೆ. ಅಂದರೆ ವಿಜಯ್ ರಾಘವೇಂದ್ರ ಈಗ 'ಚಿನ್ನಾರಿ ಮುತ್ತ ವಿಜಯ್ ಇನ್ ಕಿಸ್ಮತ್'!

ಭಜರಂಗಿ ಶಿವಣ್ಣ ಬ್ಯುಸಿಯಾದ ಕ



ಏರುಪೇರುಗಳ ತೂಗುಯ್ಯಾಲೆಯಂತಿರುವ ಕನ್ನಡ ಚಿತ್ರರಂಗದಲ್ಲಿ ಸದಾ ಒಂದು ಮೇಂಟೇನ್ ಮಾಡಿಕೊಂಡು ಬಂದಿರುವ ನಟ ಎಂದರೆ ಅದು ಶಿವರಾಜ್ ಕುಮಾರ್ ತಮ್ಮ ಚಿತ್ರ ಸೂಪರ್ ಹಿಟ್ ಆದಾಗ ಸಂಭಾವನೆಯನ್ನು ದಿಢೀರ್ ಆಕಾಶಕ್ಕೆ ಏರಿಸುವುದ ತಮ್ಮದೊಂದು ಚಿತ್ರ ಅಟ್ಟರ್ ಫ್ಲಾಪ್ ಆದಾಗ ಕಂಗಾಲಾಗುವುದಾಗಲೀ ಮೊದಲಿನಿ ಶಿವಣ್ಣನಿಗೆ ಒಗ್ಗಿ ಬಂದಿಲ್ಲ. ಎಲ್ಲ ನಿರ್ಮಾಪಕರಿಗೂ ಸಿಗುವಂತಿರುವ ಶಿವರಾಜ್ ಕು ಯಾವಾಗಲೂ ಬ್ಯುಸಿಯಾಗಿರುವುದರ ಹಿಂದಿನ ಗುಟ್ಟಿದು. ಜೊತೆಗೆ, ಯಾವುದೇ ಬಿಮ್ಮುಗಳಿಲ್ಲದ ಸಹಜ, ಸರಳ ನಡವಳಿಕೆ ಕೂಡ ಇವರ ಪ್ಲಸ್ ಪಾಯಿಂಟ್.

ಇಂಥ ಶಿವಣ್ಣ ಈಗ ಮತ್ತಷ್ಟು ಬ್ಯುಸಿಯಾಗಿದ್ದಾರೆ. ಮೊನ್ನೆಮೊನ್ನೆಯಷ್ಟೇ ಇವರ 'ಭಜರಂಗಿ' ಚಿತ್ರದ ಆ ಸಿಡಿ, ಟ್ರೇಲರ್ ಬಿಡುಗಡೆಯಾಗಿವೆ. ಹಾಗೇನೆ, 'ಕಬೀರ್', 'ಆರ್ಯನ್', 'ಚೆಲ್ವೆಟ್ಟು', 'ಪುಣ್ಯವಂತ' ಒಳಗೊ ಇನ್ನೊಂದಿಷ್ಟು ಚಿತ್ರಗಳಲ್ಲಿ ಶಿವರಾಜಕುಮಾರ್ ಬ್ಯುಸಿಯಾಗುತ್ತಿದ್ದಾರೆ. ವಿಶೇಷವೆಂದರೆ, 1962ರಲ್ಲಿ ಡಾ.ರಾಜಕು ಅಭಿನಯದಲ್ಲಿ 'ಮಹಾತ್ಮ ಕಬೀರ್' ಅನ್ನುವ ಚಿತ್ರವೊಂದು ಬಂದಿತ್ತು, ಈಗ ಶಿವಣ್ಣ ಬರೀ 'ಕಬೀರ್' ಆಗು ಕಬಡ್ಡಿ ಬಾಬು 'ಕಬೀರ್' ನಿರ್ದೇಶಕ. ಒಂದು ಚಿತ್ರ ಹಿಟ್ ಆದಕೂಡಲೇ ತಮ್ಮ ಸಂಭಳವನ್ನು ವೃಥಾ ಕೋಟಿಗಳಿಗೇರಿಸಿ ಒಂದೇ ಇಮೇಜಿನ ಚಿತ್ರಗಳಿಗೆ ಜೋತುಬಿದ್ದು, ಮತ್ತೆರಡು ಸಿನಿಮಾ ಹೆಚ್ಚು ಕಮ್ಮಿಯಾಗಿ ದಬಾಕಿಕೊಂಡರೆ ಸಿನಿಮಾ ಕಣ್ಣು ಬಾಯಿ ಬಿಡುವ ಹೊಸ ಹುಡುಗರು ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳಲು ಸದಾ ತುಡಿಯುವ ಶಿವ ಕಲಿಯಬೇಕಾದ್ದು ಬಹಳಷ್ಟಿದೆ ಅಲ್ಲವೇ?

ನಾಯಕಿಗೆ ಚಳಿ, ಯೋಗಿಗೆ ಕಚಗುಳಿ

ಯೋಗಿಯ 'ಅಂಬರ' ಈ ವಾರ ತೆರೆಗೆ ಬರುತ್ತಿದೆ. ಒಂದು ಬ್ರೇಕ್‌ಗಾಗಿ ಕಾಯುತ್ತಿರುವ ಯೋಗಿಗೆ ಈ ಚಿತ್ರ ಗೆಲ್ಲಲೇಬೇಕಾಗಿದೆ. 'ಅಂಬರ' ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ಫೈಟ್ ಸೀನ್ ಶೂಟ್ ಮಾಡುವ ವೇಳೆ ತಮ್ಮ ಕಿವಿಗೆ ಪೆಟ್ಟು ಬಿದ್ದಿತ್ತೆಂದೂ, ಮೂರು ಗಂಟೆಗಳ ಕಾಲ ಕಿವಿಯೇ ಕೇಳಿಸಿರಲಿಲ್ಲವೆಂದೂ... ಹಾಗೇನೆ, ಡಾರ್ಜಿಲಿಂಗ್‌ನಲ್ಲಿ ಶೂಟಿಂಗ್ ನಡೆಯುವಾಗ ಬೇಜಾನ್ ಚಳಿಯಿದ್ದೂ ಚಳಿಯಿಂದ ಪಾರಾಗಲು ತಾವು ನಾಲ್ಕಾರು ಶರ್ಟು, ನಾಲ್ಕಾರು ಪ್ಯಾಂಟುಗಳನ್ನು ಹಾಕಿದ್ದಾಗಿಯೂ ಯೋಗಿ ಹೇಳಿಕೊಂಡಿದ್ದಾರೆ. ಚಳಿಯ ವೇಳೆ ನಿಜವಾಗಿ ತೊಂದರೆ ಅನುಭವಿಸಿದ್ದು ಚಿತ್ರದ ನಾಯಕಿ ಭಾಮಾ ಎಂದುದನ್ನು ಹೇಳಲು ಯೋಗಿ ಮರೆಯಲಿಲ್ಲ!



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com